ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೨೧೪

ವಿಚಾರ ಸಾಹಿತ್ಯಮಾಲೆ – ೯೫

# ವಿಜಯನಗರದ
# ತುಳುವ ವೀರನರಸಿಂಹರಾಯ

(ಜೀವನ ಮತ್ತು ಕಾಲ)

ಕ್ರಿ.ಶ. 1505–1509

# ವಿಜಯನಗರದ
# ತುಳುವ ವೀರನರಸಿಂಹರಾಯ

(ಜೀವನ ಮತ್ತು ಕಾಲ)
ಕ್ರಿ.ಶ. 1505–1509


ಇಂಗ್ಲಿಷ್ ಮೂಲ

**ಡಾ. ಪೋಲವರಪು ಹೈಮವತಿ**

ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಕಾಕತೀಯ ವಿಶ್ವವಿದ್ಯಾಲಯ, ವರಂಗಲ್, ತೆಲಂಗಾಣ

ಕನ್ನಡಾನುವಾದ

**ಗುರುಮೂರ್ತಿ ಪೆಂಡಕೂರು**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**VIJAYANAGARADA TULUVA VEERANARASIMHARAYA, Life and Time of Tuluva Veeranarasimharaya of Vijayanaragara in Kannada Published by Sri P. Narayana Swamy, Registrar, Kuvempu Bhasha Bharathi Pradhikara;** Kalagrama, Jnanabharathi, Behind Bangalore University Campus, Mallattahalli, Bengaluru - 560 056; First Edition: 2015; Pp. xx + 118; Price 150/-

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಪ್ರಥಮ ಮುದ್ರಣ : ೨೦೧೫
ಪುಟಗಳು : xx+೧೧೮
ಬೆಲೆ : ರೂ. ೧೫೦/–
ಪ್ರತಿಗಳು : ೧೦೦೦

ಪ್ರಕಾಶಕರು
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
Telephone No.: 23183311

ಮುಖಪುಟ ವಿನ್ಯಾಸ : ವಿಶ್ವನಾಥ್ ಶೆಟ್ಟಿಗಾರ್

ಮುದ್ರಕರು :
**ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಅಡ್ಡರಸ್ತೆ,
ಲಾಲ್‌ಬಾಗ್ ರೋಡ್, ಕೆ.ಎಸ್.ಗಾರ್ಡನ್,
ಬೆಂಗಳೂರು – ೫೬೦೦೨೭. ದೂ : ೨೨೨೩೪೮೦೬೬

# ಅಧ್ಯಕ್ಷರ ನುಡಿ

ಶ್ರೀ ಗುರುಮೂರ್ತಿ ಪೆಂಡಕೂರು ಅವರು ತೆಲುಗಿನ ಹಲವು ಕೃತಿಗಳನ್ನು ಕನ್ನಡಕ್ಕೆ ಈಗಾಗಲೇ ಅನುವಾದಿಸಿದ್ದಾರೆ. ಅನುವಾದ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಗಾಗಿ ಕುವೆಂಪು ಭಾಷಾ ಭಾರತಿಯ ಗೌರವ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಡಾ. ಹೈಮವತಿಯವರು ವಿಜಯನಗರದ ಅರಸು ತುಳುವ ವೀರ ನರಸಿಂಹ ದೇವನ ಬಗೆಗೆ ಬರೆದ ಅಧ್ಯಯನಪೂರ್ಣ ಕೃತಿಯನ್ನು ಪೆಂಡಕೂರು ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡ ನಾಡಿನ ಇತಿಹಾಸದ ಒಂದು ಅಧ್ಯಾಯವನ್ನು ಬಿಂಬಿಸುವ ಇಂತಹ ಕೃತಿಯ ಕನ್ನಡ ಅನುವಾದವನ್ನು ಕುವೆಂಪು ಭಾಷಾ ಭಾರತಿಯ ಮೂಲಕ ಪ್ರಕಟಿಸುವುದು ಔಚಿತ್ಯಪೂರ್ಣವೇ ಆಗಿದೆ. ಕನ್ನಡಕ್ಕೆ ಅನುವಾದಿಸಿದ ಶ್ರೀ ಪೆಂಡಕೂರು ಅವರಿಗೆ, ಕನ್ನಡ ಅನುವಾದವನ್ನು ಪ್ರಕಟಿಸಲು ಅನುಮತಿ ನೀಡಿದ ಡಾ. ಹೈಮವತಿಯವರಿಗೆ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

**–ಕೆ. ವಿ. ನಾರಾಯಣ**

# ಮೊದಲಮಾತು

ವಿಜಯನಗರ ಸಾಮ್ರಾಜ್ಯ ಚರಿತ್ರೆಯಲ್ಲಿ ತುಳುವ ವಂಶದವರ ಆಳ್ವಿಕೆಯ ಕಾಲವು ವಿಶಿಷ್ಟಮಟ್ಟವಾಗಿದೆ. ಈ ವಂಶದ ಸ್ಥಾಪಕನೇ ವೀರನರಸಿಂಹರಾಯ. ಆದರೆ ಈ ವಿಷಯದಲ್ಲಿ ಆರಂಭದ ಸಂಶೋಧಕರ ಅಭಿಪ್ರಾಯಗಳು ಸಂದಿಗ್ಧವಾಗಿದ್ದವು. ಕೆಲವರು ನರಸನಾಯಕನೇ ಸಾಳುವರನ್ನು ಕೊನೆಗೊಳಿಸಿ ತುಳುವಂಶವನ್ನು ಸ್ಥಾಪಿಸಿದನೆಂದೂ, ಅವನೇ ವಿಜಯನಗರ ಚರಿತ್ರೆಯಲ್ಲಿ ಎರಡನೇ ದುರಾಕ್ರಮಣ ಮಾಡಿದವನೆಂದೂ ಹೇಳಿದರು. ಆದರೆ ಅಂದಿನ ರಾಜಕೀಯ ಪರಿಣಾಮಗಳನ್ನು ಚಾರಿತ್ರಿಕ ಆಧಾರಗಳ ಮೇಲೆ ಪರಿಶೀಲಿಸಿದ ನಂತರ ತುಳುವ ನರಸನಾಯಕನು ತನ್ನ ಉಸಿರಿರುವವರೆಗೂ ಸಾಳುವ ವಂಶದವರಿಗೆ ವಿಧೇಯನಾಗಿದ್ದನೆಂದು ಸ್ಪಷ್ಟವಾಯಿತು. ನರಸನಾಯಕನು ಮೃತನಾದ ನಂತರ ಕೃಷ್ಣದೇವರಾಯರ ಆಳ್ವಿಕೆಯ ಆರಂಭದವರೆಗೆ ಅಂದರೆ ಕ್ರಿ.ಶ. 1503ರಿಂದ 1510 ರವರೆಗಿನ ವಿಜಯನಗರದ ಚರಿತ್ರೆಯು ಮಂಜುಮುಸುಕಿತ್ತು. ಆ ಮುಸುಕನ್ನು ಸರಿಸುವ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಅದಕ್ಕೆ ಬೇಕಾದ ಶಾಸನಗಳನ್ನು, ಸಮಕಾಲೀನ ದೇಸಿ ವಿದೇಶೀ ರಚನೆಗಳನ್ನು ಪರಿಶೀಲಿಸಲಾಗಿದೆ.

ತುಳುವರೆಂದ ಕೂಡಲೇ ಎಲ್ಲರಿಗೂ ನೆನಪಾಗುವುದು ಶ್ರೀ ಕೃಷ್ಣದೇವರಾಯರೇ. ಆ ರಾಯರಿಗೆ ಸ್ಫೂರ್ತಿಪ್ರದಾತ, ತುಳುವ ವಂಶಸ್ಥಾಪಕ ಕೃಷ್ಣದೇವರಾಯನ ಅಣ್ಣ ವೀರನರಸಿಂಹರಾಯನ ಬಗ್ಗೆ ಗಮನ ಹರಿಸಿದವರು ಕೆಲವೇ ಜನರು. ಕೃಷ್ಣದೇವರಾಯನಿಗಿಂತ ಮೊದಲೇ ತನ್ನ ಆಸ್ಥಾನದಲ್ಲಿ ಅಷ್ಟದಿಗ್ಗಜರೆಂಬ ಕವಿಶೇಖರರನ್ನು ಪೋಷಿಸಿದವನೇ ವೀರನರಸಿಂಹರಾಯ.

ಸಾಳುವ ವಂಶದ ಕೊನೆಯ ಅರಸನಾದ ಇಮ್ಮಡಿ ನರಸಿಂಹರಾಯ ಬಲಹೀನನೂ, ಅಸಮರ್ಥನೂ ಆದ್ದರಿಂದ ಸ್ವಾರ್ಥಪರ ದುಷ್ಟಶಕ್ತಿಗಳು ಪ್ರಬಲರಾಗಿ ಸಾಮ್ರಾಜ್ಯದ ಭದ್ರತೆಗೆ ಅಪಾಯ ಬಂದಾಗ ವೀರನರಸಿಂಹ ಮತ್ತು ಕೃಷ್ಣದೇವರಾಯನ

ತಂದೆಯೂ, ಅಂದಿನ ಪ್ರಧಾನಿಯೂ ಆದ ನರಸನಾಯಕನೆ ಇಮ್ಮಡಿ ನರಸಿಂಹನನ್ನು ಪೆನುಗೊಂಡದಲ್ಲಿ ಬಿಗಿಕಾವಲಿನಲ್ಲಿ ಕಾಪಾಡಬೇಕಾಯಿತು. ತಂದೆ ನರಸನಾಯಕನ ಮರಣಾನಂತರ ವೀರನರಸಿಂಹನೇ ಪ್ರಧಾನಿ ಮತ್ತು ರಾಜಪ್ರತಿನಿಧಿಯಾಗಿ ಇಮ್ಮಡಿ ನರಸಿಂಹನ ಹೆಸರಿನಲ್ಲಿ ರಾಜ್ಯ ವ್ಯವಹಾರಗಳನ್ನು ನಿರ್ವಹಿಸುತ್ತಿರುವಾಗ, ಸಾಳುವ ವಂಶದಲ್ಲಿ ಬಲಾಢ್ಯ ವಾರಸುದಾರರಿಲ್ಲದುದನ್ನು ಕಂಡ ಬಹಮನೀ ಸುಲ್ತಾನರು ದುರಾಕ್ರಮಣದ ಯೋಚನೆಯಲ್ಲಿರುವಾಗ, ಕೆಲ ರಾಜ್ಯಪಾಲರೂ ಸಾಮಂತರೂ ಸ್ವತಂತ್ರರಾಜ್ಯಗಳ ಸ್ಥಾಪನೆಗೆ ಸಂಚುಮಾಡುತ್ತಿರುವಾಗ, ರಾಯಸಂ ಕೊಂಡ ಮರಸಯ್ಯನಂತಹ ಕೆಲ ಮಂತ್ರಿಗಳು, ವೀರರು ಇಮ್ಮಡಿ ನರಸಿಂಹನನ್ನು ಮುಗಿಸುವ ಸಂಚುಮಾಡಿ ವೀರನರಸಿಂಹನ ಕಿವಿಯಲ್ಲಿ ಸುದ್ದಿಮಾಡಿ, ಹಾಗೂ ಹೀಗೂ ವೀರನರಸಿಂಹನನ್ನು ಒಪ್ಪಿಸಿ ಕೆಲಸ ಸಾಧಿಸಿದರು. ಆದರೆ ಅವರು ಅಂದಕೊಂಡಂತೆ ಇಮ್ಮಡಿ ನರಸಿಂಹನ ಕೊಲೆಯಿಂದ ರಾಜಕೀಯ ಸ್ಥಿರತೆ ಉಂಟಾಗಿ, ರಾಜ್ಯವು ಅರಿವೀರ ಭಯಂಕರವಾಗಲಿಲ್ಲ. ತದ್ವಿರುದ್ಧವಾಗಿ "ರಾಜ್ಯದೆಲ್ಲೆಡೆ ಪ್ರತಿರೋಧ ಉಂಟಾಯಿತು" ಎಂದು ನ್ಯೂನಿಜ್ ಅಭಿಪ್ರಾಯ.

ಈ ಬಂಡಾಯವೆದ್ದವರು ವ್ಯೂಹವೇನು? ಅವರಿಗೆ ಸಹಕರಿಸಿದವರಾರು? ಅವರ ಲಕ್ಷ್ಯಗಳು ಯಾವು? ಹೊರಗಿನ ಶತ್ರುಗಳ ದಾಳಿ, ಯುದ್ಧ, ಫಲಿತಾಂಶ, ಒಳಗಿನ ಶತ್ರುಗಳ ಬಂಡಾಯ, ತದನಂತರ ಪರಿಣಾಮಗಳು ಮೊದಲಾದ ವಿಷಯಗಳ ಬಗ್ಗೆ ನಿಖರತೆಯಿಲ್ಲ. ಶಾಸನ, ಸಮಕಾಲೀನ ಸಾಹಿತ್ಯದಲ್ಲಿನ ತುಣುಕು ತುಣುಕಾಗಿ ದೊರೆಯುವ ವಿಷಯಗಳ ಸಹಾಯದಿಂದ ಆಯಾ ವಿಷಯಗಳ ರಾಜಕೀಯ ಪರಿಣಾಮಗಳ ಕ್ರಮದ ಮೇಲೆ ಬೆಳಕು ಚೆಲ್ಲುವ ಪ್ರಯತ್ನವೇ ಈ ಆವಿಷ್ಕರಣ.

ಶ್ರೀರಂಗಪಟ್ಟಣ, ಉಮ್ಮತ್ತೂರು ಪಾಳೇಗಾರರೇ ಅಲ್ಲದೆ ಕಡಪ, ಕರ್ನೂಲು ಆಳುತ್ತಿದ್ದ ಕಾಚಪ್ಪ, ಕೃಷ್ಣಾತೀರದ ಪಾಲಕ ಉದ್ದಂಡರಾಯ ಕೂಡ ಸ್ವತಂತ್ರರಾಜ್ಯ ಸ್ಥಾಪಿಸಲೆಂದು ಬಂಡಾಯವೆದ್ದರೆಂದು ಸ್ಪಷ್ಟವಾದ ಆಧಾರಗಳು ಲಭಿಸಿದವು. ಸದ್ಯ ಆಂಧ್ರಪ್ರದೇಶದ ಹೊಸ ರಾಜಧಾನಿಯಾಗಿ ರೂಪುಗೊಳ್ಳುತ್ತಿರುವ ಅಮರಾವತಿಯು ಉದ್ದಂಡರಾಯನಪಾಳ್ಯ ಎಂಬ ಗ್ರಾಮವನ್ನು ಕೇಂದ್ರಮಾಡಿಕೊಂಡಿದೆ. ಈ ಗ್ರಾಮವು ಅಂದಿನಿಂದ ಇಂದಿನವರೆಗೆ ಉದ್ದಂಡರಾಯನ ಹೆಸರಿನಲ್ಲಿದೆ. ಈತನ ಮೂರು ದಾನಶಾಶನಗಳು ತಿರುಮಲ ತಿರುಪತಿ ದೇವಸ್ಥಾನದ ಶಾಸನಸಂಪುಟಗಳಲ್ಲಿವೆ.

ಈ ಬಂಡಾಯಗಳಿಂದ ಹುರುಪೆದ್ದ ಬಹುಮನೀ ಸುಲ್ತಾನ ಯುಸುಫ್ ಆದಿಲ್ ಖಾನ ದಾಳಿಮಾಡಿ ಸೋತು ಪರಾರಿಯಾದನು. ಈ ಯುದ್ಧಗಳ ವಿವರಗಳು ತದನಂತರದ ಪರಿಣಾಮಗಳ ಕುರಿತು ಇಲ್ಲಿ ವಿಪುಲವಾಗಿ ಚರ್ಚಿಸಲಾಗಿದೆ.

ಮುಖ್ಯವಾಗಿ ಜನಸಾಮಾನ್ಯರಲ್ಲಿ ಒಂದು ಪ್ರಬಲವಾದ ನಂಬಿಕೆ ಇದೆ– ವೀರನರಸಿಂಹರಾಯನು ತನ್ನ ಮರಣಕಾಲದಲ್ಲಿ ಪ್ರಧಾನಿ ತಿಮ್ಮರಸರನ್ನು ಕರೆಸಿ ತನ್ನ ತಮ್ಮನಾದ ಕೃಷ್ಣದೇವರಾಯನ ಕಣ್ಣು ತೆಗೆಸಿ ರಾಜ್ಯಾರ್ಹತೆ ಇಲ್ಲದಂತೆ ಮಾಡಿ, ಎಂಟುವರ್ಷದ ಬಾಲಕನಾದ ತನ್ನ ಕುಮಾರನಿಗೆ ಪಟ್ಟಾಭಿಷೇಕ ಮಾಡುವಂತೆ ಆಜ್ಞೆಮಾಡಿದನೆಂದೂ ಆದರೆ ತಿಮ್ಮರಸು ಕೃಷ್ಣರಾಯರ ಕಣ್ಣಿಗೆ ಬದಲಾಗಿ ಮೇಕೆಯ ಕಣ್ಣುಗಳನ್ನು ತೋರಿಸಿ ವೀರನರಸಿಂಹನು ಪ್ರಶಾಂತವಾಗಿ ಜೀವಬಿಡುವಂತೆ ಮಾಡಿದನೆಂದೂ, ಅನಂತರ ಕೃಷ್ಣರಾಯರಿಗೆ ಪಟ್ಟಾಭಿಷೇಕಮಾಡಿದರೆಂದೂ ಗಾಳಿಸುದ್ದಿಯ ಆಧಾರದ ಮೇಲೆ ನೂನಿಜ್ ಬರೆದ ವರದಿಯಿಂದ ಈ ಕತೆ ಸೃಷ್ಟಿಯಾಯಿತು. ನೂನಿಜ್ ಈ ಕತೆಯನ್ನು ಪುಷ್ಟೀಕರಿಸುವ ಒಂದಾದರೂ ಆಧಾರ ಲಭಿಸಿಲ್ಲ. ಇದು ಕೇವಲ ಕಟ್ಟುಕತೆಯೆಂದು ಅನೇಕ ಚಾರಿತ್ರಿಕ ಆಧಾರಗಳಿಂದ ಈ ಗ್ರಂಥದಲ್ಲಿ ನಿರೂಪಿಸಲಾಗಿದೆ.

ವೀರನರಸಿಂಹರಾಯನ ಕಾಲದ ಕುರಿತಾಗಿ ಸಾಧ್ಯವಾದ ಖಚಿತತೆಯನ್ನು ಸಾಧಿಸಲಾಗಿದೆ. ಆತನ ಆಳ್ವಿಕೆಯು ಅನೇಕ ವಿಷಯಗಳಲ್ಲಿ ವಿಶಿಷ್ಟವಾಗಿದೆ. ಆರ್ಥಿಕ, ಸೈನಿಕ ವ್ಯವಸ್ಥೆಗಳ ಬಗ್ಗೆ ಆತನು ತೆಗೆದುಕೊಂಡ ಕ್ರಮಗಳು ಗಮನ ಸೆಳೆಯುತ್ತವೆ. ಈ ಎರಡು ವ್ಯವಸ್ಥೆಗಳ ಅಭಿವೃದ್ಧಿ ಅವಶ್ಯವೆಂದೂ, ಈ ಎರಡು ವಿಷಯಗಳ ಬಗ್ಗೆ ಕಟ್ಟುನಿಟ್ಟು ಕ್ರಮ ತೆಗೆದುಕೊಳ್ಳಲು ಪೋರ್ಚುಗೀಸರೊಂದಿಗೆ ವ್ಯಾಪಾರ ಸಂಬಂಧಗಳಿಗಾಗಿ ಪ್ರಯತ್ನಿಸಿದನು. ಆದರೆ ಪರಿಸ್ಥಿತಿ ಅನುಕೂಲಿಸದ ಕಾರಣ ಅವಸರಮಾಡದೇ ಬುದ್ಧಿವಂತಿಕೆಯಿಂದಲೂ, ಸಮಯೋಚಿತ ರೀತಿಯಿಂದ ವರ್ತಿಸಿದನು. ಈ ವಿಷಯದಲ್ಲಿ ಅನಂತರ ಜವಾಬ್ದಾರಿಯನ್ನು ತಮ್ಮನಾದ ಕೃಷ್ಣದೇವರಾಯನಿಗೆ ಒಪ್ಪಿಸಿದನು.

ಜನಸಾಮಾನ್ಯರಲ್ಲಿ ಕೂಡ ಧೈರ್ಯಸ್ಥೈರ್ಯಗಳನ್ನು, ಸೈನಿಕೋತ್ಸಾಹವನ್ನು ಜಾಗೃತಗೊಳಿಸಲು ಕಾರ್ಯಕ್ರಮಗಳನ್ನು ವೀರನರಸಿಂಹರಾಯ ನಿಯೋಜಿಸಿನು. ಪ್ರಜಾಕಂಟಕರಾದ ರಾಜ್ಯಪಾಲರನ್ನು, ಸ್ಥಳೀಯ ಅಧಿಕಾರಿಗಳನ್ನು ನಿಗ್ರಹಿಸಲು

ಕಠಿಣ ಚರ್ಯೆಗಳನ್ನು ತೆಗೆದುಕೊಂಡನು. ಸಂಬೆಟಗಳನ್ನು, ಕ್ರೀಡೆಗಳನ್ನು ಪ್ರೋತ್ಸಾಹಿಸಿದನು. ಮದುವೆ ಸುಂಕವನ್ನು ರದ್ದುಮಾಡಿದನು. ಅನ್ಯಾಯವಾಗಿ ತೆರಿಗೆ ವಸೂಲುಮಾಡುತ್ತಿದ್ದ. ಸಂಬೆಟ ಗುರುವರಾಜನನ್ನು ಶಿಕ್ಷಿಸಿದ ಸಂದರ್ಭ ವಿಶೇಷವಾದುದು. ಅಲ್ಲದೇ ಕಲೆಯು ಪರಿಣಾಮಶಾಲಿಯೂ, ಸಾಮಾಜಿಕ ಪ್ರಯೋಜನಕಾರಿಯೂ ಎಂದು ಸಿದ್ಧವಾಯಿತು.

ವೀರನರಸಿಂಹರಾಯನು ಸ್ವಲ್ಪಸಾಲ ಆಳಿದರೂ ಅಂದಿನ ರಾಜಕೀಯ ಪರಿಸ್ಥಿತಿಗಳೊಂದಿಗೆ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ಧಾರ್ಮಿಕ ಪರಿಸ್ಥಿತಿಗಳನ್ನು ವಿವರವಾಗಿ ಪರಿಶೀಲಿಸಲಾಗಿದೆ. ಎಂ.ಫಿಲ್‌ಗಾಗಿ ರಚಿಸಿದ ಈ ಸಂಪ್ರಬಂಧವನ್ನು ಕೀ.ಶೇ. ಆಚಾರ್ಯ ಪಿಶುಪಾಟಿ ಶ್ರೀ ರಾಮಶರ್ಮ (ಉಸ್ಮಾನಿಯಾ ವಿ.ವಿ.) ಅವರಿಗೆ ಸ್ಮೃತ್ಯಾಂಜಲಿ ಅರ್ಪಿಸುತ್ತಿದ್ದೇನೆ. ಇದನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ ನಿವ್ ಎರಾ ಪಬ್ಲಿಕೇಷನ್ಸ್, ಚೆನ್ನೈನ (1994) ಶ್ರೀನಿವಾಸನ್ ಅವರಿಗೆ ಕೃತಜ್ಞತೆಗಳು. ಇದನ್ನು ಕನ್ನಡಾನುವಾದ ಮಾಡಿದ ಶ್ರೀ ಗುರುಮೂರ್ತಿ ಪೆಂಡಕೂರು ಅವರಿಗೆ ನನ್ನ ಹೃದಯಪೂರ್ವಕ ವಂದನೆಗಳು. ದೇಶಭಾಷೆಗಳಲ್ಲಿ ಪ್ರಕಟವಾದಾಗಲೇ ಸಮಸ್ತ ಪ್ರಜೆಗಳಿಗೆ ಸಂಶೋಧನೆಯ ವಿಷಯಗಳು, ವಾಸ್ತವ ಸಂಗತಿಗಳೂ ಅವಗತವಾಗುತ್ತವೆ. ಪ್ರಮುಖವಾಗಿ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಜಿಜ್ಞಾಸೆಯು ವ್ಯಕ್ತಿಗೆ ಉಲ್ಲಾಸ ನೀಡುತ್ತದೆ. ಇಂತಹ ಸತ್ಕಾರ್ಯವನ್ನು ತಪಸ್ಸಿನಂತೆ ನಿರಂತರವಾಗಿ ನಡೆಸುತ್ತಿರುವ ಸಾಹಿತ್ಯ, ಸಾಂಸ್ಕೃತಿಕ ಸೇವಾತತ್ಪರರಾದ ಗುರುಮೂರ್ತಿ ಪೆಂಡಕೂರು ಅವರಿಗೆ ಮತ್ತೊಮ್ಮೆ ನನ್ನ ಕೃತಜ್ಞತೆಗಳು.

**–ಹೈಮವತಿ**

## ಅನುವಾದಕರ ಮಾತು

ಕಾಕತೀಯ ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಭಾಗದ ಪ್ರಮುಖರಾಗಿದ್ದ ಶ್ರೀಮತಿ ಡಾ. ಪೋಲವರಪ್ಪ ಹೈಮವತಿ ಅವರ ಸಂಶೋಧನಾ ಮಹಾಪ್ರಬಂಧ 'ವಿಜಯನಗರದ ತುಳುವ ವೀರನರಸಿಂಹರಾಯ'ವನ್ನೂ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸುವಲ್ಲಿ ವಿಶೇಷ ತೃಪ್ತಿ ಉಂಟಾಗಿದೆ. ವಿಜಯನಗರ ಸಾಮ್ರಾಜ್ಯದ ಅತ್ಯಂತ ಕಷ್ಟಕಾಲದಲ್ಲಿ ವಜ್ರಸಿಂಹಾಸನವನ್ನು ಅಲಂಕರಿಸಿದ ತುಳುವ ವಂಶಸ್ಥಾಪಕ, ಕೃಷ್ಣದೇವರಾಯನ ಅಣ್ಣ ವೀರನರಸಿಂಹರಾಯನ ಬಗ್ಗೆ ಅನೇಕ ಕಟ್ಟುಕತೆಗಳು ಜನಜನಿತವಾಗಿವೆ. ಹೈಮವತಿಯವರು ಈ ಅಪವಾದಗಳನ್ನು ಸರ್ವಮಾನ್ಯವಾದ ಆಧಾರಗಳಿಂದ ತಳ್ಳಿಹಾಕಿದ್ದಾರೆ. ಅವರ ಇಂಗ್ಲಿಷ್ ಕೂಡಾ ಸರಳವಾಗಿ, ಸುಲಭಗ್ರಾಹ್ಯವಾಗಿದೆ. ಈ ಪುಸ್ತಕವನ್ನು ಅನುವಾದಿಸಲು ಅವರು ಒಪ್ಪಿಗೆ ನೀಡಿದ್ದಾರೆ. ಅವರಿಗೆ ನಾನು ಕೃತಜ್ಞ.

ಈ ಅರಸನ ಬಗ್ಗೆ ಇದ್ದ ಅನುಮಾನಗಳನ್ನು ವಿವರವಾಗಿ ಪರಿಷ್ಕರಿಸಿ ಮಾರ್ಗದರ್ಶನ ಮಾಡಿದವರೂ, ಈ ಗ್ರಂಥಕ್ಕೊಂದು ಮುನ್ನುಡಿಯನ್ನು ಬರೆದವರಾದ ಡಾ. ಗೋಪಾಲಕೃಷ್ಣರಾಯರನ್ನು ಸದಾ ನೆನೆಯುತ್ತೇನೆ.

ಈ ಹೊತ್ತಿಗೆಯನ್ನು ಕರ್ನಾಟಕದ ಇತಿಹಾಸ ತಜ್ಞರು ನೋಡಬೇಕು ಎಂಬ ಹಂಬಲದಿಂದ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಕೆ.ವಿ. ನಾರಾಯಣರನ್ನು ಬಿನ್ನವಿಸಿದಾಗ ಅವರು ಒಪ್ಪಿಗೆನೀಡಿ ಪ್ರಕಟಿಸುತ್ತಿದ್ದಾರೆ. ಅವರಿಗೂ, ಮುಖಪುಟ ವಿನ್ಯಾಸದ ಕಲಾವಿದ ಶ್ರೀ ವಿಶ್ವನಾಥ್ ಅವರಿಗೂ, ಮುದ್ರಕರಿಗೂ ನನ್ನ ವಂದನೆಗಳು. ವಿಜಯನಗರದ ಬಗ್ಗೆ ನನಗೆ ಸದಾ ಮಾರ್ಗದರ್ಶನ ಮಾಡುವ ಹಿರಿಯರಾದ ಡಾ. ಶ್ರೀನಿವಾಸ ರಿತ್ತಿ ಅವರಿಗೆ ನನ್ನ ಪ್ರಣಾಮಗಳು. ಕರ್ನಾಟಕ ಇತಿಹಾಸ ರಚನೆಗೆ ಈ ಗ್ರಂಥವು ಆಕರ ಗ್ರಂಥವಾಗಲೆಂದು ಹಾರೈಸುತ್ತೇನೆ.

ಬೆಂಗಳೂರು **–ಗುರುಮೂರ್ತಿ ಪೆಂಡಕೂರು**
20–01–2016

# ಮುನ್ನುಡಿ

'Lost in Translation' ಎನ್ನುವುದು ತರ್ಜುಮೆಯ ಕಷ್ಟನಷ್ಟಗಳನ್ನೂ, ಅಪಾಯಗಳನ್ನೂ ಸಂಕ್ಷೇಪವಾಗಿ ಸೂಚಿಸುವ ಇಂಗ್ಲಿಷ್ ನಾಣ್ನುಡಿ. ಇಂಥ ಕಷ್ಟಸಾಧ್ಯವಾದ ಕೆಲಸವನ್ನು ಹಲವಾರು ಬಾರಿ ಯಶಸ್ವಿಯಾಗಿ ಪೂರೈಸಿರುವ ಶ್ರೀ ಗುರುಮೂರ್ತಿ ಪೆಂಡಕೂರು ಅವರು ಅಭಿನಂದನಾರ್ಹರು.

ದಕ್ಷಿಣಭಾರತದ ರಾಜವಂಶೀಯರಲ್ಲಿ ಚೋಳ, ಪಲ್ಲವ, ಗಂಗ, ಚಾಲುಕ್ಯರಿಗಿಂತ ಅತಿಹೆಚ್ಚಾದ ಯಶಸ್ಸು ಕಂಡವರು ವಿಜಯನಗರದ ಅರಸರು. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಊಹಿಸಲೂ ಸಾಧ್ಯವಿಲ್ಲದ ರಾಜಕೀಯ ಮತ್ತು ಸಾಂಸ್ಕೃತಿಕ ಒಗ್ಗಟ್ಟನ್ನು ಸಾಧಿಸಿದ್ದು ವಿಜಯನಗರದರಸರ ಅತಿದೊಡ್ಡ ಸಾಧನೆಯೆಂದು ಹೇಳಬೇಕು. ಪ್ರಮುಖವಾದ ಮೂರು ಭಾಷಿಕ ಪ್ರದೇಶಗಳನ್ನು ಈ ದೊರೆಗಳು ಒಂದುಮಾಡಿ ಏಕಛತ್ರದಡಿ ಯಾವ ಭಿನ್ನಾಭಿಪ್ರಾಯಕ್ಕೂ, ಅಸಮಾಧಾನಕ್ಕೂ ಕಾರಣವಿಲ್ಲದಂತೆ ಸುಮಾರು 350 ವರ್ಷಕಾಲ ರಾಜ್ಯವಾಳಿ ತೋರಿಸಿದರು.

ಹೀಗಾಗಿ ಈ ಸಾಮ್ರಾಜ್ಯದ ಇತಿಹಾಸದ ಅಧ್ಯಯನವು ಮೂರೂ ಭೌಗೋಳಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಭಾಷಿಕ ಪ್ರದೇಶಗಳನ್ನೂ ಸೇರಿಸಿಕೊಂಡಲ್ಲದೆ ಕೇವಲ ಕನ್ನಡದ ಅಥವಾ ತೆಲುಗಿನ ಅಥವಾ ತಮಿಳಿನ ದೃಷ್ಟಿಕೋನದಿಂದ ನಡೆದರೆ ಅದು ಅಸಂಪೂರ್ಣವೇ. ವಸಾಹತುಶಾಹಿ ಕಾಲಘಟ್ಟದಲ್ಲಿ ಈ ಬಗೆಯ ಏಕೀಕೃತ ಅಧ್ಯಯನಗಳು ನಡೆದದ್ದು ನಿಜವೇ ಆದರೂ ಸ್ವಾತಂತ್ರ್ಯ ನಂತರ ಮತ್ತು ಭಾಷಾವಾರು ವಿಂಗಡಣೆಯ ನಂತರ ಈ ಬಗೆಯ ಅಧ್ಯಯನಗಳು, ಸಂಶೋಧನೆಗಳು ನಿಂತೇಹೋಗಿರುವುದು ವಿಷಾದದ ಸಂಗತಿ. ತೆಲುಗರು ಆ ಭಾಷಾಪ್ರದೇಶದ ದೃಷ್ಟಿಯಿಂದ, ತಮಿಳು ಮತ್ತು ಕನ್ನಡ ಭಾಷಿಗರು ಆಯಾ ಭಾಷಾಪ್ರದೇಶದ ದೃಷ್ಟಿಯಿಂದ, ನಿಲುವಿನಿಂದ ವಿಜಯನಗರ ಸಾಮ್ರಾಜ್ಯದ ಇತಿಹಾಸದ ಅಧ್ಯಯನವನ್ನು ನಡೆಸಿದ್ದಾರೆಯೇ ಹೊರತು ಏಕೀಕೃತ ದೃಷ್ಟಿಯಿಂದ ಅಧ್ಯಯನಗಳು

ನಡೆದೇ ಇಲ್ಲವಾಗಿ ವಿಜಯನಗರದ ಇತಿಹಾಸ ಚಿತ್ರವು ಅಸಂಪೂರ್ಣವಾದ mosaic ಚಿತ್ರದ ಭಾಗಗಳಂತೆ ಮೂಡುತ್ತ ಸಮಗ್ರ, ಸಂಪೂರ್ಣ ದೃಷ್ಟಿಯ ಕೊರತೆಯಿಂದ ಈ ಸಾಮ್ರಾಜ್ಯದ ಇತಿಹಾಸಾಧ್ಯಯನವು ಸೊರಗಿದೆ.

ಹಾಗೆ ನೋಡಿದರೆ ಆಯಾ ಭಾಷಿಕ ವಿದ್ವಾಂಸರು ಅವರ ನಿಲುವಿನಿಂದ ಅಧ್ಯಯನವನ್ನು ಆಸ್ಥೆಯಿಂದ, ತೀವ್ರತೆಯಿಂದಲೇ ನಡೆಸಿದ್ದಾರೆನ್ನಬಹುದು. ಉದಾಹರಣೆಗೆ ತೆಲುಗಿನಲ್ಲಿ ಎನ್. ವೆಂಕಟರಮಣಯ್ಯನವರು, ಈಶ್ವರದತ್, ಎಂ. ರಾಮರಾವ್, ಓರುಗಂಟಿ ರಾಮಚಂದ್ರಯ್ಯನವರು ಅದ್ಭುತ ರೀತಿಯಲ್ಲಿ ವಿಜಯನಗರವನ್ನು ಅಭ್ಯಸಿಸಿ ಗ್ರಂಥರಚನೆ ಮಾಡಿದ್ದಾರೆ. ಆದರೆ ಬಹುಪಾಲು ಗ್ರಂಥಗಳು ತೆಲುಗು ಭಾಷೆಯವು ಹಾಗೂ ಇವರ ಇಂಗ್ಲೀಷ್ ಗ್ರಂಥಗಳೂ ಕೂಡ ತೆಲುಗು ದೃಷ್ಟಿಗೇ ಸೀಮಿತವಾದವು. ಈ ಅಭ್ಯಾಸಗಳಲ್ಲೂ ವಿಷಯವು ಸಾಮ್ರಾಜ್ಯದ ತೆಲುಗು ಪ್ರದೇಶಗಳಿಗೆ ಸಂಬಂಧಿಸಿದವೇ.

ಹಾಗೆಯೇ ಕನ್ನಡದ ಸಂದರ್ಭದಲ್ಲಿ ಪ್ರೊ. ದೀಕ್ಷಿತ್ ಅವರು, ಸೂರ್ಯನಾಥ ಕಾಮತರು, ಹೆಚ್. ಕೃಷ್ಣಶಾಸ್ತ್ರಿ ಅವರು, ಮೈಸೂರು ಪುರಾತತ್ವ ಇಲಾಖೆಯ ಪ್ರಕಟಣೆಗಳು, ವಿ.ಫಿ ಲಿಯೋಜಾ಼ ಮುಂತಾದವರು ವಿಜಯನಗರದ ಇತಿಹಾಸದ ಬಗೆಗೆ ಅಧ್ಯಯನಮಾಡಿ ರಚಿಸಿದ ಗ್ರಂಥಗಳು ಬಹುತೇಕ ಕನ್ನಡದಲ್ಲಿವೆ.

ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳ ಆಳವಾದ ಜ್ಞಾನವಿದ್ದು ವಿಜಯನಗರದ ಇತಿಹಾಸದ ಬಗೆಗೆ ಸಂಶೋಧನೆ ನಡೆಸಿ ಗ್ರಂಥರಚನೆ ಮಾಡಿರುವ ಇತಿಹಾಸಕಾರರು ಇಲ್ಲವೆಂದೇ ಹೇಳಬೇಕು.

ಇಂಥ ಸಂದರ್ಭದಲ್ಲಿ ವಿಜಯನಗರದ ಭೂತಪೂರ್ವ ಸಾಮ್ಯಾಜ್ಯದ ಒಂದು ಭಾಗ (ತೆಲುಗು ದೇಶ)ದಲ್ಲಿ ನಡೆದ, ನಡೆವ ಸಂಶೋಧನೆಗಳು ಹಾಗೂ ಅಧ್ಯಯನಗಳು ಇತರೆ ಭಾಷಿಕ ಪ್ರದೇಶವನ್ನು ತಲಪುವುದು ಅಸಾಧ್ಯವೆನಿಸುತ್ತದೆ. ಹೀಗಾಗಿ ಈ ಅಧ್ಯಯನಗಳು ಅನೇಕವೇಳೆ ಪುನರಾವೃತ್ತಿ ಆಗುವುದೂ, ಮತ್ತೆ ಮತ್ತೆ ಬೇರೆ ಬೇರೆ ನಾಮಧೇಯದಡಿ ನಡೆದಿರುವುದೂ ಕಂಡುಬಂದು ಒಂದು ರಾಜ್ಯದಲ್ಲಿ ನಡೆಯುತ್ತಿರುವ ಅಧ್ಯಯನದ ಲಾಭ ಇನ್ನೊಂದು ರಾಜ್ಯದ ವಿದ್ವಾಂಸರಿಗೆ ಆಗದೆ ಗೊಂದಲದ ಪರಿಸ್ಥಿತಿಯೇ ಉಂಟಾಗಿದೆ.

ಈ ಬಗೆಗೆ ಒಂದಷ್ಟು ಚಿಂತನೆ ನಡೆಸಿರುವ ಕರ್ನಾಟಕದ ಹಿರಿಯ ಇತಿಹಾಸಕಾರರು (ಉದಾ: ಪ್ರೊ. ಬಿ. ರಾಜಶೇಖರಪ್ಪ) ಅನೇಕ ವೇದಿಕೆಗಳಿಂದ ಈ ಸಮಸ್ಯೆಯ ಬಗೆಗೆ ಗಮನಸೆಳೆಯಲು ಪ್ರಯತ್ನಿಸಿದ್ದಾರೆ. ಈ ಮೂರು ಭಾಷಾವಾರು ಪ್ರಾಂತ್ಯಗಳಲ್ಲಿರುವ ವಿಜಯನಗರ ಇತಿಹಾಸ ಸಂಶೋಧಕರೂ / ಬೋಧಕರೂ ಎರಡು ಅಥವಾ ಮೂರು ವರ್ಷಗಳಿಗೊಮ್ಮೆಯಾದರೂ ಒಟ್ಟು ಸೇರಿ ತಂತಮ್ಮ ಪ್ರದೇಶಗಳಲ್ಲಿ ನಡೆಯುತ್ತಿರುವ ವಿಜಯನಗರ ಸಂಶೋಧನೆಗಳ ತಿರುಳನ್ನು ಕುರಿತು ಚರ್ಚೆ ನಡೆಸಬೇಕು. ತಮ್ಮಲ್ಲಿ ನಡೆದಿರುವ ಸಂಶೋಧನೆಗಳ ವಿವರಗಳನ್ನು ಇತರ ರಾಜ್ಯದ ವಿದ್ವಾಂಸರೊಡನೆ ಹಂಚಿಕೊಳ್ಳುವಂತಿರಬೇಕು. ಹೀಗಾಗಿ ದಕ್ಷಿಣಭಾರತದ ಯಾವುದೇ ಮೂಲೆಯಲ್ಲಿ ನಡೆದಿರುವ ಸಂಶೋಧನೆಯ ಲಾಭವು ಇತರ ಎಲ್ಲ ವಿದ್ವಾಂಸರಿಗೂ ಸಿಗುವಂತಾಗುತ್ತದೆ. ಚರ್ಚೆಯಿಂದ ವಿಷಯ ಸಮೃದ್ಧವಾಗಿ, ಈಗಲೀಗ ಹಿಂದೆಬಿದ್ದು ಕುಂಟುತ್ತಿರುವ ವಿಜಯನಗರ ಇತಿಹಾಸ ಸಂಶೋಧನಾ ರಂಗವು ನಿಜಪಥವನ್ನು ಸೇರಿ ದಾಪುಗಾಲು ಹಾಕಲು ಅನುವಾಗುತ್ತದೆ. ಆದರೆ ಈ ಬಗೆಯ ಮೊರೆಗಳಿಗೆ ಅಧಿಕಾರದಲ್ಲಿರುವವರಾಗಲೀ, ವಿದ್ವತ್‌ಪ್ರಪಂಚದಲ್ಲಿನ ವರ್ಷಸ್ವಿಗಳಾಗಲೀ ಏನೂ ಗಮನಕೊಟ್ಟಂತಿಲ್ಲ. ಈಗಲೀಗ ವಿಶ್ವವಿದ್ಯಾಲಯಗಳು ಅನುಸರಿಸುತ್ತಿರುವ ಶಾಸನಶಾಸ್ತ್ರ ಮತ್ತು ಸಂಶೋಧನಾ ವಿರೋಧಿನೀತಿಯಿಂದಾಗಿ ವಿಜಯನಗರ ಇತಿಹಾಸ ಸಂಶೋಧನೆ ನಿಂತನೀರಾಗಿದೆ.

ಇಂಥ ಸಂದರ್ಭದಲ್ಲಿ ಒಂದು ಭಾಷೆಯಿಂದ ಅಥವಾ ಆ ಪ್ರದೇಶಲ್ಲಿ ನಡೆದ ಇಂಗ್ಲಿಷ್ ಭಾಷೆಯ ಅಧ್ಯಯನದ ಸಮರ್ಥ ತರ್ಜುಮೆಯಿಂದ ಈ ಗೊಂದಲಗಳನ್ನು ಪರಿಹರಿಸಿ, ಜ್ಞಾನ ಲಾಭಗಳನ್ನು ಪರಸ್ಪರ ಹಂಚಿಕೊಳ್ಳಲು ಅನುವಾಗುತ್ತದೆ. ಇಂಥ ಸ್ತುತ್ಯಕಾರ್ಯವನ್ನು ಶ್ರೀ ಗುರುಮೂರ್ತಿ ಪೆಂಡಕೂರು ಅವರು ಹಲವಾರು ದಶಕಗಳಿಂದಲೇ ಮಾಡುತ್ತ ಬಂದಿದ್ದಾರೆ. ಅವರು ತೆಲುಗು ಮತ್ತು ತೆಲುಗು ದೇಶದ ಇಂಗ್ಲಿಷ್ ಇತಿಹಾಸ ಕೃತಿಗಳನ್ನು ಸಮರ್ಥವಾಗಿ ಕನ್ನಡಕ್ಕೆ ನೀಡುತ್ತ ಬಂದಿದ್ದಾರೆ. ಉದಾಹರಣೆಗೆ ತೆಲುಗಿನ ರಾಯವಾಚಕಮು, ಓರುಗಂಟಿ ರಾಮ ಚಂದ್ರಯ್ಯನವರ ಕೃಷ್ಣದೇವರಾಯ, ನೆಲಟೂರು ವೆಂಕಟರಮಣಯ್ಯನವರ ಕೃಷ್ಣದೇವರಾಯ ಇತ್ಯಾದಿ ಹದಿನೇಳು ತೆಲುಗು ಕೃತಿಗಳು ನಾಲ್ಕು ಇಂಗ್ಲಿಷ್ ಕೃತಿಗಳು ಇತ್ಯಾದಿ.

ಪ್ರಸಕ್ತ ಡಾ॥ ಹೈಮವತಿ ಅವರ 'ವೀರನರಸಿಂಹ' ಆಂಧ್ರದಲ್ಲಿ ರಚಿತವಾದ ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದ ಒಂದು ಪ್ರಮುಖ ಇಂಗ್ಲಿಷ್ ಗ್ರಂಥ. ಕೃಷ್ಣದೇವರಾಯನ ಅತಿಪ್ರಮುಖ ಆಳ್ವಿಕೆಗೆ ಅವನ ಬಲ ಅಣ್ಣ ವೀರನರಸಿಂಹ ಅಧಿಕಾರಾವಧಿಯು ಅತಿ ಅವಶ್ಯವಾದ ಪೂರ್ವಭಾವೀ ವೇದಿಕೆಯಾಯಿತು. ಆದ್ದರಿಂದ ಈ ಕಾಲಘಟ್ಟದ ಇತಿಹಾಸಕ್ಕೆ ಪ್ರಮುಖ ಸ್ಥಾನವಿದೆ. ಮೂಲ ಇಂಗ್ಲಿಷ್ ಗ್ರಂಥವನ್ನು ಪರಾಮರ್ಶಿಸಿದ ಯಾರಿಗಾದರೂ ಡಾ॥ ಹೈಮವತಿ ಅವರ ವೈದುಷ್ಯವನ್ನು, ಕಠೋರ ಸತ್ಯನಿಷ್ಠತೆಯನ್ನು, ಈವರೆಗೂ ಸಾಗಿಬಂದ ಪ್ರಮುಖ ಆದರೆ ಬುಡಭದ್ರವಿಲ್ಲದ ವಾದಗಳನ್ನು ಎಚ್ಚರಿಕೆಯಿಂದ ಸೋಸಿ, ವಿಚಕ್ಷಣೆಯಿಂದ ಉಪಯೋಗಿಸುವ ರೀತಿಯನ್ನು, ಭಾಷಾಭಿವ್ಯಕ್ತಿಯ ಖಚಿತತೆ ಮತ್ತು ಸರಳತೆಯನ್ನು ಶ್ಲಾಘಿಸದಿರಲು ಸಾಧ್ಯವಿಲ್ಲ. ಭಾಷೆಯು ಸರಳವಾದರೂ ಅದು ರೂಪಿಸುವ ಇತಿಹಾಸವು ಅಸಾಮಾನ್ಯವು ನಿಷ್ಕೃಷ್ಟವೂ ಆದ್ದರಿಂದ ತರ್ಜುಮೆಯಲ್ಲಿ ಅತಿಸಣ್ಣ ತಪ್ಪೂ ಕೂಡ ಮೂಲದ ಅಭಿಪ್ರಾಯವನ್ನೇ ಬದಲಿಸುವ ಅಪಾಯವನ್ನು ಹೊತ್ತೇ ಬರುತ್ತವೆ. ಇಂಥ ಸಮೀಚೀನವಾದ ಕಾರ್ಯವನ್ನು ಗುರುಮೂರ್ತಿ ಪೆಂಡಕೂರು ಅವರು ಎಚ್ಚರಿಕೆಯಿಂದ, ದಕ್ಷತೆಯಿಂದ ಮತ್ತು ಉತ್ಸಾಹದಿಂದ ನಿರ್ವಹಿಸಿದ್ದಾರೆ. ಬಹುತೇಕ ವಾಕ್ಯಗಳಲ್ಲಿ ಭಾಷಿಕವಾದ ವ್ಯತ್ಯಾಸಗಳು ಜಟಿಲವಾಗಿದ್ದರೂ ಮೂಲ ಸೌಂದರ್ಯವೂ, ಸರಳತೆಯೂ ಅನುವಾದದಲ್ಲಿ ಉಳಿದುಬಂದಿವೆ. ಸಾಹಿತ್ಯ/ಕಾವ್ಯದ ಅನುವಾದದಲ್ಲಿನ ಅನೇಕ ಜಟಿಲತೆಗಳು ಇತಿಹಾಸದ ಅನುವಾದಕಾರ್ಯದಲ್ಲಿ ಇಲ್ಲದಿದ್ದರೂ ಅತಿಸಣ್ಣ ತಪ್ಪೂ ಮೂಲ ಅಭಿಪ್ರಾಯವನ್ನು ಬದಲಿಸಬಿಡುವ ಅಪಾಯವಿದ್ದು ಕಟ್ಟೆಚ್ಚರದಿಂದ ಈ ಕಾರ್ಯ ಸಾಗಿಬಂದಿದೆ.

ಇಂತಹ ಅನೇಕ ಅನುವಾದ ಕಾರ್ಯಗಳನ್ನು, ವಿಶೇಷವಾಗಿ ತೆಲುಗು ದೇಶದ ಇಂಗ್ಲಿಷ್ ಮತ್ತು ತೆಲುಗು ಭಾಷೆಯ ಇತಿಹಾಸದ ಮತ್ತು ಇತಿಹಾಸೇತರ ಕೃತಿಗಳನ್ನು ಕನ್ನಡ ವಿದ್ವಜ್ಜಗತ್ತಿಗೆ ಸಮರ್ಪಿಸಿರುವ ಶ್ರೀ ಗುರುಮೂರ್ತಿ ಪೆಂಡಕೂರು ಅವರ ಲೇಖನಿಯು ಅನನ್ಯವಾಗಿ ಅನೇಕ ವರ್ಷಕಾಲ ಇದೇ ಬಗೆಯ ವಿದ್ವತ್ಸೇವೆಯನ್ನು ಮುನ್ನಡೆಸಿಕೊಂಡು ಹೋಗಲೆಂದು ಆಶಿಸುವ,

**–ಡಾ. ಕೆ.ಜಿ. ಗೋಪಾಲಕೃಷ್ಣರಾವ್**

# ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
# ಅಧ್ಯಕ್ಷರು ಮತ್ತು ಸದಸ್ಯರು

೧) **ಡಾ. ಕೆ.ವಿ. ನಾರಾಯಣ**
ಅಧ್ಯಕ್ಷರು
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ನಂ. ೩೨೯, 'ಗೌರಿ'
ಡಿಯೋ ಮಾರ್ವೆಲ್ ಲೇಔಟ್
ಅನಂತಪುರ ರಸ್ತೆ, ಯಲಹಂಕ
ಬೆಂಗಳೂರು–೫೬೦೦೬೪
narayana48@gmail.com

೨) **ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ**
೧೧೫, ೧೩ನೇ ಕ್ರಾಸ್,
ವಿಲ್ಸನ್ ಗಾರ್ಡನ್
ಬೆಂಗಳೂರು–೫೬೦೦೨೭
olnswamy@gmail.com

೩) **ಡಾ. ನಟರಾಜ್ ಹುಳಿಯಾರ್**
೫೭೩/ಎ, ೧ನೇ ಕ್ರಾಸ್, ೨ನೇ
ಮುಖ್ಯರಸ್ತೆ,
ಬಿ.ಇ.ಎಂ.ಎಲ್. ಲೇಔಟ್,
ಬೆಂಗಳೂರು–೫೬೦ ೦೯೮
natarajhuliyar@gmail.com

೪) **ಶ್ರೀ ಅಬ್ಬಾಸ್ ಮೇಲಿನಮನಿ**
ಆಸ್ಮಾ ಪ್ರಕಾಶನ
ದುರ್ಗಾ ವಿಹಾರದ ಹತ್ತಿರ
ಬಾಗಲಕೋಟೆ–೫೮೭೧೦೧
ashifmelinamani@gmail.com

೫) **ಡಾ. ಎಚ್.ಎಸ್. ಅನುಪಮಾ**
ಜಲಜಾ ಜನರಲ್ ಮತ್ತು ಹೆರಿಗೆ ಆಸ್ಪತ್ರೆ
ಕವಲಕ್ಕಿ
ಕವಲಕ್ಕಿ ಅಂಚೆ–೫೮೧೩೬೧
ಹೊನ್ನಾವರ ತಾ॥
ಉತ್ತರ ಕನ್ನಡ ಜಿಲ್ಲೆ–೫೮೧೩೬೧
anukrishna93@gmail.com

೬) **ಪ್ರೊ. ಶಿವರಾಮಯ್ಯ**
೧೭೨, ಹೊಂಗೆ ಸಾಲು ಮನೆ
ನಾಗರಭಾವಿ ಗ್ರಾಮ, ಐಸೆಕ್ ರೋಡ್
ಬೆಂಗಳೂರು–೫೬೦೦೭೨
ಬೆಂಗಳೂರು–೫೬೦೦೭೨

೭) **ಡಾ. ವಿನಯಾ ಒಕ್ಕುಂದ**
'ನೆಮ್ಮದಿ', ೧೨೪,
ಸಿ.ಐ.ಟಿ.ಡಿ. ಕಾಲೋನಿ
ಶ್ರೀನಗರ, ಧಾರವಾಡ–೦೩
nabhapavimd@gmail.com

೮) **ಡಾ. ಆರ್. ಪೂರ್ಣಿಮಾ**
# ೧೫೪೧, ಸಿರಿಗಂಧ
೧೬ನೇ ಮುಖ್ಯರಸ್ತೆ,
ಎಂ.ಸಿ. ಬಡಾವಣೆ, ವಿಜಯನಗರ
ಬೆಂಗಳೂರು–೫೬೦೦೪೦
poornima54@gmail.com

೯) **ಡಾ. ಎಸ್. ಸಿರಾಜ್ ಅಹಮದ್**
ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸಹ್ಯಾದ್ರಿ ಕಲಾ ಕಾಲೇಜು,
ವಿದ್ಯಾನಗರ,
ಶಿವಮೊಗ್ಗ ಜಿಲ್ಲೆ–೫೭೭೨೦೩
sirajahmeds@gmail.com

೧೦) **ಡಾ. ಪ್ರೀತಿ ಶ್ರೀಮಂಧರ್ ಕುಮಾರ್**
# ೪೯೨, ಚಿತ್ರಭಾನು,
ಎ ಮತ್ತು ಬಿ ಬ್ಲಾಕ್
ಕುವೆಂಪು ನಗರ, ಮೈಸೂರು–೨೩
priti.shubhachandra@gmail.com

೧೧) **ಶ್ರೀ. ಕೆ.ಎ. ದಯಾನಂದ, ಕ.ಆ.ಸೇ.**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ
ಜೆ.ಸಿ.ರಸ್ತೆ, ಬೆಂಗಳೂರು–೫೬೦೦೦೨
kanbhavblr@gmail.com

೧೨) **ಶ್ರೀ ಕೆ. ಹೈದರ್ ಆಲಿಖಾನ್**
ಲೆಕ್ಕಾಧಿಕಾರಿಗಳು
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಬೆಂಗಳೂರು
ವಿಶ್ವವಿದ್ಯಾನಿಲಯ
ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು–೫೬೦೦೫೬

೧೩) **ಶ್ರೀ ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಬೆಂಗಳೂರು
ವಿಶ್ವವಿದ್ಯಾನಿಲಯ
ಆವರಣದ ಹಿಂಭಾಗ, ಮಲ್ಲತ್ತಹಳ್ಳಿ,
ಬೆಂಗಳೂರು–೫೬೦೦೫೬
ದೂ: ೦೮೦–೨೩೧೮೩೩೧೧/೧೨
kbbpbengaluru@gmail.com

# ಪರಿವಿಡಿ


ಅಧ್ಯಕ್ಷರ ನುಡಿ v

**ಮೊದಲ ಮಾತು** vii

ಅನುವಾದಕರ ಮಾತು xi

ಮುನ್ನುಡಿ xiii

**ಅಧ್ಯಾಯ – ೧**

ಆಕರಗಳು ೧

**ಅಧ್ಯಾಯ – ೨**

ತುಳುವರ ಮೂಲ ೧೩

**ಅಧ್ಯಾಯ – ೩**

ತುಳುವರ ವಂಶಾವಳಿ ೨೫

**ಅಧ್ಯಾಯ – ೪**

ತುಳುವರ ಅಭ್ಯುದಯ ೩೪

**ಅಧ್ಯಾಯ – ೫**

ವೀರನರಸಿಂಹರಾಯ (ಕ್ರಿ.ಶ. ೧೫೦೫–೧೫೦೯) ೫೭

**ಅಧ್ಯಾಯ – ೬**

ವೀರನರಸಿಂಹನ ಆಡಳಿತದ ಕೆಲ ಆಶಯಗಳು ೮೦

**ಅಧ್ಯಾಯ – ೭**

ಸಮಾಜ ಮತ್ತು ಸಂಸ್ಕೃತಿ ೯೨

**ಅಧ್ಯಾಯ – ೮**

ಸಮಾರೋಪ ೧೧೨

ಸಂಕ್ಷೇಪಗಳು ೧೧೭

## ಅಧ್ಯಾಯ – ೧

# ಆಕರಗಳು

ವಿಜಯನಗರವನ್ನು ಪರಿಪಾಲಿಸಿದ ನಾಲ್ಕು ರಾಜವಂಶಗಳಲ್ಲಿ ಮೂರನೆಯದೇ ತುಳುವ ವಂಶ. ವೀರನರಸಿಂಹನೇ ಈ ವಂಶದ ಸ್ಥಾಪಕನು. ಅವನು ಕ್ರಿ.ಶ. 1505 ರಿಂದ 1509 ರವರೆಗೆ ರಾಜ್ಯ ಪರಿಪಾಲನೆ ಮಾಡಿದನು. ಆತನ ನಂತರ ಗದ್ದುಗೆ ಏರಿದವರೇ ಅವನ ಸೋದರ ಕೃಷ್ಣದೇವರಾಯ. ಮರೆತುಹೋದ ಸಾಮ್ರಾಜ್ಯದ ಮರೆಯಲಾಗದ ಮಹಾರಾಜನೇ ಆತನು. ವೀರನರಸಿಂಹ ಮತ್ತು ಆತನ ಸೇನಾಪತಿಗಳು ದೇವಾಲಯಗಳಿಗೆ, ಮಠಗಳಿಗೆ ಮತ್ತು ವಿಪ್ರರಿಗೆ, ಮಹಾಪುರುಷರಿಗೆ ದತ್ತಿದಾನ ನೀಡಿದರು. ಸಾಮಾನ್ಯ ಜನರೂ ತಮ್ಮ ಪುಣ್ಯ ಸಾಧನೆಗಾಗಿಯೂ, ಅರಸನ ಮೇಲಿಗಾಗಿಯೂ ದತ್ತಿ ದಾನ ಮಾಡಿದರು. ಸ್ಥಳೀಯ ಅಧಿಕಾರಿಗಳು ಆಡಳಿತಾತ್ಮಕ ದಾಖಲೆಗಳನ್ನು ರಕ್ಷಿಸಿದರು. ಸಾಹಿತಿಗಳು ಸಮಕಾಲೀನ ಸಮಾಜದ ಪರಿಸ್ಥಿತಿಯನ್ನು ಪ್ರತಿಬಿಂಬಿಸುವ ಸಾಹಿತ್ಯ ಕೃತಿಗಳನ್ನು ರಚಿಸಿದರು. ವಿದೇಶೀ ಪ್ರವಾಸಿಗರಾದ ನೂನಿಜ್, ಬಾರ್ಬೊಸಾ, ಫ್ರಯರ್ ಲುಯಿಜ್, ವರ್ತೊಮೆ ಮುಂತಾದವರು ವಿಜಯನಗರಕ್ಕೆ ಬಂದು ತಾವು ಕಂಡು ಕೇಳಿದ ವಿಷಯಗಳನ್ನು ತಮ್ಮ ವರದಿಗಳಲ್ಲಿ ನೀಡಿದ್ದಾರೆ. ಈ ಆಕರ ಸಾಮಗ್ರಿಯ ಆಧಾರದ ಮೇಲೆ ವೀರನರಸಿಂಹನ ಜೀವನ ಮತ್ತು ಆತನ ಕಾಲದ ಪರಿಸ್ಥಿತಿಯನ್ನು ಕಟ್ಟಬಹುದು. ಅಂದಿನ ವಿಜಯನಗರ ಸಾಮ್ರಾಜ್ಯದ ರಾಜಕೀಯ ರಂಗದಲ್ಲಿ ಆತನು ರಾರಾಜಿಸಿದನು.

ಆ ಕಾಲದ ಲಭ್ಯವಿರುವ ಆಕರ ಸಾಮಗ್ರಿಯನ್ನು ಶಾಸನಗಳೆಂದೂ, ಸಾಹಿತ್ಯ ಮೂಲದ ಆಧಾರಗಳೆಂದೂ ಎರಡು ಭಾಗವಾಗಿ ವಿಂಗಡಿಸಬಹುದು.

**ಶಾಸನಗಳು :** ಅಂದಿನ ಶಿಲಾಶಾಸನಗಳೂ, ತಾಮ್ರ ಪತ್ರಗಳೂ ಅನೇಕ ವಿವರಗಳನ್ನು ನೀಡುತ್ತವೆ. ವೀರನರಸಿಂಹನ ವಂಶಾವಳಿಯ ಬಗ್ಗೆ, ಆತನ ಸಾಮ್ರಾಜ್ಯದ ವಿಸ್ತಾರದ ಬಗ್ಗೆ ಅವನ ದಿಗ್ವಿಜಯಗಳ ಬಗ್ಗೆ ವಿವರಗಳು ಶಾಸನಗಳಲ್ಲಿ ಲಭಿಸುತ್ತವೆ. ಆತನ ಅಮಾತ್ಯರು ಮತ್ತು ಸೇನಾಪತಿಗಳ ಬಗ್ಗೆ ಐತಿಹಾಸಿಕ ಆಧಾರಗಳು ಸಿಗುತ್ತವೆ. ಈ ಶಾಸನಗಳು ಅಂದಿನ ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಬಗ್ಗೆ ವಿವರಗಳನ್ನು ನೀಡುತ್ತವೆ.

ವೀರನರಸಿಂಹನ ಕ್ರಿ. ಶ. 1505ರ ನಗರಗೆರೆ ಶಿಲಾಶಾಸನ,[1] ಕ್ರಿ.ಶ. 1507ರ ಕುಡಿಯಾಂತಾಂಡಾಲ್ ಶಾಸನಗಳೂ[2], ಅವನ ಸೇನಾಧಿಪತಿಗಳ ದೇವಿಕಾಪುರಂ ಶಾಸನಗಳೂ[3],



ಕೃಷ್ಣದೇವರಾಯನ ಕ್ರಿ.ಶ. 1511ರ ಮುತ್ತೋಡು ಶಾಸನ,[4] ಮತ್ತು ಕಾಂಜೀವರಂನ ತಾಮ್ರಪತ್ರಗಳಿಂದ[5] ನಮಗೆ ವೀರ ನರಸಿಂಹನ ವಂಶಾವಳಿಯು ಲಭಿಸುತ್ತದೆ ದೇವಿಕಾರಪುರಂ[6] ಶಾಸನವು ನೂನಿಜ್ ವರದಿ–ಎರಡನೇ ಸಿಂಹಾಸನ ಆಕ್ರಮಣದ ಸಂಗತಿಯನ್ನು ಅಲ್ಲಗಳೆಯುತ್ತದೆ. ಈ ದಾನಶಾಸನವು ನರಸನಾಯಕನ ಅನಂತರವೂ ಇಮ್ಮಡಿ ನರಸಿಂಹನು ಜೀವಿಸಿದ್ದನೆಂದು ತಿಳಿಸುತ್ತದೆ. ಕ್ರಿ.ಶ. 1504 ಮತ್ತು 1505ರ ಅವಧಿಯ ಸುಮಾರು ಹನ್ನೆರಡು ಶಾಸನಗಳು ಇಮ್ಮಡಿ ನರಸಿಂಹನೇ ಮಹಾರಾಜನಾಗಿದ್ದರೆಂದು ಸಾರುತ್ತವೆ.[7]

ಅನೇಕ ಶಾಸನಗಳು ಸಾಮ್ರಾಜ್ಯದ ಆಡಳಿತ ವಿಭಾಗಗಳನ್ನು, ಅಲ್ಲಲ್ಲಿಯ ರಾಜ್ಯಪಾಲರನ್ನು[8], ಸಚಿವರನ್ನು, ಅವರ ಪದವಿಗಳನ್ನು[9] ಅವರ ಅಧಿಕಾರಮಿತಿ ಇತ್ಯಾದಿ ವಿವರಗಳನ್ನು ತಿಳಿಸುತ್ತವೆ. ಕೆಲಶಾಸನಗಳು ಅಂದಿನ ತೆರಿಗೆಗಳ ವಿವರಗಳನ್ನು[10], ಕೆಲ ಕಂದಾಯಗಳ ರದ್ದತಿಯನ್ನು ಮತ್ತು ಮನ್ನಾ ಮಾಡಿದ್ದನ್ನು[11] ಹೊಸದಾಗಿ ನಿಗದಿ ಮಾಡಿದ ಭೂಕಂದಾಯ ವಿವರಗಳನ್ನು ತಿಳಿಸುತ್ತವೆ. ತರತರದ ಸಾಗುವಳಿಯ ಭೂಮಿಯ ವರ್ಗೀಕರಣ ಮತ್ತು ಕೃಷಿಗೆ ಮಾಡಿದ ನೀರಾವರಿಯ ಏರ್ಪಾಡುಗಳನ್ನು ತಿಳಿಸುತ್ತವೆ.[12] ಈ ಎಲ್ಲ ಮಾಹಿತಿಯ ನೆರವಿನಿಂದ ಅಂದಿನ ಆಡಳಿತದ ರೀತಿಯನ್ನು ಅರಿಯಬಹುದಾಗಿದೆ. ದೇವಾಲಯ ಆಡಳಿತದ ಬಗ್ಗೆ ಶಾಸನಗಳು ನೀಡುವ ವಿವರಗಳು ಕುತೂಹಲಕರವಾಗಿವೆ. ಶಕ ಸಂವತ್ಸರ 1428 ಅಂದರೆ 31–10–1506ರ ಬಡಕೆರೆಯ ಶಾಸನ (ARE 419–1928)ವು ದೇವಸ್ಥಾನವು ರೈತರಿಗೆ ಬ್ಯಾಂಕಿನಂತೆ ಸುಲಭ ಬಡ್ಡಿಯ ಮೇಲೆ ಸಾಲ ನೀಡುತ್ತಿದ್ದ ವಿವರವನ್ನು, ಈ ಆದಾಯದಿಂದ ದೇವಾಲಯ ನಿರ್ವಹಣೆ ಮಾಡುತ್ತಿದ್ದ ವಿಷಯವನ್ನು ತಿಳಿಸುತ್ತದೆ.[13]

ರಾಜಕೀಯ ಇತಿಹಾಸದ ದೃಷ್ಟಿಯಿಂದ ಶಾಸನಗಳ ಪ್ರಶಸ್ತಿ ಭಾಗವು ತುಂಬಾ ಮುಖ್ಯವಾಗಿದೆ. ಸಾಧಾರಣವಾಗಿ ಪ್ರಶಸ್ತಿಯಲ್ಲಿ ರಾಜನ ಹೆಸರು, ವಂಶಾವಳಿ ಮತ್ತು ಆತನ ಹಿನ್ನೆಲೆ ಆತನ ಸೈನಿಕ, ರಾಜಕೀಯ ಮತ್ತು ಆಡಳಿತಾತ್ಮಕ ಅನುಭವಗಳನ್ನು ನೀಡುವುದಲ್ಲದೇ, ಸಮಕಾಲೀನ ಸಮಯದಲ್ಲಿ ಅನ್ಯರಾಜರುಗಳೊಡನೆ ನಡೆದ ಘರ್ಷಣೆ, ಆಡಳಿತ ವ್ಯವಸ್ಥೆ ಮತ್ತು ರಾಜಕೀಯ ಆದರ್ಶಗಳು, ರಾಯನ ಸಾಧನೆ ಮತ್ತು ಧಾರ್ಮಿಕ ಉದಾರತೆ, ಪೌರಾಣಿಕ ಮತ್ತು ಐತಿಹಾಸಿಕ ವ್ಯಕ್ತಿಗಳೊಂದಿಗೆ ಆತನ ಹೋಲಿಕೆಗಳೂ ಇರುತ್ತವೆ. ಕ್ರಿ.ಶ. 1505ರ ನಗರಗೆರೆ ಶಾಸನ[14], ಕ್ರಿ.ಶ. 1506ರ ಶಿವನಗೆರೆ ಶಾಸನ[15] ಕ್ರಿ.ಶ. 1507ರ **ಕೂಡಿಯಂಕಾಳ್** ಶಾಸನ[16]ಗಳು ವೀರನರಸಿಂಹನ ವಿಚಾರದ ಉತ್ತಮ ಉದಾಹರಣೆಗಳು. ಆದರೆ ಶಾಸನ ರಚಿಸುವವರು ಸಹಜವಾಗಿ ಉತ್ಪ್ರೇಕ್ಷಿತ ವಿವರಗಳನ್ನು ನೀಡುತ್ತಾರೆ. ಆದ್ದರಿಂದ ಶಾಸನದ ವಿವರಗಳನ್ನು ಐತಿಹಾಸಿಕ ಪರೀಕ್ಷೆಗೆ ಗುರಿಪಡಿಸಿ ವ್ಯಕ್ತಿಗಳ ಮತ್ತು ಅವರ ಸಾಧನೆಗಳ ಬಗ್ಗೆ, ಅವರ ಪೂರ್ವಿಕರ ಬಗ್ಗೆ, ಮತ್ತು ಅವರ ಸಂಸ್ಥಾನಿಕರ ಕುರಿತಾದ ವಿವರಗಳನ್ನು ಅಂಗೀಕರಿಸಬೇಕು.

ನಗರಗೆರೆಯ ಶಾಸನದಲ್ಲಿ ವೀರ ನರಸಿಂಹನ ವಂಶಾವಳಿಯು ನಮೂದಾಗಿದೆ. ಚಂದ್ರನಿಂದ–ತುರ್ವಸು, ಈಶ್ವರನ ತಂದೆ ದಿಲೀಪನಿಂದ ವೀರನರಸಿಂಹನವರೆಗೆ ಮೊಟ್ಟ

ಮೊದಲ ಸಲ ವಿವರಿಸಲಾಗಿದೆ. ಬೇರೆಲ್ಲಾ ಶಾಸನ ಮತ್ತು ಸಾಹಿತ್ಯಿಕ ಆಕರಗಳು ತಿಮ್ಮಭೂಪನೇ ಈಶ್ವರನ ತಂದೆಯೆಂದೂ, ಅವನೇ 'ದಿಲೀಪ'–ತಿಮ್ಮಭೂಪತಿಯೆಂದು ಶಾಸನಗಳು ತಿಳಿಸುತ್ತವೆ. ತುಳುವಂಶದಲ್ಲಿ ಮೊದಲ ಐತಿಹಾಸಿಕ ವ್ಯಕ್ತಿ 'ತಿಮ್ಮಭೂಪತಿ' ಹೆಸರನ್ನು 'ದಿಲೀಪ' ನೆಂದು ಶಾಸನಗಳಲ್ಲಿಯು ತಪ್ಪಾಗಿ ಕೆತ್ತಿರಬಹುದು. ಇಂತಹ ಮತ್ತು ಇತರ ಕೆಲದೋಷಗಳನ್ನು ಮುಂದಿನ ಶಾಸನಗಳಲ್ಲಿ 'ಸಭಾಪತಿ'ಯು (ನಂತರದ ಶಾಸನಶಿಲ್ಪಿ) ಸರಿಪಡಿಸಿದ್ದಾನೆ.

ನಮ್ಮ ಶಾಸನ ಸಂಪತ್ತಿನ ಶೇಕಡಾ 90 ಭಾಗ ದಾನಶಾಸನಗಳೇ ಆಗಿವೆ. ಕೆಲ ಶಾಸನಗಳು ದೇವಾಲಯ, ಮಠಗಳಿಗೆ ಭೂಮಿಗಳನ್ನು, ಹೂದೋಟಗಳನ್ನು, ಗ್ರಾಮಗಳನ್ನು ದಾನ ನೀಡಿರುವುದನ್ನು ತಿಳಿಸುತ್ತವೆ. ಕೆಲಶಾಸನಗಳು ಸಾಕಷ್ಟು ಹಣವನ್ನು ಪುದುವಟ್ಟಿನ ಮೂಲಕವಾಗಿಯೂ ನೀಡಿ ಅದರಿಂದ ಬಂದ ಬಡ್ಡಿ ಅಥವಾ ಉತ್ಪನ್ನವನ್ನು ದೇವಾಲಯದಲ್ಲಿ ನಿರ್ದಿಷ್ಟ ಸೇವೆಗೆ ಉಪಯೋಗಿಸುವಂತೆ ವಿಧಿಸಿದ್ದನ್ನು ತಿಳಿಸುತ್ತವೆ.[17] ಕೆಲ ದತ್ತಿಗಳು ಬ್ರಾಹ್ಮಣರಿಗೆ ಮತ್ತು ಆರ್ತರಿಗೆ ಊಟದ ವ್ಯವಸ್ಥೆಗಾಗಿಯೂ, ನಂದಾದೀಪದ ವ್ಯವಸ್ಥೆಗಾಗಿಯೂ, ಗುಡಿಸೇವಕರ ಸಂಬಳಕ್ಕಾಗಿಯೂ ಏರ್ಪಾಟಾಗಿವೆ[18].

ಕೆಲ ಶಾಸನಗಳು ರಾಜನ ಮರಣ, ಪಟ್ಟಾಭಿಷೇಕ ಅಥವಾ ಮತ್ತಾವುದೋ ಮಹತ್ತರ ಸಂಗತಿಯ ದಾಖಲೆಗಾಗಿ ಹಾಕಲ್ಪಟ್ಟಿವೆ. ಈ ಶಾಸನಗಳ ಆಧಾರದ ಮೇಲೆ ಅರಸನ ಅಥವಾ ಅವನ ಸೇನಾಪತಿಗಳ ದಿಗ್ವಿಜಯ, ಕೃಷ್ಣದೇವರಾಯನ ಪಟ್ಟಾಭಿಷೇಕದ ಸಮಯಗಳು ಅಂಗೀಕೃತವಾಗಿವೆ. ವೀರ ನರಸಿಂಹನ ಶಾಸನಗಳಲ್ಲಿ ಅವರು ಧರಿಸಿದ ಸಾಮ್ರಾಟರ ಬಿರುದುಗಳೂ, ಅವರು ನೀಡಿದ ದಾನಗಳೂ ಆತನು ವಿಜಯನಗರದ ವಜ್ರ ಸಿಂಹಾಸನವನ್ನು ಅಲಂಕರಿಸಿದ್ದನ್ನು ಸ್ಥಿರಪಡಿಸುತ್ತವೆ. ಕ್ರಿ.ಶ. 1502ರ ಅರಗಲ್ಲೂರು[19] ಶಾಸನಗಳಲ್ಲಿ ಅಮ್ಮನ ನಾಯಕನು ನರಸನಾಯಕನು ವಿಜಯಿಯಾಗಲಿ ಎಂದು ನೀಡಿದ ದಾನ ಶಾಸನಗಳೆಂದು ತಿಳಿಸುತ್ತವೆ. ಅಂದರೆ ಆಗ ನರಸನಾಯಕನು ಗಜಪತಿಗಳೊಂದಿಗೆ (ಕ್ರಿ.ಶ. 1501–1502) ತೀವ್ರ ಸಮರದಲ್ಲಿ ತೊಡಗಿರಬೇಕು. ಮುದಗೆರೆಯ ಮತ್ತೊಂದು ಶಾಸನ ಕೃಷ್ಣದೇವರಾಯನ ಆಳ್ವಿಕೆ (ಕ್ರಿ.ಶ. 1516)ಯ ಕಾಲದ್ದು – ಭುಜಬಲರಾಯ (ವೀರನರಸಿಂಹ)ನು ತುಳು ನಾಡಿನ ಮೇಲೆ ದಂಡೆತ್ತಿ ಹೋದನೆಂದು[20] ತಿಳಿಸುತ್ತದೆ. ಕ್ರಿ.ಶ. 21–11–1503ರ ದೇವಿಕಾಪುರಂನ ಶಾಸನವು ನರಸನಾಯಕನ ಅಧೀನರಾದ ತಿರುಮಲನಾಯಕ ಮತ್ತು ಈಶ್ವರ ನಾಯಕರು ನರಸನಾಯಕನಿಗೆ ಶಿವಲೋಕ ಪ್ರಾಪ್ತಿಯಾಗಲೆಂದು ಭೂದಾನ ಮಾಡಿದರೆಂದು ತಿಳಿಸುತ್ತದೆ. ಇದರಿಂದ ನರಸನಾಯಕನ ಅವಸಾನ ಕಾಲವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಕ್ರಿ.ಶ. 1510ರ ಕೃಷ್ಣದೇವರಾಯರ ಹಂಪಿಶಾಸನವು ಪಟ್ಟಾಭಿಷೇಕ ಸಮಯದಲ್ಲಿ ಮಾಡಿದ ದಾನ, ಕಾಣಿಕೆ ಇತ್ಯಾದಿಗಳ ವಿವರ ನೀಡುತ್ತದೆ. ಇದರೊಂದಿಗೆ ವಿಕ್ರವಂದಿ[23], ಪುಲಿವೆಂದಲ[24] ಗೂಳ್ಯ[25] ಶಾಸನಗಳ ಸಹಾಯದಿಂದ ಕೃಷ್ಣದೇವರಾಯರ ಪಟ್ಟಾಭಿಷೇಕ ದಿನಾಂಕವನ್ನೂ ವೀರ ನರಸಿಂಹನ ಮರಣದ ದಿನಾಂಕವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ.



**ಸಾಹಿತ್ಯದ ಆಕರಗಳು :** ಒಂದು ದೇಶದ ಸಾಹಿತ್ಯವು ಆ ದೇಶದ ಜನರ ಜೀವನದ ಎಲ್ಲ ರಂಗದ ಕಾರ್ಯ ಚಟುವಟಿಕೆಗಳ ಪ್ರತಿಬಿಂಬವಾಗಿದೆ. ಇತಿಹಾಸವೂ ಜನರ ರಾಷ್ಟ್ರೀಯ ಜೀವನದ ಬಹುಮುಖ ಕಾರ್ಯದ ವಿವರಣೆಯೇ ಆಗಿದೆ. ಆದ್ದರಿಂದ ಇತಿಹಾಸ ಮತ್ತು ಸಾಹಿತ್ಯದ ಸಂಬಂಧ ಅತ್ಯಂತ ಆತ್ಮೀಯವಾಗಿದೆ.[26] ಈಗ ನಮ್ಮ ಅಧ್ಯಯನದ ವಿಷಯದಲ್ಲಿ ಸಾಹಿತ್ಯ ಕೃತಿಗಳು ಅಂದಿನ ಸಾಮಾಜಿಕ–ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಪುನರ್‌ರಚಿಸುವಲ್ಲಿ ಮಹತ್ವದ ನೆರವು ನೀಡುತ್ತವೆ. ಸಾಹಿತ್ಯ ಕೃತಿಗಳು ಎರಡು ರೀತಿಯಾಗಿವೆ. ಒಂದು ದೇಶೀಯ ಮತ್ತು ಇನ್ನೊಂದು ವಿದೇಶೀಯ.

ದೇಶೀಯ ಸಾಹಿತ್ಯದಲ್ಲಿ ಕಡತ–ವರದಿಗಳೂ, ಸಾಹಿತ್ಯ ಕೃತಿಗಳೂ ಮತ್ತು ಸ್ಥಳೀಯ ದಾಖಲೆಗಳೂ ಸೇರುತ್ತವೆ. ಎರಡನೇದೆಂದರೆ ಪರ್ಶಿಯನ್ ಮತ್ತು ಪೋರ್ಚುಗೀಸ್ ಯಾತ್ರಿಕರ ವರದಿಗಳು. ಕಡತಗಳಲ್ಲಿ **ಕಾಲಜ್ಞಾನ**ಕ್ಕೇ ಪ್ರಥಮ ಸ್ಥಾನ. ಅವು ಸಂತ–ಮಹಂತರ ಭವಿಷ್ಯ ವಾಣಿಯಾಗಿದ್ದಾರೂ ಕೆಲವು ಇತಿಹಾಸದ ಸಮಸ್ಯೆಗಳನ್ನು ಬಿಡಿಸುವಲ್ಲಿ ಸುಳುಹು ನೀಡುತ್ತವೆ. ಈ ಕಾಲಜ್ಞಾನದ ವಿಷಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅನಂತರ ಅಂಗೀಕರಿಸಬೇಕು. ಇದರಲ್ಲಿ ವಿದ್ಯಾರಣ್ಯ ಕಾಲಜ್ಞಾನ, ವೀರಪ್ಪಯ್ಯ ಕಾಲಜ್ಞಾನ ಮತ್ತು ಶಿವಯ್ಯನ ಕಾಲಜ್ಞಾನಗಳು ಮಹತ್ವದವಾಗಿವೆ. ಇವುಗಳಿಂದ ರಾಜರ ವಂಶಾವಳಿಯನ್ನು ರಚಿಸಲು ಸಹಾಯವಾಗುತ್ತದೆ. ವಿದ್ಯಾರಣ್ಯ ಕಾಲಜ್ಞಾನದ **'ಪಿತಾಮಹ ಸಂಹಿತೆ'**ಯು ಈ ರೀತಿ ತಿಳಿಸುತ್ತದೆ.

ಓ ಕಶ್ಯಪನೇ ಕೇಳು, ನರಸಿಂಹನೆಂಬ ರಾಜನು ಮೂರು ವರ್ಷಕಾಲ ಆಡಳಿತ ಮಾಡುವನು. ಆದರೆ ವಿರೂಪಾಕ್ಷನನ್ನು ಆರಾಧಿಸದ ಕಾರಣ ಯಮಲೋಕಕ್ಕೆ ತೆರಳಿದನು. ಆತನ ಪುತ್ರ ತಮ್ಮ ರಾಯನು ಮೂರು ವರ್ಷ ಮಹಾರಾಜನಾಗಿ ಅವನು ಗುರುಗಳ ಮತ್ತು ಲೋಕ ವಿರೋಧದಿಂದಲೂ ಯಮಲೋಕಕ್ಕೆ ತೆರಳುವನು. ಅನಂತರ ನರಸನಾಯಕನು ರಾಜ್ಯಭಾರ ಮಾಡಿ ಸ್ವರ್ಗಲೋಕಕ್ಕೆ ತೆರಳುವನು. ಅನಂತರ ಬರುವ ವೀರ ನರಸಿಂಹನು ವಿರೂಪಾಕ್ಷನ ಭಕ್ತನೂ, ಶಿವಾರಾಧಕನೂ ಆಗಿ ಒಂಭತ್ತುವರೆ ವರ್ಷಕಾಲ ವೀರದಿಂದಲೂ, ಧರ್ಮದಿಂದಲೂ ಪರಿಪಾಲನೆ ಮಾಡಿ ಶಿವಲೋಕ ಸೇರುವನು ಅನಂತರ ಮಹಾರಾಜನಾಗುವವನೇ **ಕುಲಿರಾಯ** ಅಥವಾ ಕೃಷ್ಣದೇವರಾಯ.[27]

ಆನೆಗೊಂದಿ ಶಾಸನ[28] ವಿದ್ಯಾರಣ್ಯ ಕಾಲಜ್ಞಾನದ ಮತ್ತೊಂದು ಭಾಗದಲ್ಲಿ ಈ ರೀತಿ ತಿಳಿಸುತ್ತದೆ. ಹಿಂದಿನ ವಂಶಾವಳಿಗೆ ಸಂಬಂಧವಿರದ, ಪೂರ್ವಭಾಗದಿಂದ ಬಂದ ಒಬ್ಬ ಕ್ಷತ್ರಿಯನು ಸಿಂಹಾಸನವೇರಿ ಮೂರುವರ್ಷ ಪರಿಪಾಲಿಸುವನು. ಅನಂತರ ಆತನ ಸೇವಕನೂ ಮತ್ತು ಅವನ ಮಕ್ಕಳೂ ಪರಿಪಾಲಿಸುವರು.

ವಿದ್ಯಾರಣ್ಯ ಕಾಲಜ್ಞಾನವು ನೀಡುವ ವಂಶಾವಳಿಯು ಅನುಕ್ರಮವಾಗಿ ಸರಿಯಿಲ್ಲ. ಆದರೆ ರಾಯರ ವಂಶಾವಳಿಯು ಸಾಕಷ್ಟು ಸರಿಯಾಗಿದೆ. ಇಲ್ಲಿ ರಾಯರ ಧರ್ಮನೀತಿಯು ವಿವರಿಸಲ್ಪಟ್ಟಿದೆ. ಸಾಳುವ ನರಸಿಂಹ ಮತ್ತು ಅವನ ಮಗ ಇಮ್ಮಡಿ ನರಸಿಂಹನು ವೈಷ್ಣವ

ಭಕ್ತರಾದ್ದರಿಂದ ಶಾಪಗ್ರಸ್ತರಾಗಿದ್ದಾರೆ. ತುಳುವ ನರಸನಾಯಕ ಮತ್ತು ಆತನ ಪುತ್ರ ವೀರನರಸಿಂಹ ಶೈವ ಮತ್ತು ವೈಷ್ಣವ ಪಂಥಗಳನ್ನು ಸಮಾನವಾಗಿ ಆದರಿಸಿದ ಕಾರಣ ಆಶೀರ್ವದಿಸಲ್ಪಟ್ಟಿದ್ದಾರೆ.

ನರಸನಾಯಕ ಮತ್ತು ವೀರ ನರಸಿಂಹರ ಬಗ್ಗೆ ವಿದ್ಯಾರಣ್ಯ ಕಾಲಜ್ಞಾನವು, ತಿಳಿಸುವುದು ಏನೆಂದರೆ – ನರಸನಾಯಕನು ಸಾಳುವ ನರಸಿಂಹನ ಮಗನ ಹೆಸರಿನಲ್ಲಿ ಹದಿಮೂರು ವರ್ಷ ರಾಜ್ಯ ಪರಿಪಾಲಿಸಿದನು. ನರಸನಾಯಕನ ಮಗ ವೀರನರಸಿಂಹರಾಯನು ತಮ್ಮರಾಯನನ್ನು ಕೊಲೆಮಾಡಿಸಿ, ರಕ್ತಾಕ್ಷಿ ಸಂವತ್ಸರದಿಂದ ಆರಂಭಿಸಿ ಐದು ವರ್ಷ ರಾಜನಾಗಿದ್ದನು. ನರಸನಾಯಕನ ಎರಡನೇ ಮಗ ಕೃಷ್ಣದೇವರಾಯನು ಶುಕ್ಲ ಸಂವತ್ಸರದ ವೈಶಾಖ ಮಾಸದಿಂದ ಇಪ್ಪತ್ತೊಂದು ವರ್ಷ ಪರಿಪಾಲಿಸುವನು.[29]

(ಫರ್ದರ್ ಸೋರ್ಸಸ್ II ಪು. 16) ಈ ಮಾಹಿತಿಯ ಆಧಾರದಿಂದ ವೀರನರಸಿಂಹನು ಇಮ್ಮಡಿ ಸಾಳುವ ನರಸಿಂಹನ ಕೊಲೆಗೈದು ಸಿಂಹಾಸನವನ್ನು ಆಕ್ರಮಿಸಿದನೆಂಬ ವಾದಕ್ಕೆ ಬೆಂಬಲಸಿಗುತ್ತದೆ.

ಶಿವಯ್ಯ ಕಾಲಜ್ಞಾನದ[30] ಪ್ರಕಾರ ವಂಶಾವಳಿಯು ಹೀಗಿದೆ. "ಹದಿಮೂರು ಜನ ಚಕ್ರವರ್ತಿಗಳು (ಮೊದಲ ಅಕ್ಷರ) ಹ, ಬು, ಹ, ವಿ, ಬು, ದೇ ಮುಂತಾದವರ ನಂತರ ರಾಜರಲ್ಲಿ ಸಿಂಹಪ್ರಾಯದ ನರಸಿಂಹ ಮತ್ತು ಆತನ ಸೇವಕ ನರಸ, ಆತನ ಪುತ್ರ ನರಸಿಂಹ ಮತ್ತು ಅದರಂತೆ ಕೃಷ್ಣದೇವರಾಯ ಮತ್ತು ಅಚ್ಯುತ ಈ ಯಾದಿಯಲ್ಲಿ ಇಮ್ಮಡಿ ನರಸಿಂಹನ ಹೆಸರನ್ನು ಬೇಕೆಂತಲೇ ಬಿಡಲಾಗಿದೆ. ಅವನ ಸ್ಥಳದಲ್ಲಿ ಸಾಳುವ ನರಸಿಂಹನ ನಂತರ ನರಸನನ್ನು ವಿಜಯನಗರದ ಅರಸನೆನ್ನಲಾಗಿದೆ. ಇದು ನೂನಿಜ್‌ವಾದವನ್ನು ಸಮರ್ಥಿಸುತ್ತದೆ.[31] ಆದ್ದರಿಂದ ಕೆಲ ಇತಿಹಾಸಕಾರರು ನರಸನಾಯಕನನ್ನು ಎರಡನೇ ಸಿಂಹಾಸನದ ಆಕ್ರಮಕನೆಂದು ಹೇಳುತ್ತಾರೆ. ಆದರೆ ಶಾಸನಗಳ ಆಧಾರದ ಮೇಲೆ ನರಸ ನಾಯಕನು ಕೇವಲ 'ಪ್ರತಿನಿಧಿ' (ಏಜಂಟ್ ಅಥವಾ ಪಾಂಪು) ಆಗಿದ್ದನೆಂದು ಸಾಧಿಸಬಹುದು. ಆತನು ಇಮ್ಮಡಿ ನರಸಿಂಹನು ಗತಿಸುವವರೆಗೆ ಈ ಕಾರ್ಯ ನಿರ್ವಹಿಸಿದನು[32]. ಪ್ರತಿನಿಧಿಯೆಂಬ ನರಸನು ನಿಜವಾದ ಅಧಿಕಾರ ಚಲಾಯಿಸುತ್ತಿದ್ದನು. ಆದ್ದರಿಂದ ಪ್ರಜೆಗಳು ಅವನಿಗೆ ಸೂಕ್ತ ಪದವಿಯನ್ನು ನೀಡಿದರು. ಆದ್ದರಿಂದ ಅದರ ಅರ್ಥವನ್ನು ಹಿಗ್ಗಾಮುಗ್ಗಾ ಎಳೆದು ತಪ್ಪು ತಿಳಿಯಬಾರದು.

**ತಂಜಾವೂರಿನ ರಘುನಾಥರಾಯನ ಸ್ಥಾನಾಪತಿ ರಚಿಸಿದ 'ರಾಯವಾಚಕ'** ವು ವಿಶಿಷ್ಟವಾದ ಕೃತಿ. ವೀರನರಸಿಂಹನ ಅಂತಿಮ ಕಾಲದ ವಿವರಗಳೊಂದಿಗೆ ಆರಂಭವಾಗುವ ಈ ಬರಹವು ರಾಜನ ಪ್ರತಿನಿತ್ಯದ ಕಾರ್ಯಕ್ರಮದ ವಿವರಗಳೊಂದಿಗೆ ಮುಂದುವರೆಯುತ್ತದೆ. ಅನುಷಂಗಿಕವಾಗಿ ವಿಜಯನಗರ ಸ್ಥಾಪನೆಯ ವಿಷಯವನ್ನು ಪ್ರಸ್ತಾಪಿಸುತ್ತ ವೀರನರಸಿಂಹನ ಕಾಲಕ್ಕೆ ಆಗಲೇ 300 (ಮೂರು ನೂರು) ವರ್ಷಗಳಾಗಿದ್ದವೆಂದು ತಿಳಿಸುತ್ತದೆ. ಇದು ಸರಿಯಲ್ಲ, ವೀರನರಸಿಂಹನು ವಿಜಯನಗರದ ಇಪ್ಪತ್ತೊಂಭತ್ತನೇ ಅರಸನೆಂದು ತಿಳಿಸುತ್ತದೆ. ಇದೂ ತಪ್ಪು, ಹರಿಹರ–ಬುಕ್ಕರಿಂದ ಆರಂಭವಾದ ವಂಶಾವಳಿಯಲ್ಲಿ ನಮಗೆ ಸಿಕ್ಕ ಯಾದಿಯಲ್ಲಿ ಹದಿನಾರು ಅಥವಾ ಹದಿನೆಂಟು ಜನರು ಮಾತ್ರ ಇದ್ದಾರೆ.



ವೀರನರಸಿಂಹನ ದಿನವಹಿ ಕಾರ್ಯಕ್ರಮವು ಅಂದಿನ ಆಡಳಿತ ಪದ್ಧತಿ, ಧಾರ್ಮಿಕ ಸಹಿಷ್ಣುತೆ, ಮುಂತಾದ ವಿಷಯಗಳ ಬಗ್ಗೆ ರಾಯವಾಚಕದ[32] ಮಾಹಿತಿಯನ್ನು ಸಮಕಾಲೀನ ಶಾಸನಗಳು ಪುಷ್ಟೀಕರಿಸುತ್ತವೆ.

ವೀರನರಸಿಂಹ ಮತ್ತು ಆತನ ಕಿರಿಯ ಸೋದರ ಕೃಷ್ಣದೇವರಾಯರ ಸಂಬಂಧದ ರೀತಿಯನ್ನು ಪರಿಹರಿಸುತ್ತದೆ. ನೂನಿಜ್ ಪ್ರಕಾರ[34] ರಾಜನಾದ ಭುಜಬಲರಾಯನು ತನ್ನ ಮಹಾಮಂತ್ರಿ ಸಾಳುವ ತಿಮ್ಮನನ್ನು ಕರೆಸಿ, ತಾನು ಸಾಯುವ ಪರಿಸ್ಥಿತಿಯಲ್ಲಿರುವಾಗ, ತನ್ನ ತರುವಾಯ ತನ್ನ ಎಂಟು ವರ್ಷದ ಮಗನನ್ನು ಮಹಾರಾಜನನ್ನಾಗಿ ಮಾಡಬೇಕು ಮತ್ತು ಕೃಷ್ಣದೇವರಾಯನ ಕಣ್ಣುಗಳನ್ನು ಕೀಳಿಸಬೇಕು ಎಂದು ಆಜ್ಞೆ ಮಾಡಿದನಂತೆ. ಆದರೆ ರಾಯವಾಚಕದ ಪ್ರಕಾರ ವೀರನರಸಿಂಹ ಮತ್ತು ಕೃಷ್ಣದೇವರಾಯ ಅತ್ಯಂತ ಸ್ನೇಹಭಾವದಿಂದ ಇದ್ದರು.[35] ಈ ವಿಷಯಕ್ಕೆ ಅನೇಕ ಶಾಸನಗಳ ಆಧಾರವೂ ಇರುವುದರಿಂದ ಇದನ್ನು ತಳ್ಳಿ ಹಾಕಲು ಸಾಧ್ಯವಿಲ್ಲ.

ತಮಿಳಿನ **'ಕೊಂಗುದೇಶ ರಾಜರ್ಕಳನ್ ಚರಿತಂ'** ಕೃತಿಯು ವೀರನರಸಿಂಹನ ಪಟ್ಟಾಭಿಷೇಕ, ಅವನ ಬಿರುದು ಅವನ ಆಸ್ಥಾನ ಮತ್ತು ಅವನ ದಾನಗಳ ಬಗ್ಗೆ[36] ವಿವರವಾಗಿ ತಿಳಿಸುತ್ತದೆ. ಅದು ಉಮ್ಮತ್ತೂರಿನ ಪಾಳೇಗಾರ ದೇವರಾಯ ಮತ್ತು ಇತರ ಸಂಸ್ಥಾನಿಕರು ವೀರನರಸಿಂಹನ ವಿರುದ್ಧ ಬಂಡೆದ್ದ ವಿಚಾರವನ್ನು ತಿಳಿಸುತ್ತದೆ.[37]

ಓರಿಯಾ ಭಾಷೆಯ **'ಕಟಕರಾಜ ವಂಶಾವಳಿ'**[38] ಪ್ರಕಾರ ಪ್ರತಾಪರುದ್ರ ಗಜಪತಿಯು ಕ್ರಿ.ಶ. 1509ರಲ್ಲಿ ವಿಜಯನಗರದ ಮೇಲೆ ದಾಳಿ ಮಾಡಿದನು. ಇದನ್ನು ಚೈತನ್ಯ ಭಾಗವತ[39] ಮತ್ತು ಹಂಪಿಯ ಕೃಷ್ಣರಾಯನ ಶಾಸನ[40] ಕೂಡಾ ಧೃಢೀಕರಿಸುತ್ತದೆ. **ಕೇರಳ ಪಾಲವು** ಎಂಬ ಮಲಯಾಳ ಕೃತಿಯು ಪಶ್ಚಿಮ ಕರಾವಳಿಯಲ್ಲಿ ಪೋರ್ತುಗೀಸರು ಮಲಬಾರ್ ಮತ್ತು ಕನ್ನಡ ಜಿಲ್ಲೆಯ ಜನರೊಂದಿಗೆ ನಡೆಸಿದ ಕಾರುಬಾರಿನ ಬಗ್ಗೆ ವಿವರಿಸುತ್ತದೆ. ಈ ಕೃತಿಯು ಪ್ರಾಯಶಃ ಹದಿನೇಳನೇ ಶತಮಾನದಲ್ಲಿ ರಚಿಸಲ್ಪಟ್ಟಿರಬೇಕೆಂದು ತಿಳಿಯಲಾಗಿದೆ. ಅದು ವೀರನರಸಿಂಹ ಮತ್ತು ಅವನ ರಾಜ್ಯದ ಬಗ್ಗೆ ವಿವರಿಸುತ್ತದೆ. ವೀರನರಸಿಂಹನ ಪೋರ್ತುಗೀಸರ ಬಗೆಗಿನ ಧೋರಣೆ, ಅವನ ಸೈನ್ಯ ವ್ಯವಸ್ಥೆ ಮತ್ತು ಸಾಧನೆಗಳ ಬಗ್ಗೆ ತಿಳಿಸುತ್ತದೆ. ಅದರ ಪ್ರಕಾರ ತರಬೇತುದಾರರನ್ನು ಮತ್ತು ದಳಪತಿಗಳನ್ನು, ಅವರ ಜಾತಿ ಮತ ಪರಿಗಣಿಸದೇ, ಅವರೆಲ್ಲಿಯವರೇ ಆಗಲಿ, ಉಚಿತ ವೇತನ ನೀಡಿ ನೇಮಿಸುತ್ತಿದ್ದನು. ಸೈನಿಕರಲ್ಲಿ ಜಗಳವಾದರೆ ಅವರು ರಾಜನ ಸಮ್ಮುಖದಲ್ಲಿ ಪರಸ್ಪರ ಸೆಣಸಾಡಿ ತೀರ್ಮಾನಿಸಬೇಕಾಗಿತ್ತು. ಈ ರೀತಿ ಎಲ್ಲರಲ್ಲಿ ಒಂದು ರೀತಿಯ ರಣೋತ್ಸಾಹ ತುಂಬಲಾಗಿತ್ತು. ರಾಜನ ಮರಣಾನಂತರ ಆತನ ರಾಣಿಯರು ಮತ್ತು ಉಪಪತ್ನಿಯರು ಎಲ್ಲಾ ಸೇರಿ ಸು. 700 ಜನ **ಸಹಗಮನ** ಮಾಡುತ್ತಿದ್ದರು.[41] ಸತಿಸಹಗಮನ ಪದ್ಧತಿಯ ಆಚರಣೆಯ ಬಗ್ಗೆ ಪೋರ್ತುಗೀಸ್ ಪ್ರವಾಸಿಗಳು ಉಲ್ಲೇಖಮಾಡಿದ್ದಾರೆ.

ವಿಜಯನಗರದ ರಾಯರೊಂದಿಗೆ ಪೋರ್ತುಗೀಸರು ಹೇಗೆ ಸಂಪರ್ಕ ಬೆಳೆಸಿದರೆಂದು **'ಕೇರಳ ಪಾಲಮ'** ವಿವರಿಸುತ್ತದೆ. "ಪೋರ್ತುಗೀಸರ ಸೈನಿಕ ವಿಜಯಗಳ ಬಗ್ಗೆ ತಿಳಿದ ರಾಯರು ಆನೆಗೊಂದಿಯಿಂದ ಕಣ್ಣಾನೂರಿಗೆ ತಮ್ಮ ಸಚಿವರನ್ನು ಕಳಿಸಿ ತಾವು **ಇಮ್ಮಾನ್ಯುಲ್** ಜೊತೆಗೆ ಸಂಧಿಗೆ ತಯಾರು ಎಂದೂ ಈ ಸ್ನೇಹದ ಸಲುವಾಗಿ ತನ್ನ ಮಗಳನ್ನು ಇಮ್ಮಾನ್ಯೂಲ್ ಮಗನಿಗೆ ಮದುವೆ ಮಾಡಿಕೊಡುತ್ತೇನೆಂದೂ, ತಾನೂ ಕಳಿಸಿದ ವಜ್ರದ ಕಂಠೀಹಾರವನ್ನು ಸ್ವೀಕರಿಸಬೇಕೆಂದು ವಿನಂತಿಸಿದನು. ಪೋರ್ತುಗೀಸರಿಗೆ ರಾಯ ಸಾಮ್ರಾಜ್ಯದ ವೈಭವವನ್ನು ತಿಳಿದು ಮತ್ತು ರಾಯರು ಕಳಿಸಿದ ಸಂದೇಶವನ್ನು ಕೇಳಿ ಸಂತೋಷವಾಯಿತು. ಆದ್ದರಿಂದ ರಾಯನು ಮುಸಲ್ಮಾನರನ್ನು ಸದಾ ಅಂಕೆಯಲ್ಲಿಟ್ಟನು ಮತ್ತು ಅವರನ್ನು ಹಗೆತನದಿಂದ ಕಂಡನು.[42]

ಈ ಎಲ್ಲ ವಿಷಯಗಳಲ್ಲದೇ ಆ ಗ್ರಂಥವು ರಾಯ ಸಾಮ್ರಜ್ಯದ ಆಡಳಿತ ವಿಭಾಗಗಳ ಬಗ್ಗೆ, ರಾಜಧಾನಿಯ ಭೌಗೋಲಿಕ ಸ್ಥಿತಿಯ ಬಗ್ಗೆ, ವಿಜಯನಗರದ ದೈನಿಕ ಆದಾಯದ ಬಗ್ಗೆ, ವಿಜಯನಗರದ ಸೈನ್ಯ ಶಕ್ತಿಯ ಬಗ್ಗೆ ವಿವರಗಳನ್ನು ನೀಡುತ್ತದೆ.[43]

**ಸಾಹಿತ್ಯ : ವರಾಹಪುರಾಣಮು, ಮನುಚರಿತ್ರ, ಪಾರಿಜಾತಾಪಹರಣಮು, ಅಚ್ಯುತರಾಯಾಭ್ಯುದಯಂ ಮತ್ತು ವರದಾಂಬಿಕಾ ಪರಿಣಯ** ಎಂಬುವು ಆ ಕಾಲದ ಪ್ರಮುಖ ಕೃತಿಗಳು. ಈ ಕೃತಿಗಳಲ್ಲಿ ವೀರನರಸಿಂಹನ ವಂಶಾವಳಿ ಮತ್ತು ಅವರ ತಂದೆಯ ಸಾಧನೆಗಳ ವಿವರಗಳು ದೊರೆಯುತ್ತವೆ.

**ನಂದಿ ಮಲ್ಲಯ್ಯ ಮತ್ತು ಘಂಟಿ** ಸಿಂಗನ ಅವರು ತಮ್ಮ ಕಾವ್ಯ–**ವರಾಹ ಪುರಾಣ**ವನ್ನು ನರಸನಾಯಕನಿಗೆ ಅರ್ಪಿಸಿದ್ದಾರೆ. ನರಸನಾಯಕನನ್ನು ಚಾಲುಕ್ಯ ನಾರಾಯಣ, ಧಾರಾವರಾಹ ಮತ್ತು ಬಾರ್ಬರ ಬಾಹು ಎಂದು ಹೊಗಳಿದ್ದಾರೆ.[44] ಅಷ್ಟ ಭಾಷಾ ಪಾರಂಗತರಾದ, ಅಷ್ಟ ಕವಿಗಳು ನರಸನಾಯಕನನ್ನು ಹಾಡಿ ಹೊಗಳಿದ್ದಾರೆ.[45] ಈ 'ಉಲ್ಲೇಖದಿಂದ ಕೃಷ್ಣದೇವರಾಯನಿ ಗಿಂತ ಮೊದಲೇ ಅಷ್ಟ ದಿಗ್ಗಜರು ಇದ್ದರೆಂದು ತಿಳಿಯುತ್ತದೆ. ವರಾಹಪುರಾಣದಲ್ಲಿ ವೀರ ನರಸಿಂಹನ ವಂಶಾವಳಿಯು ಲಭಿಸುತ್ತದೆ. ತಿಮ್ಮ, ಈಶ್ವರ ಮತ್ತು ನರಸನಾಯಕರ ಸಾಧನೆಗಳ ವಿವರಗಳು ಈ ಕಾವ್ಯದಲ್ಲಿವೆ[46]. ಈ ಮಾಹಿತಿಗಳಿಂದ ತುಳುವರ ಅಭ್ಯುದಯದ ಬಗ್ಗೆ ಅರಿವಾಗುತ್ತದೆ.

**ಅಲ್ಲಸಾನಿ ಪೆದ್ದನನು ತನ್ನ ಕಾವ್ಯ ಮನುಚರಿತ್ರದ** ಉಪೋದ್ಘಾತದಲ್ಲಿ ವೀರನರಸಿಂಹನ ಪೂರ್ವೋತ್ತರಗಳನ್ನು ನೀಡಿದ್ದಾನೆ.[47] ಈ ವಿವರಗಳು ಇತರ ಲಭ್ಯ ಆಕರಗಳೊಂದಿಗೆ ಸರಿಹೊಂದುತ್ತವೆ. **ನಂದಿ ತಿಮ್ಮನನ ಪಾರಿಜಾತಾಪಹರಣಮು** ಕಾವ್ಯದಲ್ಲಿ ಈಶ್ವರ ಮತ್ತು ನರಸನಾಯಕರ ಬಗ್ಗೆ ವಿವರಗಳಿವೆ[48] **ಅಚ್ಯುತರಾಯಾಭ್ಯುದಯವು** ಮತ್ತೊಂದು ಪ್ರಮುಖ ಕೃತಿ. ಈ ಕಾವ್ಯದ ಮೊದಲ ಮೂರು ಅಧ್ಯಾಯಗಳಲ್ಲಿ ನರಸನಾಯಕನಿಂದ ಪ್ರಾರಂಭವಾಗಿ ಅಚ್ಯುತರಾಯರ ಪಟ್ಟಾಭಿಷೇಕದವರೆಗೆ ಸಮಗ್ರ ಇತಿಹಾಸವಿದೆ. **ತಿರುಮಲಾಂಬಾ ವಿರಚಿತ**



**'ವರದಾಂಬಿಕಾ ಪರಿಣಯಮು'** ಕಾವ್ಯದಲ್ಲಿ ನರಸನಾಯಕನ ದಿಗ್ವಿಜಯಗಳ ವಿಸ್ತಾರವಾದ ವರ್ಣನೆ ಇದೆ.[49]

**ಕೋನೇರುನಾಥನ ಬಾಲಭಾಗವತ**ದಲ್ಲಿ ವೀರನರಸಿಂಹನ ಸೇನಾಪತಿಗಳಾದ ಅರವೀಡು ರಾಮರಾಜು ಮತ್ತು ರಾಮರಾಜುತಿಮ್ಮ[50] ಅವರ ದಿಗ್ವಿಜಯಗಳ ಬಗ್ಗೆ ಮತ್ತು ಆದಿಲ್‌ಖಾನನ ದಾಳಿಯ ಬಗ್ಗೆ ವಿವರಗಳಿವೆ. **ಚೈತನ್ಯ ಭಾಗವತ**ದಲ್ಲಿ ವಿಜಯನಗರ ಮತ್ತು ಕಳಿಂಗ ಭೂಪತಿ ಗಜಪತಿಗಳ ನಿರಂತರ ಸೇಡು–ಪ್ರತಿಸೇಡಿನ ಕತೆಯೂ, ವೀರನರಸಿಂಹನ ಕಾಲದಲ್ಲಿ ಗಜಪತಿಯು ವಿಜಯನಗರದ ಮೇಲೆ ಮಾಡಿದ ದಾಳಿಯೂ ವರ್ಣಿತವಾಗಿದೆ. **ಕೊರವಿ ಗೋಪರಾಜನ 'ಸಿಂಹಾಸನಾದ್ವತ್ರಿಂಶಿಕಾ'** ಮತ್ತು **ಮಾದಯ್ಯನ 'ಮೈರಾವಣ ಚರಿತ್ರ'**ಗಳಲ್ಲಿ ಅಂದಿನ ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿಯಬಹುದು. **ಮನುಮಂಚಿಭಟ್ಟರ 'ಹಯಲಕ್ಷ್ಮಣ ವಿಲಾಸಮು'** ಕೃತಿಯು ಆಕಾಲದಲ್ಲಿ ಕುದುರೆಗಳಿಗೆ ಮತ್ತು ಅಶ್ವದಳಕ್ಕೆ ನೀಡಿದ ಮಹತ್ವವನ್ನು ತಿಳಿಸುತ್ತದೆ.

**ಭೂಸಂಬಂಧಿ ಕಡತಗಳು :** ಕರ್ನಲ್ ಮೆಕೆಂಜಿ ಮತ್ತು ಆತನ ಕರಣಿಕರು ಕೃತಜ್ಞತೆಗೆ ಪಾತ್ರರು. ಅವರು ಸಂಗ್ರಹಿಸಿದ **ಕವಿಲೆ ಅಥವಾ ದಂಡ** ಕವಿಲೆಗಳು ಅಪಾರ ಮಾಹಿತಿ ನೀಡುತ್ತವೆ. ಗ್ರಾಮದ ಗೌಡ, ಶಾನುಭೋಗರು ದಾಖಲಿಸಿದ ಮಾಹಿತಿಗಳನ್ನು **'ಕೈಫಿಯತ್'** ಎಂದು ಕರೆಯುತ್ತೇವೆ. ಆಯಾ ಭಾಗದ ರಾಜಕೀಯ. ಆರ್ಥಿಕ ಮತ್ತು ಸಾಮಾಜಿಕ ವಿವರಗಳು ಈ ಕೈಫಿಯತ್ತಿನಲ್ಲಿದೆ. **ಗೋರಕಲ್ಲಿನ**[51] ಒಂದು ತುಂಡು ಕವಿಲೆಯಲ್ಲಿ ತುಳುವಂಶದ ವಿವರಗಳಿವೆ. **ಅಲಂಕೊಂಡದ ಪುಟ್ಟಾಸ್ತಿ**ಯಲ್ಲಿ[52] ಅನ್ಯಾನ್ಯ ತೆರಿಗೆಗಳು ಮತ್ತು ರಾಜ್ಯಾದಾಯದ ಮೂಲಗಳ ವಿವರಗಳಿವೆ. **ದುವ್ವೂರು**[53] ಮತ್ತು **ಪ್ರೊದ್ದುಟೂರು**[54] ಕವಿಲೆ (ಕೈಫಿಯತ್) ಮಹತ್ವದವಾಗಿವೆ. ಎರಡನೇ ಸಲ ವಿಜಯನಗರ ಸಿಂಹಾಸನವನ್ನು ಆಕ್ರಮಿಸಿದಾಗ ಇದ್ದ ರಾಜಕೀಯ ಪರಿಸ್ಥಿತಿಯ ಮೂಲಗಳು ಕಾಣುತ್ತವೆ. **ಮಚ್ಚುಪಲ್ಲೆ ಕೈಫಿಯತ್**[55]ನಲ್ಲಿ ಪಾಳೇಗಾರನ ರಾಕ್ಷಸೀ ಆಡಳಿತದ ಸುಳಿವೂ, ಅದನ್ನು ಅರಿತ ರಾಯರು ತೆಗೆದುಕೊಂಡ ಕ್ಷಿಪ್ರ ಕ್ರಮಗಳ ವಿವರಗಳಿವೆ. ಆದರೆ ಕೈಫಿಯತ್‌ಗಳು ನೀಡುವ ಮಾಹಿತಿಯನ್ನು ಶಾಸನಗಳು ಮತ್ತು ಬೇರೆ ಆಧಾರಗಳಿಗೆ ಒರೆ ಹಚ್ಚಿ ಸ್ವೀಕರಿಸಬೇಕು.

**ಮುಸಲ್ಮಾನ ಆಧಾರಗಳು :** ಸಯ್ಯದ್ ಆಲಿತಾಭಾತಾಖಾನ 'ಬುರ್ಹಾನ್ ಇ – ಮಾಸೀರ್' ಮತ್ತು ಫರಿಷ್ತಾನ 'ತಾರೀಖ್–ಇ–ಫರಿಷ್ತಾ' ಮತ್ತು ಗೋಲ್ಕೊಂಡ ಇತಿಹಾಸ ಬರೆದ ಅನಾಮಿಕನ ಕೃತಿಗಳೂ ಅಂದಿನ ರಾಜಕೀಯ ಪರಿಸ್ಥಿತಿಯನ್ನೂ, ವಿಶೇಷವಾಗಿ ವಿಜಯನಗರ ರಾಯರ ಮತ್ತು ಸುಲ್ತಾನರ ಪರಸ್ಪರ ಸಂಬಂಧಗಳ ಬಗ್ಗೆ ಮಹತ್ವದ ಮಾಹಿತಿ ನೀಡುತ್ತವೆ. ಇವರು ಯಾವುದೇ ಘಟನೆಯ ಬಗ್ಗೆ ಬೇರೆ ಬೇರೆ ಮೂಲಗಳಿಂದ ಮಾಹಿತಿ ಸಂಗ್ರಹಿಸಲಿಲ್ಲ. ಘಟನೆಯ ಸತ್ಯಾಸತ್ಯತೆಯ ಪರೀಕ್ಷೆ ಮಾಡಲಿಲ್ಲ. ಅವರು ಕೇವಲ ತಮ್ಮ ಪ್ರಭುಗಳನ್ನು ಸಂತೋಷಗೊಳಿಸಿ ಬಹುಮಾನಗಳನ್ನು ಪಡೆಯುವ ಉದ್ದೇಶದಿಂದ ಬರೆದರು. ಆದ್ದರಿಂದ ಅವರ ಕೃತಿಗಳು ವಿಶ್ವಾಸಾರ್ಹತೆ ಗಳಿಸಲಿಲ್ಲ. ಅಲ್ಲಿ ಪಕ್ಷಪಾತ ಧೋರಣೆ ಕಾಣುತ್ತದೆ. ಇಷ್ಟಾದರೂ ಫರಿಷ್ತಾ ಮತ್ತು ತಭಾತಬಾ ಅವರ ಕೃತಿಗಳಿಂದ

ನಮಗೆ ಆ ಕಾಲದ ರಾಜಕೀಯ ಪರಿಸ್ಥಿತಿಯ ಬಗ್ಗೆ ಸುಳುಹುಗಳು ಲಭಿಸುತ್ತವೆ. ಆದರೆ ಇಲ್ಲಿ ಲಭಿಸುವ ಮಾಹಿತಿಯನ್ನು ಉಪಯೋಗಿಸುವ ಮುನ್ನ ವಿವರಗಳನ್ನು ಎಳೆಎಳೆಯಾಗಿ ವಿಮರ್ಶಿಸಬೇಕು.

**ಯುರೋಪಿಯನ್ ಮೂಲಗಳು :** ಬಹಳ ಮಹತ್ವದ ಆಕರವೆಂದರೆ ಕ್ರಿ.ಶ. 1530 ಮತ್ತು 1540 ಅವಧಿಯಲ್ಲಿ ವಿಜಯನಗರದಲ್ಲೇ ನೆಲೆಸಿದ್ದ ಪೋರ್ತುಗೀಸ್ ಕುದುರೆ ವ್ಯಾಪಾರಿ, ನೂನಿಜ್‌ನ ವರದಿ. ಈತನ ವರದಿಯು ತನ್ನ ಕಾಲದವರೆಗೆ ವಿಜಯನಗರದ ಇತಿಹಾಸದ ಕತೆಯನ್ನು ಅನುಕ್ರಮವಾಗಿ, ಸಮಗ್ರವಾಗಿ ನೀಡುತ್ತದೆ. ಆದರೆ ಇದರಲ್ಲಿ ಕುಂದುಕೊರತೆಗಳು ಇವೆ. ಅನೇಕ ಸಂದರ್ಭದಲ್ಲಿ ನೂನಿಜ್ ಅಭಿಪ್ರಾಯ ಪ್ರಶ್ನಾರ್ಹವಾಗಿದೆ ಮತ್ತು ಉಳಿದ ವರದಿ–ದಾಖಲೆಗಳೊಂದಿಗೆ ಹೊಂದುವುದಿಲ್ಲ. ನೂನಿಜ್ ತಿಳಿಸುವ ಸಾಳುವ ನರಸಿಂಹನ ಪುತ್ರರ ಅದೃಷ್ಟದ ಬಗೆಗಿನ ವಿವರಗಳು ಇತಿಹಾಸಕಾರರಲ್ಲಿ ತೀವ್ರ ಭಿನ್ನಾಭಿಪ್ರಾಯವುಂಟು ಮಾಡಿದವು. ನರಸನಾಯಕನೇ ಸಾಳುವ ನರಸಿಂಹನ ಮಗ ಇಮ್ಮಡಿ ನರಸಿಂಹನ ಹತ್ಯೆ ಮಾಡಿದನೆಂದು ಕೆಲವರೂ, ಅಲ್ಲವೆಂದು ಕೆಲವರೂ ವಾದಿಸಿದರು ನರಸನಾಯಕನು ತಮ್ಮರಾಯ (ಇಮ್ಮಡಿ ನರಸಿಂಹ)ನ ಕೊಲೆಮಾಡಿಸಿ ತಾನು ಸಿಂಹಾಸನವನ್ನು ಹಿಡಿದನೆಂಬ ಆರೋಪವನ್ನು ಶಕ ವರ್ಷ **1427ರ ದೇವಿಕಾಪುರಂ** ಶಾಸನವು ಅಲ್ಲಗಳೆಯುತ್ತದೆ. ನೂನಿಜ್ ದಾಖಲೆಯಲ್ಲಿ ವೀರನರಸಿಂಹನನ್ನು ಭುಜಬಲರಾಯ (Busbalrao) ಎಂದು ಕರೆಯಲಾಗಿದೆ. ಆದರೆ ಶಾಸನಗಳಲ್ಲಿ ಭುಜಬಲರಾಯ ಎನ್ನಲಾಗಿದೆ. ವೀರನರಸಿಂಹ ಮತ್ತು ಆತನ ಸೋದರ ಕೃಷ್ಣರಾಯರ ಸಂಬಂಧದ ಬಗ್ಗೆ ನೂನಿಜ್‌ನ ಗ್ರಹಿಕೆಯು ಸ್ಥಳೀಯ ಆಕರಗಳ ವಿವರಗಳಿಗೆ ವಿರೋಧವಾಗಿದೆ. ನೂನಿಜ್ ಪ್ರಕಾರ ಬುಸ್‌ಬಲರಾವ್‌ನು ತನ್ನ ಮಂತ್ರಿ ಸಾಳುವ ತಿಮ್ಮನನ್ನು ಕರೆಸಿ, (ತಾನು ಸಾಯುವ ಸಮಯದಲ್ಲಿ) ತನ್ನ ಎಂಟು ವರ್ಷದ ಮಗನಿಗೆ ಪಟ್ಟಕಟ್ಟಬೇಕು ಮತ್ತು ತನ್ನ ಮಲತಮ್ಮ ಕೃಷ್ಣರಾಯನ ಕಣ್ಣು ಕೀಳಿಸಬೇಕೆಂದು ಆಜ್ಞಾಪಿಸುತ್ತಾನೆ ಎಂದಿದೆ. ಆದರೆ ಆ ಕಾಲದ ಶಾಸನಗಳಲ್ಲಿ ವೀರನರಸಿಂಹನು ಕೃಷ್ಣರಾಯ ಮತ್ತು ಅವನ ತಾಯಿ ನಾಗಲಾದೇವಿಯ ಬಗ್ಗೆ ಅತ್ಯಂತ ಗೌರವದ ಮಾತು ಆಡಿದ್ದಾನೆ. ರಾಯವಾಚಕದಲ್ಲಿ ಈ ಇಬ್ಬರು ಸೋದರರ ನಡುವೆ ಸೌಹಾರ್ದಯುತ ಸಂಬಂಧವಿತ್ತೆಂದು ತಿಳಿಸಲಾಗಿದೆ.

ಪೋರ್ತುಗೀಸ್ ಪ್ರವಾಸಿ ಡ್ಯುರಾಂಟೆ ಬರ್ಬೋಸಾ (1500–1516AD) ಮತ್ತು ಫ್ರಯರ್ ಲುಯಿಜ್ (1510AD) ಮತ್ತು ಇಟಲಿಯಾ ಲುಡೊವಿಕೋ ಡಿ. ವರ್ತೆಮಾ (1502–08AD) ವಿಜಯನಗರಕ್ಕೆ ಬಂದ ಪ್ರಮುಖ ಯುರೋಪಿಯನರು. ಬರ್ಬೋಸಾ ದಕ್ಷಿಣ ಭಾರತದ ಭೌಗೋಳಿಕ ಮತ್ತು ಐತಿಹಾಸಿಕ ಸಂಗತಿಗಳನ್ನು ತುಂಬಾ ವಸ್ತುನಿಷ್ಟವಾಗಿ, ನಿಖರವಾಗಿ ಬರೆದಿದ್ದಾನೆ. ವೀರನರಸಿಂಹನು ಕ್ರಿ.ಶ. 1509ರಲ್ಲಿ ನಿಧನನಾಗುವವರೆಗೆ ಬರ್ಬೋಸಾ ವಿಜಯನಗರದ ಕುರಿತಾಗಲೀ ಇಮ್ಮಡಿ ನರಸಿಂಹನ ಕುರಿತಾಗಲೀ ಒಂದಕ್ಷರ ಬರೆಯಲಿಲ್ಲ. ಆದರೆ ಅವನು ಕ್ರಿ.ಶ. 1505–1514ರ ಅವಧಿಯ



ವಿಜಯನಗರದ ಸಾಮಾನ್ಯ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯ ಬಗ್ಗೆ ಬರೆದ ಮಾತುಗಳು ನಮಗೆ ಪರಿಸ್ಥಿತಿಯ ಬಗ್ಗೆ ಸರಿಯಾದ ಚಿತ್ರಣ ನೀಡುತ್ತವೆ.

ಪೋರ್ತುಗೀಸ್ ರಾಯಭಾರಿಯಾಗಿ ವಿಜಯನಗರದ ಕೃಷ್ಣದೇವರಾಯನ ಆಸ್ಥಾನಕ್ಕೆ ಆಗಮಿಸಿದ **ಫ್ರಯರ್ ಲೂಯಿಸ್** (ಕ್ರಿ.ಶ. 1510) ವರದಿಯಿಂದ ವೀರನರಸಿಂಹನ ದಂಡಯಾತ್ರೆಗಳ ಬಗ್ಗೆ ಸೂಕ್ತ ಮಾಹಿತಿ ದೊರೆಯುತ್ತದೆ. "ವಿಜಯನಗರದ ಅರಸನು ಐದು ಸಾವಿರ ಪದಾತಿಗಳು, ಎರಡು ಸಾವಿರ ಅಶ್ವದಳದೊಂದಿಗೆ ತನಗೆ ತಿರುಗಿಬಿದ್ದು ತಾನೇ ವಿಜಯನಗರ ಸಿಂಹಾಸನದ ವಾರಸುದಾರನೆಂದು ಜಾಹೀರು ಮಾಡಿ ಪೆನುಗೊಂಡ ಕೋಟೆಯನ್ನು ವಶಪಡಿಸಿಕೊಂಡ ಸಾಮಂತನನ್ನು ಸದೆಬಡಿಯಲು ಹೊರಟಿದ್ದನು. ಈ ಫ್ರಯರ್ ಲುಯಿಸ್‌ನ ಮಾತಿನಿಂದ ಪ್ರಕಟವಾಗುವುದೇನೆಂದರೆ ವೀರನರಸಿಂಹನು ಸಾಯುವ ಮೊದಲು ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣದ ಪಾಳೇಗಾರರನ್ನು ಸದೆಬಡಿಯಲಾಗಲಿಲ್ಲ ಎಂದಾಗುತ್ತದೆ. ಶಾಸನಗಳೂ, ತೆಲುಗು ಸಾಹಿತ್ಯವೂ ಕೂಡಾ ಉಮ್ಮತ್ತೂರು ಪಾಳೆಯಗಾರನು ವೀರನರಸಿಂಹನ ಕಾಲದಲ್ಲಿ ತೋರಿದ ಉದ್ಧಟತನದ ಬಗ್ಗೆ ವಿವರಿಸುತ್ತವೆ.

ಇಟಲಿಯ ಪ್ರವಾಸಿ **ವರ್ತೆಮಾ** ವಿಜಯನಗರವನ್ನು ಕ್ರಿ.ಶ. 1502–1508ರಲ್ಲಿ ಸಂದರ್ಶಿಸಿದನು. ಅವನ ವರದಿಯಂತೆ "ವಿಜಯನಗರದ ಅರಸು ಬಲಾಢ್ಯನು, ಅವನ ಅಶ್ವದಳದಲ್ಲಿ 40,000 ರಾವುತರಿದ್ದಾರೆ. ಪ್ರತಿ ಕುದುರೆಯು 300. 400, 500 ಪರ್ದಾಯಿ ಬೆಲೆ ಬಾಳುತ್ತವೆ. ಕುದುರೆಗಳು ಅಲ್ಲಿ ಹುಟ್ಟುವುದಿಲ್ಲ. ಬಂದರುಗಳ ಅಧಿಪತಿಗಳು ಕುದುರೆಗಳ ಸಂಪರ್ಕಿಸಲು ಬಿಡುವುದಿಲ್ಲ." ಅವನ ಗೋವಾ, ಕಲ್ಲಿಕೋಟೆ, ಮತ್ತಿತರ ಪಡುಗಡಲ ಸ್ಥಳಗಳ ಕುರಿತಾದ ವರದಿಯು ಮತ್ತು ವಿಜಯನಗರ ಪಟ್ಟಣ ಮತ್ತು ಸಾಮ್ರಾಜ್ಯದ ವಿವರಗಳು ಕುತೂಹಲಕಾರಿಯೂ, ಅಮೂಲ್ಯವೂ ಆಗಿವೆ.

ಆದ್ದರಿಂದ ನಮಗೆ ಸಾಕಷ್ಟು ವಿಷಯಾಧಾರಿತ ಮಾಹಿತಿ ಲಭಿಸುತ್ತದೆ. ಕೆಲವೊಮ್ಮೆ ಅಲ್ಲಿನ ವಿಷಯಗಳು ಪರಸ್ಪರ ವಿರೋಧವಾಗಿವೆ. ಆದ್ದರಿಂದ ಅನೇಕ ವಿವಾದಾತ್ಮಕ ವಿಷಯಗಳು ಉದ್ಭವಿಸಿದವು. 1. ವಿಜಯನಗರ ಸಿಂಹಾಸನವನ್ನು ಎರಡನೇ ಸಲ ಯಾರು ಆಕ್ರಮಿಸಿದರು. 2. ಯಾರು ನಿಜವಾಗಿ ಅಧಿಕಾರ ಗ್ರಹಿಸಿದರು. 3. ನರಸನಾಯಕನೋ ? ಆತನ ಮಗ ವೀರನರಸಿಂಹನೋ 4. ವೀರನರಸಿಂಹ ಮತ್ತು ಕೃಷ್ಣದೇವರಾಯರ ಸಂಬಂಧಗಳು ಹೋಗಿದ್ದವು.

ಈ ಬಗ್ಗೆ ಖಚಿತವಾದ, ನಂಬಲರ್ಹ ಮಾಹಿತಿ ನೀಡಿ ಸಮಸ್ಯೆಗಳನ್ನು ಪರಿಹರಿಸಬಲ್ಲ ಶಾಸನಾಧಾರಗಳು ತೀರಾ ಕಡಿಮೆ. ಸಾಹಿತ್ಯ ಕೃತಿಗಳಿಂದ ಲಭಿಸುವ ಸಂಗತಿಗಳು, ಸಾಮಾಜಿಕ ಇತಿಹಾಸವನ್ನು ತಿಳಿಸುತ್ತವೆ. ಆದ್ದರಿಂದ ಸೂಕ್ಷ್ಮವಾದ ಪರಿಶೀಲನೆ ಮತ್ತು ಅರ್ಥೈಸುವಿಕೆ ಅವಶ್ಯವಾಗಿದೆ. ಈ ಕಾಲದ ಇತಿಹಾಸವನ್ನು ಪುನರ್‌ರಚಿಸುವ ಕೆಲಸದಲ್ಲಿ ತೊಡಗಿದ ಸಂಶೋಧಕರು ಕಟ್ಟು ಕತೆಗಳಲ್ಲಿ ಸತ್ಯವನ್ನು ಹುಡುಕಬೇಕು. ಸಮಸ್ಯೆಗಳ ತೀರುವಳಿಗೆ ನೆರವಾಗದ ಸಂಗತಿಗಳನ್ನು ದೂರವಿಡಬೇಕು. ಹಾಗಾದರೂ ಕಾಡುವ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ.

ಈ ನಮ್ಮ ಸಂಶೋಧನೆಯಲ್ಲಿ ನಮಗೆ ದೊರೆತ ಮಾಹಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುವುದು. ಎರಡು ಅಥವಾ ಮೂರು ನಂಬಲರ್ಹವಾದ ಆಕರದಿಂದ ದೊರೆತ ಮಾಹಿತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆಕರಗಳ ಮೌಲ್ಯ ನಿರ್ಧಾರ ಮಾಡುವಾಗ ಸಮಕಾಲೀನ ದಾಖಲೆಗೆ ಮಹತ್ವ ನೀಡಲಾಗುತ್ತದೆ.

*

---

**ಆಕರ ಮತ್ತು ಟಿಪ್ಪಣಿಗಳು**

1. E.C. X-1 GD. 77
2. EI XIV pp.231-33
3. 401, 355, 357-ARE 1912
4. EC XI HK 94 pp. 127-128
5. E.I. XIII pp. 122-132
6. ಅದೇ VII pp. 74 ರಿಂದ 85
7. ಅದೇ VII. pp 74 F.ARE 412 of 1913, 354, 359 and 396 of 1912, ECX GD 30, XII MI 59
8. EC XV HN 76
   XVI Mi 131
   XII Mi 58
   ARE 410 of 1928, 719 of 1917 of 1954-55 396 of 1912, 308 of 1921, 408 of 1913.
9. ARE 90 of 1945, 166 of 1913
10. ಅದೇ 516 of 1906, 24
11. ARE 30 of 1921, SII IV 803, 107kfk 1939 40
12. ARE 419 of 1925
13. ಅದೇ 423 of 1928
14. EC X GD 77
15. ಅದೇ XVI Mi. 131
16. ಅದೇ XIV pp 231-33
17. ARE 423 of 1928, 601 of 1919-20, 190 of 1940-4
18. ECX KI-34, ARE 423 of 1928,
    445 of 1913, 355 of 1912
19. ARE 450 of 1913, 445 of 1913
20. Para 67 of M.A.R. 1908
21. ARE 357 of 1912
22. E.I. VOL. pp 361-37
23. ARE 289 of 1915
24. S.I.I. XVI 45
25. ಅದೇ VOL IX 77
26. J.A.H.R.S. VOL XI p. 114
27. M.A.R. 1932 p. 116



28. ಅದೇ pp. 116-118
29. F.S.II 16
30. ಅದೇ 15
31. ಫರ್ಗ್ಗಾಟನ್ ಎಂಪೈರ್ pp. 297-300
32. ARE 386 of 1904
33. F.S. II 96
34. ಫರ್ಗ್ಗಾಟನ್ ಎಂಪೈರ್ ಪು. 300
35. F.S.I. pp. 186-187
36. F.S. II 95
37. ಅದೇ II 97 (a)
38. MACK MSS 15, 648
39. Sakar Chaitanya p.46
40. E.I. VOL I p. 370
41. F.S. II 104
42. ಅದೇ II 103
43. ಅದೇ
44. ವರಾಹಪುರಾಣಮು I-10
45. ಅದೇ I-II
46. ಅದೇ
47. ಮನುಚರಿತ್ರಮು–ಕಾಂಟೋ-I
48. ಪಾರಿಜಾತಾಪಹರಣಮು–ಕಾಂಟೋ-I
49. ಸೋರ್ಸಸ್ ಪು. 172-75
50. F.S. II 108
51. ಅದೇ II - 18 (b)
52. ಅದೇ II 106
53. ಅದೇ II 91
54. ಅದೇ II 92
55. ಅದೇ II 102

## ಅಧ್ಯಾಯ – ೨

# ತುಳುವರ ಮೂಲ

ತುಳುವರು ಎಲ್ಲಿಯವರು ? ಅವರ ಚರಿತ್ರೆಯೇನು ? ಎಂಬ ವಿಷಯದಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಕೆಲ ವಿದ್ವಾಂಸರ ಪ್ರಕಾರ ವೀರನರಸಿಂಹನ ಪೂರ್ವಿಕರು ತುಳುನಾಡಿನಿಂದ ಚಂದ್ರಗಿರಿಗೆ ವಲಸೆ ಬಂದು ಸಾಳುವ ನರಸಿಂಹನ ಸೇವೆಯಲ್ಲಿ ಸೇರಿಕೊಂಡರು. ಅವರು ತುಳುನಾಡಿನಿಂದ ಬಂದವರೆಂದು ತಿಳಿದ ಕಾರಣ ಅವರನ್ನು **ತುಳುವ**ರೆಂದು ಕರೆದರು. ಇನ್ನಿತರರ ಪ್ರಕಾರ ಈ ವಂಶದವರ ಮೂಲ ಪುರುಷನ ಹೆಸರು **ತುರ್ವಸು**. ಆದರೆ ಅವರು ತುಳುವ ಮನೆತನದವರೆಂದು ಪ್ರಸಿದ್ಧರಾದರು. ವರಾಹ ಪುರಾಣವು ಮಾತ್ರ ಮೊದಲಿನ ಅಭಿಪ್ರಾಯವನ್ನು ವಿವರಿಸಿತು. ಆದರೆ ಶಾಸನಗಳೂ ಮತ್ತು ಇತರ ಸಾಹಿತ್ಯದ ಆಕರಗಳು ಎರಡನೇ ಅಭಿಪ್ರಾಯವನ್ನು ಅಂಗೀಕರಿಸುತ್ತವೆ.

ಮೊದಲಿನ ಸಿದ್ಧಾಂತದ ಪ್ರಕಾರ **ತುಳುವ** ಎಂಬ ಹೆಸರು ತುಳುನಾಡಿನ ಕಡೆಗೆ ತೋರಿಸುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿ ಪಡುಗಡಲ ತೀರದಲ್ಲಿರುವ ಪುಟ್ಟ ಪ್ರದೇಶವೇ **ತುಳುನಾಡು**. ಈ ಸಿದ್ಧಾಂತದ ಪ್ರಮುಖ ಪ್ರತಿಪಾದಕರಾದ ನೇಲಟೂರು ವೆಂಕಟರಮಣಯ್ಯನವರ ಪ್ರಕಾರ ತುಳುವ ವಂಶ ಮತ್ತು ತುಳು ಮಂಡಲಕ್ಕೆ ಸಂಬಂಧವಿರಲೇಬೇಕು.[1] ಅವರು 'ವರಾಹ ಪುರಾಣ'ದ ಆಧಾರವನ್ನು ತೋರಿಸಿದರು. ಸಾಳುವ ನರಸಿಂಹನ ಆಳಿಕೆಯಲ್ಲಿದ್ದ ಇಬ್ಬರು ಕವಿಗಳು ರಚಿಸಿದ 'ವರಾಹಪುರಾಣವು' ನರಸನಾಯಕನಿಗೆ ಅಂಕಿತವಾಗಿದೆ. ಇದರಲ್ಲಿ ತಿಮ್ಮ ಭೂಪತಿಯು ತುಳುನಾಡಿನ ತುಳುವ ಕುಟುಂಬದವನೆಂದು ಹೇಳಲಾಗಿದೆ.[2] ಆದರೆ ತುಳುನಾಡಿನಲ್ಲಿ ಆ ಕಾಲಕ್ಕೆ **ತಿಮ್ಮ** ಹೆಸರಿನ ಯಾವ ಪಾಳೇಗಾರನಾಗಲೀ ಆಡಳಿತ ನಡೆಸಿದ ಆಧಾರವಿಲ್ಲ. ವರಾಹಪುರಾಣ ಬಿಟ್ಟರೆ ತುಳುವರು ತುಳುನಾಡಿನಿಂದ ಬಂದವರೆಂದು ಹೇಳುವ ಬೇರಾವುದೇ ಆಧಾರವಿಲ್ಲ. ಅವರು ತುಳುನಾಡಿನಿಂದ ವಲಸೆ ಬಂದವರೆಂದು ಅಂಗೀಕರಿಸಿದರೆ ಅವರನ್ನು **'ತುಳು'** ಗಳೆಂದು ಕರೆಯಬೇಕಾಗಲೀ ತುಳುವರೆಂದು ಅಲ್ಲ.

ಕ್ರಿ.ಶ. **1505ರ ನಗರಗೆರೆ ಶಾಸನವು** ತುಳುವರ ಮೂಲವನ್ನು ಬ್ರಹ್ಮನಿಂದ ತುರ್ವಸು ಮತ್ತು ತುರ್ವಸುವಿನಿಂದ ವೀರನರಸಿಂಹನವರೆಗೆ ಮೊದಲ ಬಾರಿಗೆ ತಿಳಿಸುತ್ತದೆ. ಕ್ರಿ.ಶ. **1511ರ ನಾರ್ಲಕೆರೆ** ತಾಮ್ರಶಾಸನದಲ್ಲಿ–ತುರ್ವಸುಕುಲ ಸಂಜಾತ ಕ್ಷತ್ರಿಯ ಕೃಷ್ಣದೇವರಾಯ



ಎನ್ನಲಾಗಿದೆ.[4] **ಅಚ್ಯುತರಾಯಾಭ್ಯುದಯ**[5]ದಲ್ಲಿ ತುರ್ವಸು ರಾಜವಂಶದಲ್ಲಿ ತಿಮ್ಮ ಭೂಪತಿಯು ಜನಿಸಿದನು ಎನ್ನಲಾಗಿದೆ. ಪಾರಿಜಾತಾಪಹರಣ[6]ದಲ್ಲಿ ತುರ್ವಸು ವಂಶದಲ್ಲಿ ಈಶ್ವರನು ಜನಿಸಿದನೆಂದು ಹೇಳಲಾಗಿದೆ. ಕೃಷ್ಣದೇವರಾಯನ 'ಆಮುಕ್ತಮಾಲ್ಯದ'[7] ಮತ್ತು ಅಲ್ಲಸಾನಿ ಪೆದ್ದನನ 'ಮನುಚರಿತ್ರ'[8]ದಲ್ಲಿ ತುರ್ವಸು ವಂಶವೇ ತುಳುವಂಶವೆಂದು ಕರೆಯಲ್ಪಟ್ಟಿತು ಎನ್ನಲಾಗಿದೆ. ಈ ವಾದವನ್ನು ಸುಲಭವಾಗಿ ತಿರಸ್ಕರಿಸುವಂತಿಲ್ಲ. ಪಾಣಿನೀಯ[9] ಸೂತ್ರದ ಪ್ರಕಾರ **ತುರ್ವಸು** ಎಂಬುದು ಕಾಲಾನುಕಾಲಕ್ಕೆ **'ತುಳುವಸು'** ಎಂದಾಯಿತು. ಮತ್ತೊಂದು ವ್ಯಾಕರಣ ಸೂತ್ರದ[10] ಪ್ರಕಾರ **ತುಳುವಸು**ನಲ್ಲಿ **'ಸು'** ಕಳಚಿ ಕೇವಲ **'ತುಳುವ'** ಉಳಿಯಿತು ಅಲ್ಲದೇ ಕುರುವಿನ ವಂಶಸ್ಥರನ್ನು **ಕುರುವಂಶ**ವೆಂದೂ ಸೂರ್ಯ ವಂಶಸ್ಥರನ್ನು **'ಸೂರ್ಯವಂಶ'**ವೆಂದೂ ಕರೆದರೆ ತಪ್ಪಿಲ್ಲ. ಆದರೆ ವೆಂಕಟರಮಣಯ್ಯ ಈ ವಾದವನ್ನು ಸಂಪೂರ್ಣ ತಿರಸ್ಕರಿಸಿದರು.[11]

ಅವರ ಅಭಿಪ್ರಾಯದ ಪ್ರಕಾರ **ತುರ್ವಸು**ವಿನ ವಂಶಸ್ಥರು **ತೌರವರಾಗಬಹು**ದು ಆದರೆ **ತುಳುವರಾಗಲಾರರು**. ಆದರೆ ಅವರ ಅಭಿಪ್ರಾಯವೇ ಸರಿ ಎನ್ನಲಾಗುವುದಿಲ್ಲ.

**ಯಾರೀ ತುಳುವರು** ? : ಈವರೆಗೆ ಲಭ್ಯವಿರುವ ಆಧಾರಗಳು ತುಳುವರು ಕ್ಷತ್ರಿಯರೆಂದಾಗಲೀ, ಶೂದ್ರರೆಂದಾಗಲೀ ಗುರುತಿಸಲು ಪರಸ್ಪರ ಸಮ್ಮತಿಸುತ್ತಿಲ್ಲ. ಎರಡು ವಿಷಯಗಳು ಅವರನ್ನು ಕ್ಷತ್ರಿಯರೆಂದು ಅಂಗೀಕರಿಸಲು ಅಡ್ಡಿಯಾಗುತ್ತಿವೆ. ಎಲ್ಲಕ್ಕಿಂತ ಮೊದಲು ತುಳುವರ ವಂಶಾವಳಿಯನ್ನು ನೀಡಿದ **ವರಾಹಪುರಾಣ**ವು ಅವರು ಕ್ಷತ್ರಿಯರೋ ಅಲ್ಲವೋ ತಿಳಿಸಿಲ್ಲ. ಅದು ಅವರ ವಂಶವನ್ನು ತುರ್ವಸು ವಂಶವೆಂದಾಗಲೀ, ಚಂದ್ರವಂಶವೆಂದಾಗಲೀ ತಿಳಿಸದೇ, ತುಳುವ ವಂಶದ ತಿಮ್ಮನು ತುಳುನಾಡಿನ ಎಲ್ಲ ಅಧಿಪತಿಗಳಿಗಿಂತ ಶ್ರೇಷ್ಠನೆಂದು ತಿಳಿಸುತ್ತದೆ. **ವರಾಹಪುರಾಣ**ದಲ್ಲಿ ಸಿಗುವ ಮತ್ತೊಂದು ಆಸಕ್ತಿಕರ ವಿಷಯವೆಂದರೆ ಅದು ತುಳುವರು ಸೂರ್ಯವಂಶದವರೆಂದಾಗಲೀ, ಚಂದ್ರ ವಂಶದವರೆಂದಾಗಲೀ ತಿಳಿಸದೇ, ನರಸನಾಯಕನ ಮಹಾರಾಜನಾದ ಸಾಳುವ ನರಸಿಂಹನು ಚಂದ್ರವಂಶದವನೆಂದು ತಿಳಿಸುತ್ತದೆ.[12] ತುಳುವರು ಯಾವ ಕ್ಷತ್ರಿಯ ವಂಶಕ್ಕೆ ಸೇರಿದವರೆಂದು ಬೇಕೆಂದೇ **ವರಾಹಪುರಾಣ**ದ ಕರ್ತೃಗಳು ತಿಳಿಸಲಿಲ್ಲವೇನೋ ಎನಿಸುತ್ತದೆ. ಗಮನಿಸಬೇಕಾದ ಮತ್ತೊಂದು ಪ್ರಮುಖ ವಿಷಯವೆಂದರೆ **ವೀರನರಸಿಂಹನ ಪುರಾತನರು ತಮ್ಮನ್ನು ರಾಯ, ರಾಜ ಅಥವಾ ನೃಪ ಎಂದು ಕರೆದುಕೊಳ್ಳದೇ 'ನಾಯಕ' ಎಂದು ಕರೆದುಕೊಂಡರು.**

ಹಿಂದಿನ ತುಳುವ ಸೇನಾಪತಿಗಳು ತಮ್ಮನ್ನು ಕುಮಾರ ನರಸಿಂಹನಾಯಕ, ಒಡೆಯರು ಎಂದೂ, ಈಶ್ವರ ನಾಯಕ ಒಡೆಯರ ಮಗನೆಂದೂ ಮತ್ತು ಇಮ್ಮಡಿ **ನರಸಿಂಗರಾಜನ**[13] ಮಹಾಸೇನಾಪತಿಗಳೆಂದೂ ಕರೆಯಲ್ಪಟ್ಟಿದ್ದು. ಮೊದಲಿನ ಶಾಸನಗಳಲ್ಲಿ **ಕಾಣುತ್ತದೆ.**[14] ನರಸನಾಯನಿಂಗಾರು ಇಮ್ಮಡಿ ನರಸಿಂಗದೇವ ಮಹಾರಾಯನ ಸೇವಕನು (ನಿಜಭೃತ್ಯುಡು)[15] ರಾಯವಾಚಕದ ಒಂದು ಕಡೆಗೆ ಹೀಗಿದೆ ಈಶ್ವರ ನಾಯಕ ನರಸಿಂಹನಾಯಡು ಮತ್ತು ವೀರನರಸಿಂಹ ರಾಯರು ನಮಗಿಂತ ಮೊದಲು ಸಾಮ್ರಾಜ್ಯವನು ಆಳಿದರು.[16] ಇಲ್ಲಿ ಸ್ಪಷ್ಟವಾಗುವುದೇನೆಂದರೆ ಮೊದಲಿನ ಇಬ್ಬರು ಮಹಾರಾಜರಲ್ಲ. ಆದರೆ ಸೇನಾಪತಿಗಳು

ವೀರನರಸಿಂಹನು ಮಾತ್ರ ರಾಯ ಅಥವಾ **‘ಆಳುವವನು’** ಎಂದು ಕರೆಯಲ್ಪಟ್ಟಿದ್ದಾನೆ. ಕೈಫಿಯತ್ ಕೂಡಾ **‘ಸಾಳುವ ಇಮ್ಮಡಿ ನರಸಿಂಹದೇವ[17] ಮಹಾರಾಯನ ಕಾರ್ಯಕರ್ತ ನರಸನಾಯಕ’** ಎಂದು ಕರೆಯುತ್ತದೆ ವೀರನರಸಿಂಹನನ್ನು ಶಕ ವರ್ಷ 1428 (16–10–1505A.D.) ಶಾಸನದಲ್ಲಿ ‘ಈಶ್ವರ ನಾಯುನಿಂಗಾರ ಅವರ ಮೊಮ್ಮಗನೂ, ನರಸನಾಯನಿಂಗಾರರ ಮಗನೂ, ಆದ ಇಮ್ಮಡಿ ನರಸನಾಯನಿಂಗಾರೂ ಎಂದು ಸಂಬೋಧಿಸುತ್ತದೆ.[18] ಈ ಎಲ್ಲವೂ ಸಾಬೀತು ಗೊಳಿಸುವುದೇನೆಂದರೆ ತುಳುವರು **‘ನಾಯಕ’**ರೆಂದು ಕರೆಯಲ್ಪಟ್ಟರಾಗಲೀ ಅವರು ತಾವು ಕ್ಷತ್ರಿಯರೆಂದು ಕರೆದುಕೊಳ್ಳಲಿಲ್ಲ, ಅದೆಲ್ಲಾ ವೀರ ನರಸಿಂಹರಾಯನು ಬಲಾತ್ಕಾರವಾಗಿ ಸಿಂಹಾಸನಾರೂಢನಾದ ಮೇಲೆ ದೊರೆತವು. ತುಳುವ ನಾಯಕರ ಯಾವುದೇ ಶಾಸನದಲ್ಲಿ ಅವರನ್ನು ಕ್ಷತ್ರಿಯರೆಂದು ಕರೆದಿಲ್ಲ.

ಕೆಲವರು ಅವರನ್ನು **ಯಾದವ** ಕುಲದವರೆಂದು ಅಭಿಪ್ರಾಯಪಡುತ್ತಾರೆ. **ಪಾರಿಜಾತಾಪಹರಣಮು** ಕಾವ್ಯದಲ್ಲಿ ತಿಮ್ಮನ ಕವಿಯು **“ಶ್ರೀ ಕೃಷ್ಣನು ಮತ್ತೊಮ್ಮೆ ಅದೇ ಯಾದವಕುಲದಲ್ಲಿ ಕೃಷ್ಣದೇವರಾಯನಾಗಿ ಜನಿಸಿದ್ದಾನೆ.”**[19] ಎಂದು ವರ್ಣಿಸಿರುವುದರ ಆಧಾರದ ಮೇಲೆ ಕೆಲವರ ತರ್ಕ. ಕೃಷ್ಣದೇವರಾಯನು ಯಾದವಕುಲ ಸಂಜಾತನೆಂದು ಅಂಗೀಕರಿಸಿದರೆ ಅವನ ಪೂರ್ವಜರಾದ ತಿಮ್ಮ, ಈಶ್ವರ, ನರಸ ಮತ್ತು ವೀರನರಸಿಂಹರೂ **ಯಾದವರಾಗು**ತ್ತಾರೆ. ಪಾರಿಜಾತಾಪಹರಣದಲ್ಲಿಯ ಕೆಲ ಅಂಶಗಳನ್ನು ಗಮನಿಸೋಣ. ಅಲ್ಲಿ ಮೂರು ವಿಷಯಗಳು ಬರುತ್ತವೆ. ಅವು ಒಂದಕ್ಕೊಂದು ಹೊಂದುವುದೇ ಇಲ್ಲ.

1. ತುಳುವರು ಚಂದ್ರವಂಶದ ಕ್ಷತ್ರಿಯರು.
2. ಅವರು ಯಯಾತಿಯ ಮಗನಾದ ತುರ್ವಸುವಿನ ವಂಶದವರು.
3. ಅವರು ಯಾದವರು.

ಬಹುತೇಕ ಎಲ್ಲ ಶಾಸನ ಮತ್ತು ಸಾಹಿತ್ಯ ಮೂಲಗಳಲ್ಲಿ ಯದು ಮತ್ತು ತುರ್ವಸು ಇಬ್ಬರೂ ಯಯಾತಿಯ ಮಕ್ಕಳೆಂದು ಹೇಳಲಾಗಿದೆ. ಅಂದರೆ **ಯದು**ವಿನ ಪುತ್ರ ಪೌತ್ರರು **ಯಾದವರಾದರು** ಮತ್ತು **ತುರ್ವಸು**ವಿನ ಸಂತಾನದವರು **ತುರುವರಾದರು** ಎಂದು ಸಾಹಿತ್ಯ ಮೂಲಗಳು ತಿಳಿಸುತ್ತವೆ.[20] ಅಂದರೆ ಯದು ಮತ್ತು ತುರ್ವಸು ಅವರು ಸೋದರರಾದರೆ ವಂಶವಾಹಿನಿಯಲ್ಲಿ ಬದಲಾಗುವುದಿಲ್ಲ. ಆದರೆ ಕುಟುಂಬಗಳು ಮಾತ್ರ ಬೇರೆ ಬೇರೆ. ಅಂದರೆ ನಾವು ತುಳುವರನ್ನು **ಯಾದವಕುಲದವರೆಂದು** ಗಣಿಸಿದರೆ ಅವರು ಶೂದ್ರರಾಗುತ್ತಾರೆ ಹೊರತು ಕ್ಷತ್ರಿಯರಾಗುವುದಿಲ್ಲ. ಆದ್ದರಿಂದ ತುರ್ವಸು ಕುಲದ ತಿಮ್ಮಭೂಪತಿಯ ವಂಶದವರನ್ನು ತುಳುವರೆಂದು ಕರೆಯುವುದು ಸರಿಯಾಗಿದೆ. **ಆ ಕಾಲದಲ್ಲಿ ಆಳುತ್ತಿರುವವರನ್ನು ಕ್ಷತ್ರಿಯರೆಂದು ಕರೆಯುವುದು ಸಾಮಾನ್ಯವಾಡಿಕೆಯಾಗಿತ್ತು. ಅವರ ಮೂಲವೇನೇ ಇರಲಿ, ಅದು ಯಾವುದೇ ಜಾತಿಯಾಗಿರಲಿ, ಆ ಕುಟುಂಬದಲ್ಲಿ ತಿಮ್ಮ ಭೂಪತಿಯು ಪ್ರಥಮ ಸಾಹಸಿಯೆನಿಸಿ ಹೆಸರು ಗಳಿಸಿದನು.** ಆತನ ಮಗ ಈಶ್ವರನೂ, ಮೊಮ್ಮಗ ನರಸನೂ ಸಾಳುವ ನರಸಿಂಹರಾಯನ ಸೇನಾಪತಿಗಳಾಗಿದ್ದರು. ಅವರು ತಮ್ಮ ಪ್ರಭುವಿನ ದಿಗ್ವಿಜಯ ಯಾತ್ರೆಯಲ್ಲಿ ಪಾಲುಗೊಂಡರು.



ಆದ್ದರಿಂದ ಸ್ವಭಾವಿಕವಾಗಿ ವೀರನರಸಿಂಹನು ಸಿಂಹಾಸನಾರೂಢನಾದ ಮೇಲೆ ಕ್ಷತ್ರಿಯನೆಂದು ಕರೆದುಕೊಂಡನು **ಆದ್ದರಿಂದ ತುಳುವರು ಯಾವುದೇ ಕುಲದವರಾಗಿರಲಿ, ತಮ್ಮ ವೃತ್ತಿಯಿಂದ ಕ್ಷತ್ರಿಯರಾದರೆಂಬುದು ಸ್ಪಷ್ಟ.**

**ತುಳುವರು ಎಲ್ಲಿಯವರು : ವರಾಹಪುರಾಣದ** ಪ್ರಕಾರ ವೀರನರಸಿಂಹನ ಪಿತಾಮಹನಾದ ತಿಮ್ಮನೇ ತುಳುವರಸರಲ್ಲಿ ಅತ್ಯಂತ ಶ್ರೇಷ್ಠನು ಆದ್ದರಿಂದ ಆತನ ವಂಶದವರೆಲ್ಲಾ ತುಳುವರಾದರು. ಅವರ ಕುಟುಂಬವು ತುಳುನಾಡಿನಿಂದ **ತಿಮ್ಮನ** ಕಾಲದಲ್ಲಿ ವಲಸೆ ಬಂದು ಚಂದ್ರಗಿರಿಯಲ್ಲಿ ನೆಲೆಯಾದರು. ಅಂದರೆ ಈಶ್ವರ ನಾಯಕನ ಕಾಲದಿಂದ ಅವರ ನಾಡು ಆಂಧ್ರದೇಶವಾಯ್ತು. ಅವರು ಆಂಧ್ರ ವನಿತೆಯರನ್ನು ಮದುವೆಯಾದರು. ತೆಲುಗು ಭಾಷೆಯನ್ನು ಕಲಿತರು. ತಮ್ಮ ಆಸ್ಥಾನಗಳಲ್ಲಿ ತೆಲುಗು ಕವಿಗಳಿಗೆ ಆಶ್ರಯ ನೀಡಿದರು. ಈಶ್ವರ ನಾಯಕನ ಆಸ್ಥಾನದ ಮಹಾಕವಿಗಳೇ **ನಂದಿಮಲ್ಲಯ್ಯ ಮತ್ತು ಘಂಟಸಿಂಗನ್ನ** ನರಸನಾಯಕನು ಅವರನ್ನು ಆದರಿಸಿದನು.

**ವರಾಹಪುರಾಣಂ, ವರಲಕ್ಷ್ಮೀ ಕಲ್ಯಾಣಮು ಮತ್ತು ನರಸಿಂಹ ವಿಜಯ**ಗಳನ್ನು ಈ ಕವಿದ್ವಯರು ರಚಿಸಿ ನರಸನಾಯಕನಿಗೆ ಅರ್ಪಿಸಿದರು. ವೀರನರಸಿಂಹನು ಪಟ್ಟವೇರಿದ ಕೂಡಲೇ ಸಾಮ್ರಾಜ್ಯದಲ್ಲಿ ಶಾಂತಿಭದ್ರತೆಗಳನ್ನು ನೆಲೆಗೊಳಿಸುವಲ್ಲಿ ನಿರತನಾಗಿದ್ದರೂ ತೆಲುಗು ಕವಿಗಳನ್ನು ಸನ್ಮಾನಿಸಿದನು. ಅದರಲ್ಲಿ ಪ್ರಮುಖನೇ **ಚನ್ನಕವಿ.** ರಾಯನ ಸೋದರನಾದ ಕೃಷ್ಣದೇವರಾಯನು ‘ದೇಶ ಭಾಷೆಗಳಲ್ಲಿ ತೆಲುಗೇ ಶ್ರೇಷ್ಠ’ ಎಂದು ಸಾರಿದನು.[21]

ನರಸನಾಯಕನ ಕಾಲದಲ್ಲಿಯೇ ತೆಲುಗು ಕಾವ್ಯದ ಸುವರ್ಣಯುಗದ ಆರಂಭವಾಯಿತು. ಅವರೆಲ್ಲ ತೆಲುಗು ತಾಯಂದಿರ ಮಕ್ಕಳು, ಅವರು ತೆಲುಗು ನಾಡಿನಲ್ಲಿ ನೆಲೆಸಿ, ತೆಲುಗನ್ನು ತಮ್ಮ ಮಾತೃ ಭಾಷೆಯೆಂದು ಅಂಗೀಕರಿಸಿದರು.

**ಸಾಳುವ–ತುಳುವ ಸಂಬಂಧ :** ಕೆಲ ಇತಿಹಾಸ ಲೇಖಕರು ಸಾಳುವರೂ ತುಳುವರೂ ರಕ್ತ ಸಂಬಂಧಿಗಳೆಂಬ ವಾದವನ್ನು ಮಂಡಿಸಿದ್ದಾರೆ. ವೀರ ನರಸಿಂಹರಾಯನ ಮುತ್ತಜ್ಜ ತಿಮ್ಮನು[22] ಸಾಳುವ ನರಸಿಂಹನ ಸೋದರನೆಂದು ಪ್ರತಿಪಾದಿಸಿದ್ದಾರೆ. ಆದರೆ ವಂಶಾವಳಿಗಳ ಪ್ರಕಾರ ಇದು ಅಸಾಧ್ಯ. ತುಳುವರು ಸಾಳುವರ ಬಂಧುಗಳಾಗಿದ್ದರೆ. ಆ ವಿಷಯವನ್ನು ಅವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಆ ಕಾಲದ ಕವಿಗಳು ಈ ವಿಷಯವನ್ನು ಉಲ್ಲೇಖಿಸುತ್ತಿದ್ದರು. ಸಾಳುವರಿಗೂ ತುಳುವರಿಗೂ ಸಂಬಂಧವಿತ್ತು ಎಂದು ಹೇಳಲು ಯಾವ ಸಾಕ್ಷ್ಯಾಧಾರಗಳೂ ಇಲ್ಲ. ಈಶ್ವರ ಮತ್ತು ನರಸನಾಯಕರು ಸಾಳುವ ನರಸಿಂಹನ ಸೇನಾಪತಿಗಳಗಿದ್ದರಷ್ಟೆ. ತುಳವ ಸೇನಾಪತಿಗಳು ಸಾಳುವರ ಬಿರುದುಗಳನ್ನ ಧರಿಸಲು ಕಾರಣ. ವೆಂದರೆ ಆ ಕಾಲದಲ್ಲಿ ಅತ್ಯಂತ ನಿಷ್ಠರಾದ ಸೇನಾಪತಿಗಳು ತಮ್ಮ ಒಡೆಯರ ಬಿರುದುಗಳನ್ನು ಹೆಮ್ಮೆಯಿಂದ ಧರಿಸುತ್ತಿದ್ದರು.[23]

**ವಂಶಾವಳಿ :** ವೀರನರಸಿಂಹನ ತಂದೆ, ತಾತರ ಬಗ್ಗೆ ಕೆಲ ಶಾಸನಗಳು ಸುಳುಹು ನೀಡುತ್ತವೆ. ಈ ಎಲ್ಲ ಆಧಾರಗಳು ವೀರನರಸಿಂಹನ ವಂಶಾವಳಿಯ ಬಗ್ಗೆ ಏಕಾಭಿಪ್ರಾಯವನ್ನು

ವ್ಯಕ್ತಪಡಿಸುತ್ತದೆ. ತಿಮ್ಮನೇ ಆತನ ಮುತ್ತಾತ. ಆದರೆ ತಿಮ್ಮನ ಪೂರ್ವಜರ ಬಗ್ಗೆ ಎಳ್ಳಷ್ಟು ಮಾಹಿತಿ ಲಭಿಸಿಲ್ಲ. ಪ್ರಾಯ, ಅವರ ಮನೆತನದಲ್ಲಿ ವೀರ ಸೇನಾನಿಯಾಗಿ ಹೆಸರು ಮಾಡಿ ಪ್ರಸಿದ್ಧನಾದವರಲ್ಲಿ ತಿಮ್ಮನೇ ಆದಿಪುರುಷನಾಗಿರಬಹುದು.

'ವರಾಹಪುರಣ'ವೆಂಬ ತೆಲುಗು ಕಾವ್ಯದಲ್ಲಿ ವೀರನರಸಿಂಹನ ಪೂರ್ವಜರ ಬಗ್ಗೆ ಪ್ರಥಮ ವಿವರಗಳು ಲಭಿಸಿವೆ ಈ ಕಾವ್ಯದಲ್ಲಿ ತಿಮ್ಮ ಭೂಪತಿಯಿಂದ ನರಸನಾಯಕನವರೆಗೆ ಪೂರ್ವಜರ ವಿವರಗಳನ್ನು ವರ್ಣಿಸಲಾಗಿದೆ. ತಿಮ್ಮ ಮತ್ತು ದೇವಕಿಯವರ ಮಕ್ಕಳೇ ಈಶ್ವರ ಮತ್ತು ತಿಮ್ಮ. ಈಶ್ವರನ ಮಕ್ಕಳೇ ನರಸನಾಯಕ ಮತ್ತು ತಿಮ್ಮ.

**ತಿಮ್ಮಯ್ಯ – ದೇವಕಿ**

**ಈಶ್ವರ–ಗೌರಾಂಬ** **ತಿಮ್ಮ**

**ನರಸ** **ತಿಮ್ಮ**

ಕೆಲಕಾಲಾನಂತರ ಈ ಐತಿಹಾಸಿಕ ವಂಶಾವಳಿಗೆ ತುಳುವರು ಪೌರಾಣಿಕ ವಂಶಾವಳಿಯನ್ನು ಜೋಡಿಸಿದರು.

ಈ ರೀತಿಯ ವಂಶಾವಳಿಯನ್ನು ನಾವು ಮೊದಲಬಾರಿಗೆ **ನಗರಗೆರೆಯ ತಾಮ್ರಶಾಸನದಲ್ಲಿ** ನೋಡುತ್ತೇವೆ.**[24]** ಈ ತಾಮ್ರಪತ್ರಗಳು. ಶಾ.ಸ. 1427. ಅಂದರೆ ಕ್ರಿ.ಶ. 1505ರವಾಗಿವೆ. ವೀರನರಸಿಂಹನು ಪಟ್ಟವೇರಿದ ನಂತರ ತನ್ನ ವಂಶಾವಳಿಯನ್ನು ವೈಭವೀಕರಿಸಲೆಂದು ಈ ರೀತಿಯ ಪೌರಾಣಿಕ ಮಹತ್ವವನ್ನು ನೀಡಿದನು. ಪೌರಾಣಿಕ ಹಿನ್ನೆಲೆಯ ವೀರನರಸಿಂಹನ ಶಾಸನವು ಈ ರೀತಿ ಇದೆ.

ಅಜ
ಅತ್ರಿ
ಚಂದ್ರ
ಬುಧ
ಪುರೂರವ
ಆಯು
ನಹುಷ
ಯಯಾತಿ
ತುರ್ವಸು



ತುರ್ವಸುವಿನ ಸಂತಾನದವರೇ ತುಳುವಂಶದ ಅರಸರು. ತುಳುವ ಮಹಾರಾಜ, ದಿಲೀಪನ ಮಗನಾದ ಈಶ್ವರನೇ ಮಹಾವೀರನೆಂದು ಪ್ರಸಿದ್ಧನಾಗಿದ್ದಾನೆ. ಇದರಿಂದ ಮುಂದಿನ ವಂಶಾವಳಿಗೆ ಐತಿಹಾಸಿಕ ಆಧಾರವಿದೆ.

ಈಶ್ವರ
ನರಸ
ವೀರನರಸಿಂಹ ಕೃಷ್ಣದೇವರಾಯ

ದಿಲೀಪನ ಬಗ್ಗೆ ಬೇರಾವ ಆಕರದಲ್ಲಿ ಆಧಾರ ಲಭಿಸಿಲ್ಲ.**[25]** ಬೇರೆಲ್ಲಾ ಆಕರಗಳಲ್ಲಿ ತಿಮ್ಮನೇ ತುಳುವಂಶದ ಐತಿಹಾಸಿಕ ಮೂಲಪುರುಷ. ಇದರಿಂದ ತೃಪ್ತರಾಗದ ಮಹಾರಾಜರು ಪ್ರಶಸ್ತಿಯನ್ನು ಪುನಃ ರಚಿಸಿದರು. ಅದೇ ಮುಂದಿನ ಆಕರಗಳಿಗೆ ಮಾದರಿಯೆನಿಸಿತು.

ನರಸಿಂಹರಾಯನಿಂದ ರಚಿಸಲ್ಪಟ್ಟ **ಶಿವನಗೆರೆ ತಾಮ್ರ ಶಾಸನವು (ಕ್ರಿ.ಶ. 1506)[26]** ಚಂದ್ರನಿಂದ ತುರ್ವಸುವರೆಗೆ ಪೌರಾಣಿಕ ವಂಶಾವಳಿಯನ್ನು ನೀಡುತ್ತಾ ವೀರ ನರಸಿಂಹನ ವಂಶಾವಳಿಯನ್ನು ಕೆಳಕಂಡಂತೆ ತಿಳಿಸುತ್ತದೆ.

ತುರ್ವಸು
ತಿಮ್ಮ–ದೇವಕಿ
ಈಶ್ವರ–ಬುಕ್ಕಾಂಬ
ನರಸನಾಯಕ
ತಿಪ್ಪಾಜಿ ಮಗ ನಾಗಲಾದೇವಿಯ ಮಗ
ವೀರನರಸಿಂಹ ಕೃಷ್ಣದೇವರಾಯ

ಕ್ರಿ.ಶ. 1511ರ **ಮತ್ತೋಡು ಶಾಸನ[27]** ಮಾತ್ರ ವಂಶಾವಳಿಯನ್ನು **ಯದು** ವಿನಿಂದ ಆರಂಭಿಸುತ್ತದೆ.

ಸಮಕಾಲೀನ ಸಾಹಿತ್ಯದ ಆಧಾರಗಳು ವಂಶಾವಳಿಯನ್ನು ಬೇರೆ ಬೇರೆ ರೀತಿಯಲ್ಲಿ ತಿಳಿಸುತ್ತವೆ. ವರಾಹಪುರಾಣವು ಈಶ್ವರನ ಸೋದರನಾದ ಒಬ್ಬ ತಿಮ್ಮನನ್ನು ತಿಳಿಸುತ್ತದೆ.**[28]** ಆದರೆ ಬೇರೆಲ್ಲೂ ಈ ಉಲ್ಲೇಖ ಸಿಗುವುದಿಲ್ಲ. ಮನು ಚರಿತ್ರ**[29]** ಮತ್ತು ವರಾಹಪುರಾಣಮು**[30]** ಕಾವ್ಯಗಳು ಇನ್ನೊಬ್ಬ ತಮ್ಮನ ಉಲ್ಲೇಖ ಮಾಡುತ್ತವೆ. (ನರಸನಾಯಕನ ಸೋದರನೆಂಬ ತಮ್ಮ) ಈ ತಿಮ್ಮನು ವಿಜಯನಗರ ರಾಜಕೀಯದಲ್ಲಿ ಕಾಣುವುದಿಲ್ಲ. **ಕೃಷ್ಣರಾಯ ವಿಜಯಮುದಲ್ಲಿ** ಕುಮಾರ ಧೂರ್ಜಟಿಯು ವೀರನರಸಿಂಹನನ್ನು ಕೃಷ್ಣದೇವರಾಯನ ತಂದೆಯೆಂದೂ ಅವನ ನಿಕಟಪೂರ್ವ ಚಕ್ರವರ್ತಿಯೆಂದೂ ಕರೆಯುತ್ತಾನೆ. ಆದರೆ

ಕೃಷ್ಣದೇವರಾಯನಿಗಿಂತ ಮುನ್ನ ಆರುವರ್ಷ ರಾಜ್ಯವಾಳಿದ ವೀರನರಸಿಂಹನ ಪ್ರಸ್ತಾಪವನ್ನೇ ಮಾಡುವುದಿಲ್ಲ.[31]

ಕೊಂಗುದೇಶ ರಾಜರ್ಕಳಿನ್ ಚರಿತ್ರೆಯಲ್ಲಿ[32] ತುಳುವಂಶದ ಪ್ರಶಸ್ತಿ ಈ ರೀತಿ ಇದೆ.

ಚಂದ್ರವಂಶ ಸಂಜಾತ

ಯದು
|
ತಿಮ್ಮ–ಬುಕ್ಕಾಂಬ
|
ಈಶ್ವರ
|
ನರಸ

| ವೀರನರಸಿಂಹ (ತಾಯಿ–ತಿಪ್ಪಾಂಬೆ) | ಕೃಷ್ಣದೇವರಾಯ (ತಾಯಿ–ನಾಗಲಾದೇವಿ) | ರಂಗರಾಯ, ಅಚ್ಯುತರಾಯ (ತಾಯಿ–ಓಬಾಂಬಿಕಾ) |
|---|---|---|

ಈ ವಂಶಾವಳಿಯು ವಿಚಿತ್ರವಾಗಿದೆ. ಇಲ್ಲಿ **'ಯದು'** ವನ್ನು ವಂಶದ ಮೂಲ ಪುರುಷ ಎಂದಿದ್ದಾರೆ. ಉಳಿದಕಡೆ **'ತುರ್ವಸು'**ವೇ ಮೂಲಪುರುಷ. ಎರಡನೇದಾಗಿ ತಿಮ್ಮನ ಪತ್ನಿ ಬುಕ್ಕಾಂಬ ಎನ್ನಲಾಗಿದೆ. ಆದರೆ ಬೇರೆಲ್ಲಾ ಆಕರಗಳಲ್ಲಿ ತಿಮ್ಮನ ಪತ್ನಿ **ದೇವಕಿ.** ಈಶ್ವರನ ಸತಿಯ ಹೆಸರು ಬುಕ್ಕಮ್ಮ.

ನರಸನಾಯಕ ಮತ್ತು ಆತನ ಪುತ್ರರಾದ ವೀರ ನರಸಿಂಹ ಮತ್ತು ಕೃಷ್ಣದೇವರಾಯನ ದಾಖಲೆಗಳಲ್ಲಿ ನರಸನ ಇಬ್ಬರು ಪತ್ನಿಯರಾದ ತಿಪ್ಪಾಜಿ ಮತ್ತು ನಾಗಾಜೀ ಅವರಿಂದ ವೀರನರಸಿಂಹ ಮತ್ತು ಕೃಷ್ಣದೇವರಾಯ ಜನಿಸಿದರೆಂದು ಹೇಳಲಾಗಿದೆ. ಆದರೆ ಅಚ್ಯುತರಾಯ[33] ಮತ್ತು ಸದಾಶಿವರಾಯ[34] ಶಾಸನಗಳಲ್ಲಿ ನರಸನಾಯಕನಿಗೆ ತಿಪ್ಪಾಜಿ, ನಾಗಾಜಿ ಮತ್ತು ಓಬಾಂಬಿಕಾ ಎಂಬ ಮೂವರು ಹೆಂಡತಿಯರಿದ್ದರೆಂದೂ, ತಿಪ್ಪಾಜಿಯಿಂದ ವೀರನರಸಿಂಹನೂ, ನಾಗಾಜಿಯಿಂದ ಕೃಷ್ಣದೇವರಾಯನೂ, ಓಬಾಂಬಿಕೆಯಿಂದ ಅಚ್ಯುತದೇವರಾಯ ಮತ್ತು ರಂಗರಾಯನೂ ಎಂಬ ಮಕ್ಕಳಿದ್ದರೆಂದು ತಿಳಿಸಲಾಗಿದೆ. ಆದ್ದರಿಂದ ಐತಿಹಾಸಿಕ ಆಧಾರದ ಮೇಲೆ ತುಳುವಂಶವನ್ನು ಈ ರೀತಿ ಹೇಳಬಹುದು.

ತಿಮ್ಮ–ದೇವಕಿ
|
ಈಶ್ವರ–ಬುಕ್ಕಮ್ಮ
|
ನರಸ

| ತಿಪ್ಪಾಜಿಯಿಂದ ವೀರನರಸಿಂಹ | ನಾಗಾಜಿಯಿಂದ ಕೃಷ್ಣದೇವರಾಯ | ಓಬಾಂಬಿಕೆಯಿಂದ ರಂಗರಾಯ, ಅಚ್ಯುತರಾಯ |
|---|---|---|



ವೀರನರಸಿಂಹನಾಗಲೀ ಕೃಷ್ಣದೇವರಾಯನಾಗಲೀ ತಮ್ಮ ಮಲತಾಯಿ ಓಬಾಂಬಿಕೆ ಮತ್ತು ಆಕೆಯ ಪುತ್ರರ ಬಗ್ಗೆ ಎಲ್ಲೂ ಹೇಳಿಲ್ಲ. ಸಮಕಾಲೀನ ಸಾಹಿತ್ಯವು ಈ ವಿಷಯದಲ್ಲಿ ಮೌನವಾಗಿದೆ.

ಸ್ವಾಭಾವಿಕವಾಗಿ ವೀರನರಸಿಂಹನು ನಾಗಲಾದೇವಿ ಮತ್ತು ಆಕೆಯ ಪುತ್ರ ಕೃಷ್ಣದೇವರಾಯನ ಬಗ್ಗೆ ತೋರಿದ ಆಸ್ಥೆಯನ್ನು ಓಬಾಂಬಿಕೆಯ ಬಗ್ಗೆಯಾಗಲೀ ಆಕೆಯ ಪುತ್ರರ ಬಗೆಗಾಗಲೀ ತೋರಲಿಲ್ಲ. ಪ್ರಾಯಃ ವೀರನರಸಿಂಹನು ತನ್ನ ತಾಯಿ ತಿಪ್ಪಾದೇವಿ ಮತ್ತು ನಾಗಲಾದೇವಿಯರನ್ನು ನರಸನಾಯಕನ ಪಟ್ಟದರಸಿಯರೆಂದು ಪರಿಗಣಿಸಿ ಕೃಷ್ಣದೇವರಾಯ ಮತ್ತು ಆತನ ತಾಯಿ ನಾಗಲಾದೇವಿಯ ಬಗ್ಗೆ ಗೌರವ ತೋರಿದ್ದಾನೆ ಅಥವಾ ಅವರು ನರಸನಾಯಕನಿಗೆ ಪ್ರೀತಿಯ ಪತ್ನಿ ಮತ್ತು ಪುತ್ರನಾಗಿದ್ದರಿಂದ ಅವರ ಬಗ್ಗೆ ಹೆಚ್ಚು ಗೌರವಾದರ ತೋರಲೇಬೇಕಾಯಿತು. ಅಲ್ಲದೇ ಕೃಷ್ಣದೇವರಾಯನು ಆಗಲೇ ಪ್ರಾಯದವನಾಗಿದ್ದು ವೀರನರಸಿಂಹನಿಗೆ ನೆರವಾಗುತ್ತಿದ್ದನು. ರಂಗ ಮತ್ತು ಅಚ್ಯುತರು ಇನ್ನೂ ಬಾಲಕರಾಗಿದ್ದರು. ಲಭಿಸುವ ಅನುಕ್ರಮವಾದ ಮಾಹಿತಿಯನ್ನು ಆಧರಿಸಿ ಹೇಳಬಹುದಾದರೆ ಕೊನೆಯ ಅಭಿಪ್ರಾಯವೇ ಸಮಂಜಸ ಎನಿಸುತ್ತದೆ.

**ನೂನಿಜ್**[35] ಪ್ರಕಾರ ನರಸನಾಯಕನಿಗೆ – ಭುಜಬಲರಾವ್, ಕೃಷ್ಣರಾವ್, ತಾತಾರಾವ್, ರಂಗರಾವ್ ಮತ್ತು ಅಚ್ಯುತರಾವೆಂಬ ಐದು ಜನಪುತ್ರರು. ಶಾಸನಗಳ ಮತ್ತು ಸಾಹಿತ್ಯಿಕ ಆಧಾರಗಳಿಂದ ನರಸನಾಯಕನಿಗೆ ನಾಲ್ಕೇ ಜನ ಸುತರು. ವೀರನರಸಿಂಹ (ಭುಜಬಲರಾವ್) ಕೃಷ್ಣರಾಯ, ರಂಗರಾಯ ಮತ್ತು ಅಚ್ಯುತರಾಯ, ನೂನಿಜ್ ತಿಳಿಸುವ ಐದನೇ ಪುತ್ರ ತಾತಾರಾವ್ ಬಗ್ಗೆ ಯಾವ ಆಧಾರವೂ ದೊರಕಿಲ್ಲ. ಆದ್ದರಿಂದ ನೂನಿಜ್‌ನ ಈ ಹೇಳಿಕೆಯನ್ನು ತಿರಸ್ಕರಿಸಬೇಕಾಗಿದೆ.

**ಯಾರೀ ಭುಜಬಲರಾಯ** : ನೂನಿಜ್ ಪ್ರಕಾರ ನರಸನಾಯಕನ ಹಿರಿಮಗನ ಹೆಸರು **ಭುಜಬಲರಾಯ.** ಅವನ ಪ್ರಕಾರ ಭುಜಬಲರಾಯನು ತನ್ನ ತಂದೆಯ ಮರಣದ ನಂತರ ಅರಸೊತ್ತಿಗೆಯ ಅಧಿಕಾರ ಪಡೆದು ಆರುವರುಷ ರಾಜ್ಯ ಪರಿಪಾಲನೆ ಮಾಡಿದನು.[36] ವಾಸ್ತವಿಕವಾಗಿ ಭುಜಬಲರಾಯ ಎಂಬ ಬಿರುದನ್ನು ಸಾಳುವ ನರಸಿಂಹನೂ, ಅವನ ಮಗ ಇಮ್ಮಡಿ ನರಸಿಂಹನೂ ಮತ್ತು ವೀರನರಸಿಂಹನೂ ಬಳಸುತ್ತಿದ್ದರು.[37] ಆದರೆ ವೀರ ನರಸಿಂಹರಾಯನ ಬಹುತೇಕ ಶಾಸನಗಳಲ್ಲಿ ಅವನನ್ನು 'ಭುಜಬಲರಾಯ' ಎಂದು ಕರೆಯಲಾಗಿದೆ. ಅಲ್ಲದೇ **'ವೀರ ಪ್ರತಾಪ'** ಮತ್ತು **'ವಸಂತರಾಯ'** ಎಂಬ ಬಿರುದುಗಳು ಕೂಡಾ ಅವನ ಶಾಸನಗಳಲ್ಲಿ ಮಾತ್ರ ಕಾಣುತ್ತವೆ. ವೀರನರಸಿಂಹರಾಯನ ಅನೇಕ ಶಾಸನಗಳಲ್ಲಿ 'ಭುಜಬಲರಾಯ' ಎಂಬ ಬಿರುದು ಇದೆ. **ಗುಂಡ್ಲುಪೇಟೆ[38] ಮತ್ತು ಮಳವಳ್ಳಿ[39]** ಶಾಸನಗಳು ಅವನನ್ನು ಭುಜಬಲಪ್ರತಾಪ ನರಸಿಂಹ ಮಹಾರಾಜ ಎಂದು ಕರೆದರೆ **ಅರಗಲೂರಿನ ಶಾಸನ[40]ವು** ಅರಸನನ್ನು ವೀರನರಸಿಂಹ ಭುಜಬಲ ವಸಂತರಾಯ ಎಂದು ಕರೆಯುತ್ತದೆ. ಕ್ರಿ.ಶ. 1506ರ ರತ್ನಗಿರಿಯ ಶಾಸನವು ಆತನನ್ನು ವೀರನರಸಿಂಹ ಭುಜಬಲರಾಯ ಮಹಾರಾಯ ಎಂದು ಕರೆಯುತ್ತದೆ.[41] ಜಾಲಹಳ್ಳಿಯ ಕ್ರಿ.ಶ. 1506ರ ಶಾಸನವು ವೀರಪ್ರತಾಪ

ಭುಜಬಲರಾಯ[42] ಎನ್ನುತ್ತದೆ. ಕ್ರಿ.ಶ. 1516ರ ಕೃಷ್ಣದೇವರಾಯನ ಕಾಲದ ಮೂಡಿಗೆರೆಯ ಶಾಸನ[43]ದಲ್ಲಿ ಇಮ್ಮಡಿ ಭೈರರಸ ಒಡೆಯರು ಭುಜಬಲರಾಯನ ಸೈನ್ಯವು ವಿಜಯನಗರಕ್ಕೆ ವಾಪಾಸು ಹೋದರೆ ಕಳಸನಾಥದೇವರ ಗುಡಿಯನ್ನು ಜೀರ್ಣೋದ್ಧಾರ ಮಾಡುವುದಾಗಿ ಹರಕೆ ಹೊರುತ್ತಾನೆ. ಈ ಎಲ್ಲ ಮಾಹಿತಿಯಿಂದ ವೀರನರಸಿಂಹನ ಅತ್ಯಂತ ಜನಪ್ರಿಯವಾದ ಹೆಸರು ಅಥವಾ ಬಿರುದು 'ಭುಜಬಲರಾಯ' ಎಂದಾಗಿತ್ತು ಎಂದು ತಿಳಿಯುತ್ತದೆ. ನೂನಿಜ್ ಕೃಷ್ಣದೇವರಾಯನ ಆಳ್ವಿಕೆಯ ನಂತರ ಅಚ್ಯುತರಾಯನ ಕಾಲದಲ್ಲಿ ವಿಜಯನಗರದಲ್ಲಿ ಇದ್ದವನು. ಅವನು ವಿಪರೀತ ಗೊಂದಲಕ್ಕೆ ಗುರಿಯಾಗಿರಬೇಕು. ರಾಯನ ಬಿರುದನ್ನು ಅವನು ರಾಯನು ಹೆಸರು ಎಂದು ತಿಳಿದು ಭುಜಬಲರಾಯ ಎಂದೇ ಕರೆದಿದ್ದಾರೆ.

**ತಾಮ್ರಶಾಸನಗಳಲ್ಲಿ (ವೀರನರಸಿಂಹ ಮತ್ತು ಕೃಷ್ಣದೇವರಾಯನ) ಇರುವ ತುಳುವ ವಂಶಾವಳಿ**

ಅಜ
|
ಆಯು
|
ಚಂದ್ರ
|
ಅವನ ವಂಶೀಕರು
|
ಯಯಾತಿ
|
ತುರ್ವಸು
|
ತಿಮ್ಮ–ದೇವಕಿ
|
ಈಶ್ವರ–ಬುಕ್ಕಮ್ಮ
|
ನರಸನಾಯಕ
- ತಿಪ್ಪಾಜಿಯಿಂದ ವೀರನರಸಿಂಹ
- ನಾಗಾಜಿಯಿಂದ ಕೃಷ್ಣದೇವರಾಯ



**ಸಮಕಾಲೀನ ಸಾಹಿತ್ಯದಲ್ಲಿ ದೊರೆಯುವ ತುಳುವ ವಂಶಾವಳಿ**

ಚಂದ್ರ
|
ಯಯಾತಿ
- ಯದು
- ತುರ್ವಸು

ಅವನ ವಂಶೀಕರು

ತಿಮ್ಮ–ದೇವಕಿ
- ಈಶ್ವರ
- ತಿಮ್ಮ

ಪತ್ನಿಯರು – ಗೌರಾಂಬ, ಬುಕ್ಕಾಂಬ
- ನರಸ
- ತಿಮ್ಮ

ತಿಪ್ಪಾಜಿಯಿಂದ – ವೀರನರಸಿಂಹ ನಾಗಾಜಿಯಿಂದ – ಕೃಷ್ಣದೇವರಾಯ

**ಅಚ್ಯುತರಾಯ, ಸದಾಶಿವರಾಯರ ತಾಮ್ರ ಪತ್ರಗಳಿಂದ**

ಚಂದ್ರ
|
ಯಯಾತಿ
- ಯದು
- ತುರ್ವಸು
  |
  ತಿಮ್ಮ–ದೇವಕಿ
  |
  ಈಶ್ವರ–ಬುಕ್ಕಮ್ಮ
  |
  ನರಸ

- ತಿಪ್ಪಾಜಿಯಿಂದ ವೀರನರಸಿಂಹ
- ನಾಗಲಾದೇವಿಯಿಂದ ಕೃಷ್ಣದೇವರಾಯ
- ಓಬಾಂಬಿಕೆಯಿಂದ ರಂಗರಾಯ–ಅಚ್ಯುತರಾಯ

**ನೂನಿಜ್ ಪ್ರಕಾರ ತುಳುವ ವಂಶಾವಳಿ**

ಈಶ್ವರ
|
ನರಸನಾಯಕ
- ಭುಜಬಲರಾಯ (ವೀರನರಸಿಂಹ)
- ಕೃಷ್ಣದೇವರಾಯ
- ತಾತಾರಾಯ
- ರಂಗರಾಯ
- ಅಚ್ಯುತರಾಯ

ಈ ಎಲ್ಲಾ ವಂಶಾವಳಿಗಳನ್ನು ಗಮನಿಸಿ ತುಳುವ ವಂಶಾವಳಿಯನ್ನು ಈ ರೀತಿ ರಚಿಸಬಹುದು.

ಅಜ
|
ಅತ್ರಿ
|
ಚಂದ್ರ
|
ಬುಧ
|
ಪುರೂರವ
|
ಆಯು
|
ನಹುಷ
|
ಯಯಾತಿ
|
ತುರ್ವಸು
|
ತಿಮ್ಮ – ದೇವಕಿ

- ಈಶ್ವರ – ಬುಕ್ಕಮ್ಮ
  - ನರಸ
    - ವೀರನರಸಿಂಹ (ತಿಪ್ಪಾಜಿಯಿಂದ)
    - ಕೃಷ್ಣದೇವರಾಯ (ನಾಗಾಜಿಯಿಂದ)
    - ರಂಗರಾಯ–ಅಚ್ಯುತರಾಯ (ಓಬಾಂಬಿಕೆಯಿಂದ)
  - ತಿಮ್ಮ
- ತಿಮ್ಮ

---

**ಅಡಿ ಟಿಪ್ಪಣಿಗಳು**

1. ಭಾರತೀ ಮಾರ್ಚ 1949 ಪುಟ 146
2. ವರಾಹಪುರಾಣಮು ಅ. 1. ಪ. 26–27
3. E.C. IX-1 GD ಪು. 229
4. E.C. XI - HL 94
5. ಅಚ್ಯುತರಾಯಾಭ್ಯುದಯಮು 1 18.22.23
6. ಪಾರಿಜಾತಾಪಹರಣಮು – 1.8
7. ಅಮುಕ್ತಮಾಲ್ಯದಾ – 1.22.23
8. ಮನುಚರಿತ – 1.22
9. ‘ರ, ಲಯೊರಭೇದಹ



10. ಮಹದ್ವಾಚಕಮುಲಗು ಸಂತಂಬುಲಕು ಅಂತಲೋಪಂಬುಗು ಬಾಲವ್ಯಾಕರಣಮು III 81.
11. ಭಾರತೀ ಮಾರ್ಚ 1949 ಪು. 156
12. ವರಾಹಪುರಾಣಮು 1.21
13. A.R.E. 143 OF 1945
14. ಅದೇ 719 of 1945
15. ಅದೇ 516 of 1906
16. ಫರ್ದರ್ ಸೋರ್ಸಸ್ ಸಂ. 2 – 129 (B)
17. ಅದೇ II. 91
18. ARE 54 of 1915
19. ಪಾರಿಜಾತಾಪಹರಣಮು I.19
20. ಆಮುಕ್ತಮಾಲ್ಯದಾ 1.22.29 ಮನುಚರಿತ 1.21.22
21. ಅಮುಕ್ತಮಾಲ್ಯದಾ 1.15
22. I.A.H.R.S. ಸಂ. IX ಭಾಗ I ವಿಭಾಗ V
23. ವರಾಹಪುರಾಣಮು I. 24. 33
24. E.C. X-1 GD. 77.229
25. Contra 8.3.
26. M.A.R. ಪ್ಯಾರಾ 109
27. E.C. X-I HK. 94 ಪು. 127. 128
28. ವರಾಹಪುರಾಣಮು I. 27. 28
29. ಮನುಚರಿತ 1.27.28
30. ವರಾಹಪುರಾಣಮು–1
31. ಸೋರ್ಸಸ್ p.p. 129-130
32. ಫರ್ದರ್ ಸೋರ್ಸಸ್ II. 95
33. E.I.VOL. 14 ಪು. 310. 323
34. ಅದೇ VOL. 14 ಪು. 212
35. ಫರ್ಗಾಟನ್ ಎಂಪೈರ್ ಪು. 300
36. ಅದೇ
37. ARE 25/1919. 6640 F 1909, 289 of 1915 281 of 1932, 271 of 1932
38. MAR 1908 ಪ್ಯಾರಾ 67
39. ಅದೇ
40. ARE 408/1914 ಪ್ಯಾರಾ 29 of 1914
41. ಅದೇ 147 of 1914 ಪ್ಯಾರಾ 470 of 1914
42. MAR 1908 ಪ್ಯಾರಾ 67
43. E.C. IV ಮಾಗಡಿ 4 ಪ್ಯಾರಾ 67 of Mar 1908

*

## ಅಧ್ಯಾಯ – ೩

# ತುಳುವರ ವಂಶಾವಳಿ

ತುಳುವರ ಪುರಾತನರು ಎಲ್ಲಿದ್ದರು? ಏನು ಕೆಲಸ ಮಾಡುತ್ತಿದ್ದರು? ಎಂಬ ಬಗ್ಗೆ ಏನೂ ತಿಳಿದು ಬಂದಿಲ್ಲ. ಸಾಳುವ ನರಸಿಂಹನ ಕಾಲದ ತೆಲುಗು ಕಾವ್ಯ ವರಾಹಪುರಾಣವು ತಿಮ್ಮ ಭೂಪತಿಯ ಸಾಧನೆಗಳನ್ನು ತಿಳಿಸುತ್ತದೆ. ಈ ಸಾಧನೆಗಳ ಸತ್ಯಾಸತ್ಯತೆಯನ್ನು ಬೇರೆ ಯಾವುದೇ ಸಾಕ್ಷಿ ಆಧಾರಗಳು ಲಭಿಸಿಲ್ಲದ ಕಾರಣ ನಿರ್ಧರಿಸಲು ಸಾಧ್ಯವಿಲ್ಲ ತಿಮ್ಮ ಭೂಪತಿಯ ಹೆಸರು ಮತ್ತು ಸಾಧನೆಗಳು ಅವನ ಮಗನ ಮತ್ತು ಮೊಮ್ಮಕ್ಕಳ ಶಾಸನಗಳು ಉಲ್ಲೇಖಿಸಲ್ಪಟ್ಟಿವೆ. ವರಾಹ ಪುರಾಣದಲ್ಲಿ ವರ್ಣಿಸಿದಂತೆಯೇ ತಿಮ್ಮ ಭೂಪತಿಯ ಬಗ್ಗೆ ಈ ಶಾಸನಗಳಲ್ಲಿ ಹೇಳಲಾಗಿದೆ. ಅಂದರೆ ಈ ಶಾಸನಗಳನ್ನು ರಚಿಸಿದವನು ವರಾಹಪುರಾಣದ ವಿವರಗಳನ್ನು ಅಧಿಕೃತ ಸಂಗತಿಗಳೆಂದು ಪರಿಗಣಿಸಿರಬೇಕು. ಆದ್ದರಿಂದ ತಿಮ್ಮ ಭೂಪತಿಯಿಂದ ಪ್ರಾರಂಭಿಸಿ ತುಳವರ ವಂಶಾವಳಿಯನ್ನು ರೂಪಿಸುವುದು ಕಷ್ಟ.

ಶಕ ವರ್ಷ 1379 (ಕ್ರಿ. ಶ. 1457)ರ ಒಂದು ಶಾಸನ[1]ದಲ್ಲಿ ತಿಮ್ಮ ಭೂಪತಿಯ ಮಗ ಈಶ್ವರ ನಾಯಕನನ್ನು ಸಾಳುವ ನರಸಿಂಗದೇವನ ದಳವಾಯಿ ಎಂದು ಕರೆಯಲಾಗಿದೆ. ಕ್ರಿ. ಶ. 1462ರ ಮತ್ತೊಂದು[2] ಶಾಸನದಲ್ಲಿ ಅವನನ್ನು ರಾಜನ ಪ್ರತಿನಿಧಿ ಎಂದು ಕರೆಯಲಾಗಿದೆ. ದಕ್ಷಿಣ ಆರ್ಕಾಟ್ ಜಿಲ್ಲೆಯ ತಿರುವಡಿಯ 17–04–1478ರ ಶಾಸನ[3]ದಲ್ಲಿ ಅವನು ರಾಜ್ಯ ಪರಿಪಾಲನೆಯಲ್ಲಿ ಭಾಗವಹಿಸುತ್ತಿದ್ದನೆಂದೂ, ಕ್ರಿ. ಶ. 1479 (ಶಕ ವರ್ಷ 1401) ರ ದೇವಿಕಾಪುರಂ ಶಾಸನ[4]ದಲ್ಲಿ ಅವನಿಗೆ ಒಳಿತಾಗಲೆಂದು ಮಾಡಿದ ದಾನದ ಉಲ್ಲೇಖವಿದೆ ಆದರೆ ಕ್ರಿ.ಶ. 1481ರವರೆಗೂ ಈಶ್ವರ ನಾಯಕನು ಜೀವಿಸಿದ್ದನೆಂಬುದಕ್ಕೆ ಆಧಾರವಿದೆ. ವರಾಹಪುರಾಣದಲ್ಲಿ ಈಶ್ವರ ನಾಯಕನು ಕಂದುಕೂರು ಮತ್ತು ಪೆನುಗೊಂಡ ಯುದ್ಧಗಳಲ್ಲಿ ಭಾಗವಹಿಸಿದ ವರ್ಣನೆ ಇದೆ. ದಕ್ಷಿಣ ಆರ್ಕಾಟ್ ಜಿಲ್ಲೆಯ **'ತಿರುವಾಕ್ಕರೈ'**ನ 26–11–1483ರ ಶಾಸನ[5]ದಲ್ಲಿ ನರಸನಾಯಕನನ್ನು ರಾಜಪ್ರತಿನಿಧಿಯೆಂದು ತಿಳಿಸಲಾಗಿದೆ. ಕ್ರಿ. ಶ 1481ರ ನಂತರ ನರಸನಾಯಕನನ್ನು ಅವನ ತಂದೆಯ ಜಾಗದಲ್ಲಿ ರಾಜಪ್ರತಿನಿಧಿಯೆಂದು ನೇಮಿಸಿರಬಹುದು. ಆದರೆ ನರಸನಾಯಕನು ಎಂದು ಈ ಅಧಿಕಾರ ವಹಿಸಿಕೊಂಡನೆಂಬುದು ತಿಳಿದಿಲ್ಲ.

ನೂನಿಜ್‌ನ ವರದಿ ಮತ್ತು ಶಾಸನಗಳ ಮಾಹಿತಿಯ ಆಧಾರದಿಂದ ರಾಬರ್ಟ



ಸಿವೆಲ್ಲರು ಸಾಳುವರ ಬಗ್ಗೆ ಒಂದು ಘಟನಾವಳಿಯನ್ನು ರಚಿಸಿದ್ದಾರೆ. ನೂನಿಜ್‌ನು ಕ್ರಿ.ಶ. 1485 ರಾಜಕೀಯ ಕ್ರಾಂತಿಯನ್ನು ಈ ರೀತಿ ವರ್ಣಿಸಿದ್ದಾನೆ.

"ನರಸಿಂಗನ ಸೇನಾಪತಿಯಾದ ನರಸನಾಯಕನು ಹೇಳದೇ ಕೇಳದೇ ಪಲಾಯನ ಮಾಡಿದ ಪ್ರೌಢದೇವರಾಯನಿಂದ ಖಾಲಿಯಾದ ಸಿಂಹಾಸನವನ್ನು ಆಕ್ರಮಿಸಿದನು. ಸಂಗಮ ವಂಶದ ಕೊನೆಯ ಅರಸನ ಸುಳುಹಿಲ್ಲದ ಕಾರಣ ನರಸನಾಯಕನು ತನ್ನ ಪ್ರಭುವನ್ನು ಮಹಾರಾಜನೆಂದು ಸಾರಿದನು. ನರಸಿಂಹ ನಾಯಕನು ಈ ರೀತಿ ಮಹಾರಾಜನೆಂದು ಸಾರಲ್ಪಟ್ಟ ಮೇಲೆ ಮತ್ತು ಸಾಮಂತರು ಅಂಗೀಕರಿಸಿದ ನಂತರ ವಿಜಯನಗರ ಪ್ರವೇಶ ಮಾಡಿದನು.[6]

ನರಸನಾಯಕನೇ ವಿಜಯನಗರವನ್ನು ಸ್ವಾಧೀನಪಡಿಸಿಕೊಂಡು ತನ್ನ ಪ್ರಭುವನ್ನು ವಿಜಯನಗರ ರತ್ನಸಿಂಹಾಸನವನ್ನೇರಲು ಸ್ವಾಗತಿಸಿದನು. ಸಾಳುವ ನರಸಿಂಹನು 29–07–1485 ಮತ್ತು 9–09–1485 ದಿನಗಳ ನಡುವೆ ಒಂದು ದಿನ ವಿಜಯನಗರದ ಸಿಂಹಾಸನವನ್ನೇರಿದನು.[7] ಅಂದರೆ ಸಾಳುವ ನರಸಿಂಹನ ಮಹಾಸೇನಾಪತಿ ನರಸನಾಯಕನು ಮೇಲ್ಕಂಡ ಸಮಯದಲ್ಲಿ ವಿದ್ಯಾಪುರಿಯನ್ನು ಸ್ವಾಧೀನ ಮಾಡಿಕೊಂಡನು. ಸಾಳುವ ನರಸಿಂಹನು ತನ್ನ ಮರಣ ಕಾಲದಲ್ಲಿ ಸಮಸ್ತ ರಾಜ್ಯವನ್ನು, ತನ್ನ ಇಬ್ಬರು ಮಕ್ಕಳನ್ನು ನರಸನಾಯಕನ ರಕ್ಷಣೆಯಲ್ಲಿ ಬಿಟ್ಟನು. ತತ್ಪರಿಣಾಮವಾಗಿ ನರಸನಾಯಕನು ತನ್ನ ಪ್ರಭುವಿನ ಮಕ್ಕಳು ಮತ್ತು ಸಾಮ್ರಾಜ್ಯದ ರಕ್ಷಕನಾದನು. ಸಾಳುವ ನರಸಿಂಹನ ಕೊನೆಯ ಶಾಸನವು 23–05–1491ರದಾಗಿದೆ[8] ಆತನ ಅಥವಾ ಆತನ ಮಕ್ಕಳ ಬೇರಾವ ಶಾಸನವೂ ಲಭಿಸಿಲ್ಲ. ಇಮ್ಮಡಿ ನರಸಿಂಹನ ಮೊದಲ ಶಾಸನವೆಂದರೆ 21–11–1491[9]ರದಾಗಿದೆ. ಅಂದರೆ ಸಾಳುವ ನರಸಿಂಹನು 23–05–1491ರ ನಂತರ ಮತ್ತು 21–11–1491 ಮೊದಲು ಮರಣಿಸಿರಬೇಕು. ನರಸನಾಯಕನು ಸಾಳುವನ ಮಕ್ಕಳ ರಕ್ಷಕನೆಂದು ನೇಮಿಸಲ್ಪಟ್ಟನು. ಇವರಲ್ಲಿ ಒಬ್ಬನು ಸಿಂಹಾಸನವನ್ನೇರಿದ ಮೇಲೆ ಅವನು ಕೊಲೆಯಾದ ಬಗ್ಗೆ ನೂನಿಜ್ ತಿಳಿಸುತ್ತಾನೆ. ಆದರೆ ಅವನ ಹೆಸರನ್ನಾಗಲೀ ಅವನು ಕೊಲೆಯಾದ ವರ್ಷವನ್ನಾಗಲೀ ನೂನಿಜ್ ತಿಳಿಸಿಲ್ಲ. ಇನ್ನೊಬ್ಬ ರಾಜಕುಮಾರ **ತಮ್ಮರಾಯ** ಸಿಂಹಾಸನವೇರಿದನು. ಆದರೆ ಅವನಿಗೂ ನರಸನಾಯಕನಿಗೂ ಹೊಂದಿಕೆ ಆಗಲಿಲ್ಲ. ಕೊನೆಗೆ ತಮ್ಮರಾಯನು ಸುಮ್ಮನಾಗಬೇಕಾಯಿತು. ನರಸನಾಯಕನೇ ರಕ್ಷಕನೂ, ರಾಜನೂ ಆದನು. ನೂನಿಜ್ ಈ ಬೆಳವಣಿಗೆಯ ಬಗ್ಗೆ ಯಾವ ದಿನಾಂಕವನ್ನೂ ತಿಳಿಸಿಲ್ಲ. "ಕೆಲ ಕಾಲಾನಂತರ ನರಸನಾಯಕನು ಮಹಾರಾಜನ ವಯಸ್ಸನ್ನು ಗಮನಿಸಿ ಅವನನ್ನು ಪೆನುಗೊಂಡದಲ್ಲಿ ಇರಿಸಲು ನಿರ್ಧರಿಸಿದನು.[10]

ಅನಂತರ ನರಸನಾಯಕನು ಅನೇಕ ಕಡೆ ಯುದ್ಧ ಮಾಡಿದನು. ನರಸನಾಯಕನಿಗೆ ಐದು ಜನ ಮಕ್ಕಳು. ಅವರಲ್ಲಿ ಹಿರಿಯನಾದ ಭುಜಬಲರಾಯನು ತಂದೆಯ ಮರಣಾನಂತರ ಮಹಾರಾಜನಾಗಿ ಆರು ವರುಷಕಾಲ ರಾಜ್ಯ ಪರಿಪಾಲನೆ ಮಾಡಿದನು.[11]

ಇಲ್ಲಿ ನೂನಿಜ್‌ನು ವೀರನರಸಿಂಹನ ರಾಜ್ಯ ಪರಿಪಾಲನೆಯ ಅವಧಿಯನ್ನು

ತಿಳಿಸುತ್ತಾನೆ. ಆದರೆ ನರಸನಾಯಕನ ಪರಿಪಾಲನಾ ಕಾಲವನ್ನು ತಿಳಿಸಿಲ್ಲ. ನೂನಿಜ್‌ನು ಕೊಲೆಯ ಅಪರಾಧವನ್ನು ನರಸನಾಯಕನ ಮೇಲೆ ಹೊರಿಸಿದನು. ಶಾಸನಗಳ ಸಾಕ್ಷ್ಯವನ್ನು ಅವನು ಗಮನಿಸಲೇ ಇಲ್ಲ. ಶಾಸನಗಳ ಪ್ರಕಾರ ನರಸನಾಯಕನು ಕ್ರಿ.ಶ. 1503ರಲ್ಲಿ ವಿಧಿವಶನಾದನು. ಆದರೆ ಇಮ್ಮಡಿ ನರಸಿಂಹನು 28–02–1505 ಮತ್ತು 6–03–1505 ನಡುವೆ ಗತಿಸಿದನು.[12]

ನರಸನಾಯಕನಿಗೆ ನಾಲ್ಕು ಜನ ಪುತ್ರರಿದ್ದರು. ವೀರನರಸಿಂಹ, ಕೃಷ್ಣದೇವರಾಯ, ರಂಗರಾಯ ಮತ್ತು ಅಚ್ಯುತದೇವರಾಯ. ಆದರೆ ಇವರ ಜನ್ಮದಿನಗಳ ಬಗ್ಗೆ ಏನೂ ತಿಳಿದಿಲ್ಲ. ಇವರಲ್ಲಿ ವೀರ ನರಸಿಂಹನೇ ಹಿರಿಯನು. ವರಾಹಪುರಾಣದಲ್ಲಿ ನರಸನಾಯಕನ ಪ್ರೀತಿಯ ಮಗನಾದ ನರಸಯ್ಯನು ಆಸ್ಥಾನದಲ್ಲಿ ತಂದೆಗೆ ಸಹಾಯಕನಾಗಿದ್ದನೆಂದು ಹೇಳಲಾಗಿದೆ. ಅಂದರೆ ವೀರನರಸಿಂಹನು ಪ್ರಾಪ್ತ ವಯಸ್ಕನಾಗಿರಬೇಕಲ್ಲವೇ ? ಸಾಳುವ ನರಸಿಂಹನ ಕಾಲದಲ್ಲಿ (ಕ್ರಿ. ಶ. 1476–1490) ರಚಿತವಾದ ವರಾಹ ಪುರಾಣವು ನರಸನಾಯಕನಿಗೆ ಅರ್ಪಿತವಾಗಿದೆ. ನರಸನಾಯಕನು ತನ್ನ ತಂದೆಯ ನಂತರ ಕ್ರಿ.ಶ. 1481ರಲ್ಲಿ ಅವನ ಪದವಿಯನ್ನು ಪಡೆದನು. ನರಸನಾಯಕನ ಸಾಧನೆಗಳನ್ನು ಈ ಕೃತಿಯಲ್ಲಿ ವರ್ಣಿಸಲಾಗಿಲ್ಲ. ಅದನ್ನು ತರುವಾಯದ ಸಾಹಿತ್ಯಕೃತಿಗಳಲ್ಲಿ ಕಾಣಬಹುದು. ಅಂದರೆ ನರಸನಾಯಕನು ಸೇನಾಪತಿಯಾದ ಆರಂಭಕಾಲದಲ್ಲಿಯೇ ಈ ಕೃತಿಯು ಆತನಿಗೆ ಅರ್ಪಿತವಾಗಿರಬೇಕು. ಅಂದರೆ ಕ್ರಿ.ಶ. 1481 ಅಥವಾ ಕ್ರಿ.ಶ. 1482ರಲ್ಲಿ ಆಗಿರಬೇಕು. ಆ ಸಮಯಕ್ಕೆ ವೀರನರಸಿಂಹನು ಆಗಲೇ ಹದಿಹರೆಯದವನಾಗಿರಬೇಕು ಮತ್ತು ರಾಜಕಾರ್ಯದಲ್ಲಿ ತಂದೆಗೆ ನೆರವಾಗುತ್ತಿರಬೇಕು ಅಂದರೆ ನರಸನಾಯಕನು ಸೇನಾಪತಿಯಾದ ಆರಂಭಕಾಲದಲ್ಲಿಯೇ ಈ ಕೃತಿಯು ಆತನಿಗೆ ಅರ್ಪಿತವಾಗಿರಬೇಕು. ಅಂದರೆ ಕ್ರಿ. ಶ. 1482ರಲ್ಲಿ ಆಗಿರಬೇಕು. ಅಂದರೆ ವೀರನರಸಿಂಹನಿಗೆ ಆಗ ಸು. 19 ವರ್ಷ ತುಂಬಿರಬೇಕೆಂದು ನಾವು ನಿರ್ಧರಿಸಬಹುದು. ಅವನು ಕ್ರಿ.ಶ. 1503ರಲ್ಲಿ ತಂದೆಯ ಸ್ಥಾನದಲ್ಲಿ ರಾಜರಕ್ಷಕನ ಹೊಣೆಯನ್ನು ಸ್ವೀಕರಿಸಿದಾಗ ಅವನಿಗೆ 40 ವರ್ಷ ವಯಸ್ಸಿರಬಹುದು. ಅವನು ಸಾಮ್ರಾಟನಾದಾಗ ಅವನಿಗೆ 42 ವರ್ಷ ವಯಸ್ಸು. ಅವನು ಕ್ರಿ.ಶ. 1509ರಲ್ಲಿ ಗತಿಸಿದಾಗ ಅವನ ವಯಸ್ಸು 46 ಅಥವಾ 47 ಆಗಿರಬೇಕು.

**ವೀರನರಸಿಂಹನು ರಾಜರಕ್ಷಕನಾದ ದಿನಾಂಕ :** ವೀರನರಸಿಂಹರಾಯನು ನರಸನಾಯಕನ ಮರಣಾನಂತರ ಅಂದರೆ 31–10–1503 – 21–11–1503ರ ನಡುವೆ ರಾಜರಕ್ಷಕನಾಗಿರಬೇಕು. ಆದರೆ ಹೆಸರಿಗೆ ಸಾಳುವ ಇಮ್ಮಡಿ ನರಸಿಂಹರಾಯನೇ ಸಾಮ್ರಾಟನಾಗಿದ್ದನು. ನೂನಿಜ್ ಪ್ರಕಾರ ಇಮ್ಮಡಿ ನರಸಿಂಹನು ನರಸನಾಯಕನ ಯೋಜನೆಯಂತೆ ಕೊಲೆಯಾದನು. **ವೀರಪ್ಪಯ್ಯನ ಕಾಲಜ್ಞಾನದ** ಪ್ರಕಾರ ಇಮ್ಮಡಿ ನರಸಿಂಹರಾಯನ ಕೊಲೆಯು ನರಸನಾಯಕನ ಯೋಜನೆಯಂತೆ **ರಾಕ್ಷಸ**ನಾಮ ಸಂವತ್ಸರದಲ್ಲಿ ನಡೆಯಿತು. ಆದರೆ ಕೊಲೆಯ ಪಿತೂರಿ ಮಾಡಿದವರ ಬಗ್ಗೆ ಮತ್ತು ಸಮಯ (ಕಾಲ)ದ ಬಗ್ಗೆ ಅನುಮಾನಗಳಿವೆ. ಮೂಲ ಪ್ರಶ್ನೆಯೆಂದರೆ ಯಾರು ಸಿಂಹಾಸನದ



ಆಕ್ರಮಣಕಾರರು ? ಶಾಸನಗಳ ಪ್ರಕಾರ ನರಸನಾಯಕನ ಮರಣಾನಂತರ ಇಮ್ಮಡಿ ನರಸಿಂಹನು ಒಂದು ವರುಷ ಕಾಲ ಜೀವಿಸಿದ್ದನು. ಕೃಷ್ಣರಾಜಪೇಟೆಯ ಶಾಸನ[13]ದ ಪ್ರಕಾರ ನರಸನಾಯಕನು ಕ್ರಿ.ಶ. 1503ರಲ್ಲಿ ಗತಿಸಿದನು ಮತ್ತು ಈ ದಾನ ಶಾಸನವು ಆತನಿಗೆ ಸದ್ಗತಿಯಾಗಲೆಂದು ಹಾಕಿಸಿದ್ದಾಗಿತ್ತು. ನರಸಿಂಹನು ತದನಂತರದ ವರುಷದಲ್ಲಿ ಗತಿಸಿದನು. ಮುಳಬಾಗಿಲಿನ ದತ್ತಿ ಶಾಸನ ಕ್ರಿ.ಶ. 1505ರದು ನರಸನಾಯಕ ಮತ್ತು ಇಮ್ಮಡಿ ನರಸಿಂಹನಿಗೆ ಸದ್ಗತಿಯಾಗಲೆಂದೇ ಹಾಕಿದ್ದು[14]. ಇದರಿಂದ ನರಸನಾಯಕನು ಇಮ್ಮಡಿ ನರಸಿಂಹನ ಕೊಲೆಮಾಡಿಸಿ ರಾಜ್ಯವನ್ನು ಆಕ್ರಮಿಸಿದನೆಂಬ ನೂನಿಜ್ ಆಪಾದನೆಯು ಸರಿಯಲ್ಲ ಎಂದು ಸ್ಪಷ್ಟವಾಗುತ್ತದೆ.

ದೇವಿಕಾಪುರದ ಶಾಸನವು[15] ನರಸನಾಯಕನು ಅದೇ ವರುಷ ಶಿವಲೋಕ ಪಡೆದನೆಂದೂ, ಆತನಿಗೆ ಸದ್ಗತಿಯಾಗಲೆಂದು ದೇವಿಕಾಪುರ ದೇವಾಲಯದ ಧರ್ಮದರ್ಶಿಗಳು ವಿಶ್ವೇಶ್ವರ ಶಿವಾಚಾರ್ಯರೂ, ಈಶ್ವರ ನಾಯಕ, ತಿರುಮಲೈ ನಾಯಕರು, ಸಮರಪುಂಗವ ದೀಕ್ಷಿತರಿಗೆ ಒಂದು ಮನೆಯನ್ನೂ, ಭೂಮಿಯನ್ನು ದಾನಮಾಡಿದ್ದಾರೆ. ಈ ಶಾಸನವು ಸು.21, ಮಾರ್ಗಶಿರ ಎಂದರೆ 21–11–1513ರ ದಿನಾಂಕದ್ದಾಗಿದೆ. ಪಾಲಗಿರಿ ಶಾಸನ[16] ಶಕವರ್ಷ 1425 ರುಧಿರೋದ್ಗಾರಿ ಕಾರ್ತೀಕ ಶು॥ 2 ಅಂದರೆ 31–10–1503 ಎಂದಿದೆ. ಅಂದರೆ ಆ ದಿನ ನರಸನಾಯಕನಿನ್ನೂ ಜೀವಿಸಿದ್ದನು. ಮತ್ತೊಂದು ಶಾಸನ[17] ಶಕವರ್ಷ 1425 ರುಧಿರೋದ್ಗಾರಿ ಮಾರ್ಗಶಿರ ಬ॥ 10. ಅಂದರೆ 13–12–1503ರ ಶಾಸನವು ಗೋಪಾಲ ಎಂಬ ವ್ಯಕ್ತಿಯು ನರಸನಾಯಕನಿಗೆ ಪುಣ್ಯಲೋಕವಾಗಲೆಂದು ಮಾಡಿದ ಧರ್ಮವಾಗಿದೆ.

ಅಂದರೆ ನರಸನಾಯಕನು 31–10–1503 ಮತ್ತು 21–11–1503ರ ನಡುವೆ ಗತಿಸಿದನು. ಅಂದರೆ ವೀರನರಸಿಂಹನು ರಾಜ್ಯದ ಪ್ರಧಾನಿ ಮತ್ತು ರಾಜರಕ್ಷಕನಾಗಿ ಕ್ರಿ.ಶ. 1503ರಲ್ಲಿ ಅಧಿಕಾರ ವಹಿಸಿಕೊಂಡನೆಂದು ತೀರ್ಮಾನಿಸಬಹುದು.

**ವೀರನರಸಿಂಹನು ರಾಜ್ಯಪಾಲನೆ ಮಾಡಿದನೇ ? :** ವೀರನರಸಿಂಹನು ನಿಜವಾಗಿ ವಿಜಯನಗರದ ವಜ್ರಸಿಂಹಾಸನವನ್ನು ಅಲಂಕರಿಸಿದನೇ ? ಇಲ್ಲವೇ ? ಎಂದು ಕೆಲವು ಶಾಸನಗಳು ಅನುಮಾನ ಹುಟ್ಟಿಸುತ್ತವೆ.[18] ಇಮ್ಮಡಿ ನರಸಿಂಹನ ಕೆಲಶಾಸನಗಳು ಶಕವರ್ಷ 1429 ಮತ್ತು 1450ರ ಶಾಸನಗಳು ವೀರನರಸಿಂಹನು ಕೃಷ್ಣದೇವರಾಯನಿಗಿಂತ ಮೊದಲು ನಿಜವಾಗಿ ವಿಜಯನಗರ ಸಿಂಹಾಸನವನ್ನು ಏರಿದನೇ ? ಎಂಬ ಬಗ್ಗೆ ಸಂಶಯಕ್ಕೆ ಕಾರಣವಾಗಿದೆ.[19] ಕ್ರಿ.ಶ. 1929–30ರ ಶಾಸನ ತಜ್ಞರು ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ.

'ಕೃಷ್ಣದೇವರಾಯನಿಗಿಂತ ಮೊದಲು ವಿಜಯನಗರ ಪ್ರಾಂತ್ಯಗಳನ್ನು ಸಾಳುವ ಇಮ್ಮಡಿ ನರಸಿಂಹನು ಅನ್ಯರಾರಿಗೂ ಅವಕಾಶ ನೀಡದೇ ಪರಿಪಾಲಿಸಿದನು. ವೀರನರಸಿಂಹನು ಯಾವುದೇ ಶಾಸನದಲ್ಲಿ ಸ್ಪಷ್ಟವಾಗಿ ತನ್ನನ್ನು **ತುಳುವ** ಎಂದು ಕರೆದುಕೊಂಡ ಯಾವ ಶಾಸನವೂ ನಮ್ಮ ಗಮನಕ್ಕೆ ಬಂದಿಲ್ಲ. ಆದರೆ ವೀರನರಸಿಂಹ, ಇಮ್ಮಡಿ ನರಸಿಂಹ ಮತ್ತು

ಭುಜಬಲರಾಯ ಎಂಬುವರ ಅನೇಕ ಶಾಸನಗಳಲ್ಲಿ ತನ್ನನ್ನು **'ಸಾಳುವ'** ಎಂದು ಕರೆದುಕೊಂಡಿದ್ದಾನೆ. ಈ ಶಾಸನಗಳು ಶಕವರ್ಷ 1414 ರಿಂದ 1431ರ ಅವಧಿಯಾಗಿವೆ. ಆದ್ದರಿಂದ ನಮಗೆ ಸಾಳುವ ಇಮ್ಮಡಿ ನರಸಿಂಹ ಎಂದು ತುಳುವ ವೀರನಸಿಂಹನು ಶಕವರ್ಷ 1424ರ ಶಾಸನದಲ್ಲಿ ಹೇಳಿರುವುದರ ಬಗ್ಗೆ ತೀವ್ರ ಸಂಶಯವಾಗುತ್ತದೆ ಮತ್ತು ಅವನು ಕೃಷ್ಣದೇವರಾಯನಿಗಿಂತ ಮೊದಲು ರಾಜ್ಯಪಾಲನೆ ಮಾಡಿದನೇ ಎಂಬುದು ಅನುಮಾನಸ್ಪದವಾಗಿ.[20]

ಮತ್ತೊಂದು ಗೊಂದಲದ ಬಿರುದೆಂದರೆ 'ಭುಜಬಲರಾಯ ಎಂಬುದು, ಏಕೆಂದರೆ ಸಾಳುವ ನರಸಿಂಹನೂ[21] ಅವನ ಮಗ ಇಮ್ಮಡಿ ನರಸಿಂಹನೂ[22] ಮತ್ತು ವೀರನರಸಿಂಹನೂ[23] ಭುಜಬಲರಾಯ ಎಂದು ಕರೆದುಕೊಂಡಿದ್ದಾರೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಎಲ್ಲಿ ನಿಜನಾಮಧೇಯದ ಬದಲಿಗೆ ಈ ಬಿರುದು ಇದೆಯೋ, ಎಲ್ಲಿ ಈ ಅಡ್ಡ ಹೆಸರನ್ನು ಹೇಳಲಾಗಿದೆಯೋ ನಿರ್ಧರಿಸಬೇಕಾಗಿದೆ. ಆ ಕಾಲದಲ್ಲಿ ಆಳುವ ರಾಜರು ತಮ್ಮ ಮೊದಲಿನ ಪ್ರಭುಗಳ ಬಿರುದುಗಳನ್ನು ತಾವೂ ಧರಿಸುವುದು ವಾಡಿಕೆಯಾಗಿತ್ತು.

**ವೀರನರಸಿಂಹನ ಪಟ್ಟಾಧಿಕಾರ :** ಇಮ್ಮಡಿ ನರಸಿಂಹನ ಆಳಿಕೆಯ ಕೊನೆಯ ದಿನಾಂಕವೆಂದರೆ 28–02–1505 ಕ್ರಿ.ಶ. ದೇವಿಕಾಪುರಂ ಶಾಸನದ ದಿನಾಂಕವಿದು[24] ಈ ಸಂವತ್ಸರವನ್ನು ರಕ್ತಾಕ್ಷಿ ಎಂದೂ ಶಕ ವರ್ಷವನ್ನು 1429 ಎಂದು ತಪ್ಪಾಗಿ ತಿಳಿಯಲಾಗಿದೆ. ಅದು ರಕ್ತಾಕ್ಷಿ ಸಂವತ್ಸರವಾದರೆ ವರ್ಷ 1426 ಆಗಬೇಕು. ಆಗ ಅದು 28–02–1505ಕ್ಕೆ ಹೊಂದಿಕೆಯಾಗುತ್ತದೆ. ಕಡಪದ ಒಂದು ಶಾಸನ[25]ವು ಕ್ರೋಧನ ಸಂವತ್ಸರದಲ್ಲಿ ಸಾಳುವ ನರಸಿಂಹನು ಇನ್ನೂ ಬದುಕಿದ್ದು ಆಳುತ್ತಿದ್ದನೆಂದು ಹೇಳುತ್ತದೆ. ಇಲ್ಲೂ ಕೂಡ ಶಕವರ್ಷ ತಪ್ಪಾಗಿ ನಮೂದಾಗಿದೆ. ಇಲ್ಲಿ ರಾಯನ ಹೆಸರು ಅಸ್ಪಷ್ಟವಾಗಿರುವುದರಿಂದ ಅದು ಇಮ್ಮಡಿ ನರಸಿಂಹನೆಂದು ಹೇಳಲು ಸಾಧ್ಯವಿಲ್ಲ.

**ತಿರುಕ್ಕೊಯಿಲೂರಿನ ಶಾಸನ**[26] ಕ್ರೋಧನ ಸಂವತ್ಸರ ಶಕ ವರ್ಷ 1427 ಮತ್ತು ಕ್ರಿ.ಶ. 5–2–1506[27] ಅಥವಾ 11–02–1506ರ ಶಾಸನವನ್ನು ಶಾಸನ ತಜ್ಞರು ಇಮ್ಮಡಿ ನರಸಿಂಹನದೆಂದು ಅಂಗೀಕರಿಸಿದ್ದಾರೆ. ಈ ಶಾಸನದಲ್ಲಿ ರಾಯನನ್ನು ಇಮ್ಮಡಿ ನರಸನಾಯಕ ಎಂದು ಕರೆಯಲಾಗಿದೆ ಮತ್ತು ಅವನು ಸಾಳುವ ನರಸಿಂಹ ಮಹಾರಾಯನ ಮಗನೆಂದೂ, ಶಾಸನದ ದಿನಕ್ಕೆ ಅವನು ಜೀವಿಸಿದ್ದನೆಂದೂ ತಿಳಿಸಲಾಗಿದೆ. ರಾಜನ ಮತ್ತು ಅವನ ವಾರಸುದಾರನ ಹೆಸರುಗಳಲ್ಲಿನ ಗೊಂದಲದಿಂದಲೂ ಮತ್ತು ಇಬ್ಬರು ರಾಯರ ತಂದೆಯರ ಹೆಸರೂ ಒಂದೇ ತರಹ ಇರುವುದರಿಂದಲೂ ನಿಜವಾದ ಅಧಿಪತಿಯನ್ನು ಗುರುತಿಸುವುದು ಕ್ಲಿಷ್ಟವಾಗಿದೆ. ಸ್ವಾಮಿಕಣ್ಣು ಪಿಳ್ಳೆಯವರು ಶಾಸನಗಳನ್ನು ಪರಿಶೀಲಿಸಿ ದಿನಾಂಕದ ವಿವರಗಳು ಸರಿಯಾಗಿಲ್ಲ ಎಂದಿದ್ದಾರೆ.[28]

ಕೊಂಗುದೇಶ ರಾಜರ್ಕಳಿನ್ ಚರಿತಂ[29] ಪ್ರಕಾರ ವಿಜಯನಗರದಲ್ಲಿ ಮಹಾರಾಜಾಧಿರಾಜ ವೀರನರಸಿಂಹರಾಯರ ಪಟ್ಟಾಭಿಷೇಕವು ಶಾರ್ವರೀ ಸಂವತ್ಸರ ಅಂದರೆ ಶಕವರ್ಷ 1401ರಂದು ನೆರವೇರಿತು. ಇಲ್ಲಿ ಕಾಣಿಸಿರುವ ವರ್ಷ ಖಂಡಿತ ತಪ್ಪು.



ವೀರಪ್ಪಯ್ಯ ಕಾಲಜ್ಞಾನ[30] ಪ್ರಕಾರ ನರಸನಾಯಕನ ಮಗ ವೀರ ನರಸಿಂಹರಾಯ, ತಮ್ಮರಾಯನನ್ನು ಕೊಲೆಮಾಡಿಸಿ, ರಕ್ತಾಕ್ಷಿ ಸಂವತ್ಸರದಿಂದ ಐದು ವರ್ಷಕಾಲ ರಾಜ್ಯ ಪರಿಪಾಲಿಸಿದನು. ರಕ್ತಾಕ್ಷಿ ಸಂವತ್ಸರು 1504 ಮಾರ್ಚಿ ತಿಂಗಳಿಂದ[31] ಕ್ರಿ.ಶ. 1505 ಮಾರ್ಚಿವರೆಗಿತ್ತು. ಕ್ರಿ.ಶ. 1504ರ ಶಾಸನ[32]ವು ವೀರನರಸಿಂಹರಾಯನನ್ನು ವೀರಪ್ರತಾಪ ನರಸಿಂಹರಾಯ ಎಂದು ಕರೆಯುತ್ತದೆ. ಅವನಾಗ ಇನ್ನೂ ಪಟ್ಟಾಭಿಷಿಕ್ತ ಚಕ್ರವರ್ತಿ ಆಗಿರಲಿಲ್ಲ. ಮುಳಬಾಗಿಲು ತಾಲೂಕಿನ ಕೋಡಿಹಳ್ಳಿಯ ಶಾಸನ[33] ಕ್ರಿ.ಶ. 1506ರದು, ನರಸಿಂಹ ನಾಯಕ ಮತ್ತು ನರಸಿಂಹರಾಯರಿಗೆ ಒಳಿತಾಗಲೆಂದು ನೀಡಿದ ದಾನ ಶಾಸನವಾಗಿದೆ. ಆದರೆ ಮಾರ್ಚಿ 6, 1505ರ ನಂತರ, ಎಂದೋ ಒಂದು ದಿನ ಮಾರ್ಚಿ 6 ನಂತರ ಇಮ್ಮಡಿ ನರಸಿಂಹರಾಯನ ಕೊಲೆ ಆಗಿರಬಹುದು. ಈ ಶಾಸನವು ಸಾಕಷ್ಟು ತ್ರುಟಿತವಾಗಿದೆ ಮತ್ತು ದಿನಾಂಕದ ವಿವರಗಳೂ ಸಮಂಜಸವಿಲ್ಲ. ಆದ್ದರಿಂದ ಈ ಶಾಸನವನ್ನು ನಂಬಲಾಗದು ಆದ್ದರಿಂದ ಇಮ್ಮಡಿ ನರಸಿಂಹನ ಆಡಳಿತದ ಕೊನೆಯ ದಿನಾಂಕವನ್ನು 28–02–1505 ಎಂದು ತೀರ್ಮಾನಿಸಬಹುದು. ಅದರಂತೆ ವೀರನರಸಿಂಹನು ಅಧಿಕಾರ ಗ್ರಹಿಸಿದ ದಿನಾಂಕವನ್ನು ಶಾಸನದ ಆಧಾರದ ಮೇಲೆ 14–8–1505 ಎಂದು ತೀರ್ಮಾನಿಸಬಹುದು.

ಮೈಸೂರು ಜಿಲ್ಲೆಯ **ನಗರಗೆರೆಯ ಶಾಸನ**[34]**ವು** ಮೇಲಿನ ದಿನಾಂಕದ್ದು ಆಗಿದೆ. ಈ ಶಾಸನದಲ್ಲಿ ಮೊದಲಬಾರಿಗೆ ವೀರ ನರಸಿಂಹನ ಹೆಸರನ್ನು ಎಲ್ಲ ಬಿರುದಾವಳಿಗಳೊಂದಿಗೆ ಉಲ್ಲೇಖಿಸಲಾಗಿದೆ. ಈ ಶಾಸನದಲ್ಲಿಯೇ ತುಳುವರ ಸಂಪೂರ್ಣ ಪ್ರಶಸ್ತಿಯ ಉಲ್ಲೇಖವಿದೆ. ಅಜ, ಅತ್ರಿ, ಚಂದ್ರ, ಪೂರೂರವ ಮತ್ತು ನಹುಷರಿಂದ ವೀರ ನರಸಿಂಹನವರೆಗೆ ಸಂಪೂರ್ಣ ಪ್ರಶಸ್ತಿ ಇಲ್ಲಿದೆ.

ಅಂದರೆ ವೀರನರಸಿಂಹನು ಈ ಶಾಸನದ ಸಮಯದ 14–08–1505 ಹೊತ್ತಿಗೆ ವಿಜಯನಗರದ ಸಾಮ್ರಾಟನಾಗಿರಲೇಬೇಕು. ಇಮ್ಮಡಿ ನರಸಿಂಹನು 28–02–1505 ಮತ್ತು 14–08–1505ರ ನಡುವೆ ಕೊಲೆಯಾಗಿರಬೇಕು. ವೀರಪ್ಪಯ್ಯ ಕಾಲಜ್ಞಾನವನ್ನು ಆಧರಿಸಿ ನೋಡಿದರೆ ರಕ್ತಾಕ್ಷಿ ಸಂವತ್ಸರವು 6–03–1505ಕ್ಕೆ ಮುಗಿಯುವುದರಿಂದ ಇಮ್ಮಡಿ ವೀರನರಸಿಂಹನು ಅವಸಾನ ಕಾಲವು ಕೇವಲ 9 ದಿನಕ್ಕೆ ಉಳಿಯುತ್ತದೆ.

**ವೀರನರಸಿಂಹನ ಮರಣ :** ವೀರನರಸಿಂಹನ ಅತ್ಯಂತ ಕಡೆಯ ಶಾಸನವೆಂದರೆ ದಕ್ಷಿಣ ಅರ್ಕಾಟ್ ಜಿಲ್ಲೆಯ **ವಿಕ್ರವಂದಿ**[35] ಶಾಸನವಾಗಿದೆ. ಅದು ಶಕವರ್ಷ 1431 ಕಾರ್ತೀಕ ಶು ॥ 5 ಅಂದರೆ 22–07–1509ರದಾಗಿದೆ. ಕೃಷ್ಣದೇವರಾಯನ ಮೊಟ್ಟಮೊದಲ ಶಾಸನವೆಂದರೆ ಬಳ್ಳಾರಿ ಜಿಲ್ಲೆಯ **ಗೂಳ್ಯಂ**[36]**ದಾಗಿದೆ.** (ಈಗ ಗೂಳ್ಯಂ ಕರ್ನೂಲು ಜಿಲ್ಲೆಗೆ ಸೇರಿದೆ.) ಅದು ಶಕವರ್ಷ 1431 ಶ್ರಾವಣ ಶು ॥ 10 ಅಂದರೆ ಕ್ರಿ.ಶ. 26–07–1509 ಗುರುವಾರದ್ದಾಗಿದೆ. ಈ ಶಾಸನದಲ್ಲಿ ಕೃಷ್ಣದೇವರಾಯನು ವಿಜಯನಗರದ ವಜ್ರಸಿಂಹಾಸನಸ್ಥನಾಗಿ ರಾಜ್ಯ ಪರಿಪಾಲಿಸುತ್ತಿದ್ದನೆಂದು ಸಾರಲಾಗಿದೆ. ಆತನ ಕಾಂಚೀಪುರ ಶಾಸನ[37] ಶಕವರ್ಷ 1436 (ಕ್ರಿ.ಶ. 1514)ದಲ್ಲಿ ಆತನು ತನ್ನ ಸೋದರ ವೀರನರಸಿಂಹನ ಮರಣಾನಂತರ ಸಿಂಹಾಸನವೇರಿದನೆಂದು ಪ್ರಕಟಿಸಲಾಗಿದೆ. ಕೃಷ್ಣದೇವರಾಯನ

ಮತ್ತೊಂಡುಶಾಸನ[38]ದಲ್ಲಿ ವೀರನರಸಿಂಹನು ಶಿವಲೋಕಕ್ಕೆ ತೆರಳಿದ ಕಾರಣ ಕೃಷ್ಣದೇವರಾಯನು ಭೂಭಾರವನ್ನು ಹೊರಬೇಕಾಯಿತಂತೆ. ಕೃಷ್ಣದೇವರಾಯನ ಶಾಸನಗಳು ಅಣ್ಣ ವೀರನರಸಿಂಹನ ಮರಣಾನಂತರ ಸಿಂಹಾನಸ್ಥನಾದನೆಂದು ಸ್ಪಷ್ಟವಾಗಿ ತಿಳಿಸುತ್ತವೆ. ಆದ್ದರಿಂದ ವೀರನರಸಿಂಹನು ಗೂಳ್ಯಂಶಾಸನದ ಮೊದಲು ಅಂದರೆ 26–07–1509ಕ್ಕೆ ಮುಂಚೆಯೇ ಗತಿಸಿರಬೇಕು. ವೀರನರಸಿಂಹನ ಕೊನೆಯ ಶಾಸನವಾದ ವಿಕ್ರವಂದಿಯ ಶಾಸನ 22–07–1509 ಮತ್ತು ಕೃಷ್ಣ ದೇವರಾಯನ ಮೊದಲ ಶಾಸನ 26–07–1509ರ ಗುಳ್ಯಂ ಶಾಸನಗಳ ನಡುವೆ ಕೇವಲ ನಾಲ್ಕುದಿನ ಮಾತ್ರ ಇದೆ. ನಿಶ್ಚಿತವಾಗಿ ವೀರನರಸಿಂಹನು ಈ ನಾಲ್ಕುದಿನಗಳಲ್ಲೇ ಮರಣಿಸಿರಬೇಕು.

**ಕೃಷ್ಣದೇವರಾಯನ ಪಟ್ಟಾಭಿಷೇಕದ ದಿವಸ :** ಅಣ್ಣ ವೀರನರಸಿಂಹನ ಮರಣದ ನಂತರ ಕೃಷ್ಣದೇವರಾಯನು ತಕ್ಷಣ ವಿಜಯನಗರದ ರಾಜ್ಯಸೂತ್ರಗಳನ್ನು ವಹಿಸಿಕೊಂಡನು ಎಂಬುದು ಖಂಡಿತವಾದರೂ ಕೃಷ್ಣದೇವರಾಯನ ಪಟ್ಟಾಭಿಷೇಕದ ದಿನದ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಮೇಲೆ ತಿಳಿಸಿದಂತೆ ವೀರನರಸಿಂಹನು 22–07–1509 ಮತ್ತು 26–07–1509ರ ನಡುವೆ ಸ್ವರ್ಗಸ್ಥನಾದನು. 26–07–1509ರ ಗುಳ್ಯಂ ಶಾಸನದಲ್ಲಿ ತಿಳಿಸಿದಂತೆ ಆಗ ಕೃಷ್ಣದೇವರಾಯನು ವಿಜಯನಗರದ ವಜ್ರಸಿಂಹಾಸನವನ್ನು ಅಲಂಕರಿಸಿ ಪರಿಪಾಲನೆ ಮಾಡುತ್ತಿದ್ದನು. ಕಡಪ ಜಿಲ್ಲೆ ಪುಲಿವೆಂದಲದ ಮತ್ತೊಂದು ಶಾಸನವು ಶಕ ವರ್ಷ 1431. ಶುಕ್ಲ ಅಂದರೆ ಆಗಸ್ಟ್–ಸೆಪ್ಟೆಂಬರ್ 1509ರದು ಕೃಷ್ಣದೇವರಾಯನು ವಿಜಯನಗರದ ವಜ್ರಸಿಂಹಾಸನಸ್ಥನಾಗಿ ಪರಿಪಾಲನೆ ಮಾಡುತ್ತಿದ್ದನೆಂದು ಸಾರುತ್ತದೆ. ಅಂದರೆ ಕೃಷ್ಣದೇವರಾಯನು 22–07–1509 ಮತ್ತು 26–07–1509ರ ಕಾಲಾವಧಿಯಲ್ಲಿ ರಾಜ್ಯಸೂತ್ರಗಳನ್ನು ವಹಿಸಿಕೊಂಡುದು ಸತ್ಯ. ಈ ಶಾಸನಗಳಲ್ಲಿ ಆತನ ಪಟ್ಟಾಭಿಷೇಕದ ವಿಷಯವು ಹಂಪಿಯ ಶಾಸನ, ಶಕವರ್ಷ 1430 (ತಪ್ಪು) ಸರಿಯೆಂದರೆ 1431 ಮಾಘ ಶು॥ 14 ಅಂದರೆ 24–01–1510. ಈ ಶಾಸನದಲ್ಲಿ ಪಟ್ಟಾಭಿಷೇಕ ಸಮಯದಲ್ಲಿ ಆತನು ನೀಡಿದ ದಾನ ದತ್ತಿಗಳ ವಿವರವಿದೆ. ಅಂದರೆ ಕೃಷ್ಣದೇವರಾಯನು ಅಧಿಕಾರ ವಹಿಸಿಕೊಂಡ ಆರು ತಿಂಗಳ ನಂತರ ಪಟ್ಟಾಭಿಷೇಕ ನಡೆದಿರಬೇಕು. ಈ ಶಾಸನವನ್ನು ಪರೀಕ್ಷಿಸಿದ ಹುಲ್ಷ್ ಅದು[39] ಪಟ್ಟಾಭಿಷೇಕದ ವರ್ಧಂತಿ ಆಗಿರಬಹುದೆಂದರು. ರಾಬರ್ಟ್ ಸಿವೆಲ್ಲರು ಈ ಅಭಿಪ್ರಾಯವನ್ನು ಅನುಮೋದಿಸಿದರು.[40] ಆದರೆ **ವಿಕ್ರವಂದಿಯ ಶಾಸನ** 22–07–1503ರದು ಸ್ಪಷ್ಟ ಇರುವುದರಿಂದ ಹಂಪಿಯ ಶಾಸನ ಕೇವಲ ಆರು ತಿಂಗಳ ನಂತರ ಹಾಕಲ್ಪಟ್ಟದ್ದಾಗಿದೆ. ಆದ್ದರಿಂದ ಹಂಪಿಯ ಶಾಸನವು ಪಟ್ಟಾಭಿಷೇಕದ ವಾರ್ಷಿಕೋತ್ಸವದ ಶಾಸನವಲ್ಲ.

ವೀರನರಸಿಂಹನ ಕಾಲಾವಧಿಯ ಅಂತಿಮ ಶಾಸನದ ದಿನಾಂಕ ಅಂದರೆ ಶಕವರ್ಷ 1431ರ ವೈಶಾಖ[41] (ಸಾಳುವ ತಿಮ್ಮರಸರ ತಾಡಪತ್ರಿಯ ಶಾಸನ) ಮತ್ತು ಕೃಷ್ಣದೇವರಾಯನ ಪ್ರಥಮಶಾಸನ (ಅದೇ ವರ್ಷದ ಕಾರ್ತೀಕ ಮಾಸ) ಪುಲಿವೆಂದಲ ಶಾಸನ[42] ಆಧಾರದ ಮೇಲೆ ಹೆಚ್. ಕೆ. ಶಾಸ್ತ್ರಿ ಅವರು ಕೃಷ್ಣದೇವರಾಯನು ಈ ತಿಂಗಳುಗಳಲ್ಲಿ ಪಟ್ಟಾಭಿಷಿಕ್ತನಾಗಿಬೇಕು. ಹಂಪಿಯ ಶಾಸನವನ್ನು ಕೆಲಕಾಲಾನಂತರ ಸ್ಥಾಪಿಸಿರಬೇಕು. ಅಂದರೆ 24–01–1510 ರಂದು ಆದರೆ ಗುಳ್ಯದ ಶಾಸನವು ಕೃಷ್ಣದೇವರಾಯನ ಆಡಳಿತದ ಪ್ರಾರಂಭವನ್ನು ಕಾರ್ತೀಕದ ಬದಲು ಶ್ರಾವಣಕ್ಕೆ ಅಂದರೆ ಮೂರು ತಿಂಗಳು ಮೊದಲಿಗೇ ಗುರುತಿಸುತ್ತದೆ. (ಅಕ್ಟೋಬರ್ ಬದಲು ಜುಲೈಗೆ)



**ವಿಜಯನಗರ ಸಾಮ್ರಾಜ್ಯಮು**[43] ಇಮ್ಮಡಿ ವೆಂಕಟಪತಿರಾಯನ ಆಣತಿಯಂತೆ **ಅಠವಣಂ** ಅಧಿಕಾರಿಗಳು ತಯಾರಿಸಿದ ವರದಿಯಂತೆ ಕೃಷ್ಣದೇವರಾಯನ ಪಟ್ಟಾಭಿಷೇಕವು ಅವನಿ ಮಾಸದ ಶುಕ್ಲಪಕ್ಷದ **ಶ್ರೀಜಯಂತಿಯ** ದಿನ ಚಾಲ್ತಿ 1432– 8–08–1509 ರಂದು ನಡೆಯಿತೆಂದು ತೀರ್ಮಾನಿಸಿದ್ದಾರೆ. ಗುಳ್ಯಂ ಶಾಸನವೂ, ವಿಜಯನಗರ ಸಾಮ್ರಾಜ್ಯವೂ, ಹೆಚ್. ಕೆ. ಶಾಸ್ತ್ರಿ ಅವರ ಹಂಪಿ ಶಾಸನದ ಮೇಲಿನ ತೀರ್ಮಾನವನ್ನು ಬೆಂಬಲಿಸುತ್ತವೆ. ಆದ್ದರಿಂದ ಶ್ರೀ ಕೃಷ್ಣದೇವರಾಯರ ಪಟ್ಟಾಭಿಷೇಕಕ್ಕೆ 8–8–1509 ಶ್ರೀಜಯಂತಿಯ ಮುಹೂರ್ತವನ್ನೇ ಆರಿಸಿರಬೇಕು ಎಂಬುದು ಸೂಕ್ತವೆನಿಸುತ್ತದೆ. ವೀರನರಸಿಂಹನ ಮರಣಾ ನಂತರ ಅದೇ ಅತ್ಯಂತ ಪವಿತ್ರ ದಿವಸವಾಗಿರಬೇಕು.

ಈ ಎಲ್ಲ ಚರ್ಚೆಯ ನಂತರ ತುಳುವಂಶದ ಐತಿಹಾಸಿಕ ಪುರುಷರ ಬಗ್ಗೆ ವಂಶಾವಳಿಯನ್ನು ಕೆಳಗಿನಂತೆ ರಚಿಸಬಹುದಾಗಿದೆ.

| | |
|---|---|
| ಕ್ರಿ. ಶ. 1457–1482 | – ಸಾಳುವ ನರಸಿಂಹನ ಸೇವೆಯಲ್ಲಿ ತುಳುವ ಈಶ್ವರ ನಾಯಕ |
| 1482 | – ತುಳುವ ನರಸನಾಯಕನು ಸಾಳುವ ನರಸಿಂಹನ ಮಹಾಸೇನಾಪತಿಯಾದದ್ದು |
| 1491 | – ನರಸನಾಯಕನು ರಾಜರಕ್ಷಕನಾದದ್ದು |
| 1503 | – ನರಸನಾಯಕನ ಮರಣ |
| ನವೆಂಬರ್ 1503 | – ವೀರನರಸಿಂಹನು ಪ್ರಧಾನಿ ಮತ್ತು ರಾಜರಕ್ಷಕನಾದುದು |
| ಮಾರ್ಚ–ಆಗಸ್ಟ್ 1505 | – ವೀರನರಸಿಂಹನು ವಿಜಯನಗರದ ಸಾಮ್ರಾಟನಾದದ್ದು |
| ಜುಲೈ 22–26 1509 | – ವೀರನರಸಿಂಹನ ಮರಣ |

**ಟಿಪ್ಪಣಿಗಳು**

1. ARE 107/1921
2. ಅದೇ 244/1912
3. ಅದೇ 408/1921
4. ಅದೇ 401/1912
5. ಅದೇ 198/1904

6. ಫರ್ಗಾಟನ್ ಎಂಪೈರ್ – ನೂನಿಜ್ – ಪು. 293–294
7. ಶ್ರೀರಾಮ ಶರ್ಮ, ಸಾಳುವವಂಶ ಪು. 75–76
8. ARE 239/1932-39
9. MAC 1504-30 ಪು. 234
10. ಫರ್ಗಾಟನ್ ಎಂಪೈರ್ ಪು. 296
11. ಅದೇ
12. ಮುಂದಿನ ಪ್ಯಾರಾಗಳಲ್ಲಿ ಚರ್ಚಿಸಲಾಗಿದೆ
13. ಎ. ಕ. IV KP. 64
14. M.A.R. ಪು. 18-21
15. ARE 357/1912
16. ಅದೇ 321/1935-36
17. ಎ. ಕ. IV KP. 64
18. ARE - 1929-30 ಪು. 35
19. ARE II ಪ್ಯಾರಾ 40/1929 ಮತ್ತು ಬದಲಾದ ವಾದಕ್ಕೆ ARE II –1931–32 ಪು. 64–65
20. ARE II ಪ್ಯಾರಾ 40/1929–30
21. ARE 412/1913. 240 & 243/1939 ಮತ್ತು 177/1940
22. ಅದೇ 190/1940–41
23. ಎ.ಕ. IV ಗುಂಡ್ಲು 67 ಪು. 47. 147/1914
24. ARE 354/1912
25. V.R.I. CUD 462
26. 330/1921
27. ARE 1921 ರಲ್ಲಿ ಫೆಬ್ರುವರಿ 5 ಎಂದು ಗುರುತಿಸಲಾಗಿದೆ. ಆದರೆ ದಕ್ಷಿಣ ಭಾರತದ ಐತಿಹಾಸಿಕ ಶಾಸನಗಳಲ್ಲಿ ಅದನ್ನು ಫೆಬ್ರುವರಿ 11 ಎನ್ನಲಾಗಿದೆ.
28. ಹಿಸ್ಟಾರಿಕಲ್ ಇನ್ಸ್ಕ್ರಿಪ್ಷನ್ಸ್ ಆಫ್ ಸೌತ್ ಇಂಡಿಯಾ ಪು. 235
29. ಫರ್ದರ್ ಸೋರ್ಸಸ್ II 97
30. ಅದೇ ಪು. 216
31. ಅದೇ ಅಧ್ಯಾಯ XVI ಪು. 177
32. ಎ. ಕ. X GD 38
33. ಅದೇ ಮುಳಬಾಗಿಲು 242
34. ಅದೇ X. I. GD. 77
35. ARE 289/1915
36. S.I.I. ಸಂ. IX 77, 703/1919
37. ಎ. ಇಂಡಿಕಾ XIII ಪು. 128–129
38. ಎ. ಕ. XI HK 94-99, 127-8
39. ಎ. ಇಂಡಿಕಾ I ಪುಟ. 361–371
40. ಫರ್ಗಾಟನ್ ಎಂಪೈರ್ ಪು. 120
41. S.I.I. IV 803
42. ಅದೇ XVI-48
43. ಫರ್ದರ್ ಸೋರ್ಸಸ್ II-199

## ಅಧ್ಯಾಯ – ೪

# ತುಳುವರ ಅಭ್ಯುದಯ

ತುಳುವ ವಂಶದ ಮೂಲಪುರುಷನ ಬಗ್ಗೆ ಲಭಿಸುವ ಐತಿಹಾಸಿಕ ಆಧಾರಗಳ ಪ್ರಕಾರ **ತಿಮ್ಮನೇ** ಮೂಲಪುರುಷ ಎಂದು ನಿರ್ಧರಿಸಬಹುದು. **ವರಾಹಪುರಾಣದ** ಪ್ರಕಾರ ತುಳು ದೇಶದಲ್ಲಿ ತಿಮ್ಮನೇ ಅಲ್ಲಿಯ ಸಮಸ್ತ ಭೂಪಾಲರಲ್ಲಿ ಶ್ರೇಷ್ಠನು. ಆತನು ವಿಶಿಷ್ಠ ಗುಣಗಳ ಧೀರನೂ ಪ್ರತಾಪಿಯೂ ಆಗಿರಬಹುದು. ಅಲ್ಲದೇ ಆತನು ಮಹಾರಾಷ್ಟ್ರ, ಗಾಂಧಾರ ಮತ್ತು ಲಾಟ ದೇಶಗಳನ್ನು ಜಯಿಸಿದನೆಂದು ವರ್ಣಿಸಲಾಗಿದೆ. ತುಳುವ ತಿಮ್ಮನ ಈ ಸಾಧನೆಗಳ ಬಗ್ಗೆ ನಂಬಲರ್ಹ ಪುರಾವೆಗಳಿಲ್ಲ. ಪ್ರಾಯಃ ಸಾಳುವ ನರಸಿಂಹನ ಸೇವೆಯಲ್ಲಿ ಆತನು ಅತ್ಯಂತ ಪ್ರಸಿದ್ಧ ಪುರುಷನಾಗಿರಬಹುದು. ತಿಮ್ಮನಿಗೆ ಅವನ ಪತ್ನಿ ದೇವಕಿಯಿಂದ ಇಬ್ಬರು ಪುತ್ರರಿದ್ದರು. ತಿಮ್ಮನ ತರುವಾಯ ಮಗನಾದ ಈಶ್ವರನು ತಂದೆಯ ಪದವಿಯನ್ನು ಪಡೆದು ತನ್ನ ಪರಾಕ್ರಮದಿಂದ ಸಾಳುವ ನರಸಿಂಹನ ಮಹಾಸೇನಾಪತಿಯಾದನು. ಆಗ ಸಾಳುವ ನರಸಿಂಹನು ಚಂದ್ರಗಿರಿ ರಾಜ್ಯದ ಪ್ರಭುವಾಗಿದ್ದನು.

**ಈಶ್ವರ :** ಸಾಳುವ ನರಸಿಂಹನು ಕ್ರಿ.ಶ. 1448[1]ರಲ್ಲಿ ತಮ್ಮದಾದ ಚಂದ್ರಗಿರಿ ರಾಜ್ಯದ ಪ್ರಭುವಾದನು ಆತನಿಗೆ ದಕ್ಷಿಣ ಆರ್ಕಾಟ್ ಜಿಲ್ಲೆಯ ತಿರುಕ್ಕೊಯಿಲೂರು ತಾಲೂಕಿನ ನಗರದಲ್ಲಿಯೂ ಜಹಗೀರು ಇತ್ತು.

ವಿಜಯನಗರದ ಕೇಂದ್ರದ ಆಡಳಿತವು ದುರ್ಬಲವಾಗಿದ್ದರಿಂದ ಸಾಳುವನು ಚಿತ್ತೂರಿನ ಮೇಲೆಯೂ ಅಧಿಕಾರ ಸ್ಥಾಪಿಸಿದನು ಮತ್ತು ವಿರೂಪಾಕ್ಷರಾಯನ ಆಳ್ವಿಕೆಯ ಆರಂಭದ ಹೊತ್ತಿಗೆ ಉತ್ತರ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಗಳೂ ಕೋಲಾರ ಜಿಲ್ಲೆಯೂ ಅವನ ಅಧೀನವಾಗಿದ್ದವು. ಸುಮಾರು ಈ ಸಮಯದಲ್ಲಿ ಈಶ್ವರ ನಾಯಕನು ಸಾಳುವ ನರಸಿಂಹನ ಸೇನೆಯಲ್ಲಿ ಸೇರಿದನು. ಸಾಳುವ ನರಸಿಂಹನು ಸ್ವತಃ ತನ್ನ ಸೇನೆಯನ್ನು ಸೇರಲು ಈಶ್ವರ ನಾಯಕನನ್ನು ಆಹ್ವಾನಿಸಿದನೆಂದು **ವರಾಹಪುರಾಣ**ವು ತಿಳಿಸುತ್ತದೆ.[2]

ಈಶ್ವರನಾಯಕನು ಸಾಳುವ ನರಸಿಂಹನ ಆಪ್ತನಾದನಲ್ಲದೆ ಸಾಮ್ರಾಜ್ಯದ ರಾಜಕೀಯದಲ್ಲಿ ಪ್ರಧಾನ ಪಾತ್ರವಹಿಸಿದನು. ಈಶ್ವರನು ಸಾಳುವ ನರಸಿಂಹನ ಅಧೀನದಲ್ಲಿದ್ದು ಮಾಡಿದ ಸಾಧನೆಗಳನ್ನು **‘ವರಾಹಪುರಾಣ’**ವು ವರ್ಣಿಸುತ್ತದೆ.[3] ವರಾಹಪುರಾಣದ ಪ್ರಕಾರ ಈಶ್ವರನು ಉದಯಗಿರಿ, ಹುತ್ತಾರಿ, ಗಂಡಿಕೋಟ, ಪೆನುಗೊಂಡ, ಬೆಗ್ಗುಲೂರು, ಕೋವೆಲ,

ನೆಲ್ಲೂರು, ಕುಂದಾನಿ, ಗೊಡುಗು ಚಿಂತ, ಬಾಗೂರು, ನರಗೊಂಡ, ಅಮ್ರು ಮತ್ತು ಶ್ರೀರಂಗಪಟ್ಟಣಗಳನ್ನು ಜಯಿಸಿದನಂತೆ.

ಈ ಸ್ಥಳಗಳನ್ನು ಈಶ್ವರನಾಯಕನು ಜೈಸಿದ ಬಗ್ಗೆ ಬೇರೆ ಆಧಾರಗಳು ಲಭಿಸಿರುವುದರಿಂದ ವಿಶ್ವಸನೀಯವಾಗಿದೆ. ಸಾಳುವ ನರಸಿಂಹನ ದಿಗ್ವಿಜಯ ಯಾತ್ರೆಗಳಲ್ಲಿ ಈಶ್ವರನು ಮುಂಚೂಣಿಯಲ್ಲಿದ್ದು ತನ್ನ ಪ್ರಭುವಿಗೆ ವಿಜಯವನ್ನೂ, ಪ್ರಖ್ಯಾತಿಯನ್ನೂ ಗಳಿಸಿದನು.

ದುರ್ಬಲನಾದ ಸಂಗಮ ಅರಸು ಮಲ್ಲಿಕಾರ್ಜುನ ರಾಯನ ಪರಿಸ್ಥಿತಿಯಿಂದ ಲಾಭಗಳಿಸಲು ಗಜಪತಿಗಳು ವಿಜಯನಗರ ರಾಜ್ಯದಲ್ಲಿ ಪ್ರವೇಶಿಸಿದರು. ಕ್ರಿ.ಶ. 1460ರ ಮೊದಲೇ ಉದಯಗಿರಿ ಗಜಪತಿಗಳ ಪಾಲಾಯಿತು. ಅನಂತರ ಕ್ರಮವಾಗಿ ಚಂದ್ರಗಿರಿ, ಕಾಂಚೀಪುರಂ, ಪಡೈವೀಡು, ವಲುದಿಲಂಪಟ್ಟ, ಉಸವೀಡಿ, ತಿರುವನೂರು ಮತ್ತು ತಿರುಚಿನಾ ಪಳ್ಳಿಗಳು ಹಂವೀರಪುತ್ರ ದಕ್ಷಿಣ ಕಪಿಲೇಶ್ವರ ಕುಮಾರ ಮಹಾಪಾತ್ರನ ಪಾಲಾದವು. ಮಲ್ಲಿಕಾರ್ಜುನರಾಯರು ಈ ಪ್ರದೇಶಗಳನ್ನು ಮತ್ತೆ ವಶಪಡಿಸಿಕೊಳ್ಳಲು ಸಾಳುವ ನರಸಿಂಹನಿಗೆ ಆಜ್ಞೆ ಮಾಡಿದರು. ಸಾಳುವನು ಒರಿಯರನ್ನು ಧೂಳೀಪಟಮಾಡಿದನು. ಒರಿಯರು ಪಲಾಯನ ಮಾಡಿ ಉದಯಗಿರಿಯಲ್ಲಿದ್ದು ಸಾಳುವನಿಗೆ ಬಲವಾಗಿ ಎದುರಿಸಿದರು.

ಮಲ್ಲಿಕಾರ್ಜುನರಾಯನು ಕ್ರಿ.ಶ. 1467 ಫೆಬ್ರುವರಿಯಲ್ಲಿ ಶಿವಲೋಕ ಸೇರಿದನು. ಆಗ ಆತನ ಸೋದರ ಸಂಬಂಧಿ ಇಮ್ಮಡಿ ವಿರೂಪಾಕ್ಷನು ಸಿಂಹಾಸನವನ್ನು ಆಕ್ರಮಿಸಿದನು. ವಿರೂಪಾಕ್ಷನು ಕಳಿಂಗದವರೊಂದಿಗೆ ಈ ಘರ್ಷಣೆಯ ಬಗ್ಗೆ ಲಕ್ಷ್ಯಕೊಡಲಿಲ್ಲ. ಆದ್ದರಿಂದ ಸಾಳುವ ನರಸಿಂಹನೇ ತನ್ನ ಪ್ರದೇಶವನ್ನು ಕಳಿಂಗದವರಿಂದ ಮುಕ್ತಗೊಳಿಸಬೇಕಾಯಿತು. ಅತ್ತ ಕಪಿಲೇಶ್ವರ ಗಜಪತಿಯು ವ್ಯಾಧಿಗ್ರಸ್ಥನಾಗಿದ್ದನು. ಕ್ರಿ.ಶ. 1470ರಲ್ಲಿ ಕಪಿಲೇಶ್ವರನ ಸಾವಿನ ನಂತರ ಸಿಂಹಾಸನಕ್ಕಾಗಿ ಆತನ ಮಕ್ಕಳಲ್ಲಿ ಘರ್ಷಣೆ ಪ್ರಾರಂಭವಾಯಿತು. ಇದು ಸಾಳುವನಿಗೆ ಅವಶ್ಯಕವಾದ ಸದವಕಾಶ ಒದಗಿಸಿತು.[4]

**'ಸಾಳುವಾಭ್ಯುದಯಂ'** ಕಾವ್ಯದಲ್ಲಿ ನರಸಿಂಹನು ಗಜಪತಿಯನ್ನೂ, ಅವನ ಕೋಟೆಯನ್ನು ವಶಪಡಿಸಿಕೊಂಡನೆಂದು ತಿಳಿಸಲಾಗಿದೆ. ಆದರೆ ಈ ಕೋಟೆಯ ಹೆಸರನ್ನು ತಿಳಿಸಿಲ್ಲ.[5] **ವರಾಹಪುರಾಣಂ** ಕಾವ್ಯದಲ್ಲಿ ಈಶ್ವರನಾಯಕನು ಉದಯಗಿರಿ ಕೋಟೆಯನ್ನು ವಶಪಡಿಸಿಕೊಂಡನೆಂದು ಹೇಳಲಾಗಿದೆ.[6] ಪ್ರಾಯಃ ಸಾಳುವ ನರಸಿಂಹನು ಈಶ್ವರನಾಯಕನ ಅಧಿಪತ್ಯದಲ್ಲಿ ತನ್ನ ಸೇನೆಯನ್ನು ಉದಯಗಿರಿಯನ್ನು ಜಯಿಸಲು ಕಳಿಸಿರಬೇಕು. ಈ ದಿಗ್ವಿಜಯ ಯಾತ್ರೆಯಲ್ಲಿ ಈಶ್ವರನಾಯಕನು ಉದಯಗಿರಿ ಮತ್ತು ನೆಲ್ಲೂರು ವಶಪಡಿಸಿಕೊಂಡನು. ಚೆಂಗಲ್‌ಪೇಟೆ ಜಿಲ್ಲೆಯ **ಆಮುರು** ಮತ್ತು ಶ್ರೀರಂಗಂ ಜಿಲ್ಲೆಯ **ಕೋವೆಲ್ಲ**ಗಳನ್ನು ಕೂಡಾ ಈಶ್ವರನಾಯಕನು ಸಾಳುವ ನರಸಿಂಹನ ಕ್ರಿ.ಶ. 1471ರ ದಿಗ್ವಿಜಯ ಯಾತ್ರೆಯಲ್ಲಿ ಗೆದ್ದಿರಬೇಕು. ಸೇಲಂನ ಕುಂದಾನಿ, ಬೆಂಗಳೂರಿನ ಶ್ರೀರಂಗಪಟ್ಟಣ, ಪೆನುಗೊಂಡ ಮತ್ತು ಕಡಪ ಜಿಲ್ಲೆಯ ಗಂಡಿಕೋಟೆಗಳನ್ನು ಕೂಡಾ ಕ್ರಿ.ಶ. 1481–85ರಲ್ಲಿ ತನ್ನ ದೊರೆಗಾಗಿ



ಈಶ್ವರನು ಗೆದ್ದುಕೊಂಡಿರಬೇಕು. ಆ ಭಾಗದ ಸಾಮಂತರು ನರಸಿಂಹನಿಗೆ ಮಣಿದು ವಿಜಯನಗರ ರಾಯನ ಪರಮಾಧಿಕಾರವನ್ನು ಅಂಗೀಕರಿಸಿದರು. ಆ ಸಮಯದಲ್ಲಿ ವಿಜಯನಗರ ಸಾಮ್ರಾಟರ ಬಲಹೀನತೆಯನ್ನು ಗಮನಿಸಿದ ಉಮ್ಮತ್ತೂರು ಅರಸರು ತಮ್ಮ ತಲೆಯೆತ್ತಿ ಶ್ರೀರಂಗಪಟ್ಟಣ ಮತ್ತು ಶಿವನ ಸಮುದ್ರದ ಮೇಲೆ ಹಿಡಿತ ಸಾಧಿಸಿದರು. ಈ ಕಾವೇರಿ ಕಣಿವೆ ಪ್ರದೇಶದ ಮೇಲೆ ಪುನಃ ಅಧಿಕಾರವನ್ನು ಸ್ಥಾಪಿಸಲು ನರಸಿಂಹನು ಉದ್ದೇಶಿಸಿದಾಗ ಈಶ್ವರನು ಶ್ರೀರಂಗಪಟ್ಟಣ ಮತ್ತು ಶಿವನಸಮುದ್ರಗಳನ್ನು ವಶಪಡಿಸಿಕೊಂಡಿರಬೇಕು. **ವರಾಹ ಪುರಾಣ**ದಲ್ಲಿ ಈಶ್ವರನು ವಶಪಡಿಸಿಕೊಂಡ ದುರ್ಗಗಳಲ್ಲಿ ಪೆನುಗೊಂಡೆಯ ಹೆಸರಿದೆ. **ಜೈಮಿನಿ ಭಾರತ**ದಲ್ಲಿ ಈಶ್ವರನು ಪಕ್ಕೆಲನ (ಫಕ್ರುಲ್ ಮುಲ್ಕ್) ಸೇನೆಯನ್ನು, ಮತ್ತಿತರ ವೈರಿಸೇನೆಗಳನ್ನು ಸೋಲಿಸಿದ ವಿವರವಿದೆ. ಮೂರನೆಯ ಮಹಮ್ಮದ್‌ಷಾನು ಫಕ್ರುಲ್ ಮುಲ್ಕ್ ಮತ್ತು ಯುಸುಫ್ ಆದಿಲ್‌ಖಾನನ ಸೈನ್ಯಗಳು ಪೆನುಗೊಂಡೆಗೆ ಮುತ್ತಿಗೆ ಹಾಕಿದ್ದವು. ವಿಜಯನಗರ ಸಾಮ್ರಾಜ್ಯದ ಹೃದಯ ಭಾಗವನ್ನು ಆಕ್ರಮಿಸಿದ್ದ ಮುಸ್ಲಿಂ ಸೇನೆಗಳನ್ನು ಈಶ್ವರನು ಸೋಲಿಸಿ ಓಡಿಸಿದನು. ವರಾಹಪುರಾಣದಲ್ಲಿ ಹೇಳಿದಂತೆ ತೆಲಂಗಾಣದಲ್ಲಿ ಪುರುಷೋತ್ತಮ ಗಜಪತಿ ಮತ್ತು ಆತನ ಸೋದರ ಹಂವೀರ ಸೆಣಸಾಡುತ್ತಿದ್ದರು. ಇದರಲ್ಲಿ ಮೂರನೇ ಮಹಮ್ಮದ್‌ಷಾನು ಹಂವೀರನಿಗೆ ಬೆಂಬಲವಾಗಿ ನಿಂತ ಕಾರಣ ಈಶ್ವರನು ಪುರುಷೋತ್ತಮ ಗಜಪತಿಯ ಪರವಾಗಿ ಯುದ್ಧಮಾಡಿ **ನರಗೊಂಡ**ವನ್ನು ಗೆದ್ದನು.[7]

**ಕಂದುಕೂರು ಯುದ್ಧ :** ಕ್ರಿ.ಶ. 1480ರಲ್ಲಿ ಕೊಂಡವೀಡು ಪ್ರಜೆಗಳು ಮೂರನೇ ಮಹ್ಮದ್‌ಷಾ ವಿರುದ್ಧ ಬಂಡೆದ್ದರು. ಈ ಸುಲ್ತಾನನ ಅಧಿಕಾರವನ್ನು ಧಿಕ್ಕರಿಸಿದ ಜನರು ನರಸಿಂಹನ ರಕ್ಷಣೆ ಕೋರಿದರು. ಈ ಕಾರಣ ಸುಲ್ತಾನನು ನರಸಿಂಹನ ರಾಜ್ಯದ ಮೇಲೆ ದಾಳಿ ಮಾಡಿರಬೇಕು. ಮೊದಲಿಗೆ ಸುಲ್ತಾನನು **ಕೊಂಡವೀಡಿನ** ಮೇಲೆ ದಾಳಿ ಮಾಡಿದನು. ಕೊಂಡವೀಡಿನ ಜನರು ಸುಲ್ತಾನನ ಕ್ಷಮಾದಾನ ಪಡೆದು ಸುಮ್ಮನಾದರು. ಸುಲ್ತಾನನು ಇಲ್ಲಿರುವಾಗ ಕಾಂಚೀಪುರದ ದೇವಾಲಯಗಳ ಬಗ್ಗೆ ಮತ್ತು ಈ ಆಲಯಗಳ ಸಂಪತ್ತಿನ ಬಗ್ಗೆ ತಿಳಿದನು.[8] ಸುಲ್ತಾನನು ಧಿಡೀರನೇ ಕಾಂಚೀಪುರದ ಮೇಲೆ ದಾಳಿ ಮಾಡಿ ಧನಕನಕಾದಿಗಳನ್ನು ದೋಚಿಕೊಂಡು ಶೀಘ್ರವಾಗಿ ವಾಪಸಾದನು. ಆದರೆ ಈ ರೀತಿ ಅಪಹರಿಸಿದ ಸಂಪತ್ತಿನೊಂದಿಗೆ ಸುಲ್ತಾನನು ತನ್ನ ರಾಜಧಾನಿಗೆ ಮರಳಲು ಸಾಧ್ಯವಾಗಲಿಲ್ಲ. ಈಶ್ವರ ನಾಯಕನು ಮಿಂಚಿನ ವೇಗದಲ್ಲಿ ದಾಳಿ ಮಾಡಿ ಕಂದುಕೂರು ಸಮರದಲ್ಲಿ ಮುಸ್ಲಿಂ ಸೈನ್ಯವನ್ನು ತುಂಡು ತುಂಡು ಮಾಡಿದನು.[9] ಮುಸ್ಲಿಂ ಬಿಡಾರವನ್ನು ಸಂಪೂರ್ಣ ಲೂಟಿ ಮಾಡಲಾಯಿತು. ಕಂದುಕೂರಿನ ಈ ಯುದ್ಧದಿಂದ ನರಸಿಂಹನ ಪ್ರಖ್ಯಾತಿ ಸ್ಥಿರವಾಯಿತು. ತುಳುವರ ಹಿರಿಮೆಯೂ ಜನಜನಿತವಾಯಿತು.

**ನರಸನಾಯಕ :** ಈಶ್ವರ ನಾಯಕನ ಪ್ರೀತಿಯ ಪುತ್ರನಾದ ನರಸನಾಯಕನು ನುರಿತ ಸೇನಾಪತಿಯಾಗಿ ಅನುಭವಗಳಿಸಿದ್ದನು. ಈಶ್ವರನಾಯಕನ ಮರಣಾನಂತರ ನರಸನಾಯಕನು ತನ್ನ ತಂದೆಯ ಸ್ಥಾನದಲ್ಲಿ ಸಾಳುವ ನರಸಿಂಹನ ಸೇನಾಪತಿಯಾಗಿ

ನೇಮಕವಾದನು. ಅವನು ಪ್ರಭುವಿನ ಅತ್ಯಂತ ವಿಶ್ವಾಸಪಾತ್ರ ಸೇನಾಪತಿಯೆನಿಸಿದನು. ಸಾಳುವ ನರಸಿಂಹನ ಪರವಾಗಿ ಪ್ರೌಢದೇವರಾಯರಿಂದ ವಿದ್ಯಾಪುರಿಯನ್ನು ಜೈಸಲು ನರಸನಾಯಕನನ್ನೇ ಕಳಿಸಲಾಯಿತು. ತತ್ಪರಿಣಾಮವಾಗಿ ಸಾಳುವ ನರಸಿಂಹನು ವಿಜಯನಗರದ ಸಾಮ್ರಾಟನಾದನು. ಆಗ ನರಸ ನಾಯಕನೇ ವಿಜಯನಗರದ ಮಹಾಸೈನ್ಯದ ಅಧಿಪತಿಯಾದನು.

ನೂನಿಜ್ ಪ್ರಕಾರ ಸಾಳುವ ನರಸಿಂಹನು ತನ್ನ ಮರಣ ಸಮಯದಲ್ಲಿ ಸಾಮ್ರಾಜ್ಯವನ್ನೂ, ತನ್ನ ಪುತ್ರರನ್ನು ನರಸನಾಯಕನಿಗೆ ಒಪ್ಪಿಸಿ "ನನ್ನ ಪುತ್ರರಲ್ಲಿ ಸಮರ್ಥನಾದವನನ್ನು ಸಾಮ್ರಾಟನನ್ನಾಗಿ ಮಾಡಬೇಕು" ಎಂದು ತಿಳಿಸಿದನಂತೆ.[10] ಸಾಳುವ ನರಸಿಂಹನಿಗೆ ಎಷ್ಟು ಜನ ಪುತ್ರರೆಂಬ ಬಗ್ಗೆ ಗೊಂದಲವಿದೆ. ನ್ಯೂನಿಜ್ ಪ್ರಕಾರ ಸಾಳುವ ನರಸಿಂಹನ ಅಂತ್ಯ ಕಾಲದಲ್ಲಿ ಅವನಿಗೆ ಇಬ್ಬರು ಪುತ್ರರಿದ್ದರು. ಸಾಳುವ ನರಸಿಂಹನ **ತಿರುಮಲದ ಶಾಸನದ** ಪ್ರಕಾರ – **ತಿರುಕ್ಕೋಡಿ ತಿರುನಾಳ್** ಸಮಯದಲ್ಲಿ **ಅಮೃತಪಡಿಯನ್ನು,** ತನ್ನ ಹೆಸರಿನಲ್ಲೂ, ಕುಮಾರ ನರಸಯ್ಯ, ಚಿಕ್ಕ ತಂಗಮನ್ ಮತ್ತು ಪೆರಿಯ ತಂಗಮನ್ ಹೆಸರಿನಲ್ಲಿ ಮಾಡಬೇಕು ಇದರಿಂದ ನೂನಿಜ್ ಸಾಳುವ ನರಸಿಂಹನ ಪುತ್ರರ ಬಗ್ಗೆ ಹೇಳಿದ ಅಭಿಪ್ರಾಯದ ಬಗ್ಗೆ ಅನುಮಾನ ಉಂಟಾಗುತ್ತದೆ. ಸಾಧು ಸುಬ್ರಹ್ಮಣ್ಯ ಶಾಸ್ತ್ರಿಗಳ ಪ್ರಕಾರ ಕುಮಾರ ನರಸಯ್ಯನೇ ಇಮ್ಮಡಿ ನರಸಿಂಹ. ಅವರು ಸಾಳುವ ನರಸಿಂಹನ ಮೂವರು ಪುತ್ರರ ಪೈಕಿ ಕಿರಿಯನ ವಯಸ್ಸು ಕನಿಷ್ಟ 25 ವರ್ಷ ಇರಬಹುದು. ಆಗ ಕುಮಾರ ನರಸಯ್ಯಾ ಅಥವಾ ವೀರನರಸಿಂಹನು ತಂದೆಯ ನಂತರ ವಿಜಯನಗರದ ಸಿಂಹಾಸನವನ್ನೇರಿದಾಗ ಮೇಲಿನ ಲೆಕ್ಕಾಚಾರದ ಪ್ರಕಾರ ಕ್ರಿ.ಶ. 1498ರಲ್ಲಿ 35 ವರ್ಷದವನಾಗಿರಬೇಕು. ಸರಾಸರಿ ಸೋದರರಲ್ಲಿ ಮೂರು ವರ್ಷದ ಅಂತರವಿದ್ದಿರಬಹುದು. ಕ್ರಿ. ಶ. 1493 ಅಥವಾ ಶಕವರ್ಷ 1414ರಿಂದಲೇ ಇಮ್ಮಡಿ ನರಸಿಂಹನ ಶಾಸನಗಳು ಲಭಿಸಿರುವುದರಿಂದ, ಸಾಳುವ ನರಸಿಂಹನ ಮರಣದ ದಿನಾಂಕ ಇನ್ನೂ ಹಿಂದೆ ಹೋಗುತ್ತದೆ. ಅಂದರೆ ಕ್ರಿ.ಶ. 1493ರಲ್ಲಿ ಇಮ್ಮಡಿ ನರಸಿಂಹನ ಪ್ರಾಯ 30 ಅಥವಾ ಅದಕ್ಕೂ ಹೆಚ್ಚು ಇರಬಹುದು.[11]

ಆದರೆ ಇಮ್ಮಡಿ ನರಸಿಂಹನ ಪ್ರಾಯದ ಬಗ್ಗೆ ಶಾಸ್ತ್ರಿಗಳ ಸೂಚನೆಗೆ ಬೇರಾವುದೇ ಆಧಾರ ಲಭಿಸಿಲ್ಲದ ಕಾರಣ ಅಂಗೀಕರಿಸಲು ಕಷ್ಟ. ಮೇಲಿನ ತಿರುಮಲ ಶಾಸನವನ್ನು ಪರಿಶೀಲಿಸಿದ ನಂತರ ನೇಲಟೂರ ವೆಂಕಟರಮಣಯ್ಯನವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. ಈ ಶಾಸನಗಳಿಂದ ನಮಗೆ ಸಾಳುವ ನರಸಿಂಹ ಮತ್ತು ಕುಮಾರ ನರಸಯ್ಯನ ಸಂಬಂಧದ ವಿಷಯ ತಿಳಿಯುವುದಿಲ್ಲ. ಇತರ ಶಾಸನಗಳ ಆಧಾರದ ಮೇಲೆ ಇಮ್ಮಡಿ ನರಸಿಂಹನ ಪ್ರಾಯವನ್ನು ನಿರ್ಧರಿಸಲು ಸಾಧ್ಯವಿಲ್ಲ. ಏಕೆಂದರೆ ಅವು ಸ್ಪಷ್ಟವಾಗಿ ಶಾಸನಕಾಲ ಹೊಂದಿವೆ. ಆದ್ದರಿಂದ ನೂನಿಜ್‌ನ ಮಾತುಗಳನ್ನು ಅನುಮಾನಿಸುವುದು ಕಷ್ಟ ಮತ್ತು ನೂನಿಜ್‌ನ ಅಭಿಪ್ರಾಯವು ಐತಿಹಾಸಿಕವಾಗಿ ಸರಿಯೆಂದು ಅಂಗೀಕರಿಸಬಹುದಾಗಿದೆ.[12] ಈ ಎಲ್ಲ ಆಕರಗಳ ಸೂಕ್ಷ್ಮವಾದ ಪರಿಶೀಲನೆಯಿಂದ ಸೂಕ್ತ ತೀರ್ಮಾನಕ್ಕೆ ಬರಬಹುದಾಗಿದೆ.



ಯುಸುಫ್ ಆದಿಲ್‌ಖಾನನು ಬಿಜಾಪುರದ ಸುಲ್ತಾನನಾದ ಮೇಲೆ, ವಿಜಯನಗರದ ಸೈನ್ಯವು ಮುದುಗಲ್ ಮತ್ತು ರಾಯಚೂರು ಕೋಟೆಗಳನ್ನು ಆಕ್ರಮಿಸಿದ ವಿಷಯದ ಬಗ್ಗೆ ಬರೆಯುತ್ತಾ ಫರಿಷ್ತಾ ರಾಯನಿನ್ನೂ ಬಾಲಕನಾಗಿದ್ದ ಕಾರಣ ಆತನು ಮಂತ್ರಿ ತಿಮ್ಮರಾಜನ ನೇತೃತ್ವದಲ್ಲಿ ಸೈನ್ಯವನ್ನು ಕಳಿಸಿದನು. ಕ್ರಿ.ಶ. 1491ರಲ್ಲಿ ಈ ಸೈನ್ಯವು ಸಾಕಷ್ಟು ಹಾನಿಮಾಡಿ ಈ ಎರಡು ಕೋಟೆಗಳನ್ನು ತಿಮ್ಮರಾಜನು ವಶಪಡಿಸಿಕೊಂಡನು.[13] ಕೆಲಸಮಯದ ನಂತರ ವಿಜಯನಗರದಲ್ಲಿ ಪರಿಸ್ಥಿತಿ ಸರಿಯಿಲ್ಲವೆಂದು ತಿಳಿದ ಯುಸುಫ್ ಆದಿಲ್ ರಾಯಚೂರನ್ನು ಪುನಃ ವಶಪಡಿಸಿಕೊಳ್ಳಲು ದಾಳಿ ಮಾಡಿದನು.[14] ಆದರೆ ದಾರಿಯಲ್ಲಿ ಅವನು ವ್ಯಾಧಿಗ್ರಸ್ಥನಾಗಿ ಎರಡು ತಿಂಗಳ ಕಾಲ ನೆಲಹಿಡಿದನು. ಈ ಅವಧಿಯಲ್ಲಿ ತಿಮ್ಮರಾಜನು ರಾಯನೊಂದಿಗಿನ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಂಡು ರಾಯಚೂರು ಕಡೆಗೆ ಸೈನ್ಯ ನಡೆಸಿದನು.[15] ಕ್ರಿ.ಶ. 1493ರ ಈ ಯುದ್ಧದಲ್ಲಿ ವಿಜಯನಗರದ ಸೈನ್ಯವು ಪರಾಜಿತವಾಗಿ ಹಿಂದಿರುಗಿತು. ತಿಮ್ಮರಾಜ ಮತ್ತು ರಾಯ ವಿಜಯನಗರದ ದಾರಿ ಹಿಡಿದರು. ಆದರೆ ದಾರಿಯಲ್ಲಿ ಬಾಲಕ ರಾಯನು ಯುದ್ಧದಲ್ಲಾದ ಗಾಯಗಳಿಂದ ಮೃತನಾದನು.[16] ಸಾಳುವ ನರಸಿಂಹನ ಪುತ್ರರ ಗತಿಯನ್ನು ತಿಳಿಯಲು ಈ ಎರಡು ಯುದ್ಧಗಳ ದಿನಾಂಕಗಳು ಮುಖ್ಯವಾಗಿವೆ. ಅಂದರೆ ಕ್ರಿ.ಶ. 1491ರಲ್ಲಿ ವಿಜಯನಗರದ ರಾಯನಿನ್ನೂ ಬಾಲಕನಾಗಿದ್ದನು. ಆದರೆ ಕ್ರಿ.ಶ. 1493ರಲ್ಲಿ ಆತನು ಯುವಕನಾಗಿದ್ದನು. ಅಂದರೆ ಈ ಇಬ್ಬರು ರಾಯರು ಬೇರೆ ಬೇರೆ ವ್ಯಕ್ತಿಗಳಾಗಿರಬೇಕು. ಫರಿಷ್ತಾ ಬಾಲಕ ರಾಯನ ಬದಲು ಬೇರೊಂದು ಯುವಕ ರಾಯನನ್ನು ಹೇಗೆ ಪಟ್ಟಕ್ಕೇರಿಸಿದರು ಎಂಬ ಬಗ್ಗೆ ವಿವರಿಸಿಲ್ಲ. ಆದರೆ ಬಾಲಕ ರಾಯನು ಯುದ್ಧದಲ್ಲಾದ ಗಾಯಗಳಿಂದ ಅಸುನೀಗಿದನು. ಬಾಲಕ ರಾಯನ ಮರಣಾನಂತರ, ತಿಮ್ಮರಾಜನು ಅಧಿಕಾರ ಸೂತ್ರಗಳನ್ನು ಹಿಡಿದುಕೊಂಡನು. ಆದರೆ ರಾಜಧಾನಿಯಲ್ಲಿ ಅನೇಕರು ಅಸಂತೃಪ್ತರಾದ ಕಾರಣ ತಿಮ್ಮರಾಜನು ರಾಜಧಾನಿಯಲ್ಲಿ ವ್ಯಸ್ತನಾದ ಕಾರಣ ಯುಸುಫ್ ಆದಿಲ್‌ಶಾನನಿಗೆ ಬಿಡುವು ದೊರೆಯಿತು.[17] ಬಾಲಕ ರಾಯನ ಮರಣದ ನಂತರ ತಿಮ್ಮರಾಜನು ಸಿಂಹಾಸನವನ್ನು ಆಕ್ರಮಿಸಿದನೆಂಬ ಫರಿಷ್ತಾನ ಅಭಿಪ್ರಾಯ ಸರಿಯಲ್ಲ. ಏಕೆಂದರೆ ಕ್ರಿ.ಶ. 1493ರ ನಂತರ ಅಂದರೆ ಬಾಲಕರಾಯನು ಗತಿಸಿದ ನಂತರ ಇಮ್ಮಡಿ ನರಸಿಂಹರಾಯಾ ಆಳ್ವಿಕೆಯ ಸಾಕ್ಷಿಯಾಗಿ ಅನೇಕ ಶಾಸನಗಳು ಲಭಿಸಿವೆ. ವೀರಪ್ಪಯ್ಯ ಕಾಲಜ್ಞಾನವು ನರಸನಾಯಕನು ತನ್ನ ಪ್ರಭುವಿನ ಹೆಸರಿನಲ್ಲಿ 13 ವರ್ಷಕಾಲ ರಾಜ್ಯಪಾಲನೆ ಮಾಡಿದನೆಂದು ಸ್ಪಷ್ಟವಾಗಿ ತಿಳಿಸುತ್ತದೆ.[18]

ಅಂದರೆ ಕ್ರಿ.ಶ. 1493ರಲ್ಲಿ ಮೃತನಾದದ್ದು ಇಮ್ಮಡಿ ವೀರನರಸಿಂಹನಲ್ಲ ಎಂಬುದು ಖಾತ್ರಿ. ಈ ಇಮ್ಮಡಿ ನರಸಿಂಹನು ಸಾಳುವ ನರಸಿಂಹನ ಹಿರಿಮಗ–ತಿರುಮಲ ಶಾಸನದಲ್ಲಿ ತಿಳಿಸಿರುವ ಕುಮಾರ ನರಸಯ್ಯನೇ ಆಗಿರಬೇಕು. ಇದರಿಂದ ಸ್ಪಷ್ಟವಾಗುವುದೇನೆಂದರೆ ಸಾಳುವ ನರಸಿಂಹನ ಮರಣಾನಂತರ ಪಟ್ಟವೇರಿದವನು ಇಮ್ಮಡಿ ನರಸಿಂಹನೇ.

ಬಾಲಕ ರಾಯನ ಮರಣಕಾಲ ಅಂದರೆ ಕ್ರಿ.ಶ. 1493 ಎಪ್ರಿಲ್ ಸರಿಯಲ್ಲ. ಏಕೆಂದರೆ ಕ್ರಿ.ಶ. 27–01–1493[19] ರಿಂದಲೇ ಇಮ್ಮಡಿ ನರಸಿಂಹನ ಆಳ್ವಿಕೆಯ ಸಾಕ್ಷಿಯಾಗಿ ಶಾಸನಗಳಿವೆ.

ಎ.ಡಿ.ಎನ್. ವೆಂಕಟರಮಣಯ್ಯನವರು ಬಾಲಕ ರಾಯನೆಂದರೆ ಬೇರಾರೂ ಅಲ್ಲ, ಅವನೇ ಇಮ್ಮಡಿ ನರಸಿಂಹರಾಯ ಎಂದು ಗುರುತಿಸುತ್ತಾರೆ ಮತ್ತು ಫರಿಷ್ತಾ ಹೇಳಿದಂತೆ ರಾಯನು ಯುದ್ಧಾ ನಂತರ ಸಾಯಲಿಲ್ಲ ಎಂದು ಹೇಳುತ್ತಾರೆ. ಅಂದರೆ ಫರಿಷ್ತಾ ಹೇಳುವ ರಾಯನ ಕತೆ ಸುಳ್ಳು ಅಥವಾ ಅವನ ಮರಣದ ದಿನಾಂಕ ತಪ್ಪು. ಇಮ್ಮಡಿ ನರಸಿಂಹನು ಬಾಲಕ ರಾಯನ ನಂತರ ಅರಸನಾಗಿ ಕ್ರಿ.ಶ. 1505ರವರೆಗೆ ರಾಜ್ಯ ಪಾಲಿಸಿದನು.

ನೂನಿಜ್ ಕೂಡಾ ಇಬ್ಬರು ರಾಜಕುಮಾರರ ಮರಣದ ಸಮಾಚಾರ ತಿಳಿಸುತ್ತಾನೆ. ಆದರೆ ಬಾಲಕ ರಾಯನನ್ನು ನರಸನೇ ಕೊಂದು ಸಿಂಹಾಸನ ವಶಪಡಿಸಿಕೊಂಡನೆಂದು ತಿಳಿಸುತ್ತಾನೆ. ಶಾಸನಾಧಾರಗಳಿಂದ ಈ ಮಾಹಿತಿ ನಿರಾಧಾರವೆಂದು ಸಾಬೀತಾಗಿದೆ. ಮೊದಲನೇದಾಗಿ ಸಾಳುವ ನರಸಿಂಹನ ಕುಮಾರರಲ್ಲಿ ಸಾಮ್ರಾಟರಾದವನು ಕಿರಿಯನೋ ? ಹಿರಿಯನೋ ? ಎಂಬುದು ನೂನಿಜ್‌ಗೆ ಖಚಿತವಿಲ್ಲ. ಆತನು – **"ನರಸನಾಯಕನು ರಾಜಕುಮಾರನನ್ನು ಸಾಮ್ರಾಟನಾಗುವಂತೆ ತಯಾರು ಮಾಡಿದನು."**[20] ರಾಜಕುಮಾರನ ಕೊಲೆಯ ನಂತರ ರಾಜರಕ್ಷಕನು ಇನ್ನೊಬ್ಬ ರಾಜಕುಮಾರನನ್ನು ಪಟ್ಟಕ್ಕೇರಿಸಲು ಅವಸರ ಮಾಡಿದನು. ನೂನಿಜ್ ಪ್ರಕಾರ ಈ ಬಾಲಕನು ಮೊದಲು ಅರಸನಾಗಿದ್ದವನ ತಮ್ಮನೆಂದು, ಇವನ ಹೆಸರು ತಮ್ಮರಾಯ ಅಥವಾ ಧರ್ಮರಾಯ. ಇಮ್ಮಡಿ ನರಸಿಂಹನನ್ನು ಶಾಸನಗಳಲ್ಲಿ ಈ ಹೆಸರುಗಳಿಂದ ಕರೆಯಲಾಗಿದೆ.

ಅಂದರೆ ನರಸನಾಯಕನು ಸಾಳುವ ನರಸಿಂಹನ ಹಿರಿಯ ಮಗನನ್ನು ರಾಜನನ್ನಾಗಿ ಮಾಡಲಿಲ್ಲ. ಸಾಳುವ ನರಸಿಂಹನೂ ತನ್ನ ಹಿರಿಮಗನನ್ನು ರಾಜನನ್ನಾಗಿ ಮಾಡೆಂದು ಕೇಳಲಿಲ್ಲ. ಆತನು ತನ್ನ ಕುಮಾರರಲ್ಲಿ ಯೋಗ್ಯನಾದವನನ್ನು ರಾಜನಾಗಿ ಮಾಡಬೇಕೆಂದು ತಿಳಿಸಿದ್ದನು. ಆದ್ದರಿಂದ ಹಿರಿಮಗನನ್ನೇ ರಾಜನನ್ನಾಗಿ ಮಾಡಬೇಕೆಂಬ ಕಟ್ಟಳೆ ನರಸನಿಗಿರಲಿಲ್ಲ. ಆದರೆ ತನ್ನ ಪ್ರಭುವಿನ ಕುಮಾರರಲ್ಲಿ ಯೋಗ್ಯನಾದವನನ್ನು ರಾಜಪದವಿಗೇರಿಸುವ ಹೊಣೆ ಆತನದಾಗಿತ್ತು. ಸಾಳುವ ನರಸಿಂಹನ ಮರಣಾನಂತರ ಕೆಲವು ಸಾಮಂತರೂ, ಸೇನಾನಿಗಳೂ ನರಸನಾಯಕನ ಮೇಲೆ ಮತ್ಸರದಿಂದ ರಾಜಧಾನಿಯಲ್ಲಿ ಒಡಕುಂಟು ಮಾಡಲು ಯತ್ನಿಸಿದರು. ಆದ್ದರಿಂದ ಒಳಗಿನ ಮತ್ತು ಹೊರಗಿನ ಶತ್ರುಗಳನ್ನು ನಿಗ್ರಹಿಸಲು ನರಸನಾಯಕನು ಹೆಚ್ಚಿನ ಅಧಿಕಾರಗಳನ್ನು ವಹಿಸಿಕೊಂಡನು. ಬಾಲಕರಾಯನು ಕ್ರಿ.ಶ. 1491ರಲ್ಲಿ ಸತ್ತ ನಂತರ ಅವನ ಮತ್ತೊಬ್ಬ ಸೋದರನನ್ನು ರಾಜನನ್ನಾಗಿ ಮಾಡಲಾಯಿತು. ಆದರೆ ಅವನೂ ಯುದ್ಧದಲ್ಲಿ ಆದ ಗಾಯಗಳಿಂದ ಅಸುನೀಗಿದನು. ಆಗ ಅನಿವಾರ್ಯವಾಗಿ ನರಸನಾಯಕನು ಉಳಿದ ಇಮ್ಮಡಿ ನರಸಿಂಹನನ್ನು ರಾಜನನ್ನಾಗಿ ಮಾಡಬೇಕಾಯಿತು. ನರಸನಾಯಕನು ಇಮ್ಮಡಿ ನರಸಿಂಹನನ್ನು ಇಷ್ಟಪಡುತ್ತಿರಲಿಲ್ಲ. ಏಕೆಂದರೆ ಅವನ ಸುತ್ತಲೂ ಚಾಡಿಕೋರರು, ಮತ್ಸರದವರೂ ಸೇರಿದ್ದರು. ನರಸನಾಯಕನ ವಿರೋಧಿಗಳೂ ಅಲ್ಲಿದ್ದರು.

ನೂನಿಜ್ ಪ್ರಕಾರ – ರಾಜನ ಮರಣಾನಂತರ ನರಸನಾಯಕನು ರಾಜ್ಯಪಾಲನಾಗಿದ್ದು ಒಬ್ಬ ರಾಜಕುಮಾರನನ್ನು ಅರಸನನ್ನಾಗಿ ಮಾಡಿದನಾಗಲೀ ರಾಜ್ಯದ ಸಮಸ್ತ ಅಧಿಕಾರ, ಆದಾಯ ಮತ್ತು ಕೋಶಗಳನ್ನು ತನ್ನ ಸುಪರ್ದಿಯಲ್ಲೇ ಇಟ್ಟುಕೊಂಡನು. ಆ ಸಮಯದಲ್ಲಿ



ನರಸನಾಯಕನ ಶತ್ರುವಾದ ಒಬ್ಬ ಸೇನಾಪತಿಯು ರಾಜರಕ್ಷಕನೂ, ರಾಜ್ಯಪಾಲನಾದ ನರಸನಾಯಕನು ಅಪ್ಪಣೆ ಮಾಡಿದಂತೆ ತಾನು ರಾಜಕುಮಾರನನ್ನು ಕೊಲೆ ಮಾಡಿದರೆ ನರಸನಾಯಕನಿಗೆ ಮೃತ್ಯುದಂಡ ನೀಡುತ್ತಾರೆ ಎಂದು ಯೋಚಿಸಿದನು. ಅದರಂತೆ ಒಬ್ಬ ರಾಜಭಟನಿಗೆ ಸಾಕಷ್ಟು ಹಣ ನೀಡಿ ರಾಜಕುಮಾರನನ್ನು ಕೊಲೆಮಾಡಲು ನೇಮಿಸಿದನು. ಅದರಂತೆ ರಾಜಭಟನು ಖಡ್ಗದಿಂದ ಕೊಲೆ ಮಾಡಿದನು. ಈ ಸಮಾಚಾರವನ್ನು ಮತ್ತು ತನ್ನ ಮೇಲೆ ಬಂದಿರುವ ಕೊಲೆಯ ಆರೋಪವನ್ನು ತಿಳಿದ ನರಸನಾಯಕನು ತಕ್ಷಣ ಇನ್ನೊಬ್ಬ ರಾಜಕುಮಾರನನ್ನು ಸಾಮ್ರಾಟನನ್ನಾಗಿ ಮಾಡಿದನು. ಈ ಕೊಲೆಯ ಸಂಚುಕಾರನಿಗೆ ಅನೇಕ ಬಂಧುಗಳಿದ್ದರು ಮತ್ತು ಪ್ರಭಾವಿ ಆಗಿದ್ದನು. ಆದ್ದರಿಂದ ಅವನು ಮಾಡಿದ ಕೊಲೆಯ ಬಗ್ಗೆ ಪೂರ್ಣ ಅರಿವಿದ್ದರೂ ನರಸನಾಯಕನು ಅವನ ತಂಟೆಗೆ ಹೋಗಲಿಲ್ಲ ಹೊಸ ಅರಸನೇ ತಮರಾವ್ ಅಥವಾ ತಮ್ಮರಾಯ, ಕೊಲೆಗಡುಕನಾದ ತ್ಯಾಮರಸನನ್ನು ಶಿಕ್ಷಿಸಲು ನರಸನಾಯಕನು ಪ್ರಯತ್ನಿಸಿದನು. ಆದರೆ ಹೊಸ ಅರಸನು ತ್ಯಾಮರಸನ ಕೃತ್ಯದಿಂದಲೇ ತಾನು ಅರಸನಾಗಲು ಸಾಧ್ಯವಾಯಿತೆಂದು ಭಾವಿಸಿ ತ್ಯಾಮರಸನಿಗೆ ಹೊಸ ಪದವಿಗಳನ್ನು ನೀಡಿ ನರಸನಾಯಕನ ವಿರುದ್ಧ ಅವನೊಂದಿಗೆ ಸೇರಿ ಹುನ್ನಾರ ಮಾಡತೊಡಗಿದನು.[21]

**ದುವ್ವೂರು ಕೈಫಿಯತ್**[22] ಪ್ರಕಾರ ಇಮ್ಮಡಿ ಸಾಳುವ ನರಸಿಂಹರಾಯನು ಆಳುವಾಗ ನರಸನಾಯಕನನ್ನು ಪ್ರಧಾನಿಯ ಪದವಿಯಿಂದ ತೊಲಗಿಸಿ ಆತನ ಬದಲಾಗಿ **ಅರುವೇಲ ನಿಯೋಗಿ** ಬ್ರಾಹ್ಮಣನಾದ ನಾದಿಂಡ್ಲ ತಿಮ್ಮರಸಯ್ಯನನ್ನು ಪ್ರಧಾನಿಯಾಗಿ ನೇಮಿಸಿದನು. ಕೈಫಿಯತ್‌ನಲ್ಲಿ ಈ ಬದಲಾವಣೆಗೆ ಕಾರಣಗಳನ್ನು ತಿಳಿಸಿಲ್ಲ. ಆದರೆ ನೂನಿಜ್ ಹೀಗೆ ಹೇಳುತ್ತಾನೆ. ನರಸನಾಯಕನು ಒಂದು ದಿನ ತಾನು ಬೇಟೆಗೆ ಹೋಗುತ್ತಿರುವುದಾಗಿ ಹೇಳಿ ಆನೆಗೊಂದಿಯ ಕಡೆಗೆ ಹೋದನು ಅವನ ಕೌಟುಂಬಿಕ ಪರಿವಾರದವರೆಲ್ಲಾ ವಿಜಯನಗರದಲ್ಲಿಯೇ ಇದ್ದರು. ಆದರೆ ನರಸನು ಆನೆಗೊಂದಿಯಿಂದ ನೂರಾರು ಮೈಲು ದೂರವಿದ್ದ ಪೆನುಗೊಂಡೆಗೆ ಹೋಗಿ ಅಲ್ಲಿ ಅನೇಕ ಗಜ, ತುರಗ ಮತ್ತು ಸೈನ್ಯವನ್ನು ಜಮಾಯಿಸಿ ಅರಸು ತಮ್ಮರಾಯನಿಗೆ ನಿರೂಪ ಕಳಿಸಿ ತ್ಯಾಮರಸನು ಅರಸನ ಕೊಲೆ ಮಾಡಿಸಿದ ರೀತಿ ಅನಂತರ ತಮ್ಮರಾಯನು ಅರಸನಾದ ರೀತಿಯನ್ನು ವಿವರವಾಗಿ ತಿಳಿಸಿದನು. ಅಲ್ಲದೇ ಆತನ ತಂದೆಯಾದ ಸಾಳುವ ನರಸಿಂಹನು ತನ್ನನ್ನು ರಾಜ್ಯ ರಕ್ಷಕ ಮತ್ತು ಆತನ ಪುತ್ರರ ರಕ್ಷಕನನ್ನಾಗಿ ನೇಮಿಸಿದ ವಿಷಯವನ್ನೂ ತಿಳಿಸಿ, ರಾಜದ್ರೋಹಿಯೂ, ರಾಜನ ಕೊಲೆಗಡುಕನೂ ಆದ ತ್ಯಾಮರಸನನ್ನು ಶಿಕ್ಷೆಗೆ ಗುರುಪಡಿಸಬೇಕೆಂದು ಆಗ್ರಹಿಸಿದನು. ಆದರೆ ತಮ್ಮರಾಯನು ತ್ಯಾಮರಸನಿಂದಲೇ ತಾನು ರಾಜನಾಗಲು ಸಾಧ್ಯವಾಯಿತೆಂದು ಭಾವಿಸಿ ಅವನಿಗೆ ಪರಮಾಧಿಕಾರಗಳನ್ನು ನೀಡಿದನಲ್ಲದೇ, ನರಸನಾಯಕನ ವಿರುದ್ಧ ನಿಂತನು. ತತ್ಫಲವಾಗಿ ನರಸನಾಯಕನು ದೊಡ್ಡ ಸೈನ್ಯದೊಂದಿಗೆ ಅರಸನ ಮೇಲೆ ದಾಳಿ ಮಾಡಿ, ನಗರವನ್ನು ಸುತ್ತುವರೆದು ರಾಜನಿಗೆ ಬೆದರಿಕೆಯ ಪತ್ರ ಕಳಿಸಿದನು. ನಾಲ್ಕೈದು ದಿನಗಳ ನಂತರ ತಮ್ಮರಾಯನು ತ್ಯಾಮರಸನ ಶಿರಚ್ಛೇದನಕ್ಕೆ ಆಜ್ಞೆ ಮಾಡಿದನಲ್ಲದೇ ಅವನ ರುಂಡವನ್ನು ನರಸನಾಯಕನಿಗೆ ಕಳಿಸಿದನು. ಇದರಿಂದ ತೃಪ್ತನಾದ ನರಸನಾಯಕನು

ಸೈನ್ಯವನ್ನು ವಾಪಾಸು ಕಳಿಸಿ ವೈಭವದಿಂದ ನಗರ ಪ್ರವೇಶ ಮಾಡಿದನು. ನ್ಯಾಯವಂತನಾದ ಪ್ರಧಾನಿ ನರಸನಾಯಕನನ್ನು ಜನರು ಉತ್ಸಾಹದಿಂದ ಸ್ವಾಗತಿಸಿದರು.[23]

ರಾಯನ ಮರಣದ ಬಗ್ಗೆ ನರಸನಾಯಕನ ಹೇಳಿಕೆಗೂ ಫರಿಷ್ತಾ ಹೇಳಿಕೆಗೂ ಸಂಬಂಧವಿಲ್ಲ. ಫರಿಷ್ತಾ ಪ್ರಕಾರ ಯುದ್ಧದಲ್ಲಾದ ಗಾಯಗಳಿಂದ ರಾಯನು ಅಸುನೀಗಿದನು. ಪಿ. ಶ್ರೀರಾಮ ಶರ್ಮ[24] ರಾಯನು ಯುದ್ಧದಲ್ಲಾದ ಗಾಯಗಳಿಂದ ಮೃತನಾದನೆಂದು ಲೋಕವು ನಂಬುವಂತೆ ಗಾಯಮಾಡಿ ಕೊಂದಿರಬೇಕು. ನರಸನಾಯಕನ ಶತ್ರುವಾದ ತ್ಯಾಮರಸನು ನರಸನಾಯಕ ಮತ್ತು ರಾಯಸೇರಿ ಯುದ್ಧಕ್ಕೆ ಹೊರಟ ಸಮಯದಲ್ಲಿ ಇಮ್ಮಡಿ ನರಸಿಂಹರಾಯನೊಂದಿಗೆ ಸೇರಿ ಮಸಲತ್ತು ಮಾಡಿರಬಹುದು. ಇಲ್ಲಿ ಎರಡು ಉದ್ದೇಶಗಳು ಇದ್ದಿರಬಹುದು. 1. ನರಸನಾಯಕನ ಮೇಲೆ ಕೊಲೆಯ ಅಪರಾಧ ಹೊರಿಸಿ ಅಪಖ್ಯಾತಿ ತರುವುದು ಮತ್ತು 2 ಇಮ್ಮಡಿ ನರಸಿಂಹನನ್ನು ಪಟ್ಟಕ್ಕೇರಿಸುವುದು ನರಸನಾಯಕನಿಗೆ ತ್ಯಾಮರಸನ ಸಂಚಿನ ಸುಳಿವು ಇತ್ತು. ತ್ಯಾಮರಸನ ಬಂಧುವರ್ಗದವರು ಪ್ರಭಾವಿಗಳಾಗಿದ್ದರಿಂದ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದು ಕಠಿಣವಾಗಿತ್ತು. ಇಮ್ಮಡಿ ನರಸಿಂಹನನ್ನು ಸಾಮ್ರಾಟನನ್ನಾಗಿ ಮಾಡಿದ ಮೇಲೆ ಆತನನ್ನು ತ್ಯಾಮರಸನ ಮೇಲೆ ಕ್ರಮ ಜರುಗಿಸಲು ಕೇಳಿದನು.

ದುವ್ವೂರಿನ ಕೈಫಿಯತ್ ಪ್ರಕಾರ ಇಮ್ಮಡಿ ನರಸಿಂಹನು ನರಸನಾಯಕನನ್ನು ಪ್ರಧಾನಿ ಪದವಿಯಿಂದ ತೆಗೆದು ನಾದಿಂಡ್ಲ ತಿಮ್ಮರಸಯ್ಯನನ್ನು ಪ್ರಧಾನಿ ಮಾಡಿದನು ಎಂಬುದಕ್ಕೆ ನೂನಿಜ್ ಹೇಳುವ ರಾಯನು ತ್ಯಾಮರಸಯ್ಯನಿಗೆ ಹೊಸ ಅಧಿಕಾರ ಮತ್ತು ಪದವಿ ನೀಡಿದನು ಎಂಬಲ್ಲಿ ಆಧಾರವಿದೆ. ಆದರೆ ಅನಂತರ ನರಸನಾಯಕನನ್ನು ನ್ಯಾಯವಂತ ಮನುಷ್ಯನೆಂದು ವಿಜಯನಗರ ಪ್ರಜೆಗಳು ಸ್ವಾಗತಿಸಿದರು ಎಂಬಲ್ಲಿ ನರಸನಾಯಕನ ಸ್ಥಾನ–ಮಾನ ತಿಳಿಯುತ್ತವೆ.

**ಯಾರೀ ತ್ಯಾಮರಸ** ? ರಾಜನನ್ನೇ ಕೊಲೆಮಾಡಿಸಿದ ಈ ತ್ಯಾಮರಸ ಯಾರು ? ದುವ್ವೂರು ಕೈಫಿಯತ್‌ನ ನಾಂದಿಂಡ್ಲ ತಿಮ್ಮರಸಯ್ಯನು ಪ್ರಾಯಶಃ ಈ ಕೊಲೆ ಮಾಡಿದ ಸೇನಾಪತಿ ಇರಬಹುದು. ಏಕೆಂದರೆ ನರಸನಾಯಕನನ್ನು ಪದಚ್ಯುತ ಗೊಳಿಸಿ ನಾದಿಂಡ್ಲ ತಿಮ್ಮರಸಯ್ಯನನ್ನು ಪ್ರಧಾನಿ ಸ್ಥಾನಕ್ಕೆ ನೇಮಿಸಲಾಯಿತು ಎನಲಾಗಿದೆ. ನಾದಿಂಡ್ಲ ತಿಮ್ಮರಸಯ್ಯನ ಮಕ್ಕಳಾದ ನಾದಿಂಡ್ಲ ಅಪ್ಪ ಮತ್ತು ಗೋಪರು ವೀರನರಸಿಂಹನ ಮತ್ತು ಕೃಷ್ಣದೇವರಾಯನ ಕಾಲದಲ್ಲಿ ಅತ್ಯಂತ ವಿಶ್ವಾಸಪಾತ್ರರಾಗಿ ಅಧಿಕಾರಿಗಳಾಗಿದ್ದರು. ಆದ್ದರಿಂದ ಕೆಲ ಇತಿಹಾಸಕಾರರು ತಿಮ್ಮರಸನೇ ನಾದಿಂಡ್ಲ ತಿಮ್ಮರಸಯ್ಯ ಎಂಬ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ಆದರೆ ಈ ವಿಷಯದಲ್ಲಿ ಅಧಿಕೃತ ಮಾಹಿತಿ ನೀಡಿದ ದುವ್ವೂರು ಕೈಫಿಯತ್‌ನ್ನು ತಿರಸ್ಕರಿಸಲು ಸಾಧ್ಯವಿಲ್ಲ. ನರಸನಾಯಕನಿಗಿದ್ದ ಜನಪ್ರಿಯತೆ ಮತ್ತು ಅಧಿಕಾರವನ್ನು ಗಮನಿಸಿದ ನಾದಿಂಡ್ಲ ತಿಮ್ಮರಸಯ್ಯ ಕುಟುಂಬ ವರ್ಗದವರು ಆತನಿಗೆ ವಿಧೇಯರಾಗಿರಬಹುದು. ನರಸನಾಯಕನೂ ನಾದಿಂಡ್ಲ ತಿಮ್ಮರಸಯ್ಯನ ಕುಟುಂಬದವರ ಯೋಗ್ಯತೆ ಮತ್ತು ಲೋಕ ಮನ್ನಣೆಯನ್ನು ಗಮನಿಸಿ ಅವರನ್ನು ಮನ್ನಿಸಿರಬಹುದು.



ನರಸನಾಯಕನ ಮಗ ವೀರನರಸಿಂಹನು ಸಾಳುವ ತಿಮ್ಮರಸಯ್ಯನನ್ನು **ಮಹಾಪ್ರಧಾನಿ** ಎಂದು ನೇಮಿಸಿದನು. ನಾದಿಂಡ್ಲ ಅಪ್ಪ ಮತ್ತು ಗೋಪ. (ತಿಮ್ಮರಸಯ್ಯನ ಪುತ್ರರು) ತಮ್ಮ ರಾಜಕೀಯ ಜೀವನವನ್ನು ತುಳುವ ವೀರನರಸಿಂಹನ ಕಾಲದಲ್ಲಿಯೇ ಆರಂಭಿಸಿದರು.[25]

**ನರಸನಾಯಕನು ಸಿಂಹಾಸನವನ್ನು ಆಕ್ರಮಿಸಿದನೇ** ?

ಶಾಸನಗಳ ಆಧಾರದಿಂದ ತಿಳಿಯುವುದೆಂದರೆ ನರಸನಾಯಕನು ಇಮ್ಮಡಿ ನರಸಿಂಹನಿಗಿಂತ ಮೊದಲೇ ಗತಿಸಿದನು. ಅಂದರೆ ನೂನಿಜ್ ಹೇಳುವ – ಆಳುವ ದೊರೆಯನ್ನು ಕೊಂದು ನರಸನಾಯಕನು ಸಿಂಹಾಸನವನ್ನು ಆಕ್ರಮಿಸಿದನು ಎಂಬ ಮಾತು ಸುಳ್ಳಾಯಿತು. ಮೂವತ್ತು ವರುಷಗಳ ನಂತರ ವಿಜಯನಗರಕ್ಕೆ ಬಂದಿದ್ದ ನೂನಿಜ್ ಸತ್ಯಾಸತ್ಯ ತಿಳಿಯದೇ ಗೊಂದಲಕ್ಕೆ ಸಿಲುಕಿರಬೇಕು. ನರಸನಾಯಕನಾರೋ, ವೀರನರಸಿಂಹನಾರೋ, ತಿಳಿಯದೇ ನರಸನಾಯಕನ ಮರಣದ ನಂತರ ರಾಜರಕ್ಷಕನಾರೋ ಸರಿಯಾಗಿ ನೂನಿಜ್‌ಗೆ ತಿಳಿದಂತೆ ತೋರುವುದಿಲ್ಲ. ವಿಷಯಗಳನ್ನೆಲ್ಲ ತೊಡಕುಮಾಡಿಕೊಂಡು ಅವನು ನರಸನಾಯಕನ ತಲೆಗೆ ಅಪರಾಧವನ್ನು ಹೊರಿಸಿದನು. ಆದರೆ ಆಧುನಿಕ ಸಂಶೋಧಕರೂ ವಿಜಯನಗರ ಚರಿತ್ರೆಯ **ಚತುರಾನನ**ರೆಂದು ಪ್ರಸಿದ್ಧರಾದ ಎನ್. ವೆಂಕಟರಮಣಯ್ಯನವರು ಎಲ್ಲ ಶಾಸನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಮಾಡಿದ ನಂತರವೂ – ನರಸನಾಯಕನನ್ನು ಸಿಂಹಾಸನ ಆಕ್ರಮಣದ ಅಪರಾಧದಿಂದ ಸಂಪೂರ್ಣ ಖುಲಾಸೆ ಮಾಡಲಾಗುವುದಿಲ್ಲ ಎಂದಿದ್ದಾರೆ.

“ಅವನು ತನ್ನ ಪ್ರಭುವಿನ ವಿರುದ್ಧ ಬಂಡಾಯವೆದ್ದು (ಇಮ್ಮಡಿ ನರಸಿಂಹನ ವಿರುದ್ಧ), ತನ್ನ ಮುಷ್ಟಿಬಲಕ್ಕೆ ಅವನು ಮಣಿಯುವಂತೆ ಮಾಡಿದನು. ರಾಯನನ್ನು ಗೃಹ ಬಂಧನದಲ್ಲಿಟ್ಟು ಅವನ ಖರ್ಚಿಗೆ ಮೊತ್ತವನ್ನು ನಿಗದಿ ಮಾಡಿದನು. ತನಗೆ ಬೇಕಾದಾಗ ಮಹಾರಾಜರ ಬಿರುದುಗಳನ್ನು ಧರಿಸಲೂ ಹಿಂಜರಿಯಲಿಲ್ಲ.[26] ಆತನ ಮಕ್ಕಳ ಶಾಸನಗಳು ಅವನು ವಿಜಯನಗರದ ಪ್ರಭುವಿನಂತೆ ಆಡಳಿತ ನಡೆಸಿದನೆಂದು ತಿಳಿಸುತ್ತವೆ. ನಂದಿ ತಿಮ್ಮಣ್ಣನ ‘ಪಾರಿಜಾತಾಪಹರಣಮು’ ಮತ್ತು ರಾಜನಾಥ ಡಿಂಡಿಮನ ‘ಅಚ್ಯುತರಾಯಾಭ್ಯುದಯಂ’ನ ಸಾಹಿತ್ಯಿಕ ಸಾಕ್ಷ್ಯಗಳನ್ನು ಅವರು ತೋರಿಸುತ್ತಾರೆ. ಆದ್ದರಿಂದ ಅವರು ಈ ರೀತಿ ತೀರ್ಮಾನಿಸುತ್ತಾರೆ. “ನರಸನಾಯಕನು ತನ್ನ ಪ್ರಭುವಿನ ಸಿಂಹಾಸನವನ್ನು ಆಕ್ರಮಿಸಿದನೆನ್ನಲು ಸಾಕಷ್ಟು ಆಧಾರಗಳಿವೆ. ಆದ್ದರಿಂದ ಎರಡನೇ ಅಕ್ರಮಣವು ಅವನ ಕಾಲದಲ್ಲಿಯೇ ಜರುಗಿರಬೇಕು. ಈಗ ಎಲ್ಲರೂ ತಿಳಿದಿರುವಂತೆ ಅವನ ಮಗ ವೀರನರಸಿಂಹನ ಕಾಲದಲ್ಲಿ ಅಲ್ಲ.[27]

ಆದರೆ ಲಭಿಸಿರುವ ಸಾಕ್ಷ್ಯಾಧಾರಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಯಾರು ನಿಜವಾದ ಆಕ್ರಮಣಕಾರರು ಎಂದು ಸ್ಪಷ್ಟವಾಗುತ್ತದೆ. ಕ್ರಿ.ಶ. 1497ರ ಒಂದು ಶಾಸನದಲ್ಲಿ[28] ನರಸನಾಯಕನನ್ನು ಈಶ್ವರ ಮತ್ತು ಬುಕ್ಕಮಾಂಬಾ ಅವರ ಮಗ **ಮಹಾರಾಜ ನರಸಿಂಹ** ಎಂದು ಸಂಬೋಧಿಸಲಾಗಿದೆ. ಸಾಳುವರ ಬಿರುದಾದ ‘ಕಠಾರಿ ಸಾಳುವ’ ಎಂಬುದನ್ನೂ

ಆತನ ಹೆಸರಿಗೆ ಜೋಡಿಸಲಾಗಿದೆ. ಕ್ರಿ.ಶ. 1499ರ ಶಾಸನದಲ್ಲಿ ನರಸನಾಯಕನನ್ನು ಪರಮೋಚ್ಚ ಬಿರುದುಗಳಿಂದ ಹೊಗಳುತ್ತಾ ಇಮ್ಮಡಿ ವೀರನರಸಿಂಹನ ಪ್ರತಿನಿಧಿಯೆಂದು ಕರೆಯಲಾಗಿದೆ.[29] ಸಾಳುವರ ಬಿರುದುಗಳಾದ 'ಮೇದಿನೀ ಮೀಸರಗಂಡ' ಮತ್ತು 'ಕಠಾರಿ ಸಾಳುವ' ಎಂಬ ಬಿರುದುಗಳನ್ನು ನರಸನಾಯಕನಿಗೆ ಜೋಡಿಸಿದ ಕಾರಣ, ವಿಜಯನಗರ ಸಿಂಹಾಸನದ ಎರಡನೇ ಆಕ್ರಮಣವು ನರಸನಾಯಕನ ಕಾಲದಲ್ಲಿಯೇ ನಡೆದುಹೋದ ಘಟನೆಯೆಂದು ವಾದಿಸಲು ಸಾಧ್ಯವಾಯಿತು. ಈ ವಿಷಯದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಗಂಭೀರವಾಗಿ ಪರಿಶೀಲಿಸುವುದು ಅವಶ್ಯ. ಕ್ರಿ.ಶ. 1497ರಲ್ಲಿ ನರಸನಾಯಕನು ದಕ್ಷಿಣ ದಿಗ್ವಿಜಯ ಯಾತ್ರೆಯಲ್ಲಿ ನಿಮಗ್ನನಾಗಿದ್ದನು. ಆ ಕಠಿಣ ಸಮಯದಲ್ಲಿ ಅವನು ಸಾಳುವರ ಬಿರುದುಗಳನ್ನು ಧರಿಸಿ ವಿಜಯನಗರ ಸಿಂಹಾಸನವನ್ನು ಆಕ್ರಮಿಸಲು ಸಾಧ್ಯವಿಲ್ಲ. ಈ ಬಿರುದುಗಳನ್ನು ಆತನು ತನಗೂ ಸಾಳುವ ವಂಶದ ಅರಸರಿಗೂ ಇದ್ದ ಗಾಢವಾದ ಆಪ್ತತೆಯನ್ನೂ, ತಾನು ಅವರಿಗೆ ಮಾಡಿದ ಸೇವೆಗಳನ್ನು ಗುರುತಿಸಲೂ ಧರಿಸಿರಬೇಕು. ಇದಲ್ಲದೇ ಬೇರೆ ಅನೇಕ ಶಾಸನಗಳಲ್ಲಿ ನರಸನಾಯಕನು ಸಾಳುವನ ಆಡಳಿತದಲ್ಲಿ ಎರಡನೇ ಸ್ಥಾನದಲ್ಲಿದ್ದನು ಎಂದು ದೃಢವಾಗುತ್ತದೆ. ಕ್ರಿ.ಶ. 1495ರ ಶಾಸನ[30]ದಲ್ಲಿ ನರಸನಾಯಕನನ್ನು **'ರಾಜ್ಯರಕ್ಷಕರ್ತ'** ಅಥವಾ **'ರಕ್ಷಕ'** ಎಂದು ಮಾತ್ರ ಕರೆಯಲಾಗಿದೆ. ಎರಡು ಶಾಸನಗಳಲ್ಲಿ ಮಾತ್ರ ಆತನನ್ನು **'ಸ್ವಾಮಿ ನರಸನಾಯಕ'** ಎನ್ನಲಾಗಿದೆ. ಸ್ವಾಮಿ ಎಂಬ ಸಂಬೋಧನೆಯು ಒಬ್ಬ ವ್ಯಕ್ತಿಯ ಬಗ್ಗೆ ತೋರಬಹುದಾದ ಗೌರವದ ಸಂಕೇತವಾಗಿದೆ. ನರಸನಾಯಕನಿಗೆ ಅಪಾರ ಜನಮನ್ನಣೆಯಿತ್ತು ಆದ್ದರಿಂದ ಆತನನ್ನು ಸ್ವಾಮಿ ನರಸನಾಯಕ ಎಂದು ಕರೆದಿರಬೇಕು.[31] ನರಸನ ತಂದೆ ಈಶ್ವರನಿಗೆ ಸ್ವಾಮಿ ಎಂದು ಕರೆಯುತ್ತಿದ್ದರು.[32] ಕೃಷ್ಣದೇವರಾಯನ ಅಧೀನ ರಾಜ್ಯಪಾಲ 'ಸೆಲ್ಲಪ್ಪರ್'ಗೆ ಕೂಡಾ ಇದರಂತಹ ಹೆಸರಿತ್ತು.[33] ಆದ್ದರಿಂದ ಸ್ವಾಮಿ ಎಂದರೆ ಪ್ರಭುವೆಂದಾಗಲೀ, ಸಾಮ್ರಾಟನೆಂದಾಗಲೀ ಅರ್ಥೈಸುವುದು ಸರಿಯಲ್ಲ. ಏಕೆಂದರೆ 'ನಾಯಕ' ಎಂಬುದೂ ಆತನ ಹೆಸರಿಗೆ ಸೇರಿತ್ತು. ಕ್ರಿ.ಶ. 1498ರ ಪ್ರೊದ್ದುಟೂರಿನ ಒಂದು ಶಾಸನದಲ್ಲಿ – ಅವನನ್ನು 'ಪಾಂಪು' ಎಂದು ಅಂದರೆ ಇಮ್ಮಡಿ ನರಸಿಂಹನೊಂದಿಗೆ ರಾಜ್ಯಪಾಲನೆಯಲ್ಲಿ ಸಮಾಧಿಕಾರವಿದ್ದವನೆಂದು ಹೇಳಲಾಗಿದೆ. ಆದರೆ ನಾವು ನರಸನಾಯಕನನ್ನು **ರಾಜಪ್ರತಿನಿಧಿ** ಎಂದು ತಿಳಿಯಬಹುದು ಅಂದರೆ ರಾಜನ ಪರವಾಗಿ ನೇಮಿಸಲ್ಪಟ್ಟು ಅಧಿಕಾರಿ ಎಂದು ತಿಳಿಯಬಹುದು. ಶಾಸನದಲ್ಲಿ ನರಸನಾಯಕನನ್ನು ಮಹಾಪ್ರಧಾನಿ[34] ಸೇನಾಧಿಪತಿ[35] ಮತ್ತು ಕಾರ್ಯಕರ್ತ[36] ಎನ್ನಲಾಗಿದೆ. ರಾಜನ ಮತ್ತು ರಾಜ್ಯದ ಪ್ರತಿನಿಧಿ ಅಥವಾ ರಕ್ಷಕನಾದ ಅವನು ಪ್ರಮುಖ ಪದವಿಗಳಾದ ಮಹಾಪ್ರಧಾನಿ, ಸೇನಾಧಿಪತಿ ಮತ್ತು ಕಾರ್ಯಕರ್ತ ಅಧಿಕಾರಗಳನ್ನು ವಹಿಸಿಕೊಂಡಿರಬೇಕು. ಆದ್ದರಿಂದ ಅವನು ರಾಜನ ಪ್ರಮುಖ ಅಥವಾ ಮುಖ್ಯ ಪ್ರತಿನಿಧಿಯಾಗಿ ಅವನ ಪರವಾಗಿ ರಾಜ್ಯಭಾರ ಮಾಡುತ್ತಾ ಇದ್ದಿರಬಹುದು.

ಕ್ರಿ.ಶ. 1502 ಶಾಸನದಲ್ಲಿ ನರಸನಾಯಕನಿಗೆ ಪರಮೋಚ್ಚ ಬಿರುದುಗಳನ್ನು ನೀಡಲಾಗಿದೆ. ಸಂಶೋಧಕರು ಈ ಶಾಸನದಿಂದಲೂ ಗೊಂದಲಕ್ಕೀಡಾದರು. ಈ ಬಿರುದುಗಳು ವಿಜಯನಗರ ಸಾಮ್ರಾಟನು ಧರಿಸುವಂತಹವು, ಮೇದಿನೀಮೀಸರ ಗಂಡ, ಭಾಷೆಗೆ ತಪ್ಪುವ ರಾಯರ ಗಂಡ, ಅರಿರಾಯ ವಿಭಾಡ, ಕಂಡನಾಡಕೊಂಡು ಕೊಡದ ರಾಯರ ಗಂಡ, ರಾಜಾಧಿರಾಜ, ರಾಜಪರಮೇಶ್ವರ.... ನಾಯಂಕಾರ ಮನೆಯ ಸಿರ ಪ್ರಧಾನಿ ತಿಮ್ಮರಸಯ್ಯ, ಶಿರ ಃ ಪ್ರಧಾನ ಉರದು ನಾಯಂಕಾರ ಮಾಡಿದ ಭೂದಾನ.



ನಾವು ಈ ಬಿರುದುಗಳನ್ನೆಲ್ಲಾ ನರಸನಾಯಕನಿಗೆ ಕೊಡಲಾಗಿತ್ತು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ನಾವು ಗಮನಿಸಬೇಕಾದ ಮತ್ತೊಂದು ಮುಖ್ಯ ವಿಷಯವೆಂದರೆ ಆತನನ್ನು **ನಾಯಕಾರ** ಎಂದು ಕರೆದಿದ್ದಾರೆ. **ರಾಜ** ಎಂದಲ್ಲ ನರಸನಾಯಕನ ಮಕ್ಕಳ ಶಾಸನಗಳಲ್ಲಿ ನರಸನಾಯಕನು ವಿಜಯನಗರದ ವಜ್ರ ಸಿಂಹಾಸನವನ್ನು ಅಲಂಕರಿಸಿ ರಾಜ್ಯಭಾರ ನಡೆಸಿದನೆಂದು ಹೇಳಲಾಗಿದ್ದರೂ ಅವು ವಿಶ್ವಸನೀಯವಲ್ಲ. ಅವರು ತಿಮ್ಮ ಮತ್ತು ಈಶ್ವರರನ್ನು ರಾಜನೆಂದು ಬರೆಸಿದ್ದಾರೆ. ತಿಮ್ಮ ಮತ್ತು ಈಶ್ವರ ಯಾವರಾಜ್ಯವನ್ನೂ ಆಳಲಿಲ್ಲ. ಕೇವಲ ತಮ್ಮ ವಂಶವನ್ನು ವೈಭವೀಕರಿಸಿಕೊಳ್ಳುವ ಉದ್ದೇಶದಿಂದಲೂ, ಜನರ ದೃಷ್ಟಿಯಲ್ಲಿ ತಮ್ಮ ಬಗ್ಗೆ ಗೌರವಾದರಗಳು ಉಂಟಾಗಲೆಂದು ಅವನ ಮಕ್ಕಳು ಆ ರೀತಿಯ **ಪ್ರಶಸ್ತಿಯನ್ನು** ಬರೆಸಿದರು.

ನೇಲಟೂರು ವೆಂಕಟರಮಣಯ್ಯನವರು ತಮ್ಮ ವಾದದ ಸಮರ್ಥನೆಗಾಗಿ ಸಮಕಾಲೀನ ಸಾಹಿತ್ಯದ ಆಧಾರಗಳನ್ನು ಮಂಡಿಸಿದ್ದಾರೆ. ನಂದಿ ತಿಮ್ಮಣ್ಣನ ಪಾರಿಜಾತಾಪಹರಣಮು ಕಾವ್ಯದಲ್ಲಿ ಭೂಮಿಯ ಮುಖವ ಪ್ರತಿಬಿಂಬಿಸುವ ಮುಕುರದಂತಿರುವ ವಿಜಯನಗರದ ವಜ್ರಸಿಂಹಾಸನದ ಮೇಲೆ ಈಶ್ವರನ ಮಗನಾದ ನರಸನಾಯಕನು ಶೋಭಿಸುತ್ತಿದ್ದನು.[37] ರಾಜನಾಥ ಡಿಂಡಿಮನು "ನರಸನಾಯಕನು ವಿದ್ಯಾಪುರಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು" ಎಂದಿರುವನು. ಆದರೆ ಕವಿವರೇಣ್ಯರು ಆಳುವವರ ಅನುಗ್ರಹಕ್ಕಾಗಿ ಮಾಡಿದ ವರ್ಣನೆಗಳನ್ನು ನಾವು ಪ್ರಮಾಣವೆಂದು ಸ್ವೀಕರಿಸಲು ಸಾಧ್ಯವಿಲ್ಲ. **ರಾಯವಾಚಕ**ದ ಕರ್ತೃವು ಸ್ಪಷ್ಟವಾಗಿ ಕೃಷ್ಣದೇವರಾಯನ ಮುಖಾಂತರ ಈಶ್ವರನಾಯುಡು, ನರಸಿಂಹನಾಯುಡು ಮತ್ತು ವೀರ ನರಸಿಂಹರಾಯರು ನಮಗಿಂತ ಮೊದಲು ರಾಜ್ಯಭಾರ ಮಾಡಿದ್ದಾರೆ[38] ಎಂದು ಹೇಳಿಸಿದ್ದಾನೆ. ಆದರೆ ಈಶ್ವರ ಮತ್ತು ನರಸರನ್ನು **ನಾಯುಡು** ಎನ್ನಲಾಗಿದೆ ಅಂದರೆ ಅವರು ಸೇನಾಪತಿಗಳು ಮಾತ್ರ. ಆದರೆ ವೀರನರಸಿಂಹನನ್ನು ಮಾತ್ರ **ರಾಯ** ಎಂದು ಕರೆದಿದ್ದಾನೆ. ನರಸನಾಯಕನು ತನ್ನ ಪ್ರಭುವಿನ ಪರವಾಗಿ 13 (ಹದಿಮೂರು) ವರ್ಷ ರಾಜ್ಯಪಾಲನೆ ಮಾಡಿದನು. (ಕ್ರಿ.ಶ. 1503ವರೆಗೆ) ಆದರೆ ಆತನನ್ನು **ಒಂದು** ಶಾಸನದಲ್ಲು ಕೂಡಾ **ರಾಯ** ಎಂದು ಕರೆದಿಲ್ಲ. ಕ್ರಿ.ಶ. 1505ರಲ್ಲಿ ಇಮ್ಮಡಿ ನರಸಿಂಹನನ್ನು ಶಾಸನಗಳಲ್ಲಿ ವಿಜಯನಗರದ ಸಾಮ್ರಾಟನೆಂದು ಕರೆದಿದ್ದಾರೆ. ಆದ್ದರಿಂದ ನರಸನಾಯಕನು ವಿಜಯನಗರದ ಸಿಂಹಾಸನವನ್ನು ಆಕ್ರಮಿಸಿದನೆಂದು ಹೇಳಲು ಯಾವುದೇ ಆಧಾರಗಳಿಲ್ಲ. ಅವನು ಸಿಂಹಾಸನವನ್ನು ಅಕ್ರಮಿಸಲಿಲ್ಲ ಎನಲು ಸಾಕಷ್ಟು ಶಾಸನದ ಸಾಕ್ಷಿಗಳಿವೆ. ಆದರೆ ರಾಯನನ್ನು ಉಪೇಕ್ಷಿಸಿ ನರಸನು ಪರಮಾಧಿಕಾರವನ್ನು ಉಪಯೋಗಿಸಿದನೆಂದು ಹೇಳಿದರೂ ಅವನನ್ನು ಜನರು ಗೌರವ ಆದರಗಳಿಂದ ಸ್ವಾಗತಿಸಿದರು ಮತ್ತು ಅವನು ಜನಪ್ರೀತಿಗಳಿಸಿದ್ದನೆಂದು ಸ್ಪಷ್ಟವಿದೆ. ಅವನು ಭವಿಯಾದ ಸಾಮ್ರಾಟನಿದ್ದಾಗ ಸಾಮ್ರಾಜ್ಯವನ್ನು ಆಂತರಿಕೆ ಮತ್ತು ಹೊರಗಿನ ಶತ್ರುಗಳಿಂದ ರಕ್ಷಿಸುವುದು ಆತನ ಕರ್ತವ್ಯವಾಗಿತ್ತು. **ಸಾಳುವ ನರಸಿಂಹನ ಅತ್ಯಂತ ವಿಶ್ವಾಸಪಾತ್ರ ಸೇನಾಪತಿಯಾದ**

**ನರಸನು ತನ್ನ ಬದುಕಿನ ಕೊನೆಯ ಕ್ಷಣದವರೆಗೆ ಪ್ರಭುವಿನ ಕುಟುಂಬದ ಅತ್ಯಂತ ವಿಧೇಯ ಸೇವಕನಾಗಿ ಬದುಕಿದನು.**

**ನರಸನಾಯಕನ ಸಾಧನೆಗಳು :** ವೀರನರಸಿಂಹ, ಕೃಷ್ಣದೇವರಾಯ ಮತ್ತು ಅಚ್ಯುತದೇವರಾಯ, ಮೂರು ಜನ ನರಸನಾಯಕನ ಪುತ್ರರ ಅನೇಕ ಶಾಸನಗಳಲ್ಲಿ ನರಸನಾಯಕನ ಸಾಧನೆಗಳ ವಿವರಗಳು ಇವೆ.

ಮೈಸೂರು ಜಿಲ್ಲೆಯ **ನಗರದ** ಶಾಸನವು ನರಸನಾಯಕನ ಸಾಧನೆಗಳನ್ನು ಅದ್ಭುತವಾಗಿ ವರ್ಣಿಸುತ್ತದೆ. "ಅವನು ಮೈದುಂಬಿ ಭೋರ್ಗರೆದು ಹರಿಯುತ್ತಿದ್ದ ಕಾವೇರಿಯನ್ನು ದಾಟಿ, ವೈರಿಯನ್ನು ಸೆರೆಹಿಡಿದು, ಅವನ ರಾಜ್ಯವನ್ನು ವಶಪಡಿಸಿಕೊಂಡು, ಶ್ರೀರಂಗಪಟ್ಟಣವನ್ನು ಸ್ವಾಧೀನ ಪಡಿಸಿಕೊಂಡು, ವಿಜಯಸ್ತಂಭ ಸ್ಥಾಪಿಸಿ, ಮೂಲೋಕದಲ್ಲಿ ಪ್ರಖ್ಯಾತನಾದನು. ಚೇರ, ಚೋಳ, ಪಾಂಡ್ಯರನ್ನು ಸೋಲಿಸಿ, ಮಧುರೆಯ ಅರಸ ಮನಭೂಸನನ್ನು ಸೋಲಿಸಿದನು. ಕ್ರೂರಿಗಳಾದ ತುರುಷ್ಕರನ್ನು, ಗಜಪತಿಗಳನ್ನು ಪರಾಭವಗೊಳಿಸಿ, ಗಂಗೆಯಿಂದ ಲಂಕೆಯವರೆಗೂ, ಪೂರ್ವ ಘಟ್ಟಗಳಿಂದ ಪಶ್ಚಿಮ ಘಟ್ಟಗಳವರೆಗೂ ತನ್ನದಾಗಿಸಿ ಎಲ್ಲರಾಜರ ಮೇಲೆ ಪರಮಾಧಿಕಾರವನ್ನು ಸ್ಥಾಪಿಸಿದನು.[39] ವೀರನರಸಿಂಹನ ಕ್ರಿ.ಶ. 1509ರ ನಗರಗೆರೆ ಶಾಸನವು ನರಸನಾಯಕನ ಯಶೋಗಾಥೆಯನ್ನು ವಿವರವಾಗಿ ವರ್ಣಿಸುತ್ತದೆ. ಗಜಪತಿಗಳನ್ನು ಸೋಲಿಸಿ **ಗಜಪತಿರಯಭಗಂಡಭೇರುಂಡ** ಎಂಬ ಬಿರುದು ಧರಿಸಿದನು. ರಣದಲ್ಲಿ ಕ್ರೂರ ತುರುಷ್ಕ ದೊರೆಗಳನ್ನು ಸೋಲಿಸಿ **'ದುಷ್ಟರಾಜಮೃಗ ಶಾರ್ದೂಲ'** ಎನಿಸಿಕೊಂಡನು ರಣದಲ್ಲಿ ಮಧುರೆಯರಸ ಮನಭೂಸನನ್ನು ಸೋಲಿಸಿ, ಪಾಂಡ್ಯ, ಚೇರ, ಚೋಳರು ಕಪ್ಪುಕಾಣಿಕೆ ಸಲ್ಲಿಸುವಂತೆ ಮಾಡಿದನು. ಅಲ್ಲದೇ ಶ್ರೀರಂಗ, ಹಸ್ತಿಶೈಲ, ಕುಂಭಕೋಣ ಮತ್ತು ವೃಷಾದ್ರಿಗಳಲ್ಲಿ ಷೋಡಶ ಮಹಾದಾನಗಳನ್ನು ಮಾಡಿದನು.[40] ಈ ಶಾಸನಗಳಲ್ಲದೇ ಆತನ ಮಕ್ಕಳ ಬಹುತೇಕ ಶಾಸನಗಳು ನರಸನಾಯಕನ ಸಾಧನೆಗಳನ್ನು ಇದೇ ರೀತಿಯಲ್ಲಿ ವರ್ಣಿಸುತ್ತವೆ. ಆದ್ದರಿಂದ ಹುಲ್ಷ್‌ರು "ಈ ಪ್ರಶಂಸಾ ಪ್ರಶಸ್ತಿಗಳೆಲ್ಲ ಒಂದು ಮೂಲಪ್ರತಿಯ ಅನೇಕ ಪ್ರತಿಗಳು ಮಾತ್ರ[41]" ಎಂದಿದ್ದಾರೆ.

ತೆಲುಗು ಕಾವ್ಯ **'ಪಾರಿಜಾತಾಪಹರಣಂ'**ವು ಅವನು ಕುಂತಳ ರಾಜನಿಗೆ ದುಃಖವುಂಟು ಮಾಡಲೆಂದು **ವಿದ್ಯಾಪುರ**ವನ್ನು ವಶಪಡಿಸಿಕೊಂಡನು ಎಂದು ಹೇಳುತ್ತದೆ. ಸುಲ್ತಾನನ್ನು ಸೋಲಿಸಿ **ಮಾನವದುರ್ಗ**ವನ್ನು ವಶಪಡಿಸಿಕೊಂಡು ಅವನ ಗರ್ವಭಂಗ ಮಾಡಿದನು. ಚೋಳನನ್ನು ಕೊಂದು ಮಧುರಾಪುರವನು ಕೈಗೊಂಡು, ಶ್ರೀರಂಗಪಟ್ಟಣವನ್ನು ರಣದಲಿ ಗೆದ್ದು, ರಾಮಸೇತುವಿನಲ್ಲಿ ದಾನಗಳ ಮಾಡಿ ಕೀರ್ತಿವಂತನಾದನು.[42] ರಾಜನಾಥ ಡಿಂಡಿಮನು ತನ್ನ ಕಾವ್ಯ **'ಅಚ್ಯುತರಾಯಾಭ್ಯುದಯಂ'**ನಲ್ಲಿ ನರಸನಾಯಕನು **ಮಾನವದುರ್ಗ**ವನ್ನು ಗೆದ್ದು ಅಲ್ಲಿಯ ರಾಜನನ್ನು ಸೆರೆಹಿಡಿದನು. ಆದರೆ ಅವನನ್ನೇ ದುರ್ಗಾಧಿಪತಿಯಾಗಿ ನೇಮಿಸಿ ತನ್ನ ಶಕ್ತಿಯನ್ನೂ ಔದಾರ್ಯವನ್ನೂ ತೋರಿದನು. ಅತ್ತ ಕಾವೇರಿಗೆ ಸೇತುವೆಯನ್ನು ಕಟ್ಟಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ಮಧುರೆಯನ್ನು ಕೈವಶಮಾಡಿಕೊಂಡು. ಕೋನೇಟಿರಾಜನನ್ನು ನಾಶಮಾಡಿ, ಅವನ ಗಜಸೇನೆಯನ್ನು ಸಮರದಲ್ಲಿ ಧೂಳೀಪಟ



ಮಾಡಿದನು.[43] **ವರದಾಂಬಿಕಾ ಪರಿಣಯಂ** ಕಾವ್ಯದಲ್ಲಿ ತಿರುಮಲಾಂಬಾ ವಿಸ್ತಾರವಾಗಿ ನರಸನಾಯಕನ ಸಾಧನೆಗಳನ್ನು ವರ್ಣಿಸಿದ್ದಾಳೆ. ನರಸನಾಯಕನು ತನ್ನ ದಿಗ್ವಿಜಯ ಯಾತ್ರೆಯಲ್ಲಿ ಮೊದಲನೇದಾಗಿ ಪೂರ್ವ ಭಾಗವನ್ನು ಗೆದ್ದನು. ಅನಂತರ ಪೂರ್ವಸಮುದ್ರ ತೀರದಲ್ಲಿ ದಕ್ಷಿಣದ ಕಡೆಗೆ ನಡೆದು **ತುಂಡೀರ ಮಂಡಲದ** ಮುಖಾಂತರ **ಚೋಳ ಸಾಮ್ರಾಜ್ಯವನ್ನು** ಪ್ರವೇಶಿಸಿದನು. ಚೋಳರಾಜನು ಪ್ರಜಾಪೀಡಕನಾಗಿದ್ದನು. ನರಸನಾಯಕನು ಅವನಿಗೆ ಬುದ್ಧಿ ಕಲಿಸಲು ನಿರ್ಧರಿಸಿದನು. ಅವನು ಕಾವೇರಿಯನ್ನು ದಾಟಿ ದಕ್ಷಿಣದಲ್ಲಿ ಸೈನ್ಯಕ್ಕೆ ವಿಶ್ರಾಂತಿ ನೀಡಲು ಬೀಡು ಬಿಟ್ಟನು. ತನ್ನ ಗೂಢಚಾರರಿಂದ ಚೋಳರಾಜನು ಯುದ್ಧ ಮಾಡಲು ತಯಾರಿ ನಡೆಸಿರುವನೆಂದು ತಿಳಿಯಿತು. ನರಸನಾಯಕನು ಚೋಳರಾಜನಿಗೆ ಶರಣಗತನಾಗೆಂದು ಸೂಚಿಸಿ ರಾಯಭಾರ ಕಳಿಸಿದನು. ಇದನ್ನು ನರಸನಾಯಕನ ಬಲಹೀನತೆಯಿಂದ ಭಾವಿಸಿದ ಚೋಳನು ರಾಯಭಾರಿಗಳನ್ನು ಅವಮಾನ ಮಾಡಿ ಓಡಿಸಿದನು. ಅವನು ತನ್ನ ಸೇನೆ, ದೊಡ್ಡ ಗಜಸೇನೆಯೊಂದಿಗೆ ನರಸನ ವಿರುದ್ಧ ರಣಕಹಳೆ ಊದಿದನು. ಆದರೆ ಸೋತು ನರಸನ ಸೆರೆಯಾಳಾದನು. ನರಸನು ಚೋಳರಾಜಧಾನಿಯನ್ನು ಪ್ರವೇಶಿಸಿದಾಗ ಮಧುರೆಯ ಅರಸನಾದ **ಮರ**ವನು ಸಕಲ ಸಂಪತ್ತನ್ನು ಬಿಟ್ಟು ಕರಾವಳಿ ಕಡೆಗೆ ಪಲಾಯನ ಮಾಡಿದನು. ನರಸನಾಯಕನು ಕಪ್ಪಕಾಣಿಕೆಗಳನ್ನು ಸ್ವೀಕರಿಸಿ ಸೇತುವಿನ ಮೂಲಕ ರಾಮೇಶ್ವರಕ್ಕೆ ತೆರಳಿದನು. ಅನಂತರ ಶ್ರೀರಂಗಪಟ್ಟಣದ ಕಡೆಗೆ ನಡೆದನು. ತುಂಬಿ ಹರಿಯುತ್ತಿದ್ದ ಕಾವೇರಿಗೆ ಸೇತುವೆಯನ್ನು ನಿರ್ಮಿಸಿ ಶ್ರೀರಂಗಪಟ್ಟಣವನ್ನು ಸುಲಭವಾಗಿ ಗೆದ್ದನು. ಅಲ್ಲಿ ಶರಣಾಗತನಾಗಿ ಸಮಸ್ತವನ್ನು ಅರ್ಪಿಸಿದ ರಾಜನನ್ನು ಕ್ಷಮಿಸಿ ಅವನನ್ನು ಪುನಃ ಪ್ರಭುವಾಗಿ ನೇಮಿಸಿದನು. ಅಲ್ಲಿಂದ ಪಶ್ಚಿಮಕ್ಕೆ ನಡೆದು **ದುಮುಕಾರ** ಮತ್ತು **ತರಸಂಗಿ** ಬಂದರುಗಳನ್ನು ವಶಪಡಿಸಿಕೊಂಡು ಗೋಕರ್ಣ ಕ್ಷೇತ್ರ ತಲುಪಿದನು. ಅಲ್ಲಿ ನಾನಾ ದಾನಗಳನ್ನು ಮಾಡಿದನು. ಕೊನೆಯದಾಗಿ ಆತನು ಉತ್ತರದ ಕಡೆಗೆ ನಡೆದು ಮಾನವದುರ್ಗದಲ್ಲಿ ಅಡಗಿದ್ದ ಸುರತ್ರಾಣ ಸಪಾದಾ (ಆದಿಲ್‌ಷಾ),ನನ್ನು ಬೆನ್ನತ್ತಿ ಸೋಲಿಸಿದನು. ಆದರೆ ಆ ಕೋಟೆಯನ್ನು ಸುಲ್ತಾನನಿಗೇ ಬಿಟ್ಟು ರಾಜಧಾನಿ **ವಿದ್ಯಾಪುರಿಗೆ** ಮರಳಿದನು.[44]

ಶಾಸನಗಳಿಂದಲೂ, ಸಾಹಿತ್ಯ ಕೃತಿಗಳಿಂದಲೂ ಸಂಗ್ರಹಿಸಿದ ಈ ವಿವರಗಳಿಂದ ನರಸನಾಯಕನ ಸಾಧನೆಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಆದರೆ ಈ ಆಕರಗಳು ಈ ಘಟನೆಗಳ ದಿನಾಂಕಗಳನ್ನು ತಿಳಿಸುವುದಿಲ್ಲ. ನಾವು ಶಾಸನ ಮತ್ತು ಇತರ ಆಧಾರಗಳ ನೆರವಿನಿಂದ ಈ ಘಟನೆಗಳಿಗೆ ಸಾಧ್ಯವಾದ ದಿನಾಂಕಗಳನ್ನು ನಿರ್ಧರಿಸಬೇಕಾಗಿದೆ.

**ವಿದ್ಯಾಪುರಿಯ ಮೇಲೆ ವಿಜಯ :** ವಿಜಯನಗರದ ಆಸ್ಥಾನ ವಿದ್ವಾಂಸರು ನರಸ ನಾಯಕನ ವಿದ್ಯಾಪುರಿ ವಿಜಯವನ್ನು ವಿಶೇಷವಾಗಿ ವರ್ಣಿಸಿ ವಿಜಯನಗರವನ್ನು ಆಳಲು ಸಮರ್ಥರೆಂದು ಪ್ರತಿಪಾದಿಸಿದ್ದಾರೆ.[45] ಈ ಅಭಿಪ್ರಾಯವನ್ನು ಅಂಗೀಕರಿಸಬೇಕಾದರೆ ನರಸನಾಯಕನು ವಿದ್ಯಾಪುರಿಯನ್ನು ಆತನ ಜೀವಮಾನದಲ್ಲಿ ಎರಡು ಸಲ ಜಯಿಸಿದ್ದಾನೆ. ಮೊದಲ ಸಲ ತನ್ನ ಪ್ರಭು ಸಾಳುವ ನರಸಿಂಹನಿಗಾಗಿಯೂ, ಎರಡನೆಯ ಸಲ ಇಮ್ಮಡಿ ನರಸಿಂಹರಾಯನ ಕಾಲದಲ್ಲಿ ರಾಜ್ಯದ ಹಿತದೃಷ್ಟಿಯಿಂದ

ಆತನು ವಿದ್ಯಾಪುರಿಯನ್ನು ವಶಪಡಿಸಿಕೊಂಡನು. ಕ್ರಿ.ಶ. 1485ರಲ್ಲಿ ಮೊದಲ ಸಲ ಸಾಳುವ ನರಸಿಂಹನು ವಿಜಯನಗರ ವಜ್ರಸಿಂಹಾಸವನ್ನು ಅಲಂಕರಿಸಿದಾಗ ಮತ್ತು ಎರಡನೇ ಸಲ ಕ್ರಿ.ಶ. 1493ರಲ್ಲಿ ಇಮ್ಮಡಿ ನರಸಿಂಹನು ಅರಸನಾದಾಗ. ಎರಡನೇ ವಿಜಯವು ತುಳುವರ ಭಾಗ್ಯದ ಬಾಗಿಲು ತೆರೆಯಿತು.

**ಮಾನವದುರ್ಗ (ಮಾನ್ವಿ) :** ಸಾಳುವ ನರಸಿಂಹನು ತನ್ನ ಆರು ವರ್ಷದ ರಾಜ್ಯಭಾರದ ಸಮಯದಲ್ಲಿ ಆ ಮೊದಲು ಬಂಡಾಯವೆದ್ದು ಸ್ವತಂತ್ರರೆಂದು ಸಾರಿದ ಅನೇಕ ಸಾಮಂತರನ್ನು ಸೋಲಿಸಿದನು. ಆದರೆ ರಾಯಚೂರು ದೋ–ಆಬ್ ಪ್ರದೇಶವನ್ನು ಗೆಲ್ಲಲಾಗಲಿಲ್ಲ.[46] ಆತನ ಮರಣಕಾಲದಲ್ಲಿ ರಾಯಚೂರು, ಉಮ್ಮತ್ತೂರು ಉದಯಗಿರಿ ಮತ್ತು ಅವರಿಗೆ ಅಧೀನರಾದ ಸಾಮಂತರನ್ನು ಮಣಿಸಲಾಗಲಿಲ್ಲ. ಅವರನ್ನು ಮಣಿಸುವ ಕೆಲಸ ನಿನ್ನದೆಂದು ನರಸನಾಯಕನಿಗೆ ಒಪ್ಪಿಸಿದನು.

ಇಮ್ಮಡಿ ವಿರೂಪಾಕ್ಷರಾಯನ ಕಾಲದಲ್ಲಿ ಪಶ್ಚಿಮ ಕರಾವಳಿಯ ಬಂದರುಗಳು ಕೈಬಿಟ್ಟ ಕಾರಣ, ವಿಜಯನಗರ ಸೈನ್ಯಕ್ಕೆ ಅವಶ್ಯವಾಗಿ ಬೇಕಾದ ಕುದುರೆಗಳ ಸರಬರಾಜು ಕಷ್ಟವಾಗಿತ್ತು. ಅನಂತರ ಸಾಳುವ ನರಸಿಂಹನು ತುಳುನಾಡಿನ ಬಂದರುಗಳಾದ ಹೊನ್ನಾವರ, ಭಟ್ಕಳ, ಮಂಗಳೂರು ಮತ್ತು ಬಾಕನೂರುಗಳನ್ನು ಗೆದ್ದು ಪರಿಸ್ಥಿತಿಯ ಸುಧಾರಣೆಗೆ ಪ್ರಯತ್ನ ಮಾಡಿದನು. ಅರಬರ ಕುದುರೆಗಳಿಗೆ ಉತ್ತಮ ಬೆಲೆ ನೀಡಿ ಪ್ರೋತ್ಸಾಹಿಸಲು ನೋಡಿದನು.

ಬಹುಮನಿ ಸುಲ್ತಾನರ ಮಂತ್ರಿ **ಖಾಸಿಮ್ ಬರೀದನು** ಬಿಜಾಪುರದಲ್ಲಿ ಹೊಸ ಸಂಸ್ಥಾನವನ್ನು ಸ್ಥಾಪಿಸಲು ಪ್ರಯತ್ನಿಸಿದಾಗ ಮೊದಲ ಘರ್ಷಣೆ ನಡೆಯಿತು. ನರಸನಾಯಕನು ಬಿಜಾಪುರದ ಯುಸುಫ್ ಆದಿಲ್‌ಖಾನನ ಮೇಲೆ ದಾಳಿ ಮಾಡಿದರೆ ರಾಯಚೂರು ಮತ್ತು ಮುದುಗಲ್ ದುರ್ಗಗಳನ್ನು ಕೊಡುವುದಾಗಿ ತಿಳಿಸಿದಾಗ ಇದು ನಡೆಯಿತು. ನರಸನಾಯಕನು ಈ ಕೊಡುಗೆಯನ್ನು ಅಂಗೀಕರಿಸಿ ತನ್ನ ಸೈನ್ಯವನ್ನು ರಾಯಚೂರು ಕಡೆಗೆ ಕಳಿಸಿದನು. ತುಂಗಭದ್ರೆಯನ್ನು ದಾಟಿದ ರಾಯಸೈನ್ಯವು ಮುದುಗಲ್ ಮತ್ತು ರಾಯಚೂರುವರೆಗಿನ ನಾಡನ್ನು ವಿಧ್ವಂಸಗೊಳಿಸಿತು.[48] ಆದಿಲ್‌ಖಾನನು ತನ್ನ ಮತ್ತೊಬ್ಬ ಶತ್ರುವಾದ ಖಾಸಿಂ ಬರೀದ್ ಕಳಿಸಿದ ಬಹಾದುರ್ ಜಿಲಾನಿಯೊಡನೆ ಹೋರಾಟ ಮಾಡಬೇಕಾಗಿದ್ದ ಕಾರಣ ನರಸನಾಯಕನೊಂದಿಗೆ ಶಾಂತಿ ಏರ್ಪಡಿಸಿಕೊಂಡನು. ಆದರೆ ಗಿಲಾನಿಯನ್ನು ಸೋಲಿಸಿದ ಮೇಲೆ ರಾಯಚೂರನ್ನು ಪುನಃ ವಶಪಡಿಕೊಳ್ಳಲು ಹೊರಟನು. ನರಸನಾಯಕನು ತನ್ನ ಇತ್ತೀಚಿನ ಗೆಲವುಗಳನ್ನು ರಕ್ಷಿಸಲು ಆದಿಲ್‌ಷಾನನ್ನು ಸೋಲಿಸಿದನು. ಆಗ ಆದಿಲ್‌ಷಾ **ಮಾನವದುರ್ಗ**ದಲ್ಲಿ ಅಡಗಿದನು.[49] ಆದಿಲ್‌ಷಾ ಒಂದು ಸಂಚುಮಾಡಿ, ಶರಣಾಗತನಾದಂತೆ ನಟಿಸಿ, ಶಾಂತಿ ಮಾತುಕತೆಗೆಂದು ನರಸನಾಯಕನನ್ನು ಆಮಂತ್ರಿಸಿದನು. ಈ ಸಭೆಗೆ ರಾಯನೂ, ಒಬ್ಬ ಮಂತ್ರಿಯೂ, ಒಬ್ಬ ಸಾಮಂತನು ಬಂದರು. ಆಗ ಯುಸುಫ್ ಆದಿಲ್‌ಖಾನ ರಾಯಸೈನ್ಯದ ಮೇಲೆ ದಾಳಿಮಾಡಿ 70 ಜನ ಸೇನಾನಾಯಕರನ್ನು ಕೊಂದನು. ಹಿಂದೂ ಸೈನ್ಯವು ಗಲಿಬಿಲಿಯಲ್ಲಿ ಆದಿಲ್‌ಷಾಗೆ ಗೆಲುವನ್ನು ನೀಡಿ ಪಲಾಯನ ಮಾಡಿತು.[50]



ನರಸನಾಯಕನ ಮಾನವದುರ್ಗ ವಿಜಯವು ಕ್ರಿ.ಶ. 1492ರ ಹೊತ್ತಿಗೆ ಅವನು ವಿಜಯನಗರವನ್ನು ಪುನಃ ವಶಪಡಿಸಿಕೊಂಡಾಗ ನಡೆದಿರಬೇಕು.[51] ಫರಿಷ್ತಾ ಪ್ರಕಾರ ಮೊದಲ ಘರ್ಷಣೆ ಯುಸುಫ್ ಆದಿಲ್‌ಖಾನ್ ಮತ್ತು ತಿಮ್ಮರಾಜ ನಡುವೆ ನಡೆಯಿತು. ಬಹಾದುರ್ ಗಿಲಾನಿ **ಜನಖಿಡಿ** ಕೋಟೆಯನ್ನು ಗೆದ್ದಾಗಲೇ ಮೊದಲ ಘರ್ಷಣೆ. ಎರಡನೇಂದರೆ ಆದಿಲ್‌ಖಾನನು ರಾಯಚೂರು ಕೋಟೆಯನ್ನು ವಶಪಡಿಸಿಕೊಳ್ಳಲು ಪುನಃ ಪ್ರಯತ್ನ ಮಾಡಿದಾಗ, ಅವನು ಕೃಷ್ಣಾ ತೀರವನ್ನು ಸೇರಿದಾಗ, ವ್ಯಾಧಿಗ್ರಸ್ಥನಾಗಿ ವಸ್ತಿಮಾಡಿದಾಗ, ತಿಮ್ಮರಾಜು ಬಾಲಕ ಚಕ್ರವರ್ತಿಯೊಂದಿಗೆ ರಾಯಸೈನ್ಯವನ್ನು ರಾಯಚೂರು ಕಡೆ ನಡೆಸಿದಾಗ, ಚೇತರಿಸಿಕೊಂಡ ಆದಿಲ್‌ಷಾ ತಿಮ್ಮರಾಜು ಅವರನ್ನು ಎದುರಿಸಿದನು. ಆಗ ಕ್ರಿ.ಶ. 1493ರಲ್ಲಿ ತುಂಗಭದ್ರೆಯನ್ನು ದಾಟಿದ ತಿಮ್ಮರಾಜು ವಿಜಾಪುರದ ಕಡೆಗೆ ಧಾವಿಸುತ್ತಿದ್ದನು.52 ಆದಿಲ್‌ಷಾ ಈ ಯುದ್ಧದಲ್ಲಿ ಸೋತು ತನ್ನ ಬಿಡದಿಗೆ ಹಿಂತಿರುಗಿದನು. ಆಗ ತಿಮ್ಮರಾಜು ಸೈನ್ಯವು ನಾಡಿನ ಲೂಟಿಯಲ್ಲಿ ತೊಡಗಿದೆಯೆಂದು ಅರಿತು ಅವನು ಹಿಂದೂ ಪಾಳೆಯದ ಮೇಲೆ ದಾಳಿಮಾಡಿದನು. ಇದರಿಂದ ಆಘಾತಗೊಂಡು ತಿಮ್ಮರಾಜು ಪರಾಜಿತನಾಗಿ ವಿಜಯನಗರದ ದಾರಿ ಹಿಡಿದನು. ಬಾಲಕ ರಾಯನು ಯುದ್ಧದಲ್ಲಾದ ಗಾಯಗಳ ಪರಿಣಾಮದಿಂದ ದಾರಿಯಲ್ಲಿಯೇ ಗತಿಸಿದನು.[53]

ಫರಿಷ್ತಾ ಹೇಳುವ ತಿಮ್ಮರಾಜುವನ್ನು ಗುರುತಿಸುವಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಯವಿದೆ. ಕೋನೇರುನಾಥನ **ಬಾಲಭಾಗವತ**ದಲ್ಲಿ ತಿಮ್ಮರಾಜುನ ಮಾನವದುರ್ಗ ಯುದ್ಧದ ಬಗ್ಗೆಯೂ, ರಾಮರಾಜನ ದಿಗ್ವಿಜಯದ ಬಗ್ಗೆಯೂ ರಂಜಿತ ವಿವರಗಳಿವೆ.[54] ಪಿ. ಶ್ರೀರಾಮಶರ್ಮರು ನರಸನಾಯಕನ ವೀರ ಸೇನಾಪತಿಯಾದ ಅರವೀಟಿ ರಾಮರಾಜು ತಿಮ್ಮರಾಜನೇ ಫರಿಷ್ತಾನ ತಿಮ್ಮರಾಜ ಎಂದು ಗುರುತಿಸುತ್ತಾರೆ.[55]

ನೇಲಟೂರು ವೆಂಕಟರಮಣಯ್ಯನವರು ಈ ಗುರುತಿಸುವಿಕೆಯನ್ನು ತಳ್ಳಿಹಾಕುತ್ತಾರೆ. ತಿಮ್ಮರಾಜನು ಇಮ್ಮಡಿ ನರಸಿಂಹನ ಅಥವಾ ಬೇರೆ ಯಾವ ರಾಯನ ಮಂತ್ರಿಯಾಗಿರಲಿಲ್ಲ.[56] ಆದರೆ ಈ ವಿಜಯದ ಹೆಗ್ಗಳಿಕೆಯನ್ನು ಪಡೆಯಲು ಈ ವಿಜಯದ ಸೇನೆಯನ್ನು ಮುನ್ನಡೆಸಿದ ಸೇನಾಪತಿಯು ನರಸನಾಯಕನು ನೇಮಿಸಿದವನಾಗಿದ್ದರೆ ಸಾಕು.[57]

ನರಸನಾಯಕನಿಂದ ಪರಾಭವಗೊಂಡ ಆದಿಲ್‌ಖಾನ್ ಮಾನವದುರ್ಗದಲ್ಲಿ ತಲೆಮರೆಸಿಕೊಂಡನು. **'ವರದಾಂಬಿಕಾ ಪರಿಣಯ'**ದಲ್ಲಿ ನರಸನಾಯಕನ ಮಹಾಸೈನ್ಯವನ್ನು ಕಂಡ ಆದಿಲ್‌ಖಾನ್ ಮಾನವದುರ್ಗದಲ್ಲಿ ಅಡಗಿಕೊಂಡನು ಎಂದು ವರ್ಣಿಸಲಾಗಿದೆ.[58] ಆದರೆ ನರಸನಾಯಕನು ಆದಿಲ್‌ಖಾನನನ್ನು ಬಿಡುಗಡೆ ಮಾಡಿ ಮಾನವದುರ್ಗವನ್ನು ಅವನಿಗೇ ನೀಡಿದನು. **ಇದು ನರಸನಾಯಕನು ಮಾಡಿದ ಮಹಾಪರಾಧ. ಅವನು ಕೇವಲ ಶತ್ರುವಿಗೆ ಜೀವದಾನ ಮಾಡಲಿಲ್ಲ. ಆದರೆ ಪ್ರಮುಖವಾದ ದುರ್ಗವನ್ನು ಅವನಿಗೆ ಕೊಟ್ಟನು.** ರಾಯಚೂರು ಮತ್ತು ಮುದಗಲ್ಲು ದುರ್ಗಗಳ ಹಾದಿಯಲ್ಲಿದ್ದ ಮಾನವದುರ್ಗ ಆಯಕಟ್ಟಿನ ಪ್ರಮುಖ ಕೋಟೆಯಾಗಿತ್ತು. ಈ ತಪ್ಪಿನಿಂದ ವಿಜಯನಗರದ ಮೇಲೆ ದಾಳಿ ಮಾಡಬಯಸುವ ಮುಸ್ಲಿಂ ಆಕ್ರಮಣಕಾರರಿಗೆ ಮುಕ್ತ ರಹದಾರಿ ಲಭಿಸಿತು.[59] ಆದರೆ ನರಸನಾಯಕನು

ತನ್ನನ್ನು ತನ್ನ ಸೇನೆಯನ್ನು ಆದಿಲ್‌ಖಾನನ ತಂತ್ರಗಳಿಂದ ಪಾರುಮಾಡಲು ಹಿಡಿದ ದಾರಿಯಾಗಿರಬೇಕು. ನರಸನಾಯಕನು ತಾನು ಗೆದ್ದ ಕೋಟೆಯನ್ನು ಕೊಟ್ಟು ರಾಜಧಾನಿಗೆ ಮರಳಿದನು. ಮಹಾ ವಿಜಯವೆಂದು ಆರಂಭವಾದ ದಾಳಿಯು ಅನಾನುಕೂಲದ ಮತ್ತು ಅವಮಾನಕರ ಪ್ರಸಂಗವಾಯಿತು. ಇಂತಹ ಪರಿಸ್ಥಿತಿಯಲ್ಲಿ ಆಸ್ಥಾನ ಕವಿಗಳು ನರಸನಾಯಕನನ್ನು ಹೊಗಳಿದ, ಕೊಂಡಾಡಿದ ರೀತಿ ಕೇವಲ ಬಡಾಯಿ ಆಯಿತು.

**ನರಸನಾಯಕನ ದಕ್ಷಿಣ ದಿಗ್ವಿಜಯ : ಬಾಣರ ಅರಸನಾದ ಭುವನೈಕವೀರ ಸಮರ ಕೋಲಾಹಲನು** ವಿಜಯನಗರದ ಆಧಿಪತ್ಯವನ್ನು ದಕ್ಷಿಣದಲ್ಲಿ ಅಂದರೆ ಕಾವೇರಿ ನಾಡಿನಲ್ಲಿ ಅಂಗೀಕರಿಸುವಂತೆ ಮಾಡಿ ಅವನಿಂದ ಕಪ್ಪ–ಕಾಣಿಕೆಗಳನ್ನು ಸ್ವೀಕರಿಸಿದವನು ನರಸನಾಯಕ. ಆದರೆ ಬಹಮನಿ ಸುಲ್ತಾನರು ಕಾಂಚೀಪುರದ ಮೇಲೆ ದಾಳಿ ಮಾಡಿದಾಗ, ಸಾಳುವ ನರಸಿಂಹನ ಬಂಡಾಯ ಕಾಲ (ಕ್ರಿ.ಶ. 1485–86) ಈ ಬಾಣ ಅರಸನು ವಿಜಯನಗರದ ಅಧಿಪತ್ಯವನ್ನು ತ್ಯಜಿಸಿದನು. ವಿಜಯನಗರದ ರಾಜ್ಯಪಾಲರಲ್ಲಿ ಒಬ್ಬನಾದ **ಕೋನೇರುದೇವ** ಮಹಾರಾಜನು ರಾಯನ ವಿರುದ್ಧ ಬಂಡೆದ್ದನು. ಆದ್ದರಿಂದ ರಾಜ್ಯ ರಕ್ಷಕನಾದ ನರಸನಾಯಕನು ಇವರನ್ನು ಶಿಕ್ಷಿಸಲೂ, ಆಂತರಿಕ ಭದ್ರತೆಯನ್ನು ಕಾಪಾಡಲೂ ದಕ್ಷಿಣ ದಿಗ್ವಿಜಯ ಯಾತ್ರೆ ಮಾಡಬೇಕಾಯಿತು.

**ತಂಜಾವೂರು ಮತ್ತು ತಿರುಚಿನಾಪಳ್ಳಿಯ ಕೋನೇಟಿರಾಜ :** ತಂಜಾವೂರು ಮತ್ತು ತಿರುಚಿನಾಪಳ್ಳಿಯ ತಿರುಮಲ ರಾಜನ ನಂತರ ಆತನ ಮಗ ಕೋನೇಟಿರಾಜನು ರಾಜನಾದನು.[60] ತಿರುಮಲರಾಜನು ವಿಜಯನಗರದ ಮಲ್ಲಿಕಾರ್ಜುನರಾಯ ಮತ್ತು ವಿರೂಪಾಕ್ಷರಾಯನ ಸಾಮಂತನಾಗಿದ್ದನು.[61] ಅವನ ಆಳ್ವಿಕೆಯ ಪ್ರದೇಶದಲ್ಲಿ ಕೆಲ ಶಾಸನಗಳು ಲಭಿಸಿವೆ.[62] ಆದರೆ ಈ ಯಾವ ಶಾಸನಗಳಲ್ಲಿಯೂ ಆತನು ಇಮ್ಮಡಿ ನರಸಿಂಹನನ್ನು ಸಾಮ್ರಾಟನೆಂದು ಅಂಗೀಕರಿಸಿಲ್ಲ. ಅದು ಅವನ ಬಂಡಾಯ ಮನೋಸ್ಥಿತಿ ಮತ್ತು ಸ್ವತಂತ್ರ ರಾಜ್ಯಭಾರವನ್ನು ಸೂಚಿಸುತ್ತದೆ. ಸಾಳುವ ನರಸಿಂಹನೂ, ನರಸ ನಾಯಕನೂ ಸಾಮ್ರಾಜ್ಯದ ಉತ್ತರಭಾಗದಲ್ಲಿ ವ್ಯಸ್ತರಾಗಿದ್ದರಿಂದ ಇವನು ಸ್ವತಂತ್ರನಾಗಲು ಪ್ರಯತ್ನಿಸಿರಬೇಕು. **'ಕೋಯಿಲೊಲುಗು'** ಗ್ರಂಥದ ಆಧಾರದಿಂದ ಇವನು ಶ್ರೀರಂಗನ ಶ್ರೀವೈಷ್ಣವರ ಮೇಲೆ ದಬ್ಬಾಳಿಕೆ ನಡೆಸಿರಬೇಕು.[63] ಕೋನೇಟಿರಾಜನು ಶ್ರೀರಂಗಂನ ವೈಷ್ಣವರಿಗಿಂತ **ತಿರುವನೈಕಾವಲ್**‌ನ ಶೈವರ ಮೇಲೆ ಅನುಗ್ರಹ ಮಾಡಿದನು ಎಂದು 'ಕೊಯಿಲೊಲುಗು' ತಿಳಿಸುತ್ತದೆ. ಅವನು ಈ ಮೊದಲು ರದ್ದು ಮಾಡಿದ **ಪುರವಾರಿ, ಕಾಣಿಕೈ, ಪೈವಟ್ಟಂ** ಮುಂತಾದ ತೆರಿಗೆಗಳನ್ನು ವಸೂಲು ಮಾಡಿದನಲ್ಲದೇ ಆ ಕ್ಷೇತ್ರಕ್ಕೆ ನಾನಾ ರೀತಿಯಲ್ಲಿ ತೊಂದರೆ ನೀಡಿದನು. ಈ ಬಗ್ಗೆ ವೈಷ್ಣವರು ಕಂದಾಡೈ ರಾಮಾನುಜರ ಮೂಲಕ ನರಸನಾಯಕನಿಗೆ ಫಿರ್ಯಾದು ಮಾಡಿ, ಕೋನೇಟಿರಾಜನ ಉದ್ಧಟತನದಿಂದ ರಕ್ಷಿಸಬೇಕೆಂದು ಪ್ರಾರ್ಥಿಸಿದರು. ರಾಜಕಾರ್ಯ ನಿಮಿತ್ತವಾಗಿ ಎಂಬ ನೆಪದ ಮೇಲೆ ನರಸನಾಯಕನು ದೊಡ್ಡ ಸೈನ್ಯದೊಂದಿಗೆ ಬಂದು ಕೊನೇಟರಾಜನ ಕತೆ ಮುಗಿಸಿ ತಿರುಚಿರಾಪಳ್ಳಿ ಸಹಿತ ಸಮಸ್ತ ಪ್ರದೇಶವನ್ನು ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು.[64] ಶ್ರೀರಂಗಂ ಕ್ಷೇತ್ರಕ್ಕೆ ಸೇರಿದ ಎಲ್ಲ ಗ್ರಾಮಗಳನ್ನು



ಪುನಃ ಕ್ಷೇತ್ರದವರಿಗೇ ವರ್ಗಾಯಿಸಲಾಯಿತು. ಹೊಸದಾಗಿ ವಿಧಿಸಿದ ಎಲ್ಲ ತೆರಿಗೆಗಳನ್ನು ರದ್ದು ಮಾಡಿ, ವೈಷ್ಣವರ ಎಲ್ಲ ತೊಂದರೆಗಳನ್ನು ನಿವಾರಣೆ ಮಾಡಲಾಯಿತು. ಅನಂತರದ **ನಳ** ಸಂವತ್ಸರದ **ಐಪ್ಪಾಸಿ** ಮಾಸದಲ್ಲಿ ಚತುರ್ದಶಿಯಂದು ನಾಗಮ ನಾಯಕ ಮತ್ತು ಕುಮಾರ ನರಸನಾಯಕರು **ಪೆರುಮಾಳ**ನನ್ನು ಪೂಜಿಸಿದರೆಂದು **'ಕೊಯಿಲೊಲುಗು'** ತಿಳಿಸುತ್ತದೆ.[65] ಇದರಿಂದ ನರಸನಾಯಕನ ದಿಗ್ವಿಜಯದ ಅಂದಾಜು ಕಾಲಮಾನ ತಿಳಿಯುತ್ತದೆ. ನಳ ಸಂವತ್ಸರವೆಂದರೆ ಸಂವತ್ಸರ 1496 ಪಿ. ಶ್ರೀರಾಮಶರ್ಮರು ಈ ಪ್ರಸಂಗದ ದಿನಾಂಕವನ್ನು ಕ್ರಿ.ಶ. 1496 ಎಂದು ಎರಡು ಆಧಾರಗಳ ಮೇಲೆ ನಿರ್ಧರಿಸಿದ್ದಾರೆ.[66]

ತೆಲುಗು ಕಾವ್ಯಗಳಾದ **'ಪಾರಿಜಾತಾಪಹರಣಮು'** ಮತ್ತು **'ವರದಾಂಬಿಕಾ ಪರಿಣಯಮು'**ಗಳಲ್ಲಿ ಹೆಸರಿಸಿದ ಚೋಳರಾಜನೇ ಕೋನೇಟಿರಾಜನೆಂದು ಗುರುತಿಸಲಾಗಿದೆ. ಆಗ ಚೋಳ ಮತ್ತು ಪಾಂಡ್ಯ ಪ್ರಾಂತಗಳ ರಾಜ್ಯಪಾಲರಿಗೆ, ಅವರು ಯಾವ ವಂಶದವರೇ ಆಗಿರಲಿ, ಚೋಳರಾಜ ಪಾಂಡ್ಯರಾಜ ಎಂದು ಕರೆಯಲಾಗುತ್ತಿತ್ತು.[67]

ಅಲ್ಲಿಂದ ನರಸನಾಯಕನು ಮಧುರಾಪಟ್ಟಣಕ್ಕೆ ಹೋಗಿ ಅಲ್ಲಿಯ ರಾಜನಿಂದ ಕಪ್ಪ–ಕಾಣಿಕೆಗಳನ್ನು ಸ್ವೀಕರಿಸಿದನು.[68] **ರಾಜನಾಥ ಡಿಂಡಿಮನು** ನರಸನಾಯಕನು ಮಧುರೆಗೆ ಹೋಗಿ ಅಲ್ಲಿನ ದುರಹಂಕಾರಿ ಅರಸ **'ಮಾರವ'**ನನ್ನು ರಣದಲ್ಲಿ ಮುಗಿಸಿ ಮಧುರೆಯನ್ನು ವಶಪಡಿಸಿಕೊಂಡನೆಂದು ತಿಳಿಸುತ್ತಾನೆ.[69] ಕ್ರಿ.ಶ. 1483ರ ಶಾಸನದಲ್ಲಿ ಕಾವೇರಿಯ ದಕ್ಷಿಣ ಪ್ರದೇಶವನ್ನು ಸಮರ ಕೋಲಾಹಲ ನೆಂಬುವನು ಪರಿಪಾಲಿಸುತ್ತಿದ್ದನು. ಈ ಭುವನೈಕ ವೀರ ಸಮರಕೋಲಾಹಲನೋ ಅಥವಾ ಅವನ ವಂಶದ ಇನ್ನಾವನೋ ಮಧುರೆಯನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದ ಮಾರವ, ಅವನ ಪಾಂಡ್ಯನೂ ಅಲ್ಲ – ಚೋಳನೂ ಅಲ್ಲ ಎಂದು ಕೆಲರ ಅಭಿಮತ.[70]

ಕೆಲ ದಾಖಲೆಗಳ ಪ್ರಕಾರ ನರಸನಾಯಕನು ಸೋಲಿಸಿದ ಮಧುರೆಯ ಅರಸನು **'ಮಾನಭೂಷಾ'** ಎಂದು ಕರೆಯಲ್ಪಡುತ್ತಿದ್ದನು.[71] ಅಂದರೆ ಅವನು ಚೋಳನಲ್ಲ, ಪಾಂಡ್ಯನಲ್ಲ ಮತ್ತು ಚೇರನೂ ಅಲ್ಲ. ಅಂದರೆ ಅವನು ಭುವನೈಕವೀರ ಸಮರ ಕೋಲಾಹಲ ಎಂಬ ಬಿರುದು ಧರಿಸಿದ ಅವನ ವಂಶಸ್ಥನು.[72]

ಎಲ್ಲಾ ದಾಖಲೆಗಳ ಪ್ರಕಾರ ನರಸನು ಪಾಂಡ್ಯರ ಮೇಲೆ ವಿಜಯ ಸಾಧಿಸಿದನು. ಜಾತವರ್ಮನ್ ಕುಲಶೇಖರ ಪರಾಕ್ರಮ ಪಾಂಡ್ಯನು ತೆಂಕಾಸಿಯನ್ನು ರಾಜಧಾನಿ ಮಾಡಿಕೊಂಡು ಕ್ರಿ.ಶ. 1480 ರಿಂದ 1507ರ ವರೆಗೆ ಪಾಂಡ್ಯ ರಾಜನಾಗಿದ್ದನು.[73] ಎಸ್. ಕೆ. ಅಯ್ಯಂಗಾರ್ ಪ್ರಕಾರ ತಿರುನೆಲ್ವೇಲಿ ಪ್ರದೇಶವನ್ನು ಸೇರಿದ್ದ ಪಾಂಡ್ಯರು ಪುನಃ ತಮ್ಮ ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಲು (ಮಧುರೆಗೆ) ಪ್ರಯತ್ನಿಸಿದ ಕಾರಣ ನರಸನಾಯಕನು ತೆಂಕಾಸಿಯ ಮೇಲೆ ದಾಳಿ ಮಾಡಿದನು.[74] ಆದರೆ ಈ ಅನುಮಾನಕ್ಕೆ ಬೇರೆ ಆಧಾರಗಳಿಲ್ಲ. ಸಮಸ್ತ ತಮಿಳುನಾಡನ್ನು ವಿಜಯನಗರದ ಆಧೀನ ಮಾಡಬೇಕೆಂಬ ನರಸನಾಯಕನ ಮಹತ್ವಾಕಾಂಕ್ಷೆಯೇ ಈ ದಿಗ್ವಿಜಯದ ಕಾರಣ. ಪಾಂಡ್ಯ ಅರಸು ಜಾತವರ್ಮ ಕುಲಶೇಖರ

ಪಾಂಡ್ಯನು ನರಸನಾಯಕನಿಂದ ಪರಾಜಿತನಾದರೂ ಅವನ ರಾಜ್ಯವನ್ನು ಅವನು ವಿಜಯನಗರದ ಸಾಮಂತನಾಗಿ ಆಳಲು ನಿಯುಕ್ತನಾದನು.

**ಶ್ರೀರಂಗಪಟ್ಟಣಂ** ಸಂಗಮವಂಶದ ನಂತರ ದಕ್ಷಿಣ ಕರ್ನಾಟಕದಲ್ಲಿ ವಿಜಯನಗರದ ಆಡಳಿತ ಬಲಹೀನವಾಗತೊಡಗಿತ್ತು. ಉಮ್ಮತ್ತೂರು, ಶಿವನಸಮುದ್ರ ಮತ್ತು ಶ್ರೀರಂಗಪಟ್ಟಣದ ಪಾಳೇಗಾರರು ವಿಜಯನಗರದ ಅಧಿಕಾರವನ್ನು ಧಿಕ್ಕರಿಸಿ ಸ್ವತಂತ್ರರಾದೆವೆಂದು ಘೋಷಿಸಿದರು. ತಾವು ಗಂಗವಂಶದವರಿಗೆ ಸೇರಿದವರೆಂದೂ ವಿಜಯನಗರಕ್ಕೆ ಕಪ್ಪ ಕಾಣಿಕೆ ನೀಡುವುದಿಲ್ಲವೆಂದು ಸಾರಿ ಸ್ವತಂತ್ರ ರಾಜ್ಯ ಸ್ಥಾಪಿಸಿದರು. ಅವರು ತಾವೇ ಹೊಯ್ಸಳರಾಜ್ಯದ ಸಾರ್ವಭೌಮರೆಂದೂ[75] ಸಾರಿ ಉಮ್ಮತ್ತೂರು, ಶಿವನಸಮುದ್ರ ಮತ್ತು ಶ್ರೀರಂಗಪಟ್ಟಣ ಜಲದುರ್ಗಗಳನ್ನು ವಹಿಸಿಕೊಂಡರು.

ಕ್ರಿ.ಶ. 1485ರಲ್ಲಿ ವಿಜಯನಗರ ಸಿಂಹಾಸನದ ಆಕ್ರಮಣದಿಂದ ಉಂಟಾದ ಅಶಾಂತ ಪರಿಸ್ಥಿತಿಯ ಲಾಭಪಡೆದು ಉಮ್ಮತ್ತೂರು ಪಾಳೇಗಾರರು ವಿಜೃಂಭಿಸಿದರು. ತೆಲುಗುಕಾವ್ಯ **ಜೈಮಿನಿ ಭಾರತವು** ಸಾಳುವ ನರಸಿಂಹನು ಕೊಂಗುಧರಾಪುರಿ ಮತ್ತು ಪೆನುಗೊಂಡ ದುರ್ಗಗಳನ್ನು ಆಕ್ರಮಿಸಿದನೆಂದು ತಿಳಿಸುತ್ತದೆ.[76] ವರಾಹ ಪುರಾಣವು ಸಾಳುವ ನರಸಿಂಹನ ಸೇನಾಪತಿ ಈಶ್ವರನಾಯಕನು ಪೆನುಗೊಂಡ, ಬೆಂಗಳೂರು ಮತ್ತು ಶ್ರೀರಂಗಪಟ್ಟಣಗಳನ್ನು ಗೆದ್ದನೆಂದು ತಿಳಿಸುತ್ತದೆ.[77] ಉಮ್ಮತ್ತೂರು ಪಾಳೇಗಾರರ ಅಡಿಯಲ್ಲಿ ನೀಲಗಿರಿ, ಕೊಂಗು ಧರಾಪುರಿಗಳಿದ್ದಿರಬೇಕು. ಅವರ ಪಾಳೆಯಪಟ್ಟಿನಲ್ಲಿ ಶ್ರೀರಂಗಪಟ್ಟಣವು ಪ್ರಮುಖ ದುರ್ಗವಾಗಿತ್ತು. ಆಗ ಬೆಂಗಳೂರು ಅವರ ಅಧೀನವಾಗಿರಬಹುದು. ಆದ್ದರಿಂದ ಉಮ್ಮತ್ತೂರಿನ ಪಾಳೇಗಾರರಿಗೂ ರಾಯರಿಗೂ ವೈರತ್ವವು ಸಾಳುವ ನರಸಿಂಹನ ಕಾಲಕ್ಕೆ ಬಲವಾಯಿತು. ಆದರೆ ಈ ಬಂಡಾಯದ ಮುಖಂಡನಾರೆಂದಾಗಲೀ, ಆಗ ಉಮ್ಮತ್ತೂರಿನ ಪಾಳೇಗಾರ ಯಾರಿದ್ದರೆಂದಾಗಲೀ ತಿಳಿದಿಲ್ಲ. ಶಾಸನಗಳ ಆಧಾರದ ಮೇಲೆ ಉಮ್ಮತ್ತೂರನ್ನು ಆಗ ಆಳುತ್ತಿದ್ದ, ಮೊದಲನೇ ದೇಪಣ್ಣ ಅಂದರೆ ನಂಜರಾಜನ ಸೋದರನೇ ಕ್ರಿ.ಶ. 1482–1494ವರೆಗೆ ಪರಿಪಾಲಿಸುತ್ತಿದ್ದವನು ಅವನೇ ಸಾಳುವ ನರಸಿಂಹನ ವಿರುದ್ಧ ಬಂಡಾಯವೆದ್ದಿರಬೇಕು.

ಸಾಳುವ ನರಸಿಂಹನ ಮರಣಾನಂತರ ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣದ ಪಾಳೇಗಾರರು ಮತ್ತೆ ಬಂಡಾಯವೆದ್ದರು. ಈ ಕಾರಣಕ್ಕಾಗಿ ನರಸನಾಯಕನು ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಬೇಕಾಯಿತು. ಆಗ ತುಂಬಿ ಹರಿಯುತ್ತಿದ್ದ ಕಾವೇರಿಯನ್ನು ದಾಟಲು ಆತನು ಸೇತುವೆಯನ್ನು ನಿರ್ಮಿಸಬೇಕಾಯಿತು. ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿ ಅಲ್ಲಿನ ಅಧಿಪತಿಗಳನ್ನು ಸೆರೆಹಿಡಿಯಲಾಯಿತು. ನರಸನಾಯಕನ ಕಾಲಿಗೆ ಬಿದ್ದು ನಂಜರಾಜನು ಜೀವವುಳಿಸಿಕೊಂಡನು.[78] ನರಸನಾಯಕನ ಈ ವಿಜಯಗಳು ಅಂದಿನ ಶಾಸನ ಮತ್ತು ಸಾಹಿತ್ಯದಲ್ಲಿ ವರ್ಣಿಸಲ್ಪಟ್ಟಿವೆ. **ರಾಜನಾಥ ಡಿಂಡಿಮ**[79] ಮತ್ತು ತಿರುಮಲಾಂಬಾ ತಮ್ಮ ಕೃತಿಗಳಲ್ಲಿ **ನರಸನಾಯಕನು ಕಾವೇರಿಗೆ ಸೇತುವೆ ನಿರ್ಮಿಸಿದ್ದನ್ನೂ,** ಅದನ್ನು ದಾಟಿ ಹೋಗಿ ಶತ್ರುಗಳನ್ನು ಶಿಕ್ಷಿಸಿದ್ದನ್ನೂ ಹಲವಿಧವಾಗಿ ವರ್ಣಿಸಿದ್ದಾರೆ.



ಕೊಂಗುದೇಶ ರಾಜರ್ಕಳಿನ್ ಚರಿತಂ[80]ದಲ್ಲಿ ವಿಜಯನಗರದ ಸೇನಾಪತಿ ಉದ್ದಂಡನು **ಜೀವಗ್ರಾಹ** ಮಾಡಿದನೆಂದು ಬರೆಯಲಾಗಿದೆ. ವೈರಿರಾಜನನ್ನೋ, ಸೇನಾಪತಿಯನ್ನೋ ಜೀವ ಸಹಿತ ಬಂಧಿಸಿದರೆ 'ಜೀವಗ್ರಾಹ' ಎನ್ನುವರು. ಇಲ್ಲಿ ಹೊಯ್ಸಳ ದಳಪತಿಯನ್ನು ಸೆರೆಹಿಡಿಯಲಾಯಿತು. ಆದ್ದರಿಂದ ಅವನು **ಜೀವಗ್ರಾಹ.** ಈ ವಿಜಯವನ್ನು ಕೊಂಗುದೇಶ ರಾಜರ್ಕಳಿನ್‌ಚರಿತ್ರಂ ಪ್ರಕಾರ ಸೇನಾಪತಿ ಉದ್ದಂಡನೇ ಸಾಧಿಸಿದನು.

**ಯಾರು ಈ ಉದ್ದಂಡ : ಕೊಂಗುದೇಶ ರಾಜರ್ಕಳಿನ್ ಚರಿತ್ರೆಯ :** ಪ್ರಕಾರ ವಿಜಯನಗರದ ಮಂತ್ರಿಯಾಗಿದ್ದ ಉದ್ದಂಡನು ಮುಸಲ್ಮಾನರ ವಿರುದ್ಧ ಅನೇಕ ಯುದ್ಧಗಳಲ್ಲಿ ಜಯಗಳಿಸಿ ಅಪಾರ ಸಂಪತ್ತಿನೊಂದಿಗೆ ಆನೆ ಕುದುರೆಗಳನ್ನು ತೆಗೆದುಕೊಂಡು ವಿಜಯನಗರ ಪಟ್ಟಣಕ್ಕೆ ಹೋಗಿ ನರಸನಾಯಕನನ್ನು ಕಂಡು ಎಲ್ಲ ವರದಿ ಒಪ್ಪಿಸಿದನು. ಆಗ ನರಸನಾಯಕನು ಅವನಿಗೆ **'ವಿಜಯ ಉದ್ದಂಡೇಂದ್ರ'** ಎಂಬ ಬಿರುದಿತ್ತು ಸನ್ಮಾನಿಸಿದನು. ಆದರೆ ಮುಸಲ್ಮಾನರ ವಿರುದ್ಧ ವಿಜಯನಗರ ಸೇನೆಯನ್ನು ಮುನ್ನಡೆಸಲು ನರಸನಾಯಕನು ಅರವೀಟಿ ರಾಮರಾಜನ ಮಗ ತಿಮ್ಮರಾಜುವನ್ನು ಸೇನಾಪತಿಯಾಗಿ ನೇಮಿಸಿದನು.[81] ಉದ್ದಂಡನನ್ನಲ್ಲ. **'ಪದ್ಯಬಾಲಭಾಗವತಮು'**ದಲ್ಲಿ ತಿಮ್ಮರಾಜುವಿನ ಸಾಧನೆಗಳನ್ನು ವಿವರಿಸಲಾಗಿದೆ. ಅದರ ಪ್ರಕಾರ ರಾಮರಾಜು ತಿಮ್ಮನು ಉದ್ದಂಡರಾಯನನ್ನು ಸೋಲಿಸಿದನು. ಪದ್ಯ ಬಾಲಭಾಗವತಮು ತಿಳಿಸುವ ವಿಷಯವನ್ನು ನಂಬುವುದಾದರೆ ನಾವು ಈ ಉದ್ದಂಡೇಂದ್ರ ಯಾರೆಂದು ಕಂಡುಹಿಡಿಯಬೇಕು ಮತ್ತು ಅವನನ್ನು ಅರವೀಟಿ ತಿಮ್ಮರಾಜು ಏಕೆ ದಂಡಿಸಬೇಕಾಯಿತು ಎಂದು ತಿಳಿಯಬೇಕು. ಕೊಂಗುದೇಶ ರಾಜರ್ಕಳಿನ್ ಚರಿತೆಯ ಪ್ರಕಾರ ಶ್ರೀರಂಗಪಟ್ಟಣ ಪ್ರಭುವನ್ನು ಜೀವಗ್ರಾಹ ಬಂಧಿಸಿದ್ದು ಸೇನಾಪತಿ ಉದ್ದಂಡನಾಗಲೀ ರಾಮರಾಜು ತಿಮ್ಮನಲ್ಲ. ಈ ಅವಧಿಯ ತಿ. ತಿ. ದೇವಸ್ಥಾನದ ಶಾಸನಗಳಲ್ಲಿ ಉದ್ದಂಡರಾಯರ ಉಳಗಪ್ಪನ್ ದಾನದತ್ತಿ ನೀಡಿದ ವಿಷಯವಿದೆ.[82] ಅಂದರೆ ಈತನೇ ಕೊಂಗುದೇಶ ರಾಜರ್ಕಳಿನ್ ಚರಿತಂನಲ್ಲಿ ಉಲ್ಲೇಖಿಸಲ್ಪಟ್ಟ ಸೇನಾಪತಿ.

**ಪಶ್ಚಿಮ ಕರಾವಳಿ :** ನರಸನಾಯಕನು ಪಶ್ಚಿಮ ಕರಾವಳಿಯ ಮೇಲೆ ದಾಳಿ ಮಾಡಲು ಕಾರಣವೇನು ? ಎಂತಹ ಸಂದರ್ಭದಲ್ಲಿ ಅಲ್ಲಿಯ ದುರ್ಗಗಳನ್ನು ವಶಪಡಿಸಿಕೊಂಡನು ? ಎಂಬುದು ತಿಳಿದಿಲ್ಲ ತಿರುಮಲಾಂಬಾ ಬರೆದ **'ವರದಾಂಬಿಕಾ ಪರಿಣಯಂ'**ದಲ್ಲಿ ನರಸನಾಯಕನ ಪಶ್ಚಿಮ ಕರಾವಳಿಯ ಸಾಧನೆಗಳ ಬಗ್ಗೆ ಸ್ವಲ್ಪ ಮಾಹಿತಿ ಲಭಿಸುತ್ತದೆ. ಪಶ್ಚಿಮಕ್ಕೆ ತಿರುಗಿ ಆತನು ದುಮಕಾರಾ ಮತ್ತು ತರಸಂಗಿ ಕೋಟೆಗಳನ್ನು ಜಯಿಸಿ ಅಲ್ಲಿಂದ ಮುಂದೆ ಪುಣ್ಯಕ್ಷೇತ್ರ ಗೋಕರ್ಣವನ್ನು ಸೇರಿ ಅನೇಕ ದಾನದತ್ತಿಗಳನ್ನು ನೀಡಿದನು.[83]

**ಗಜಪತಿಗಳೊಂದಿಗೆ ಕದನ :** ಕ್ರಿ.ಶ. 1497ರಲ್ಲಿ ಪುರುಷೋತ್ತಮ ಗಜಪತಿಯು ಗತಿಸಿದನು.[84] ಅವನ ನಂತರ ಅವನ ಮಗ ಪ್ರತಾಪರುದ್ರ ಗಜಪತಿಯು ಪಟ್ಟವೇರಿದನು. ಕ್ರಿ.ಶ. 1500ರ ಪ್ರತಾಪರುದ್ರ ಗಜಪತಿಯ **ಅನಂತವರಂ** ತಾಮ್ರಶಾಸನದ ಪ್ರಕಾರ ಅವನು ದಕ್ಷಿಣ ದಿಗ್ವಿಜಯ ಯಾತ್ರೆ ಹೊರಟು ಕೃಷ್ಣಾ ತೀರದಲ್ಲಿ ಬೀಡುಬಿಟ್ಟಿದ್ದನು.[85] ಆದರೆ ಅಲ್ಲಿ ಆತನ ಚಟುವಟಿಕೆಗಳು ಏನು ? ಎಂಬುದು ತಿಳಿದಿಲ್ಲ. ಕ್ರಿ.ಶ. 1501ರ **ರಾಜವೋವಿ** ತಾಮ್ರಪತ್ರಗಳ

ಪ್ರಕಾರ ಆ ವರ್ಷದ ಎಪ್ರಿಲ್–ಮೇ ಅವಧಿಯಲ್ಲಿ ಅವನು ಪೆನ್ನಾರ್ ಸಂಗಮದ ಹತ್ತಿರ ಇದ್ದಂತೆ ತಿಳಿಯುತ್ತದೆ.[86] ಅಲ್ಲಿ ಅವನು ಬ್ರಾಹ್ಮಣರಿಗೆ ನೀಡಿರುವ ದಾನದತ್ತಿಗಳು ಪ್ರಾಯಃ ತನ್ನ ದಕ್ಷಿಣ ದಿಗ್ವಿಜಯ ಯಾತ್ರೆ ಸಫಲವಾಗಲಿ ಎಂದು ಬಯಸಿ ಮಾಡಿರಬಹುದು.

**ಅರಗಲ್ಲೂರಿನ[87],** ಶಕವರ್ಷ 1424 ಅಂದರೆ ಕ್ರಿ.ಶ. 1501–02ರ ಎರಡು ಶಾಸನಗಳಲ್ಲಿ ನರಸನಾಯಕನಿಗೆ ಜಯವಾಗಲೆಂದು **ಅಮ್ಮನ ನಾಯಕನು** ನೀಡಿದ ದಾನದತ್ತಿಗಳ ವಿವರವಿದೆ. ಅಂದರೆ ಆ ಕಾಲದಲ್ಲಿ ನರಸನಾಯಕನು ಗಜಪತಿಗಳ ವಿರುದ್ಧ ಸಮರದಲ್ಲಿದ್ದನೆಂದು ತಿಳಿಯುತ್ತದೆ. ವೀರ ನರಸಿಂಹನ ನಗರಗೆರೆ ಶಾಸನದಲ್ಲಿ88 ನರಸನಾಯಕನ ಅನೇಕ ಬಿರುದುಗಳ ಜೊತೆಗೆ **'ಗಜಪತಿ ರಾಯಭ ಗಂಡ ಭೇರುಂಡ'** ಎಂಬ ಬಿರುದನ್ನು ಲಕ್ಷಿಸಬೇಕು. ಗಜಪತಿಗಳ ಮೇಲೆ ನರಸನಾಯಕನ ವಿಜಯದ ಬಗ್ಗೆ ಈ ಶಾಸನದಲ್ಲಿ ಮಾತ್ರವಲ್ಲ, ಬಹುತೇಕ ತುಳುವರ ಶಾಸನಗಳಲ್ಲಿ ಹೇಳಲಾಗಿದೆ. ಆದರೆ ಎರಡೂ ಸಾಮ್ರಾಜ್ಯಗಳ ಗಡಿರೇಖೆಗಳು ಬದಲಾಗಲಿಲ್ಲ. ಆದ್ದರಿಂದ ಗಜಪತಿಗಳು ದಕ್ಷಿಣದಲ್ಲಿ ತಮ್ಮ ಸಾಮ್ರಾಜ್ಯದ ವಿಸ್ತರಣೆಗೆ ಪ್ರಯತ್ನಿಸಿರಬೇಕು. ಆದರೆ ನರಸನಾಯಕನು ಅವರನ್ನು ಸಮರ್ಥವಾಗಿ ಎದುರಿಸಿ ಒರಿಯಾದವರನ್ನು ಅವರ ದಕ್ಷಿಣಗಡಿಯ ಕೇಂದ್ರವಾದ ಉದಯಗಿರಿಗೆ ಕಳಿಸಿದನು.

**ನರಸನಾಯಕನ ಜೀವನ–ಸಾಧನೆ :** ನರಸನಾಯಕನ ಮೇಲೆ ಸಾಳುವ ನರಸಿಂಹನು ಇಟ್ಟ ವಿಶ್ವಾಸ, ರಾಜ್ಯವನ್ನು ತನ್ನ ಮಕ್ಕಳನ್ನು ಅವನ ವಶಕ್ಕೆ ಒಪ್ಪಿಸಿದ ವಿಷಯದಿಂದ ಅವನ ಗುಣ ಮತ್ತು ವಿಶ್ವಾಸಾರ್ಹತೆಯು ವ್ಯಕ್ತವಾಗುತ್ತದೆ. ಅವನು ತಾನೇ ಸಾಮ್ರಾಟನಾಗಬಹುದಿತ್ತು. ಜನರ ಪ್ರೀತಿಗೂ, ಅಭಿಮಾನಕ್ಕೂ, ನ್ಯಾಯಧನನೆಂಬ ಅಭಿಪ್ರಾಯಕ್ಕೂ ಪಾತ್ರನಾಗಿದ್ದರೂ, ನರಸನಾಯಕನು ತನ್ನ ಜೀವನದ ಕೊನೆಯವರೆಗೂ ತನ್ನ ಪ್ರಭುವಿಗೆ ಕೊಟ್ಟ ಮಾತಿನಂತೆ ಜೀವಿಸಿದ್ದನು.[89] ಅವನು ರಾಜಕೀಯ ಚದುರಂಗದಾಟದಲ್ಲಿ ಚತುರನಾಗಿದ್ದ ಕಾರಣ ಅವನೆಂದೂ ನೇರ ದಾರಿ ಹಿಡಿಯಲಿಲ್ಲ. ಅವನು ತನ್ನ ಗುರಿಸಾಧನೆಗಾಗಿ ತಕ್ಕ ಕಾರ್ಯಮಾಡಲು ಸಂಪೂರ್ಣ ಸ್ವಾತಂತ್ರ್ಯ ಬೇಕಾಗಿತ್ತು. ರಾಜನು ಬಾಲಕನಾಗಿದ್ದಾಗ, ವಿಧೇಯ ಯುವಕನಾಗಿದ್ದಾಗ ಮಾತ್ರ ತನ್ನ ಯೋಜನೆಯಂತೆ ಕೆಲಸ ಮಾಡಲು ಸಾಧ್ಯವಾಗಿತ್ತು. ಆದ್ದರಿಂದ ಆತನು ಸಾಳುವ ನರಸಿಂಹನ ಮೂರನೇ ಮಗನನ್ನು ಮೊದಲಿಗೆ, ಅನಂತರ ಮಧ್ಯಮ ಪುತ್ರನನ್ನು, ಕೊನೆಗೆ ಅನಿವಾರ್ಯವಾಗಿ ಹಿರಿಯ ಮಗನನ್ನು ಪಟ್ಟಕ್ಕೇರಿಸಿದನು.

ಸಂಗಮ ವಂಶದ ಕೊನೆಯ ಅರಸರ ಕಾಲದಲ್ಲಿ ಬಂಡಾಯವೆದ್ದ ಪಾಳೇಗಾರರನ್ನು ಮತ್ತಿತರನ್ನು ಬಗ್ಗು ಬಡಿದು ಅಧೀನರಾಗಿರುವಂತೆ ಮಾಡಿದನು. ಮುಸಲ್ಮಾನರ ದೊರೆಗಳ ದಾಳಿಗಳನ್ನು, ದಕ್ಷಿಣದಲ್ಲಿ ಕಾಲಿಡಲು ಪ್ರಯತ್ನಿಸುತ್ತಿದ್ದ ಗಜಪತಿಗಳನ್ನು ನಿಗ್ರಹಿಸಿದನು. ಸಾಳುವ ನರಸಿಂಹನ ಪುತ್ರರ ಆಳಿಕೆಯ ಅವಧಿಯಲ್ಲಿ ನರಸನಾಯಕನೇ ಅಸಲು ಸಾಮ್ರಾಟನಾಗಿದ್ದನು. ಶಾಸನಗಳಲ್ಲಿ ಆತನನ್ನು **ರಕ್ಷಕರ್ತ, ಸ್ವಾಮಿ ಪಂಪು** (ಪ್ರತಿನಿಧಿ) ಎಂದು ಕರೆಯಲಾಗಿದೆ. ಆತನು ಅರಸನ **ಮಹಾಪ್ರಧಾನಿ, ದಂಡನಾಯಕ** ಮತ್ತು **ಕಾರ್ಯಕರ್ತ**ನಾಗಿದ್ದನು. ಹೆಸರಿಗೆ ಮಾತ್ರ ಮಹಾರಾಜನಾಗಿದ್ದ ಇಮ್ಮಡಿ ನರಸಿಂಹನ ಕಾಲದಲ್ಲಿ ಸಾಮ್ರಾಜ್ಯದ ಆಡಳಿತವು ಸಂಪೂರ್ಣವಾಗಿ ನರಸನಾಯಕನಿಂದಲೇ ನಡೆಯುತ್ತಿತ್ತು.



ಈ ಎಲ್ಲ ಜವಾಬ್ದಾರಿಗಳಲ್ಲಿ ನಿರತನಾಗಿದ್ದರೂ ನರಸನಾಯಕನು ಸಾಹಿತ್ಯ ಮತ್ತು ಕಲೆಗಳಿಗೆ ವಿಮುಖನಾಗಿರಲಿಲ್ಲ. ಆತನು ನಂದಿ ಮಲ್ಲಯ್ಯ ಮತ್ತು ಘಂಟಸಿಂಗಯ್ಯ ಅವರ ಪೋಷಕನಾಗಿದ್ದನು. ಆತನು ಎಂಟು ಭಾಷೆಗಳಲ್ಲಿ ನಿರತರಾದ ಪಂಡಿತ ಕವಿಗಳಿಗೆ ಆಶ್ರಯದಾತ ನಾಗಿದ್ದನು. ಅವರಿಗೆ ಧಾರಾಳವಾಗಿ ಸನ್ಮಾನಿಸಿದನು. **ಮೊದಲನೆಯ ಹರಿಹರ ಮತ್ತು ಬುಕ್ಕರಾಯರ ಕಾಲದಿಂದಲೂ ವಿಜಯನಗರ ಸಾಮ್ರಾಜ್ಯದಲ್ಲಿ ತೆಲುಗು ಸಾಹಿತ್ಯಕ್ಕೆ ವಿಶೇಷ ಸ್ಥಾನವಿತ್ತು, ಸಾಳುವ ನರಸಿಂಹನ ಕಾಲದಲ್ಲಿ ಅದು ವೃದ್ಧಿಯಾಯಿತು.** ನರಸನಾಯಕನಿಂದ ವಿಶೇಷ ಆದರ ಮತ್ತು ಪ್ರೋತ್ಸಾಹ ದೊರಕಿತು. ಅನಂತರ ಆತನ ಸುಪ್ರಸಿದ್ಧ ಮಕ್ಕಳ ಕಾಲದಲ್ಲಿ ವಿಶೇಷ ಪ್ರಗತಿಯನ್ನು ಸಾಧಿಸಿ ವೈಭವಯುತವಾಗಿ ಪ್ರವರ್ಧಮಾನವಾಯಿತು.[90]

**ಸಾಳುವ ವಂಶದ ಸಮಾಪ್ತಿ :** ನರಸನಾಯಕನ ಮರಣಾನಂತರ ಆತನ ಮಗ ವೀರನರಸಿಂಹನು **ಮಹಾಪ್ರಧಾನಿ**ಯೆಂದೂ ಇಮ್ಮಡಿ ನರಸಿಂಗರಾಯನ ಮುಖ್ಯ ಕಾರ್ಯಕರ್ತನೆಂದೂ ನೇಮಕವಾದನು. ಇಮ್ಮಡಿ ನರಸಿಂಹನ **ಚೆಂಗೋಡು ಶಾಸನ[91]** ದಿನಾಂಕ 2–02–1504 ಕ್ರಿ.ಶ. ಪ್ರಕಾರ ಇಮ್ಮಡಿ ನರಸಿಂಹನಿಗೆ ಸಮಸ್ತ ಅಧಿಕಾರಗಳು ಹಸ್ತಗತವಾಗಿದ್ದವು. ಅವನು ತನ್ನ ಕೊನೆಗಾಲದವರೆಗೆ ಸಮಸ್ತ ಅಧಿಕಾರಗಳನ್ನು ಚಲಾಯಿಸುತ್ತಿದ್ದನೆಂದು ಅನೇಕ ಶಾಸನಗಳು ತಿಳಿಸುತ್ತವೆ.[92] ಅವನ ಪ್ರಧಾನಿ ವೀರನರಸಯ್ಯಾ ಅಥವಾ ಇಮ್ಮಡಿ ನರಸಯ್ಯನು ಕೆಲಕಾಲದವರೆಗೆ ರಾಜ್ಯ ಮತ್ತು ರಾಜನಿಗೆ ವಿಧೇಯನಾಗಿ ಕೆಲಸ ಮಾಡಿದನು. ಆದರೆ ಅನಂತರ ಕೆಲ ದಂಡನಾಯಕರ ನೆರವಿನಿಂದ ತನ್ನ ಪ್ರಭುವನ್ನು ತೊಲಗಿಸಿ ತಾನೇ **ರಾಯ**ನೆಂದು ಪ್ರಕಟಿಸಿದನು. ಸಾಳುವ ವಂಶದ ಇಮ್ಮಡಿ ನರಸಿಂಹನನ್ನು ವೀರನರಸಿಂಹನ ಅಧಿಕಾರಿಯೊಬ್ಬನು ಕೊಲೆ ಮಾಡಿದನು. ಕೊಲೆ ಮಾಡಿದವರಿಗೂ ಯಾರನ್ನು ತಾವು ಕೊಲೆ ಮಾಡಿದೆವೆಂದೂ ಅರಿವಾಗದಂತೆ ಯೋಜನೆ ಮಾಡಲಾಗಿತ್ತು.[93] ಈ ರೀತಿಯಲ್ಲಿ ಸಾಳುವರ ಆಳಿಕೆ ಮುಗಿಯಿತು. ವೀರ ನರಸಿಂಹನೆಂದು ಕರೆಯಲ್ಪಟ್ಟ ವೀರನರಸಿಂಹಯ್ಯನು ವಿಜಯನಗರದಲ್ಲಿ ತುಳುವರ ಆಡಳಿತವನ್ನು ಪ್ರಾರಂಭಿಸಿದನು.

---

**ಅಡಿ ಟಿಪ್ಪಣಿಗಳು**

1. ಪಿ. ಶ್ರೀರಾಮ ಶರ್ಮ, ಸಾಳುವ ವಂಶ ಪು. 72
2. ವರಾಹ ಪುರಾಣಮು I
3. ಅದೇ I-13
4. ಪಿ. ಶ್ರೀರಾಮಶರ್ಮ ಪೂರ್ವೋಕ್ತ ಪು. 145–149
5. ಸಾಳುವಾಭ್ಯುದಯಮು. ಅಧ್ಯಾಯ IV
6. ವರಾಹಪುರಾಣಮು I-30
7. ಪಿ. ಶ್ರೀರಾಮ ಶರ್ಮ ಪೂರ್ವೋಕ್ತ ಪ್ರ. 161
8. ಅದೇ ಪು. 167–168
9. ವರಾಹಪುರಾಣಮು I-13 ಪಾರಿಜಾತಪಹರಣಮು I-10
10. ಫ. ಎಂ. ನೂನಿಜ್ ಪು. 295
11. ತಿ. ತಿ. ದೇ. ಎ. ರಿ. ಪು. 147
12. ಅದೇ ವಂಶಾವಳಿಯ ಅಧ್ಯಾಯ
13. ಬ್ರಿಗ್ಸ್ II ಪು. 537–538
14. ಅದೇ ಪು. 13

15. ಅದೇ ಅ–III ಪು. 11
16. ಅದೇ II ಪು. 13
17. ಅದೇ
18. ಫರ್ದರ್ ಸೋರ್ಸಸ್ II-16
19. A.R.E. 836-1909
20. ಫ. ಎಂ. ಪು. 295
21. ಫ. ಎಂ.ನೂನಿಜ್ ಪು– 295
22. ಫರ್ದರ್ ಸೋರ್ಸಸ್ : II - 91
23. ಫ.ಎಂ. ನೂನಿಜ್ ಪು. 290
24. ಪಿ. ಶ್ರೀರಾಮಶರ್ಮ ಪೂರ್ವೋಕ್ತ ಪು. 202
25. ಆರುದ್ರ ಸಮಗ್ರಾಂಧ್ರ ಸಾಹಿತ್ಯಮು ಮಲಿರಾಯಲಯುಗಮು ಪು. 59
26. ಫರ್ದರ್ ಸೋರ್ಸಸ್ I ಪು. 156
27. ಅದೇ ಪು. 157
28. M.A.R. 1928 ಪ್ಯಾರಾ 44
29. M.A.R 1908 ಪ್ಯಾರಾ 66
30. ಎ.ಕ. X ಗುಂಡ್ಲುಪೇಟೆ 78
31. ARE 664 -1909 & 445 -1913
32. ಅದೇ 177–1940–41
33. ARE 177-1936
34. ಎ.ಕ. II ಭಾಗ I ಮೈ 33 AR 511-1928-29
35. ಅದೇ V ಚ. 259
36. ಎ.ಕ. IX ಚ. AR 511-1928-29
37. ಫರ್ದರ್ ಸೋರ್ಸಸ್ ಪು. 157
38. ಅದೇ II 129 (b)
39. ಎ.ಕ. VIII ನಗರಕೆರೆ – 64
40. ಎ. ಕ. X GD 77, ಪು. 229
41. ARE 1908--09 ಪು. 171
42. ಸೋರ್ಸಸ್ ಪು. 106
43. ಅದೇ ಪು. 109–1
44. ಅದೇ ಪು. 172–75
45. ಪಿ. ಶ್ರೀರಾಮ ಶರ್ಮ ಪೂರ್ವೋಕ್ತ ಪು. 2018
46. ಫ.ಎಂ. ಪು. 307–308
47. ಫರ್ದರ್ ಸೋರ್ಸಸ್ III 104
48. ಫರಿಷ್ತಾ ಬ್ರಿಗ್ಸ್ II ಪು. 10, ಕೆ.ಎ.ಎನ್. ಶಾಸ್ತ್ರಿ–ಎ ಓಸ್ಮರಿ ಆಫ್ ಸೌತ್ ಇಂಡಿಯಾ
49. ದಿ. ಹಿಸ್ಟರಿ ಅಂಡ್ ಕಲ್ಚರ್ ಆಫ್ ಇಂಡಿಯನ್ ಪೀಪಲ್ ಸಂ. IV ಪು. 304 ಪು. 265
50. ಫರಿಷ್ತಾ – ಬ್ರಿಗ್ಸ್ III ಪು. 13
51. ಫರ್ದರ್ ಸೋರ್ಸಸ್ I ಪು. 162
52. ಫರಿಷ್ತಾ ಬ್ರಿಗ್ಸ್ III ಪು. 11 ಫರ್ದರ್ ಸೋರ್ಸಸ್ I ಪು. 163
53. ಫರಿಷ್ತಾ ಬ್ರಿಗ್ಸ್ III ಪು. 12–13
54. ಫರ್ದರ್ ಸೋರ್ಸಸ್ II 108, ಸೋರ್ಸಸ್ ಪು. 207
55. ಪಿ, ಶ್ರೀರಾಮಶರ್ಮ ಪೂರ್ವೋಕ್ತ ಪು. 211–212
56. ಅದೇ



57. ಅದೇ
58. ಸೋರ್ಸಸ್ ಪು. 54 ಪು. 170–174
59. ಫರ್ದರ್ ಸೋರ್ಸಸ್ I ಪು. 167
60. ಫರ್ದರ್ ಸೋರ್ಸಸ್ II 95 (a) ಪು. 76
61. ARE 524, 527-1920, 448-1922
62. ARE 396-1918, 49, 51, 54-1920 75-1913
63. ಫರ್ದರ್ ಸೋರ್ಸಸ್ II 95 (a) ಪು. 76–77
64. ಫರ್ದರ್ ಸೋರ್ಸಸ್ II 95 (a)
65. ಫರ್ದರ್ ಸೋರ್ಸಸ್ II 95 (a)
66. ಪಿ. ಶ್ರೀರಾಮ ಶರ್ಮ ಪೂರ್ವೋಕ್ತ 214–216
67. ಎ. ಕೆ. ಸ್ವಾಮಿ ದಿ. ಟಮಿಲ್ ಕಂಟ್ರಿ ಅಂಡರ್ ವಿಜಯನಗರ ಪು. 145 ಮತ್ತು ಫರ್ದರ್ ಸೋರ್ಸಸ್ I ಪು. 169 ಅಡಿಟಿಪ್ಪಣಿ
68. ಫರ್ದರ್ ಸೋರ್ಸಸ್ I ಪು. 169 ಅಡಿ
69. ಸೋರ್ಸಸ್ ಪು. 174–75
70. ಫರ್ದರ್ ಸೋರ್ಸಸ್ ಪು. 159 ಸೋರ್ಸಸ್ ಪು. 108 ಎ. ಕೆ. ಸ್ವಾಮಿ ಪೂರ್ವೋಕ್ತ ಪು. 147
71. ಎ.ಕ. X.I GD ಎ.ಕ. XI HK 94 ಮತ್ತು ನರಸನಾಯಕನ ಮಕ್ಕಳ ಎಲ್ಲಾ ಶಾಸನಗಳು
72. ಪಿ. ಶ್ರೀರಾಮ ಶರ್ಮ ಪೂರ್ವೋಕ್ತ ಪು. 217
73. ಎ.ಕೆ. ಸ್ವಾಮಿ ಪೂರ್ವೋಕ್ತ ಪು. 159–160
74. ಸೋರ್ಸಸ್ ಪು. 10
75. ಎ.ಕ. II ಇಂಡೆಕ್ಸ ಪು. 27
76. I. 8 - I. 45
77. ವಿ.ಪಿ. I
78. MAR 1916 ಪ್ಯಾರಾ 102
79. ಸೋರ್ಸಸ್ ಪು. 109
80. ಫರ್ದರ್ ಸೋರ್ಸಸ್ II 95
81. ಸೋರ್ಸಸ್ ಪು. 204–205
82. ತಿ. ತಿ. ದೇ. ಇ. III 5 & 8
83. ಸೋರ್ಸಸ್ ಪು. 174
84. S.I.I. VI ಸಂ–1162
85. ಆಂಧ್ರ ಪತ್ರಿಕಾ –ವಾರ್ಷಿಕ 1928 ಪು. 175–76 ಫರ್ದರ್ ಸೋರ್ಸಸ್ II 93
86. ಭಾರತೀ 1938 II ಆಗಸ್ಟ್ ಪು. 23
87. ARE 450 ಮತ್ತು 455–1913
88. ಎ.ಕ. X GD 77
89. ಪಿ. ಶ್ರೀರಾಮ ಶರ್ಮ ಪೂರ್ವೋಕ್ತ ಪು. 222
90. ನೇಲಟೂರು ವೆಂಕಟರಮಣಯ್ಯ – ದಿ. ಕಿಂಗ್ಡಂ ಆಫ್ ವಿಜಯನಗರ, ಭಾರತೀಯ ವಿದ್ಯಾಭಿಮಾನ ಸಂ.IV ಪು. 36
91. E.A. VOL II (ಎಪಿಗ್ರಾಫಿಕಾ ಆಂಧ್ರಿಕಾ)
92. ARE 330-1921 412-1913 354-359-1912 396-1912 ಎ.ಕ. X GD 138 ಎ.ಕ. XII Mi 50 ಎ. ಇಂ.VII 74. F.
93. ಫ. ಎಂ. ಪು. 299

## ಅಧ್ಯಾಯ – ೫

# ವೀರನರಸಿಂಹರಾಯ (ಕ್ರಿ.ಶ. 1505–1509)

ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಭುಜಬಲ ವಸಂತರಾಯ ವೀರನರಸಿಂಹರಾಯ ಮಹಾರಾಯರು ಕ್ರಿ.ಶ. 1505ರಲ್ಲಿ ವಿಜಯನಗರ ರಾಜ್ಯಭಾರ ಮಾಡುತ್ತಿದ್ದರು.[1] ಶಾಸನಗಳ ಪ್ರಕಾರ ಆತನನ್ನು **ರಾಯ**ನೆಂದು 28–02–1505 ಮತ್ತು 6–03–1505ರ ನಡುವೆ ಘೋಷಿಸಲಾಯಿತು. ವೀರಪ್ಪಯ್ಯ ಕಾಲಜ್ಞಾನದ ಪ್ರಕಾರ ನರಸನಾಯಕನ ಮಗನಾದ ವೀರನರಸಿಂಹರಾಯ **ರಕ್ತಾಕ್ಷಿ** ಸಂವತ್ಸರದಿಂದ ಐದು ವರ್ಷಕಾಲ ರಾಜ್ಯಪರಿಪಾಲನೆ ಮಾಡಿದನು.[2]

**ಎರಡನೆಯ ಬಾರಿ ಸಿಂಹಾಸನ ಗ್ರಹಣ ಮಾಡಲು ಕಾರಣಗಳೇನು ?**

ಸಾಳುವ ನರಸಿಂಹನು ತನ್ನ ಖಡ್ಗದ ಸಹಾಯದಿಂದ ಗ್ರಹಿಸಿದ ಸಾಮ್ರಾಜ್ಯವನ್ನು ತನ್ನ ಆಪ್ತನೂ, ವಿಶ್ವಾಸಿಕ ಸೇನಾಪತಿಯೂ ಆದ ನರಸನಾಯಕನಿಗೆ ತನ್ನ ಮಕ್ಕಳು ಪ್ರಾಪ್ತವಯಸ್ಕರಾದ ಮೇಲೆ ವಹಿಸಿಕೊಡಬೇಕೆಂಬ ಷರತ್ತಿನ ಮೇಲೆ ನೀಡಿದನು. ನರಸನಾಯಕನು ರಾಜ್ಯದ ಹಿತ ದೃಷ್ಟಿಯಿಂದ ಸಾಳುವ ನರಸಿಂಹನ ಮೂರನೆಯ ಮಗನನ್ನು ಅನಂತರ ಎರಡನೆಯ ಮಗನನ್ನು ಪಟ್ಟಕ್ಕೇರಿಸಿದನು. ಅವರ ನಂತರ ಗತ್ಯಂತರವಿಲ್ಲದೇ ಜ್ಯೇಷ್ಠಪುತ್ರನನ್ನು ಗದ್ದಿಗೆಗೆ ತಂದನು. ಆದರೆ ಪಟ್ಟವೇರಿದ ಇಮ್ಮಡಿ ನರಸಿಂಹನು ನರಸನಾಯಕನನ್ನು ಮಹಾಪ್ರಧಾನಿ ಸ್ಥಾನದಿಂದ ವಜಾಮಾಡಿ, ನಾದಿಂಡ್ಲ ತಿಮ್ಮರಸಯನನ್ನು ಆಸ್ಥಾನಕ್ಕೆ ನೇಮಿಸಿದನು. ನರಸನಾಯಕನ ಶತ್ರುಗಳಿಗೆ ನಾನಾ ಅಧಿಕಾರಗಳನ್ನು, ಅನುಕೂಲಗಳನ್ನು ನೀಡಿದನು. ಆದರೆ ನರಸನಾಯಕನು ದೊಡ್ಡ ಸೈನ್ಯವನ್ನು ಜಮಾಯಿಸಿ ಸಾಮ್ರಾಟನನ್ನು ಬೆದರಿಸಿ, ಆತನ ಸೋದರನ ಕೊಲೆಪಾತಕನನ್ನು ಶಿಕ್ಷಿಸುವಂತೆ ಮಾಡಿದನು. ವಿಜಯನಗರದ ಪ್ರಜೆಗಳು ನರಸನಾಯಕನ ಕ್ರಮಗಳನ್ನು ಅನುಮೋದಿಸಿದರು.[3] ನರಸನಾಯಕನು ಸಂದರ್ಭದ ಒತ್ತಡದಿಂದ ಯುವ ಸಾಮ್ರಾಟನ ವಿರುದ್ಧ ಕಠಿಣ ನಿಲುವನ್ನು ಅನುಸರಿಸಿದನು. ರಾಜ್ಯದ ಸಮಸ್ತ ಅಧಿಕಾರ ಸೂತ್ರಗಳನ್ನು ತನ್ನ ವಶದಲ್ಲಿಟ್ಟುಕೊಂಡು ರಾಜನ ಅನುಮತಿಯಂತೆ ಆಡಳಿತ ನಡೆಸಿದನು. ಈ ರೀತಿಯ ನರಸನಾಯಕನ ಪ್ರವರ್ತನೆಯು ಆತನ ಉದ್ದೇಶಗಳ ಬಗ್ಗೆ ಸಂಶಯಕ್ಕೆ ಕಾರಣವಾಯಿತು. ಆದರೆ ಅವನು ರಾಯನ ನಿಷ್ಠಾವಂತ ಪ್ರಾಮಾಣಿಕ ಸೇವಕನಾಗಿಯೇ ಕ್ರಿ.ಶ. 1503ರಲ್ಲಿ ಶಿವಾಧೀನನಾದನೆಂದು ಹೇಳಲು



ಆಧಾರಗಳಿವೆ. ಆದರೆ ನರಸನಾಯಕನು ಸಾಯುವ ಮೊದಲು ಆತನ ಮಗನಾದ ವೀರನರಸಿಂಹನು **ಶಿರಪ್ರಧಾನಿ** ಯೆಂದು ನೇಮಕವಾದ ವಿಷಯವು ತೃಪ್ತಿ ನೀಡಿತು.

ಸಾಮ್ರಾಜ್ಯದ ದಿನವಹಿ ಆಡಳಿತದಲ್ಲಿ ವೀರನರಸಿಂಹನು ತಂದೆಯಷ್ಟೇ ಸಮರ್ಥನೆನಿಸಿದನು. ಆದರೆ ನರಸನಾಯಕನಂತೆ ಈತನು ಸಾಳುವ ನರಸಿಂಹನಿಗಾಗಲೀ ಆತನ ಮಗ ವೀರನರಸಿಂಹನಿಗಾಗಲೀ ಆಭಾರಿಯಾಗಿರುವ ಆವಶ್ಯಕತೆ ಇರಲಿಲ್ಲ. ರಾಜ ವೈಭವ ಮತ್ತು ವಿಜೃಂಭಣೆಯೆಲ್ಲಾ ಸಾಮ್ರಾಟನಿಗೆ ಜವಾಬ್ದಾರಿ ಮತ್ತು ಅಧಿಕಾರ ತನ್ನ ಹೊಣೆಯಾಯಿತೆಂಬ ಭಾವನೆ ಆತನಲ್ಲಿ ಮೂಡಿತು. ಈ ಪರಿಸ್ಥಿತಿಯನ್ನು ಸಂಚುಗಾರ ಸೇನಾಪತಿಗಳು ಇನ್ನಷ್ಟು ಹದಗೆಡಿಸಿದರು.

**ನೂನಿಜ್ ಪ್ರಕಾರ :** 'ರಾಯನು ಸಾಮ್ರಾಟ ಪದವಿಗೆ ಅಯೋಗ್ಯನಾಗಿರುವುದರಿಂದ ಅವನನ್ನು ನಾವು ಹತ್ಯೆ ಮಾಡುತ್ತೇವೆ ಎಂದು ಕೆಲ ಸೇನಾಪತಿಗಳು ವೀರನರಸಿಂಹನಿಗೆ ಸೂಚಿಸಿದರಂತೆ. ರಾಯನು ಇದಕ್ಕೆ ಪ್ರತಿಕ್ರಿಯಿಸಲಿಲ್ಲ ಆದರೆ ಕೆಲ ಕಾಲಾನಂತರ ವೀರನರಸಿಮಹನು ಸೇನಾಪತಿಗಳ ಸೂಚನೆಯ ಬಗ್ಗೆ ಯೋಚಿಸಿದನು. ತಾನು ಕೇವಲ ಮಂತ್ರಿಯಾಗಿರುವ ಪರಿಸ್ಥಿತಿಯಿಂದ ಸಾಮ್ರಾಟನಾಗಲು ಸುಲಭದ ದಾರಿಯೆಂದು ಆತನಿಗೆ ಅನಿಸಿತು.'

**ಸಂಚು ಮತ್ತು ಕೊಲೆ :** ಮುಂದಿನ ಯೋಜನೆ ಅನುಸರಿಸಿ ಸಾಮ್ರಾಟನ ವಾಸ್ತವ್ಯವನ್ನು ಪೆನುಗೊಂಡೆಗೆ ಬದಲಾಯಿಸಲಾಯಿತು. ಆತನ ರಕ್ಷಣೆಗೆ ಇಪ್ಪತ್ತು ಸಾವಿರ ಸೈನಿಕರನ್ನು ನೇಮಿಸಲಾಯಿತು. ವೀರನರಸಿಂಹನ ನಂಬುಗೆಯ ಬಂಟನಾದ ತಿಮ್ಮಪ್ಪನಾಯಕನನ್ನು ಸೇನಾಪತಿಯೆಂದು ನೇಮಿಸಲಾಯಿತು. ಅವನಿಗೆ ಸಾಮ್ರಾಟನು ಊರು ಬಿಡಲು ಅವಕಾಶ ನೀಡಬಾರದು, ಅಲ್ಲದೇ ಸಾಮ್ರಾಟನನ್ನು ಅವನ ವಿರುದ್ಧ ನಡೆಯುವ ಹುನ್ನಾರಗಳಿಂದ ರಕ್ಷಿಸಬೇಕು[4] ಎಂದು ಕಟ್ಟಪ್ಪಣೆ ಮಾಡಲಾಯಿತು.

ವಿಜಯನಗರದ ಪ್ರಜೆಗಳ ದೃಷ್ಟಿಯಿಂದ ಸಾಮ್ರಾಟನನ್ನು ದೂರ ಮಾಡಿದ ಮೇಲೆ ವೀರನರಸಿಂಹನು ಈ ಮುಂಚೆ ರಾಯನ ಕೊಲೆ ಮಾಡಬೇಕೆಂದು ಸೂಚಿಸಿದ ದಳಪತಿಗಳನ್ನು ಕರೆದು

1. ನನ್ನ ಮೇಲೆ ಯಾವ ಅಪವಾದವೂ ಬರದಂತೆ ಹೇಗೆ ರಾಯನ ಹತ್ಯೆ ಮಾಡುವಿರೆಂದು ಕೇಳಿದನು.

2. ಅವರಲ್ಲಿ ಒಬ್ಬಾತನು (ಅನಂತರ ಅವನ ಹೆಸರು ಕೊಂಡಮರಸಯ್ಯ ಎಂದು ತಿಳಿಯಿತು)[5]

ಹೀಗೆ ಹೇಳಿದನು – ತಾನು ಪ್ರಧಾನಿಯೊಂದಿಗೆ ಸಿಟ್ಟಾದಂತೆ ನಟಿಸಿ ಆತನನ್ನು ತನ್ನ ಮುಂದೆ ಹಾಜರಾಗಲು ಆಜ್ಞಾಪಿಸಬೇಕು. ಈ ಆಜ್ಞೆಯನ್ನು ಅವನು ಧಿಕ್ಕರಿಸುತ್ತಾನೆ. ಈ ರೀತಿ ತನ್ನ ಆಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ಆತನಿಗೆ ಶಿಕ್ಷೆ ನೀಡಬೇಕು. ಇದರಿಂದ

ಕುಪಿತನಾದ ಆತನು ನಗರವನ್ನು ಬಿಟ್ಟು ಪೆನುಗೊಂಡೆಗೆ ಹೋಗಬೇಕು ಅಲ್ಲಿದ್ದ ಅರಸನ ಮುಂದೆ ಫಿರ್ಯಾದಿ ಹೇಳಿ ಪ್ರಧಾನಿಯ ವಿರುದ್ಧ ಸಿಟ್ಟಾಗುವಂತೆ ಮಾಡುವುದು. ಅಲ್ಲಿಂದ ಕ್ರಮೇಣ ಅರಸನ ವಿಶ್ವಾಸಕ್ಕೆ ಪಾತ್ರನಾಗಿ ಅವನು ಸಂಚುಮಾಡಿ ರಾಜನನ್ನು ಉಬ್ಬಿಸಿ ಅವನಿಂದ ಬರೆದಂತೆ ಪತ್ರಗಳನ್ನು ಸೃಷ್ಟಿಸಿ ಅದರಲ್ಲಿ–ತಾನು ಪೆನುಗೊಂಡೆಯಲ್ಲಿ ಸೆರೆಯಾಳಾಗಿ ಜೀವಿಸುತ್ತಿದ್ದೇನೆ. ನಾನು ಇಲ್ಲಿಂದ ಪಾರಾಗಲು ಯೋಚಿಸುತ್ತಿದ್ದೇನೆ. ನಾನೇ ವಿಜಯನಗರ ಸಾಮ್ರಾಜ್ಯದ ನಿಜವಾದ ಪ್ರಭು ಮತ್ತು ಸಾಮ್ರಾಟ ಆದರೆ ನನ್ನ ಆಳಾದ ವೀರನರಸಿಂಹನ ಕೈಯಲ್ಲಿ ಸಮಸ್ತ ಅಧಿಕಾರವಿದೆ. ಅವನು ರಾಜ್ಯದಲ್ಲಿ ತಾನೇ ಪ್ರಬಲನಾಗಿ ಸಮಸ್ತ ಅಧಿಕಾರವನ್ನು ವಹಿಸಿಕೊಂಡು, ನಿಜವಾದ ಸಾಮ್ರಾಟನನ್ನು ಸೆರೆಯಲ್ಲಿಟ್ಟು ಬಂಡಾಯವೆದ್ದಿದ್ದಾನೆ. ಆದ್ದರಿಂದ ಅರಸನು ರಹಸ್ಯವಾಗಿ ಪೆನುಗೊಂಡೆಯಿಂದ ಪಾರಾಗಿ ಪತ್ರ ಬರೆದಿರುವ ದಳಪತಿಯ ಕೋಟೆಯನ್ನು ಸೇರಬೇಕು. ಅಲ್ಲಿಂದ ತನಗೆ ವಿಶ್ವಾಸಪಾತ್ರರಾದ ದಳಪತಿಗಳ ದೊಡ್ಡ ಸೇನೆಯ ಮುಖಂಡತ್ವ ವಹಿಸಬೇಕು. ಪ್ರಭುವಿನ ಇಂಗಿತವನ್ನು ತಿಳಿದ ಅವರೆಲ್ಲಾ ಆತನ ಆಜ್ಞೆಯನ್ನು ಪಾಲಿಸುವರು. ಅಲ್ಲದೇ ತಮ್ಮ ನಾಯಕತ್ವದಲ್ಲಿ ಅವರೆಲ್ಲಾ ತಮ್ಮೊಂದಿಗೆ ಬಂದು ವೀರನರಸಿಂಹನನ್ನು ಬಂಧಿಸಿ ಈಗ ತಾವು ಇರುವ ಕೋಟೆಗೆ ಸೇರಿಸುವರು ಮತ್ತು ತಾವು ಸಾಮ್ರಾಟರಾಗುವಿರಿ.

ಈ ಎಲ್ಲ ವಿಷಯಗಳನ್ನು ಅರಸನಿಗೆ ಮನದಟ್ಟು ಮಾಡಿದ ನಂತರ ಆತನು ಪೆನುಗೊಂಡೆಯಿಂದ ಪಾರಾಗಲು ಏರ್ಪಡಿಸುತ್ತೇನೆ. ಅಲ್ಲದೇ ಅದೇ ವೇಳೆಯಲ್ಲಿ ಆತನನ್ನು ಕೊಲ್ಲುತ್ತೇನೆ. ಆಗ ಸುಲಭವಾಗಿ ತಾವೇ ಸಾಮ್ರಾಟನಾಗಬಹುದು.

ವೀರನರಸಿಂಹನು ಈ ರಾಜದ್ರೋಹದ ಕತೆಯನ್ನು ಕೇಳಿ ಸಂತೋಷಪಟ್ಟು ಅಂಗೀಕರಿಸಿದನು. ಕೊಂಡ ಮರಸಯ್ಯ ಕೆಲಕಾಲಾನಂತರ ವಿಜಯನಗರದಿಂದ ಏನೋ ಕಾರಣ ಹೇಳಿ ಪಲಾಯನ ಮಾಡಿದನು. ಅವನು ಪೆನುಗೊಂಡೆ ಸೇರಿದನು. ಕೆಲದಿನಗಳ ನಂತರ ತನ್ನ ಯೋಜನೆಯ ಪ್ರಕಾರ ಕೆಲಸ ಪ್ರಾರಂಭಿಸಿದನು. ಪ್ರತಿದಿನ ರಾಜನಿಗೆ ಒಂದೊಂದು ದುರ್ಗಾದಿಪತಿಯ ಪತ್ರವನ್ನು ತೋರಿಸತೊಡಗಿದನು. ಅವರ ಪತ್ರಗಳಿಗೆ ಉತ್ತರಿಸಿದ ಅರಸನು ಅವರ ಅಭಿಪ್ರಾಯ ತನಗೆ ಸಮ್ಮತವೆಂದು ಉತ್ತರಿಸಿದನು. ಆದರೆ ವೀರ ನರಸಿಂಹನು ಅತ್ಯಂತ ಪ್ರಬಲನಾಗಿದ್ದನು. ರಾಜ್ಯದ ಪ್ರಧಾನಿಯಾಗಿದ್ದ ಅವನ ಕೆಳಗೆ ಸಮಸ್ತ ಗಜ ತುರಗ ಪದಾತಿ ಸೈನ್ಯವೂ, ರಾಜ್ಯ ಕೋಶವೂ ಇತ್ತು. ಅವನನ್ನು ತಾನು ಹೇಗೆ ಎದುರಿಸಲು ಸಾಧ್ಯವೆಂದು ಯೋಚಿಸಲಿಲ್ಲ. ಆದರೆ ಆತನ ಸಂಶಯಗಳಿಗೆ ಸಂಚುಕಾರನು ತಕ್ಕ ಸಮಾಧಾನ ನೀಡುತ್ತಿದ್ದನು. ರಾಜನೇ, ರಾಜ್ಯದ ಮಂಡಲಾಧಿಪತಿಗಳಿಗೆ ವೀರನರಸಿಂಹನೆಂದರೆ ಇಷ್ಟವಿಲ್ಲ. ಅವರೆಲ್ಲಾ ತಮ್ಮನ್ನೇ ಸಾಮ್ರಾಟನೆಂದು ಗೌರವಿಸುತ್ತಾರೆ. ತಾವು ಇಲ್ಲಿಂದ ಪಾರಾಗಿ ಚಂದ್ರಗಿರಿ ಸೇರಿದಾಗ ಅವರೆಲ್ಲಾ ತಮ್ಮ ಸುತ್ತ ನೆರೆಯುತ್ತಾರೆ. ತಾವೇ ಸಾಮ್ರಾಟರೆಂದು ಅವರು ನ್ಯಾಯಬದ್ಧವಾಗಿ ವಾದಿಸುತ್ತಾರೆ. ಆದರೆ ನನ್ನ ಸುತ್ತಲೂ ಕಾವಲಿರುವ ಈ ಇಪ್ಪತ್ತು ಸಾವಿರ ಯೋಧರ ಕಣ್ತಪ್ಪಿಸಿ ನಾನು ಪಾರಾಗುವುದು ಹೇಗೆ ? ಎಂದನು. ಆಗ ಅವನು 'ನನ್ನ ಯೋಜನೆ ಹೀಗಿದೆ, ನಾನು ನೀವು ಈ ತೋಟದ



ಮೂಲಕ ಕೋಟೆಯ ಗೋಡೆ ತಲುಪೋಣ. ಅಲ್ಲಿನ ರಕ್ಷಕ ಭಟರು ಅಂಗರಕ್ಷಕ ಇಲ್ಲದೇ ಏಕಾಂಗಿಯಾಗಿ ಬಂದ ತಮ್ಮನ್ನು ರಾಜನೆಂದು ಗುರುತಿಸುವುದಿಲ್ಲ. ಅಲ್ಲಿಂದ ನಾವು ಸುಲಭವಾಗಿ ಕೋಟೆಯಿಂದ ಹೊರಗೆ ಬಂದಕೂಡಲೇ ನಮ್ಮನ್ನು ಗಮ್ಯ ಸ್ಥಾನಕ್ಕೆ ಕೊಂಡೊಯ್ಯಲು ಕುದುರೆಗಳು ಸಿದ್ಧವಿರುತ್ತವೆ. ತಾವು ಅಲ್ಲಿಂದ ತಮಗೆ ಸುರಕ್ಷಿತವೆನಿಸಿದ ಸ್ಥಳಕ್ಕೆ ಧಾವಿಸಬಹುದು ಎಂದನು. ಇದರಿಂದ ಸಂತುಷ್ಟನಾದ ಅರಸನು ಸಂಚುಕಾರನ ಕೈಗೆ ತನ್ನನ್ನು ಅರ್ಪಿಸಿಕೊಂಡನು. ತನ್ನ ಯೋಜನೆ ಸಫಲವಾಗುತ್ತಿದ್ದಂತೆ ಕೊಂಡಮರಸನು ಉದ್ಯಾನವನ್ನು ಕಾಯುತ್ತಿದ್ದ 300 ರಕ್ಷಾ ಭಟರೊಂದಿಗೆ ಮಾತಾಡಿದನು. ರಾಯನು ಪ್ರತಿದಿನ ತನ್ನ ಅರಸಿಯರೊಂದಿಗೆ ಈ ಉದ್ಯಾನದಲ್ಲಿ ಉಲ್ಲಾಸದಿಂದ ಕಾಲಯಾಪನೆ ಮಾಡುತ್ತಿದ್ದನು.

ಈ ಉದ್ಯಾನದಲ್ಲಿ ಮುಂದೊಂದು ದಿನ ರಾತ್ರಿ ಕಾಲದಲ್ಲಿ ನಾನು, ನನ್ನೊಂದಿಗೆ ಅಪರಿಚಿತರೊಬ್ಬರು ಕಂಡಾಗ, ತಾವು ಅಪರಿಚಿತನನ್ನು ತಕ್ಷಣ ಕೊಲ್ಲಬೇಕು. ಇದಕ್ಕೆ ತಕ್ಕ ಪಾರಿತೋಷಕ ಸಿಗುತ್ತದೆ ಎಂದನು. ಆ ಭಟರು ಮಹಾಪ್ರಸಾದ ಎಂದರು. ಮಾರನೇದಿನ ದ್ರೋಹಿಯು ಅರಸನ ಹತ್ತಿರ ಹೋಗಿ ಈ ರೀತಿ ತಿಳಿಸಿದನು. 'ಅರಸನೇ ಇಂದು ಮಾಡುವ ಕೆಲಸ ನಾಳೆಗೆ ಎನ್ನಬಾರದು. ಈ ದಿನವೇ ಎಲ್ಲ ವ್ಯವಸ್ಥೆ ಆಗಿದೆ. ಕುದುರೆಗಳೂ ಸಿದ್ಧವಾಗಿವೆ. ತಾವು ಪಲಾಯನ ಮಾಡುವ ವಿಷಯ ರಾಣೀವಾಸದವರಿಗೂ ತಿಳಿಯುವುದಿಲ್ಲ. ಇದು ತುಂಬಾ ರಹಸ್ಯವಾಗಿದೆ. ನಾನು ಉದ್ಯಾನದಲ್ಲಿ ಕಾಯುತ್ತೇವೆ. ತಾವು ಅಲ್ಲಿಗೆ ಬನ್ನಿ' ಎಂದನು. ಇದಕ್ಕೆ ಅರಸನು 'ನಿನ್ನ ಮಾತು ಸರಿ, ನಾನು ರಾತ್ರಿಯಲ್ಲಿ ಉದ್ಯಾನಕ್ಕೆ ಬರುತ್ತೇನೆ' ಎಂದನು. ನಿಶ್ಚಿತ ಸಮಯಕ್ಕೆ ಅರಸನು ಎಚ್ಚರದಿಂದ ಉದ್ಯಾನಕ್ಕೆ ತೆರಳಿದನು. ರಾಜನ ಆಗಮನಕ್ಕಾಗಿ ಹೊಂಚುಹಾಕಿ ಕಾಯುತ್ತಿದ್ದ ದ್ರೋಹಿಯು ರಕ್ಷಾಭಟರಿಗೆ ಸನ್ನೆ ಮಾಡಿದನು. ರಾಯನು ಭಟರ ನಡುವೆ ಬಂದ ಕೂಡಲೇ ಆತನ ಮೇಲೆ ಆಕ್ರಮಣಮಾಡಿ ಕೊಂದು ಹಾಕಿದರು. ತಕ್ಷಣ ಅಲ್ಲಿಯೇ ಮರವೊಂದರ ನೆರಳಿನಲ್ಲಿ ಆತನನ್ನು ಹುಗಿದುಬಿಟ್ಟರು. ರಕ್ಷಕ ಭಟರಿಗೆ ತಾವು ಯಾರನ್ನು ಕೊಂದೆವೆಂದು ತಿಳಿಯಲೇ ಇಲ್ಲ. ಕೊಂಡಮರಸನು ಕೊಲೆಗಾರರಿಗೆ ಧನ್ಯವಾದ ಹೇಳಿ ತನ್ನ ಬಿಡದಿಗೆ ಬಂದು ವಿಜಯನಗರಕ್ಕೆ ಮರಳುವ ಸನ್ನಾಹ ಮಾಡಿದನು.

ಮರುದಿನ ಮುಂಜಾನೆ ಅರಸನೇ ಮಾಯವಾಗಿದ್ದಾನೆ ಎಂಬ ವದಂತಿ ಹಬ್ಬಿತು. ಎಲ್ಲ ಕಡೆಗೆ ಸೈನಿಕರು ಹುಡುಕಾಡಿದರು. ಆದರೆ ಆತನ ಸುಳಿವೇ ಸಿಗಲಿಲ್ಲ. ವೀರನರಸಿಂಹನೊಂದಿಗೆ ಯುದ್ಧ ಮಾಡಲು ಅರಸನು ಎಲ್ಲಿಗೋ ಪರಾರಿಯಾಗಿದ್ದಾನೆಂದು ಜನರು ಭಾವಿಸಿದರು. ವೀರನರಸಿಂಹನಿಗೆ ರಾಯನು ಕಾಣೆಯಾದ ವಿಷಯವನ್ನು ತಿಳಿಸಲಾಯಿತು. ಅತ್ಯಂತ ದುಃಖವನ್ನು ವ್ಯಕ್ತಪಡಿಸುತ್ತ ಆತನು ಬಂಡಾಯದ ಅಥವಾ ಕ್ಷಿಪ್ರಕ್ರಾಂತಿಯ ಅನುಮಾನ ಮಾಡಿ ಸೈನ್ಯ ಸಿದ್ಧತೆ ಮಾಡಿದನು. ಕೆಲಕಾಲಾನಂತರ ಕೊಂಡಮರಸನು ರಾಜಧಾನಿಗೆ ಬಂದು ವೀರನರಸಿಂಹನಿಗೆ ಎಲ್ಲಾ ವೃತ್ತಾಂತವನ್ನು ವಿವರವಾಗಿ ತಿಳಿಸಿದನು. ರಾಯನನ್ನು ಕೊಂದವರಿಗೆ ತಾವು ಯಾರನ್ನು ಕೊಂದೆವು ಎಂಬುದು ತಿಳಿಯಲೇ ಇಲ್ಲ ಎಂದನು. ವೀರನರಸಿಂಹನು ಆತನಿಗೆ ಸಾಕಷ್ಟು ಸಂಪತ್ತನ್ನು ಅನುಗ್ರಹಿಸಿದನು. ಎಷ್ಟು ದಿನವಾದರು ರಾಯನ ಸುದ್ದಿ ತಿಳಿಯಲಿಲ್ಲ. ಸಮಸ್ತ ಸೈನ್ಯವೂ,

ರಾಜ್ಯಕೋಶಗಳೂ, ಸಕಲ ಅಧಿಕಾರವೂ ಅವನಲ್ಲಿದ್ದುದರಿಂದ ರಾಜಧಾನಿಯ ಪ್ರಮುಖರು ಆತನನ್ನೇ ಸಾಮ್ರಾಟನೆಂದು ವಂದಿಸುವುದು ಸರಿಯೆಂದು ಭಾವಿಸಿದರು. ಅದರಂತೆಯೇ ವೀರನರಸಿಂಹನು ವಿಜಯ ನಗರದ ಸಾಮ್ರಾಟನಾದನು.

**ಬಂಡಾಯದ ಸ್ವರೂಪ :** ವೀರನರಸಿಂಹನು ಸಾಮ್ರಾಟನಾದ ಕೂಡಲೇ ಸಾಮ್ರಾಜ್ಯದ ನಾಯಕರು ಆತನ ವಿರುದ್ಧ ತಿರುಗಿ ಬಿದ್ದರು ಎಂದು ನೂನಿಜ್ ಬರೆದಿರುವುದು.[6] ತನ್ನ ಅಧಿಕಾರದ ವಿರುದ್ಧ ಬಂಡಾಯವೆದ್ದವರನ್ನು ಬಗ್ಗು ಬಡಿಯಲು ರಾಯನಿಗೆ ಆರು ವರುಷಗಳೇ[7] ಬೇಕಾಯಿತು. ಕೆಲ ಮಹತ್ವಾಕಾಂಕ್ಷಿ ನಾಯಕರು ತಾವು ಸಾಳ್ವ ವಂಶದ ಪರವಾಗಿ ಹೋರಾಡುತ್ತಿದ್ದೇವೆಂದು ಹೇಳುತ್ತಾ ತಮ್ಮ ಅಕ್ಕಪಕ್ಕದ ಪ್ರದೇಶಗಳನ್ನು ಆಕ್ರಮಿಸಿ ತಾವು ಸ್ವತಂತ್ರರೆಂದು ಘೋಷಿಸಲು ಪ್ರಯತ್ನಿಸಿದ್ದು ನಿಜವೇ, ವೀರನರಸಿಂಹ ಅನೇಕರನ್ನು ಎದುರಿಸಿ ಹೋರಾಡಿ ತಾನು ಸಮರಬಲದಲ್ಲಿ ಮಿಗಿಲಾದವನೆಂದು ತೋರಿಸಬೇಕಾಯಿತು. ಅಂದರೆ ಪ್ರಜೆಗಳೂ, ಕೆಲ ನಾಯಕರೂ ವಿಜಯನಗರದ ಪಟ್ಟಾಭಿಷಿಕ್ತ ರಾಯನ ಹತ್ಯೆಯಲ್ಲಿ ವೀರನರಸಿಂಹನ ಪಾತ್ರವನ್ನು ಕ್ಷಮಿಸಲಿಲ್ಲ. ಅವನು ಈ ಹತ್ಯಾಕಾಂಡದಲ್ಲಿ ತನ್ನ ಪಾತ್ರವನ್ನು ಎಷ್ಟೇ ರಹಸ್ಯವಾಗಿಟ್ಟರೂ ಅದು ಎಲ್ಲರಿಗೂ ತಿಳಿಯಲು ತಡವಾಗಲಿಲ್ಲ. ಪ್ರಜಾಭಿಪ್ರಾಯವೇನೇ ಇರಲಿ ಆಕ್ರಮಣಕಾರನು ಯಶಸ್ವಿಯಾದನಲ್ಲದೇ ಸಂಪೂರ್ಣ ಸುರಕ್ಷಿತನಾದನು.

**ಉಮ್ಮತ್ತೂರು :** ಈ ಪರಿಸ್ಥಿತಿಯ ಅನುಕೂಲ ಸಾಧಿಸಿದ ಉಮ್ಮತ್ತೂರಿನ ಇಮ್ಮಡಿ ದೇಪಣ್ಣನು ಸ್ವಾತಂತ್ರ್ಯವನ್ನು ಘೋಷಿಸಿ ಪೆನುಗೊಂಡ ದುರ್ಗವನ್ನು ಹಿಡಿದನು.[8] ಉಮ್ಮತ್ತೂರಿನ ಇಮ್ಮಡಿ ದೋಪಣ್ಣರಾಯನ ಮಗನಾದ ಚಿಕ್ಕರಾಯ ಉರುಫ್ ಮಲ್ಲರಾಯನು ಕ್ರಿ.ಶ. 1506ರಲ್ಲಿ ವೀರನರಸಿಂಹನನ್ನು ಸಾಮ್ರಾಟನೆಂದು ಅಂಗೀಕರಿಸಿದ್ದನು.[9] ಆದರೆ ಆತನ ಸೋದರ ಸಂಬಂಧಿ ನಂಜರಾಜನು ತದನಂತರ ವಿಜಯನಗರದ ಪರಮಾಧಿಕಾರವನ್ನು ಧಿಕ್ಕರಿಸಿದ್ದನು. ಕೊಯಮತ್ತೂರು ಜಿಲ್ಲೆಯ ಸತ್ಯಮಂಗಲದ ಶಾಸನದಲ್ಲಿ ಅವನು ವಿಜಯನಗರ ಸಾಮ್ರಾಟರು ಧರಿಸುವ ಬಿರುದುಗಳನ್ನು ಅಂದರೆ – ಅರಿರಾಯ ವಿಭಾಡ, ಭಾಷೆಗೆ ತಪ್ಪುವ ರಾಯರ ಗಂಡ ಧರಿಸಿದ್ದಾನೆ.[10]

ಕೊಂಗುದೇಶ ರಾಜರ್ಕಳಿನ್ ಚರಿತಂದಲ್ಲಿ ಉಮ್ಮತ್ತೂರು ವಿಷಯದಲ್ಲಿ ವಿವರವಾದ ವರ್ಣನೆ ಇದೆ.[11] ಉಮ್ಮತ್ತೂರು ಮತ್ತು ತಲೈಕ್ಕಾಡು ಪಾಳೆಯಗಾರರು ವಿಜಯನಗರಕ್ಕೆ ಕಪ್ಪ ಕಾಣಿಕೆ ಸಲ್ಲಿಸಲಿಲ್ಲ. ಇದರಿಂದ ಕ್ರುದ್ಧನಾದ ವೀರನರಸಿಂಹರಾಯ ಗಜ, ತುರಗ, ಪದಾತಿಗಳಿಂದ ಕೂಡಿದ ದೊಡ್ಡ ಸೈನ್ಯದೊಂದಿಗೆ ಹೊರಡುತ್ತಾ ವಿಜಯನಗರದ ರಕ್ಷಣೆಯನ್ನು ಸಹೋದರ ಕೃಷ್ಣದೇವರಾಯನಿಗೆ ಒಪ್ಪಿಸಿ ಅಚ್ಯುತರಾಯ, ಶ್ರೀರಂಗರಾಯ, ಮತ್ತಿತರ ನಾಯಕರೊಂದಿಗೆ ಉಮ್ಮತ್ತೂರಿಗೆ ಮುತ್ತಿಗೆ ಹಾಕಿ ಉಮ್ಮತ್ತೂರು ನಾಯಕರಿಗೆ ಹೀಗೆ ತಿಳಿಸಿದನು. "ನೀವು ಮೊದಲಿನಂತೆ ಕೊಡಬೇಕಾದ ಕಪ್ಪ–ಕಾಣಿಕೆ ಸಲ್ಲಿಸಿದರೆ ನಾವು ನಿಮ್ಮನ್ನು ಮುಂಚಿನಂತೆ ಅಧಿಕಾರದಲ್ಲಿ ಉಳಿಸಿ ವಿಜಯನಗರಕ್ಕೆ ಮರಳುತ್ತೇವೆ. ಅದಕ್ಕೆ ತಪ್ಪಿದರೆ ನಿಮ್ಮ ಕೋಟೆಗಳನ್ನು ಆಕ್ರಮಿಸಿ ಬೇರೆಯವರನ್ನು ದುರ್ಗಾದಿಪತಿಗಳೆಂದು ನೇಮಿಸುತ್ತೇವೆ." ಇದಕ್ಕೆ ಉಮ್ಮತ್ತೂರಿನ ದೇಪಣ್ಣರಾಜನು ಈ ರೀತಿ ಉತ್ತರ ಕಳಿಸಿದನು.



"ನಾವು ಈ ಭಾಗದ ನಾಡನ್ನು ಅನೇಕ ವರ್ಷಗಳಿಂದ ರಕ್ಷಿಸುತ್ತಾ ಬಂದಿದ್ದೇವೆ. ನಮ್ಮ ವಂಶದ ರಾಜರಾಗಲೀ, ಕೊಂಗಣವರ್ಮರಾಜರಾಗಲೀ ಬಹುದಿನದಿಂದ ರಾಜ್ಯ ಪರಿಪಾಲನೆ ಮಾಡುತ್ತಿದ್ದರೂ, ಯಾರಿಗೂ ಕಪ್ಪ–ಕಾಣಿಕೆ ಸಲ್ಲಿಸಿಲ್ಲ. ಹೀಗಿರುವಾಗ ನಿಮ್ಮ ತಂದೆ ನರಸಿಂಗರಾಯನು ನಮ್ಮ ಮೇಲೆ ದಾಳಿ ಮಾಡಿ ಗೆದ್ದು ಕಪ್ಪ–ಕಾಣಿಕೆ ವಸೂಲು ಮಾಡಿದನು. ಆದ್ದರಿಂದ ನಾವು ನಿಮಗೆ ಕಪ್ಪ ಸಲ್ಲಿಸುವುದು ಅನ್ಯಾಯ. ಆದ್ದರಿಂದ ನಾವು ಕಪ್ಪ–ಕಾಣಿಕೆ ಸಲ್ಲಿಸುವುದಿಲ್ಲ."

ಇದರಿಂದ ಕುಪಿತನಾದ ವೀರನರಸಿಂಹನು ತನ್ನೊಂದಿಗಿದ್ದ ನಾಯಕರನ್ನು ಕುರಿತು "ಹರಿಹರರಾಯರ ಕಾಲದಿಂದ ಪಟ್ಟಾಭಿಷಿಕ್ತ ರಾಯರಿಗೆ ಕಪ್ಪ ಸಲ್ಲಿಸುತ್ತಾ ಬಂದ ಈ ಪಾಳೇಗಾರರಿಗೆ ಹೀಗೆ ತಕರಾರು ಮಾಡಲು ಅಧಿಕಾರವೆಲ್ಲಿಯದು?" ಎಂದು ಉಮ್ಮತ್ತೂರಿಗೆ ಮುತ್ತಿಗೆ ಹಾಕಿ ಮೂರು ತಿಂಗಳು ದಾಳಿ ನಡೆಸಿದನು. ಪಾಳೇಗಾರರು ತಾವು ದೊಡ್ಡ ಸೈನ್ಯವನ್ನು ಜಮಾಯಿಸಿ ರಾಯಸೈನ್ಯವನ್ನು ದೂರದಲ್ಲಿಯೇ ತಡೆದರು.

ಕೋಟೆಯನ್ನು ವಶಪಡಿಸಿಕೊಳ್ಳಲಾಗದ ವೀರ ನರಸಿಂಹರಾಯನು ದಾಳಿಯಿಂದ ಹಿಮ್ಮೆಟ್ಟಿ ಶ್ರೀರಂಗಪಟ್ಟಣದ ಮೇಲೆ ದಾಳಿಮಾಡಿ ಅರಮನೆಯನ್ನು ಸ್ವಾಧೀನ ಪಡಿಸಿಕೊಂಡನು. ಈ ಮೊದಲು ನರಸನಾಯಕನಿಂದ ಪಟ್ಟಾಭಿಷಿಕ್ತನಾಗಿದ್ದ ಶಿವಗ್ರಾಯ (ಜೀವಗ್ರಾಹ್ಯ)ನು ಉಮ್ಮತ್ತೂರು ಮತ್ತು ತಲೈಕ್ಕಾಡು ನಾಯಕರನ್ನು ಪ್ರಾರ್ಥಿಸಿ ದೊಡ್ಡ ಸೈನ್ಯವನ್ನು ತರಿಸಿ ವೀರನರಸಿಂಹರಾಯನನ್ನು ಎದುರಿಸಿದನು. ವೀರನರಸಿಂಹರಾಯನು ಸಮರದಲ್ಲಿ ಸೋತು ವಿಜಯ ನಗರದ ದಾರಿಹಿಡಿದನು. ವೀರನರಸಿಂಹನು ತನ್ನ ಸೋದರ ಕೃಷ್ಣದೇವರಾಯನೊಂದಿಗೆ ಈ ಬಗ್ಗೆ ಚರ್ಚಿಸಿದನು. ಆತನು ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣದವರು ದೊಡ್ಡ ಸೇನೆಯನ್ನು ಜಮಾಯಿಸಿದ್ದಾರೆ ಅವರನ್ನು ಎದುರಿಸಲು ದೊಡ್ಡ ಸೈನ್ಯ ಮತ್ತು ಸರಕಿನೊಂದಿಗೆ ಹೋಗಬೇಕು ಎಂದನು. ಆದರೆ ಆತನ ಕಾಲದಲ್ಲಿ ಈ ಬಗ್ಗೆ ಏನೂ ಮಾಡಲಿಲ್ಲ.

ಈ ವಿವರಣೆಗೆ ಶಾಸನಗಳಿಂದಲೂ, ಸಮಕಾಲೀನ ಪೋರ್ತುಗೀಸರ ಬರಹಗಳಿಂದಲೂ ಸಮರ್ಥನೆ ಸಿಗುತ್ತದೆ. ಉಮ್ಮತ್ತೂರಿನ ಪಾಳೇಗಾರನು ವೀರನರಸಿಂಹನ ಅಧಿಕಾರವನ್ನು ಧಿಕ್ಕರಿಸಿದ್ದು ನಿಜ. ಕೃಷ್ಣದೇವರಾಯನು ಪಟ್ಟಾಭಿಷಿಕ್ತನಾದ ಕೂಡಲೇ ಉಮ್ಮತ್ತೂರಿನ ಮೇಲೆ ದಾಳಿಮಾಡಿದ್ದು ಇದಕ್ಕೆ ಸಾಕ್ಷಿ. ವೀರನರಸಿಂಹನು ಅನೇಕ ರೀತಿಯಲ್ಲಿ ವಿರೋಧವನ್ನು ಎದುರಿಸಿ ಹಲವಾರು ಯುದ್ಧಗಳನ್ನು ಮಾಡಿ ನಿಸ್ತೇಜನಾಗಿದ್ದನು. ಉಮ್ಮತ್ತೂರು ಮತ್ತು ಶ್ರೀರಂಗ ಪಟ್ಟಣಗಳ ಮೇಲೆ ದಾಳಿಮಾಡಲು ಸಾಕಷ್ಟು ಸೇನೆ ಜಮಾಯಿಸಲೂ ಆತನಿಂದಾಗಲಿಲ್ಲ.

ಉಮ್ಮತ್ತೂರು ಪಾಳೇಗಾರನೊಂದಿಗಿನ ಯುದ್ಧದಲ್ಲಿ ಪರಾಜಿತನಾದ ವೀರನರಸಿಂಹನು ವಾಪಸಾದನು. ಇದರಿಂದ ಉತ್ತೇಜಿತನಾದ ಉಮ್ಮತ್ತೂರು ಒಡೆಯನು ಪೆನುಗೊಂಡೆಯ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡನು. ಅವನು ಪೆನುಗೊಂಡೆಯನ್ನು ವಶಪಡಿಸಿಕೊಂಡ ಬಗ್ಗೆ ಎಲ್ಲೂ ಉಲ್ಲೇಖವಾಗಿಲ್ಲ. ಆದರೆ ಕ್ರಿ.ಶ.

1510ರಲ್ಲಿ ವಿಜನಗರದಲ್ಲಿ ಪೋರ್ತುಗೀಸರ ಪ್ರತಿನಿಧಿಯಾಗಿದ್ದ ಫ್ರಿಯರ್ ಲುಯಿಸ್ ವರದಿಯಲ್ಲಿ ಈ ಬಗ್ಗೆ ಆಧಾರವಿದೆ.[12]

"ನರಸಿಂಗ (ವಿಜಯನಗರದ)ದ ರಾಜನು ಐದು ಸಾವಿರ ಕಾಲ್ದಳ ಮತ್ತು ಎರಡು ಸಾವಿರ ತುರಗದಳದೊಂದಿಗೆ ಪೆನುಗೊಂಡದ ಮೇಲೆ ದಾಳಿ ಮಾಡಲು ಸಿದ್ಧತೆ ನಡೆಸಿದ್ದನು. ಸಾಮ್ರಾಟನ ವಿರುದ್ಧ ಬಂಡೆದ್ದು ಪೆನುಗೊಂಡೆಯನ್ನು ಸ್ವಾಧೀನ ಪಡಿಸಿಕೊಂಡ ಪಾಳೇಗಾರನು ತಾನೇ ವಿಜಯನಗರದ ವಜ್ರಸಿಂಹಾಸನದ ವಾರಸುದಾರನೆಂದು ಹೇಳತೊಡಗಿದ್ದನು."

ಸಮಕಾಲೀನ ತೆಲುಗು ಸಾಹಿತ್ಯದ ಪ್ರಕಾರ ಕೃಷ್ಣದೇವರಾಯನು ಉಮ್ಮತ್ತೂರಿನ ಬಂಡೆದ್ದ ಪಾಳೇಗಾರನನ್ನು ತನ್ನ ಆಡಳಿತದ ಆರಂಭದಲ್ಲಿಯೇ ಬಗ್ಗು ಬಡಿದನೆಂದು ತಿಳಿಯುತ್ತದೆ.[13] ಉಮ್ಮತ್ತೂರಿನ ಪಾಳೇಗಾರನು ತನ್ನ ಶಾಸನಗಳಲ್ಲಿ 'ಪೆನುಗೊಂಡ ಚಕ್ರೇಶ್ವರ' ಎಂದು ಕರೆದುಕೊಂಡನು.[14] ಅಂದರೆ ಆ ಕಾಲದಲ್ಲಿ ಪೆನುಗೊಂಡೆ ಅವನ ವಶದಲ್ಲಿತ್ತೆಂದು ತಿಳಿಯಬೇಕಾಗುತ್ತದೆ.

ಸಧ್ಯ ಲಭ್ಯವಿರುವ ಆಧಾರಗಳ ಮೇಲೆ ದೇಪರಾಯ ಯಾವಾಗ ರಾಯನ ವಿರುದ್ಧ ಬಂಡೆದ್ದನೆಂದಾಗಲೀ, ರಾಯನು ಯಾವಾಗ ಅವನ ಮೇಲೆ ದಂಡೆತ್ತಿ ಹೋದನೆಂದಾಗಲೀ ಖಚಿತವಾಗಿ ಹೇಳಲು ಆಗುವುದಿಲ್ಲ. ಆದರೆ ಈ ಬಂಡಾಯವು ಕೃಷ್ಣದೇವರಾಯನು ಪಟ್ಟವೇರುವ ಮೊದಲೇ ನಡೆಯಿತೆಂಬುದು ಖಚಿತ.

ಶಾಸನಗಳ ಪ್ರಕಾರ ಇಮ್ಮಡಿ ನರಸಿಂಹನು ಪೆನುಗೊಂಡೆ ಕೋಟೆಯಲ್ಲಿ ಜೀವಂತವಾಗಿದ್ದನೆಂದು (28–02–1506ರ ಶಾಸನ) ತಿಳಿಸುತ್ತದಾದ್ದರಿಂದ ಅದಕ್ಕೂ ಮೊದಲು ಪೆನುಗೊಂಡೆಯು ವಶವಾಗಿರಲು ಸಾಧ್ಯವಿಲ್ಲ. ಮಳವಳ್ಳಿ ತಾಲೂಕು **ಮುತ್ತನಹಳ್ಳಿಯ** ಶಿಲಾಶಾಸನದ ಪ್ರಕಾರ[15] 15–12–1506ರಲ್ಲಿ ಉಮ್ಮತ್ತೂರಿನ ದೇವಣ್ಣೊಡೆಯರ ಮಗ ಚಿಕ್ಕರಾಯ ಉರುಫ್ ಮಲ್ಲರಾಯನು ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಭುಜಬಲ ಪ್ರತಾಪ ನರಸಿಂಹ ಮಹಾರಾಯರ ಸಾಮಂತನಾಗಿ ರಾಜ್ಯ ಪಾಲನೆ ಮಾಡುತ್ತಿದ್ದನು ಆದ್ದರಿಂದ ಪಾಳೇಗಾರನ ಬಂಡಾಯ ಮತ್ತು ಅವನ ವಿರುದ್ಧ ರಾಯನ ಸೇನಾಕ್ರಮಗಳು 15–12–1506ರ ನಂತರವೇ ನಡೆದಿರಬೇಕು. ಪ್ರಾಯಃ ಪಾಳೇಗಾರನಿಗೆ ವೀರನರಸಿಂಹನ ವಿರುದ್ಧ ತಾನು ಸಂಪಾದಿಸಿದ ಗೆಲುವಿನಿಂದ ಬಲಬಂದಿರಬೇಕು. ಅವನು ಉನ್ಮತ್ತನಾಗಿ ಪೆನುಗೊಂಡೆಯ ದುರ್ಗವನ್ನು ವಶಪಡಿಸಿಕೊಂಡನು.

**ಕಾಳಪ್ಪನು ಉದ್ದಂಡನೊಂದಿಗೆ ಕೈ ಜೋಡಿಸಿದ್ದನೇ ? :** ಪುಟ್ಟ ಪಾಳೇಗಾರನೊಬ್ಬನು ಬಲಾಢ್ಯವಾದ ವಿಜಯನಗರ ಸಾಮ್ರಾಟನನ್ನು ಸೋಲಿಸುವುದೆಂದರೆ ಸಾಮಾನ್ಯ ವಿಷಯವಲ್ಲ. ಈ ಸಂದರ್ಭದಲ್ಲಿ ಆ ಪಾಳೇಗಾರನ ಹಿಂದೆ ಯಾರ್‍ಯಾರಿದ್ದರು ಅಥವಾ ಇದ್ದಿರಬಹುದೇ ಎಂಬ ಅನುಮಾನ ಉಂಟಾಗುತ್ತದೆ. ಅಥವಾ ಈ ವಿಷಯದಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದಷ್ಟು ಪ್ರತಿಕೂಲ ಪರಿಸ್ಥಿತಿಯಲ್ಲಿ ವೀರ ನರಸಿಂಹನು ಇದ್ದನೇ ? ಎಂಬ ಅನುಮಾನ ಉಂಟಾಗುತ್ತದೆ ಅರವೀಡು ವಂಶಸ್ಥರ ತಾಮ್ರಶಾಸನಗಳನ್ನು ಸೂಕ್ಷ್ಮವಾಗಿ



ಪರಿಶೀಲಿಸಿದರೆ ಕಾಶಪ್ಪ ಒಡೆಯನು ಸಪಾದ ಅಥವಾ ಆದಿಲ್‌ಷಾನೊದಿಗೆ ಷಾಮಿಲಾಗಿದ್ದನೆಂದು ಸ್ಪಷ್ಟವಾಗುತ್ತದೆ.[16] ಕೋನೇರುನಾಥನ ಬಾಲಭಾಗವತಮು[17] ಕಾಶಪ್ಪ ಒಡೆಯನು ವೀರನರಸಿಂಹನ ವಿರುದ್ಧ ಬಂಡಾಯ ವೆದ್ದಿದ್ದನೆಂದು ತಿಳಿಸುತ್ತದೆ. ಅನಂತರಪುರ ಜಿಲ್ಲೆಯ ಉರವಕೊಂಡದ ಶಿಲಾಶಾಸನ[18] ಕ್ರಿ.ಶ. 1504ರದು–ಕಾಚ ರಾಜೇಂದ್ರನು ಯಾದವಗಿರಿಯನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಆದವಾನಿಗೆ ಮತ್ತೊಂದು ಹೆಸರು ಯಾದವಗಿರಿ[19]. ಅಂದರೆ ಕಾಶಪ್ಪ ಅಥವಾ ಕಾಚಪ್ಪನ ಅಧಿಕಾರವು ಪೆನುಗೊಂಡ ರಾಜ್ಯದ ಗಡಿಯವರೆಗೆ ವಿಸ್ತರಿಸಿತ್ತು. ಶಾಸನಗಳೂ, ಸಮಕಾಲೀನ ಸಾಹಿತ್ಯ ಮತ್ತು ಫ್ರಾಯರ್ ಲುಯಿ ವರದಿಗಳು ಉಮ್ಮತ್ತೂರು ಪಾಳೇಗಾರನು ಪೆನುಗೊಂಡೆಯನ್ನು ವಶಪಡಿಸಿಕೊಂಡನೆಂದು ಸಾಬೀತು ಪಡಿಸುತ್ತವೆ. ಕಾಚಪ್ಪ ಮತ್ತು ಉಮ್ಮತ್ತೂರು ಒಡೆಯರ ಶತ್ರುವೆಂದರೆ ವೀರನರಸಿಂಹರಾಯ.

ಈ ಪಾಳೇಗಾರರು ರಾಯನ ಹಿಡಿತದಿಂದ ಪಾರಾಗಲು ಸಮಯ ಕಾಯುತ್ತಿದ್ದರು. ಸಾಮ್ರಾಟನ ವಿರುದ್ಧ ಹೋರಾಡುತ್ತಿದ್ದ ತನ್ನ ನೆರೆಯ ಪಾಳೇಗಾರನಾದ ಉಮ್ಮತ್ತೂರು ಪಾಲಕನಿಗೆ ಕಾಚಪ್ಪ ನೆರವಾಗಿರಬಹುದು. ಉಮ್ಮತ್ತೂರಿನವರಿಗೆ ನೆರವಾದ ವಿಷಯ ಏನೇ ಇರಲಿ, ಕಾಶಪ್ಪ ಒಡೆಯನು ಅದೇ ಸಮಯದಲ್ಲಿ ರಾಯನ ಅಧಿಕಾರವನ್ನು ಧಿಕ್ಕರಿಸಿ ಸ್ವಾತಂತ್ರ್ಯ ಪತಾಕೆಯನ್ನು ಹಾರಿಸಿದ್ದನು. ಆಗ ವೀರನರಸಿಂಹನು ಉಮ್ಮತ್ತೂರು ನಿಗ್ರಹದಲ್ಲಿ ನಿರತನಾಗಿದ್ದನು.

ಕಾಶಪ್ಪನಲ್ಲದೇ ಉಮ್ಮತ್ತೂರಿನವರ ಪರವಾಗಿ ಉದ್ದಂಡರಾಯ ಉಲಗಪ್ಪನ್ ಕೂಡಾ ಇದ್ದಂತೆ ತೋರುತ್ತದೆ. ಏಕೆಂದರೆ ವೀರನರಸಿಂಹರಾಯನು ನಿಷ್ಕಾರಣವಾಗಿ ಅರವೀಟಿ ತಿಮ್ಮನನ್ನು ಉದ್ದಂಡರಾಯನನ್ನು ನಿರ್ಮೂಲಮಾಡಲು ನೇಮಿಸುತ್ತಿದ್ದಿಲ್ಲ. ಕೋನೇಟಿನಾಥನ **ಪದ್ಯ ಭಾಗವತಮು** ಮತ್ತು **ಬಾಲ ಭಾಗವತಮು** ಕಾವ್ಯಗಳ ಪ್ರಕಾರ ಸೇನಾಪತಿ ತಿಮ್ಮನನ್ನು ತನಗೆ ಕೊಟ್ಟ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದನು.

ಬುಕ್ಕರಾಜ ರಾಮರಾಜ ಮತ್ತು ಅವನ ಮಗ ತಿಮ್ಮರಾಜರು ಯುಸುಫ್ ಆದಿಲ್‌ಖಾನನ್ನು ಸೋಲಿಸಿ ಅವನೊಂದಿಗೆ ಸೇರಿದ್ದ ಕಾಶಪ್ಪ ಒಡೆಯನನ್ನೂ ಆದವಾನಿ ದುರ್ಗವನ್ನೂ ವಶಪಡಿಸಿಕೊಂಡರು. ವಿಶೇಷವೆಂದರೆ ಸಣ್ಣ ಸೈನ್ಯದ ಅಧಿಪತಿಗಳಾದ ಇವರು ಎಪ್ಪತ್ತು ಸಾವಿರ ತುರಗ ಸೇನೆಯಿಂದ ಬಂದಿದ್ದ ಯುಸುಫ್ ಆದಿಲ್‌ಖಾನನ್ನು ಸೋಲಿಸಿದರು.20 ವೀರನರಸಿಂಹನು ಉಮ್ಮತ್ತೂರು ನಿಗ್ರಹದಲ್ಲಿ ತೊಡಗಿದ್ದಾಗ, ಯುಸುಫ್ ಆದಿಲ್‌ಖಾನನು ವಿಜಯನಗರ ಸಾಮ್ರಾಜ್ಯದ ಮೇಲೆ ದಾಳಿ ಮಾಡಿದನು. ಆಗ ರಾಯಸೈನ್ಯವು ಹಂಚಿಹೋಗಿತ್ತು. ಒಂದು ಪ್ರಮುಖ ದಳವು ಸೇನಾಪತಿ ತಿಮ್ಮನೊಂದಿಗೆ ಬಲಾಢ್ಯನಾದ ಯುಸುಫ್ ಆದಿಲ್ ಖಾನನೊಂದಿಗೆ ಹೋರಾಡುತ್ತಿತ್ತು. ಇದರಿಂದ ತಿಳಿಯುವುದೇನೆಂದರೆ ಉಮ್ಮತ್ತೂರಿನವರೊಂದಿಗೆ ಕಾದುತ್ತಿದ್ದ ವೀರ ನರಸಿಂಹನು ಹತಾಶನಾಗಿ ಅವಸರದಿಂದ ಹಿಮ್ಮೆಟ್ಟಬೇಕಾಯಿತು. ಆತನ ಸೋಲಿಗೆ ಇದೇ ಮುಖ್ಯ ಕಾರಣವಾಗಿರಬೇಕು.

**ಮಹಮ್ಮದೀಯರೊಂದಿಗೆ ಯುದ್ಧ :** ತೆಲುಗು ಕಾವ್ಯಗಳಾದ **ದ್ವಿಪದ ಬಾಲಭಾಗವತಮು ಪದ್ಯ ಬಾಲಭಾಗವತಮು** ಮತ್ತು **ರಾಮರಾಜೀಯಮು ;** ಆದವಾನಿ ಮತ್ತು ಕಂದನವೋಲು ಕೈಫಿಯತ್ತುಗಳೂ, ಅರವೀಡು ಅರಸರ ಶಾಸನಗಳೂ ವೀರನರಸಿಂಹರಾಯನ ಕಾಲದಲ್ಲಿ ಮುಸಲ್ಮಾನರು ವಿಜಯನಗರದ ಮೇಲೆ ಮಾಡಿದ ದಾಳಿಯ ಬಗ್ಗೆ ತಿಳಿಸುತ್ತವೆ. ದೋನೇರಿ ಕೋನೇಟಿನಾಥನ 'ದ್ವಿಪದ ಬಾಲಭಾಗವತವು ಕ್ರಿ. 1547ರಲ್ಲಿ ಸಂಪೂರ್ಣ ರಚಿತವಾಯಿತು.[21] ಈ ಕೃತಿಯ ಪ್ರಕಾರ ಕಂದನವೋಲ ಕೋಟೆಯ ಮೇಲೆ ಎಪ್ಪತ್ತು ಸಾವಿರ ಬಲದ ಅಶ್ವಸೇನೆಯಿಂದ ಬಂದ ಸವಾಯಿ (ಆದಿಲ್‌ಷಾ) ಯನ್ನು ಅರವೀಡು ಸೇನಾಪತಿ ಬುಕ್ಕಾಯ ರಾಮರಾಜನು ಎದುರಿಸಿದನು. ರಾಮರಾಜನು ಸವಾಯಿಯನ್ನು ಸೋಲಿಸಿ ಅವನ ಸೇನೆಯನ್ನು ನಾಶಮಾಡಿದನು. ಈ ಕದನದಲ್ಲಿ ರಾಮರಾಜನು ಆದವಾನಿ ದುರ್ಗಾಧಿಪತಿಯಾದ ಕಾಚನಾಯಕನನ್ನು ಬಂಧಿಸಿ ದುರ್ಗವನ್ನು ವಶಪಡಿಸಿಕೊಂಡನು. ಅದೇ ಕಾವ್ಯದ ಪ್ರಕಾರ ತಿಮ್ಮನು ಮಾನವ ದುರ್ಗದಲ್ಲಿ ಏದುಲ್‌ಖಾನ (ಆದಿಲ್‌ಖಾನ)ನನ್ನು ಸೋಲಿಸಿದನು. ಅವನು ಆದವಾನಿಯ ಮೇಲೆ ದಾಳಿ ಮಾಡಿ ದುರ್ಗಾಧಿಪತಿಯನ್ನು ಸೆರೆಹಿಡಿದು ತಂದು ಸಾಮ್ರಾಟನಾದ ವೀರನರಸಿಂಹನ ಮುಂದೆ ನಿಲ್ಲಿಸಿದಾಗ, ವೀರನರಸಿಂಹನು ಅವನ ಸೇವೆಯನ್ನು ಗೌರವಿಸಿ ತಿಮ್ಮನಾಯಕನಿಗೆ **'ಗಂಡ ಪೆಂಡೇರ'** ನೀಡಿ ಗೌರವಿಸಿದನು.[22] ಅಲ್ಲದೇ ತಿಮ್ಮನಿಗೆ 'ಸ್ವಾಮಿ ದ್ರೋಹರ ಗಂಡ' ಎಂಬು ಬಿರುದನ್ನು ನೀಡಿದನು.

ಉಳಿದ ಸಾಹಿತ್ಯ ಕೃತಿಗಳಾದ **'ಪದ್ಯಬಾಲಭಾಗವತಮು'** ಮತ್ತು **'ರಾಮರಾಜೀಯಮು'** ಮತ್ತು ಕಂದನವೋಲು ಕೈಫಿಯತ್ತುಗಳು ಕೂಡಾ **'ದ್ವಿಪದ ಬಾಲ ಭಾಗವತಮು'** ನೀಡುವ ವಿವರಗಳನ್ನೇ ನೀಡುತ್ತವೆ. ಆದರೆ ಅರವೀಡು ಶಾಸನಗಳು ಮಾತ್ರ ಅಲ್ಲಲ್ಲಿ ಕೆಲ ವಿವರಗಳಲ್ಲಿ ಭಿನ್ನವಾಗಿವೆ. ತಿರುಮಲನ **'ಪೆಂಗಳೂರು ಶಿಲಾಶಾಸನ'**[23] ರಾಮರಾಜನ ಸಾಧನೆಗಳ ಬಗ್ಗೆ ತಿಳಿಸುವ ಅತ್ಯಂತ ಪುರಾತನ ಶಿಲಾಶಾಸನವಾಗಿದೆ. ಈ ಶಾಸನದಲ್ಲಿ ರಾಮರಾಜನು ಸಪಾದನ ಎಪ್ಪತ್ತು ಸಾವಿರ ಅಶ್ವದಳದ ಸೇನೆಯನ್ನು ಧೂಳೀಪಟಮಾಡಿ, ಆದವಾನಿ ದುರ್ಗವನ್ನು ವಶಪಡಿಸಿಕೊಂಡು, ಕಾಶಪ್ಪ ಒಡೆಯನನ್ನು ಓಡಿಸಿದನು ಎಂದು ಹೇಳಲಾಗಿದೆ. ಅಲ್ಲದೇ ಕಂದನವೋಲು ದುರ್ಗವನ್ನೂ ಅಲ್ಲಿಯ ದುರ್ಗಾಧಿ ಪತಿಯನ್ನೂ ಸೋಲಿಸಿ ವಶಪಡಿಸಿಕೊಂಡನಂತೆ. ಎರಡು ವಿಷಯಗಳಲ್ಲಿ ಈ ಶಾಸನವು ಸಾಹಿತ್ಯ ಕೃತಿಗಳಿಗಿಂತ ಬೇರೆಯಾಗಿದೆ. ಮೊದಲನೇದಾಗಿ ಶಾಸನವು ತಿಮ್ಮನು ಕಂದನವೋಲು ದುರ್ಗವನ್ನು ತನ್ನ ಬಲದಿಂದ ವಶಪಡಿಸಿಕೊಂಡನೆಂದು ತಿಳಿಸುತ್ತದೆ. ಎರಡನೇದಾಗಿ ತಿಮ್ಮನಿಗೂ – ಯುಸುಫ್ ಆದಿಲ್‌ಖಾನನಿಗೂ ಯುದ್ಧವಾದ ಸ್ಥಳ–ಆದವಾನಿ ಎನ್ನುತ್ತದೆ. ಈ ಆಧಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ವಿಷಯವನ್ನು ಸೂಕ್ತವಾಗಿ ವಿವರಿಸಬಹುದು. ಶಿಲಾಶಾಸನ ಲಿಪಿಕಾರನು ಸಮಾಚಾರವನ್ನು ಸಂಕ್ಷೇಪಿಸಲು ಮಾಡಿದ ಪ್ರಯತ್ನ ಇದಾಗಿದೆ.

ರಾಮರಾಜನು ಕಂದವೋಲು ದುರ್ಗವನ್ನು ಅನಾಮಿಕ ದುರ್ಗಾಧಿಪತಿಯಿಂದ ವಶಪಡಿಸಿಕೊಂಡನೆಂದು ಶಾಸನವು ತಿಳಿಸುತ್ತದೆ. ಸಾಮ್ರಾಟನ ಅನುಜ್ಞೆಯಂತೆಯೇ ಕಂದನ



ವೋಲಿನ ಮೇಲೆ ದಾಳಿ ಮಾಡಿರಬೇಕು. ಸಾಮ್ರಾಟನಾದರೂ ಕಾರಣವಿಲ್ಲದೇ ಕಂದನವೋಲಿನ ಮೇಲೆ ದಾಳಿ ಮಾಡಲು ತಿಳಿಸಿರಲಾರನು. ಕಂದನವೋಲು ದುರ್ಗಾಧಿಪತಿಯೂ ಬಂಡಾಯವೆದ್ದಿರಬೇಕು.

ಈ ಪ್ರಸಂಗದ ಮೇಲೆ ಇನ್ನಷ್ಟು ಬೆಳಕು ಚೆಲ್ಲಲು ರಾಮರಾಜ ಮತ್ತು ಆತನ ಪುತ್ರ ತಿಮ್ಮನ ಮತ್ತೊಂದು ಸಾಧನೆಯನ್ನು ಪರಿಶೀಲಿಸಬೇಕು. ಬುಕ್ಕಾಯ ರಾಮರಾಜನು ಓಡಿಸಿದ ಕಾಶಪ್ಪನ ಬಗ್ಗೆ ಕೆಲ ವಿವರಗಳು ಶಾಸನಗಳಿಂದ ಲಭಿಸುತ್ತವೆ. ಅನಂತಪುರ ಜಿಲ್ಲೆಯ **ಅಗಳಿ**ಯ ಕ್ರಿ.ಶ. 1497 ಮಾರ್ಚ 18ರ ದಾನ ಶಾಸನದಲ್ಲಿ ಹೀಗಿದೆ. ಪಲಿಗನಹಳ್ಳಿ ಗ್ರಾಮವನ್ನು **ಇಮ್ಮಡಿ ಕಾಚ್ಛಾಪುರ** ವೆಂಬ ಪ್ರತಿನಾಮದೊಂದಿಗೆ ಅಗಳಿಯ ಶಂಕರದೇವರಿಗೆ ಮಾಡಿದ ಗ್ರಾಮದಾನ. ರಾಯದುರ್ಗ ಚಾವಡಿಯ ಅಗಳಿ ಸ್ಥಳದ ದಾನಿ – ಆದವಾನಿಯ ಕಾಚಪ್ಪ ನಾಯಕನ ಮಗ ಇಮ್ಮಡಿ ಕಾಚಪ್ಪ ನಾಯಕ. ಈ ದಾನವನು ಸೇತುಬಂಧ ರಾಮೇಶ್ವರದಲ್ಲಿ ರಾಮೇಶ್ವರನ ಸನ್ನಿಧಿಯಲ್ಲಿ ಮಾಡಲಾಗಿದೆ. ಅಲ್ಲಿಗೆ ಅವನು ನರಸನಾಯಕನ ಜೊತೆಗೆ ಹೋಗಿದ್ದನು. ಸಾಳುವ ನರಸಿಂಗರಾಯ ಮಹರಾಯನು ನರಸಣ್ಣ ನಾಯಕನಿಗೆ **ರಾಯದುರ್ಗ ಚಾವಡಿಯ** ನಾಯಕತನ ಪಾಲಿಸಿದಾಗ ಕಾಚಪ್ಪ ನಾಯಕನು ಆತನ ಕೆಳಗೆ ಅಗಳೀ ಸ್ಥಳದ ಪಾಳೇಗಾರನಾಗಿದ್ದನು[24] ಅನಂತಪುರ ಜಿಲ್ಲೆಯ ಗುತ್ತಿ ತಾಲೂಕಿನ ಉರವಕೊಂಡದ ಶಾಸನ[25]ದಲ್ಲಿ ಯಾದವಗಿರಿ ರಾಜ್ಯದ ಅಧಿಪತಿಯೆಂದು ಕಾಚನ ಮಗನಾದ ಕಾಚರಾಜೇಂದ್ರನ ಹೆಸರಿದೆ.[26]

ಈ ಶಾಸನದ ಪ್ರಕಾರ ಉರವಕೊಂಡದ ಶಿಂಗೇಶ್ವರ ಮಹಾದೇವನ ದೇವಾಲಯಕ್ಕೆ ಗ್ರಾಮವೊಂದನ್ನು ದಾನ ಮಾಡಿದನೆಂದೂ, ಕಾಚರಾಜೇಂದ್ರನ ಪತ್ನಿ ದೇವಾಂಬಿಕಾ ದೇವಾಲಯದ ಗೋಡೆಯೊಂದನ್ನು ಕಟ್ಟಿಸಿದಂತೆಯೂ ತಿಳಿಯುತ್ತದೆ. ಬಾಲಭಾಗವತದ ಕಾಚಾಧೀಶನೂ, ರಾಮರಾಜೀಯದ ಕಾಚೊಡೆಯನೂ ತಿಮ್ಮನೊಂದಿಗೆ ಸೆಣಸಿದವನೂ ಒಬ್ಬನೇ ಎಂದು ಹೇಳಬಹುದು. ಈ ಕಾಚನ ದಾಖಲೆಗಳ ಪ್ರಕಾರ ಅವನು ಕ್ರಿ.ಶ. 1497 ಮತ್ತು 1504ರ ಅವಧಿಯಲ್ಲಿ ರಾಯದುರ್ಗರಾಜ್ಯದ ಒಡೆಯನಾಗಿದ್ದನು. ಕ್ರಿ.ಶ. 1504ರ ಉರವಕೊಂಡದ ಶಾಸನದಲ್ಲಿ ವಿಜಯನಗರ ಚಕ್ರವರ್ತಿಯು ಕಾಚನ ನಾಯಕನ ಸಾಮ್ರಾಟನೆಂಬ ಉಲ್ಲೇಖವೇ ಇಲ್ಲ. ಇದರಿಂದ ಅವನು ವೀರನರಸಿಂಹನ ವಿರುದ್ಧ ಬಂಡೆದ್ದಿದ್ದನೆಂದು ಹೇಳುವ **ಬಾಲಭಾಗವತ**ಕ್ಕೆ ಸಮರ್ಥನೆ ಸಿಗುತ್ತದೆ. ಅಂದರೆ ಉರವಕೊಂಡದ ಕ್ರಿ. ಶ. 1504ರ ಶಾಸನದ ಸಮಯಕ್ಕೆ ಆತನು ಸ್ವಾತಂತ್ರ್ಯ ಘೋಷಿಸಿರಬೇಕು. ನರಸನಾಯಕನ ಮರಣನಂತರ ವಿಜಯನಗರದ ಕೇಂದ್ರ ಸರಕಾರದ ವಿರುದ್ಧ ಈ ಪಾಳೇಗಾರರು ಸ್ವತಂತ್ರರಾಗಲು ಉತ್ಸಾಹ ಲಭಿಸಿರಬೇಕು. ಅಂತಹ ಬಂಡುಕೋರ ಪಾಳೇಗಾರರಲ್ಲಿ ಕಾಚನೂ ಒಬ್ಬನು.

ತಾನು ವಿಜಯನಗರಾಧಿಪತಿಯಾಗಲು ನೆರವಾದ ಸೇನಾಪತಿ ತಿಮ್ಮನನ್ನು ಕಂದನವೋಲು ಮತ್ತು ಆದವಾನಿಯ ಬಂಡೆದ್ದ ನಾಯಕರ ನಿಗ್ರಹಕ್ಕೆ ಕಳಿಸಿದ ವೀರನರಸಿಂಹನು ಉಮ್ಮತ್ತೂರಿನವರ ವಿರುದ್ಧತಾನೇ ಹೊರಟನು. ಆದವಾನಿ ಮತ್ತು ಕಂದನವೋಲಿನ ಅಧಿಪತಿಗಳು

ವೀರನರಸಿಂಹನ ಸೈನಿಕ ಕಾರ್ಯಾಚರಣೆಯನ್ನು ನಿರೀಕ್ಷಿಸಿ ಯುಸುಫ್ ಆದಿಲ್‌ಖಾನನ ಸಹಾಯ ಕೇಳಿರಬೇಕು. ವಿಜಯನಗರ ಸಾಮ್ರಾಜ್ಯದ ಮೇಲೆ ದಾಳಿಮಾಡುವ ಸದವಕಾಶದ ನಿರೀಕ್ಷೆಯಲ್ಲಿದ್ದ ಯುಸುಫ್ ಆದಿಲ್‌ಖಾನನು ಆದವಾನಿ ಮತ್ತು ಕಂದನ ಮೋಲು ನಾಯಕರಿಗೆ ಅಭಯ ನೀಡಿರಬೇಕು. ಈ ಪ್ರಕಾರ ಮೇಲಿನೆರಡು ನಾಯಕತನಗಳು ಆದಿಲ್‌ಖಾನನ ಪ್ರಭಾವಕ್ಕೆ ಸೇರಿರಬೇಕು. ಈ ಪ್ರಭಾವವನ್ನು ಧ್ವಂಸಮಾಡಲು ವೀರನರಸಿಂಹನು ಸೇನಾಪತಿಗಳಾದ ರಾಮರಾಜ ಮತ್ತು ತಿಮ್ಮರಿಗೆ ಈ ದುರ್ಗಗಳ ಮೇಲೆ ದಾಳಿ ಮಾಡಲು ಆಜ್ಞಾಪಿಸಿರಬೇಕು. ರಾಮರಾಜ ಮತ್ತು ತಿಮ್ಮಕಂದನವೋಲಿನ ಮೇಲೆ ದಾಳಿಮಾಡಿ ವಶಪಡಿಸಿಕೊಂಡರು. ಆಗ ಯುಸಫ್‌ಖಾನನು ತನ್ನ ಆಶ್ರಿತರಾಗಿದ್ದವರ ನೆರವಿಗೆ ಧಾವಿಸಿದನು. ಆತನ ಸೇನೆಗಳನ್ನ ರಾಮರಾಜ ಮತ್ತು ತಿಮ್ಮನ ದಾಳಿಗಳು ಚದುರುವಂತೆ ಮಾಡಿದವು. ವಿಜಯನಗರ ಸಾಮ್ರಾಜ್ಯದ ಮೇಲೆ ದಾಳಿ ಮಾಡುತ್ತಿದ್ದ ಆದಿಲ್‌ಷಾಹಿ ಸೇನೆಯಿದ್ದ ಆದವಾನಿ ದುರ್ಗದ ಮೇಲೆ ರಾಮರಾಜ ಮತ್ತು ತಿಮ್ಮ ದಾಳಿ ಮಾಡಿದರು.

ಆದವಾನಿಯ ನಾಯಕನನ್ನು ರಕ್ಷಿಸಲು ಬಂದ ಯುಸುಫ್ ಆದಿಲ್‌ಖಾನನ ಸೇನೆಯನ್ನು ರಾಮರಾಜ ಮತ್ತು ತಿಮ್ಮ ಮತ್ತೊಮ್ಮೆ ಎದುರಿಸಿದರು. ತಿಮ್ಮನ ಪ್ರಚಂಡ ದಾಳಿಯನ್ನು ಎದುರಿಸಲಾರದೇ ಯುಸುಫ್ ಆದಿಲ್‌ಖಾನ ಮತ್ತು ಅವನ ಮುಸ್ಲಿಂ ರಾಜ್ಯಪಾಲರು ಕಾಚನಾಯಕನನ್ನು ಬಿಟ್ಟು ಪಲಾಯನ ಮಾಡಿದರು. ತಿಮ್ಮನು ಕಾಚನಾಯಕನನ್ನು ಸೆರೆಹಿಡಿದು ರಾಯನಿಗೆ ಕಳಿಸಿದನು. ಸಂತುಷ್ಟನಾದ ವೀರನರಸಿಂಹನು ಸೇನಾಪತಿ ತಿಮ್ಮನನ್ನು ಬಂಗಾರದ ಗಂಡಪೆಂಡೇರ ನೀಡಿ ಗೌರವಿಸಿ, **ಸ್ವಾಮಿದ್ರೋಹರಗಂಡ** ಎಂಬ ಬಿರುದನ್ನು ನೀಡಿದನು. ರಾಮರಾಜನು ಕಂದನವೋಲಿನ ರಾಜ್ಯಪಾಲನಾದನು. ಅನಂತರ ಅವನು ಕಂದನವೋಲಿನ ರಾಮರಾಜನೆಂದು ಪ್ರಖ್ಯಾತನಾದನು.[27] ಮುಸ್ಲಿಂ ದಾಳಿಕೋರರನ್ನು ಕಾಲಕಾಲಕ್ಕೆ ಸೋಲಿಸಿ ರಾಮರಾಜನು ವಿಜಯನಗರವನ್ನು ರಕ್ಷಿಸಿದನು.

**ತುಳುನಾಡು :** ವೀರನರಸಿಂಹನು ಅನಂತರ ತುಳುಜಿಲ್ಲೆಗಳಲ್ಲಿ ಬಂಡೆದ್ದವರನ್ನು ಸದೆಬಡಿಯಲು ಪ್ರಾರಂಭಿಸಿದನು. ಅವನು ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣದ ದೊರೆಗಳನ್ನು ನಿಗ್ರಹಿಸಲು ಆಗಲಿಲ್ಲ. ಆದರೆ ಕನ್ನಡ ಜಿಲ್ಲೆಗಳಲ್ಲಿಯ ಉಪಟಳವನ್ನು ಸಾಕಷ್ಟು ಅಣಗಿಸಿದನು. ಕಡೂರು ಶಾಸನ[28]ವೊಂದು ತುಳುನಾಡಿನ ಮೇಲೆ ಭುಜಬಲರಾಯನ ದಾಳಿಯ ಬಗ್ಗೆ ತಿಳಿಸುತ್ತದೆ. ಆಗ ಅಲ್ಲಿ ಪರಿಪಾಲಕನಾಗಿದ್ದ **ಇಮ್ಮಡಿ ಬೈಚರಸನು** ಕಳಸ ಕಾರ್ಕಳದ ಅಧಿಪತಿಯಾಗಿದ್ದವನು. ಭುಜಬಲರಾಯನು ತನ್ನ ರಾಜ್ಯದ ಮೇಲೆ ದಾಳಿ ಮಾಡದೇ ವಿಜಯನಗರಕ್ಕೆ ಹಿಂದಿರುಗಿದರೆ, ಕಳಸದ ಕೈಲಾಸನಾಥ ದೇವಾಲಯದ ಜೀರ್ಣೋದ್ಧಾರ ಮಾಡುವುದಾಗಿ ಹರಕೆ ಹೊರುತ್ತಾನೆ. ಈ ಹರಕೆಯನ್ನು ಕ್ರಿ.ಶ. 1516ರಲ್ಲಿ ವೀರನರಸಿಂಹನ ತರುವಾಯ ಸಾಮ್ರಾಟನಾದ ಕೃಷ್ಣದೇವರಾಯನ ಕಾಲದಲ್ಲಿ ನೆರವೇರಿಸುತ್ತಾನೆ. ರಾಬರ್ಟ್ ಸಿವೆಲ್ಲರು ಭುಜಬಲರಾಯನೆಂದರೆ ವೀರನರಸಿಂಹನೆಂದು ಅಂಗೀಕರಿಸಲಿಲ್ಲ.[29] ಏಕೆಂದರೆ ಶಾಸನವು ಕ್ರಿ.ಶ. 1516ರದಾಗಿದೆ. ಅದು ವೀರನರಸಿಂಹನ ಕಾಲಾನಂತರದ್ದು. ವೀರನರಸಿಂಹನ ಕಾಲದಲ್ಲಿ ಮಾಡಿದ ಹರಕೆಯನ್ನು ಅನಂತರ ನೆರವೇರಿಸಲಾಯಿತು.



ಅಂದಿನ ವರುಷವೇ ಶಾಸನದ ವರುಷ. ಈ ಶಾಸನದಿಂದ ತಿಳಿಯುವುದೇನೆಂದರೆ ಇಮ್ಮಡಿ ಬೈಚರಸನು ತನ್ನ ಪಾಳೆಯಪಟ್ಟನ್ನು ಕಾಪಾಡಿಕೊಳ್ಳುವುದಕ್ಕಾಗಿ ಮಾಡಿದ ಪ್ರಯತ್ನವಷ್ಟೆ ಆದರೆ ಆಗಿನ ದಾಳಿಯ ಪರಿಣಾಮಗಳ ಬಗ್ಗೆ ಇಲ್ಲಿ ಏನೂ ತಿಳಿಯುವುದಿಲ್ಲ. ಕೇರಳ ಪಲಮ[30]ವು ವೀರನರಸಿಂಹನ ತುಳುನಾಡ ದಿಗ್ವಿಜಯದ ಬಗ್ಗೆ ತಿಳಿಸುತ್ತದೆ.

ಪಠಾಣರೊಂದಿಗೆ ನಡೆದ ನಿರಂತರ ಕಾಳಗಗಳಲ್ಲಿ ಅನೇಕ ಹಿಂದೂ ವೀರರು ವೀರಗತಿ ಪಡೆದರು. ಅನೇಕ ಕಡೆ ಹಿಂದೂ ಸೈನ್ಯವು ಪರಾಜಿತವಾಯಿತು. ಇದರಿಂದ ರಾಯನು **ಅಶ್ವದಳದ** ಮಹತ್ವವನ್ನು ಅರಿತನು. ಅದಕ್ಕಾಗಿ ತುಳುನಾಡಿನ ಮೇಲೆ ದಾಳಿ ಮಾಡಿ ಹೊನ್ನಾವರ, ಭಟ್ಕಳ, ಬಾಕನೂರು, ಮಂಗಳಾಪುರ ಮುಂತಾದ ಬಂದರುಗಳಲ್ಲಿ ಸೇನೆ ಜಮಾಯಿಸಿ, ಕುದುರೆಗಳನ್ನು ಆಮದುಮಾಡಿ ಅಶ್ವದಳವನ್ನು ಬಲಪಡಿಸಿದನು. ಈ ತುಳು ಬಂದರುಗಳನ್ನು ಈ ಮೊದಲು ಸಾಳುವ ನರಸಿಂಹನು ವಶಪಡಿಸಿಕೊಂಡಿದ್ದನು. ಆದರೆ ಇಲ್ಲಿಯ ನಾಯಕರು ವೀರನರಸಿಂಹನ ಪರಮಾಧಿಕಾರವನ್ನು ಅಂಗೀಕರಿಸಿರಲಿಕ್ಕಿಲ್ಲ. ಆದಕಾರಣ ಅವನು ತುಳುನಾಡಿನ ಮೇಲೆ ದಿಗ್ವಿಜಯ ಮಾಡಿರಬೇಕು. ಆತನು ಪಶ್ಚಿಮ ಘಟ್ಟಗಳನ್ನು ದಾಟಿ ಕರಾವಳಿಯ ಎಲ್ಲ ಬಂದರುಗಳನ್ನು ವಶಪಡಿಸಿಕೊಂಡಿರಬೇಕು. ಅಲ್ಲಿಂದ ವೀರನರಸಿಂಹನು ಮಂಗಳೂರಿಗೆ ತೆರಳಿ ಕೆಲಕಾಲ ಅಲ್ಲಿದ್ದನು. ಸುತ್ತಣ ಪ್ರದೇಶವನ್ನೆಲ್ಲಾ ವಿಜಯನಗರದ ಸೇನೆಯು ಯಾವ ಪ್ರತಿಘಟನೆಯಿಲ್ಲದೇ ವಶಪಡಿಸಿಕೊಂಡಿತು. ಕಳಸ ಕಾರ್ಕಳದ ಅರಸ ಇಮ್ಮಡಿ ಬೈಚರಸ ಒಡೆಯನು ಪಲಾಯನ ಮಾಡಿ ಸುರಕ್ಷಿತನಾದನು.[31]

**ಸಂಬೆಟ ಗುರುವರಾಜ :** ಮಚ್ಚುಪಲ್ಲೆಯ ನಾಯಕನಾದ ಸಂಬೆಟ ಗುರುವ ರಾಜನು ಅವನು ವಿಧಿಸಿದ ಹೆಣಭಾರದ ಕಂದಾಯವನ್ನು ಕೊಡಲಾರದ ರೈತರಿಗೆ ಚಿತ್ರಹಿಂಸೆ ನೀಡುತ್ತಿದ್ದನು. ಅವನನ್ನು ಶಿಕ್ಷಿಸಲು ವೀರನರಸಿಂಹನು ಸೈನ್ಯವನ್ನು ಕಳಿಸಿದನು. **ಮಚ್ಚುಪಲ್ಲೆ ಕೈಫಿಯತ್**[32] ತಿಳಿಸುವುದೇನೆಂದರೆ ಮಚ್ಚುಪಲ್ಲೆಯ ಮಹಾಮಂಡಲೇಶ್ವರ ಗುರುವರಾಜನು ರಾಕ್ಷಸನಂತಿದ್ದನು. ಅವನು ಕಂದಾಯ ನೀಡಲಾಗದ ದಟ್ಟ ದರಿದ್ರ ರೈತರಿಗೆ ವಿಪರೀತ ಹಿಂಸೆ ನೀಡುತ್ತಿದ್ದನು. ಈ ವಿಷಯದಲ್ಲಿ ಕೈಫಿಯತ್ ಒಂದು ಪ್ರಸಂಗವನ್ನು ವಿವರಿಸುತ್ತದೆ. ಆ ಕಾಲದಲ್ಲಿ ವಿನುಕೊಂಡ ಮತ್ತು ಬೆಲ್ಲಂಕೊಂಡದ ಹತ್ತಿರವಿದ್ದ ಕೂಚಿಪುಡಿ ಗ್ರಾಮದಿಂದ ಒಂದು ಬ್ರಾಹ್ಮಣರ ನಾಟಕ ಮಂಡಳಿಯು ಮಚ್ಚುಪಲ್ಲೆಗೆ ಆಗಮಿಸಿತು. ಅವರಿಗೆ ಗುರುವರಾಜನ ಅತ್ಯಂತ ಕ್ರೂರವಾದ ದಬ್ಬಾಳಿಕೆಯ ಆಡಳಿತದ ಬಗ್ಗೆ ತಿಳಿಯಿತು. ಅವರು ತಮ್ಮ ಸಂಚಾರದಲ್ಲಿ **ವಿದ್ಯಾನಗರ** ತಲುಪಿದರು. ಆಗ ವಿಜಯನಗರ ಪ್ರಭುವಾಗಿದ್ದ ವೀರನರಸಿಂಹನನ್ನು ಅವನ ಆಶ್ರಯದಲ್ಲಿ ನಾಟಕ ಪ್ರದರ್ಶನಕ್ಕೆ ಅನುಮತಿಗಾಗಿ ಪ್ರಾರ್ಥಿಸಿದರು. ಕೂಚಿಪುಡಿ ನಿಪುಣ ನಟನಾ ಸಾಮರ್ಥ್ಯವು ಲೋಕಪ್ರಸಿದ್ಧವಾಗಿದ್ದ ಕಾರಣ ವೀರನರಸಿಂಹನು ತನ್ನ ಅರಮನೆಯ ಮುಂಭಾಗದಲ್ಲಿ ನಾಟಕದ ಅಭಿನಯ ನಡೆಯಲೆಂದು ತಿಳಿಸಿದನು. ನಾಟಕದ ಪಾತ್ರಧಾರಿಗಳು ತಮ್ಮ ನಾಟಕವನ್ನು ನವೀಕರಿಸುತ್ತಾ ನಾಟಕದ ಮಧ್ಯಭಾಗದಲ್ಲಿ ಒಬ್ಬ ಪ್ರಭುವನ್ನು ಕುಳ್ಳಿರಿಸಿ ಅವನ ಆಜ್ಞೆಯ ಪ್ರಕಾರ ಹಣ ವಸೂಲು ಮಾಡಲು ಒಬ್ಬ ಹೆಂಗಸಿಗೆ ನಾನಾ ರೀತಿಯ ಹಿಂಸೆ ಮಾಡಿದರು.

ರಾಯನು ತನ್ನ ಅಧಿಕಾರಿಗಳನ್ನು ಏನೀ ಪ್ರಸಂಗದ ಹಿನ್ನೆಲೆ–ಮುನ್ನೆಲೆ ಎಂದು ವಿಚಾರಿಸಿದನು. ಪರಿಶೋಧಿಸಲಾಗಿ–ಸಿದ್ಧವಟಸೀಮೆಯ ರೈತರಿಂದ ಸಂಬೆಟ ಗುರುವ ರಾಜನು ಯಾವ ರೀತಿಯಲ್ಲಿ ಚಿತ್ರಹಿಂಸೆ ಮಾಡಿ ಹಣ ವಸೂಲು ಮಾಡುತ್ತಿದ್ದನು–ಎಂಬುದರ ಯಥಾಚಿತ್ರಣ ಅದಾಗಿತ್ತು. ಈ ಪ್ರಸಂಗವನ್ನು ಉದ್ದೇಶಪೂರ್ವಕವಾಗಿ ರಾಯನ ಮುಂದೆ ಅಭಿನಯಿಸಿ, ಆತನ ಅಧಿಕಾರಿಗಳು ಯಾವ ರೀತಿಯಲ್ಲಿ ಪ್ರಜಾ ಹಿಂಸಕರಾಗಿದ್ದಾರೆಂದು ಮನವರಿಕೆ ಮಾಡಲಾಯಿತು. ವೀರನರಸಿಂಹನು ಮರುದಿನವೇ ಸಂಬೆಟ ಗುರುವರಾಜನಿಗೆ ಪಾಠ ಕಲಿಸಲು ಸೈನಿಕ ಕಾರ್ಯಾಚರಣೆಯ ವ್ಯವಸ್ಥೆ ಮಾಡಿದನು. ವೀರನರಸಿಂಹನ ಪುತ್ರನೆಂದು ಅಭಿಮಾನದಿಂದ ಕರೆಯಲ್ಪಡುತ್ತಿದ್ದ ಇಸ್ಮಾಯಿಲ್ ಖಾನನೇ ಈ ದಳಕ್ಕೆ ಅಧಿಪತಿಯಾದನು. ವಿಜಯನಗರ ವಾಹಿನಿಯು ಮಚ್ಚುಪಲ್ಲೆಯ ಕೋಟೆಯನ್ನು ತಲುಪಿ ಪಶ್ಚಿಮದ ಅಗಸಿಯ ಮೂಲಕ ಕೋಟೆಯನ್ನು ವಶಪಡಿಸಿಕೊಂಡಿತು. ಗುರುವರಾಜನ ಶಿರಚ್ಛೇದಮಾಡಿ ರುಂಡವನ್ನು ರಾಜಧಾನಿಗೆ ತರಲಾಯಿತು. ಇದರಿಂದ ವೀರನರಸಿಂಹನು ತನ್ನ ಅಧೀನ ಆಡಳಿತಗಾರರನ್ನು ಸರಿದಾರಿಯಲ್ಲಿಡಲು ಆಸಕ್ತನಾಗಿದ್ದನೆಂದು ತಿಳಿಯುತ್ತದೆ.

**ಗಜಪತಿರಾಜರು :** ಸಮಕಾಲೀನ ಸಾಹಿತ್ಯ ಮತ್ತು ಶಾಸನಗಳಿಂದ ತಿಳಿದು ಬರುವುದೇನೆಂದರೆ ವಿಜಯನಗರದ ಅಶಾಂತ ಪರಿಸ್ಥಿತಿಯ ಲಾಭಪಡೆಯಲು ಪ್ರತಾಪರುದ್ರ ಗಜಪತಿಯು ಹಿಂಜರಿಯಲಿಲ್ಲ. ಈ ಹಿಂದೆ ಸಾಳುವ ಇಮ್ಮಡಿ ನರಸಿಂಹನ ಕಾಲದಲ್ಲಿ ತನ್ನ ಗಡಿಯನ್ನು ದಕ್ಷಿಣದಲ್ಲಿ ವಿಸ್ತರಿಸಲು ಪ್ರಯತ್ನಿಸಿದಾಗ ನರಸನಾಯಕನು ಅವನನ್ನು ಓಡಿಸಿದನು.

ಕಟಕರಾಜ ವಂಶಾವಳಿಯ ಪ್ರಕಾರ ಕ್ರಿ.ಶ. 1509ರಲ್ಲಿ ಪ್ರತಾಪರುದ್ರನು ವಿಜಯನಗರದ ಮೇಲೆ ದಾಳಿ ಮಾಡಿದನು. ಇದಕ್ಕೆ ಚೈತನ್ಯ ಭಾಗವತದಲ್ಲಿಯೂ ಸಾಕ್ಷಿ ಸಿಗುತ್ತದೆ.[33] ಚೈತನ್ಯ ಮಹಾನುಭಾವರು 1509ರ ಫೆಬ್ರುವರಿ–ಮಾರ್ಚ ಸಮಯದಲ್ಲಿ ನೀಲಾಚಲಕ್ಕೆ ಆಗಮಿಸಿದಾಗ ಪ್ರತಾಪರುದ್ರ ಗಜಪತಿಯು ಅಲ್ಲಿರಲಿಲ್ಲ. ಆಗ ಆತನು ವಿಜಯನಗರದ ಮೇಲೆ ದಾಳಿ ಹೊರಟಿದ್ದನು. ಶಕ ಸಂವತ್ಸರ 1430ರ ಹಂಪಿಶಾಸನದಲ್ಲಿ ಕೃಷ್ಣದೇವರಾಯನು ತಾನು ಗಜಪತಿಯ ಮೇಲೆ ಸಾಧಿಸಿದ ವಿಜಯವನ್ನು ಹೇಳಿದ್ದಾನೆ.[34] ಪ್ರಾಯಃ ವೀರನರಸಿಂಹನು ಸೋದರ ಕೃಷ್ಣದೇವರಾಯನಿಗೆ ಗಜಪತಿಯನ್ನೆದುರಿಸಲು ನಿಯೋಜಿಸಿರಬೇಕು. ಗಜಪತಿ ಸೈನ್ಯವನ್ನು ಜಯಿಸಿ ಹಿಮ್ಮೆಟ್ಟಿಸಲು ಕೃಷ್ಣದೇವರಾಯ ಯಶಸ್ವಿಯಾಗಿ ಈ ಜಯದ ನೆನಪಿಗೆ ನಾನಾ ದಾನ ದತ್ತಿ ನೀಡಿದ್ದಾನೆ.

**ಪೋರ್ತುಗೀಸರ ಆಗಮನ :** ಅನಾದಿಕಾಲದಿಂದ ಪಶ್ಚಿಮ ರಾಷ್ಟ್ರಗಳಿಗೆ ಭಾರತವೇ ಮಸಾಲೆ ದಿನಸು, ಮೆಣಸು ಮತ್ತು ಬಟ್ಟೆ ಒದಗಿಸುತ್ತಿತ್ತು. ಕ್ರಿ.ಶ. 1453ರಲ್ಲಿ ಟರ್ಕರು ಕಾನ್ಸ್ಟಂಟಿನೋಪಲ್ ಜಯಿಸಿದ ಮೇಲೆ ಭಾರತದೊಂದಿಗಿನ ಯುರೋಪಿಯನ್ನರ ವ್ಯಾಪಾರ ತಲೆಕೆಳಗಾಯಿತು. ಆಗ ಯುರೋಪಿಯನ್ನರು ಭಾರತಕ್ಕೆ ಹೊಸ ಸಮುದ್ರಮಾರ್ಗದ ಅನ್ವೇಷಣೆಯಲ್ಲಿ ತೊಡಗಿದರು. ಕ್ರಿ.ಶ. 1498ರಲ್ಲಿ **ಪೋರ್ತುಗಾಲದ** ನಾವಿಕ **ವಾಸ್ಕೊ–ಡ–ಗಾಮಾ** ಪಶ್ಚಿಮ ಕಡಲ ತೀರದ ಕಲ್ಲಿಕೋಟೆಗೆ ಆಗಮಿಸಿದನು. ಆರಂಭದಲ್ಲಿ ಪೋರ್ತುಗೀಸರು ಹಿಂದು ರಾಜ್ಯಗಳ ಕಡೆಗೆ ಆಕರ್ಷಿತರಾದರು. ಪಡುಗಡಲ ತೀರದ ಅನೇಕ ಬಂದರುಗಳು



ಅವರವಾಗಿದ್ದವು. ಯುರೋಪಿಯನ್ನರಿಗೆ ಬೇಕಾದ ಅನೇಕ ವಸ್ತುಗಳು ಈ ರಾಜ್ಯಗಳಲ್ಲಿ ಲಭಿಸುತ್ತಿದ್ದವು. ಬಾರ್ಬೊಸಾ[35] ನಾನಾ ತರಹದ ವಸ್ತುಗಳ ಆಯಾತ ನಿರ್ಯಾತದಲ್ಲಿ ತೊಡಗಿದ್ದ ವಿಜಯನಗರ ಮತ್ತು ಮಲಬಾರಿನ ಬಂದರುಗಳ ವಿವರವನ್ನು ನೀಡಿದ್ದಾನೆ. ಮುಸ್ಲಿಮರು ಅವರಿಗೆ ಭಾರತದಲ್ಲಿ ವ್ಯಾಪಾರದ ಪ್ರತಿಸ್ಪರ್ಧಿಗಳಾಗಿದ್ದರು.

ಈಜಿಪ್ಟಿನ ಸುಲ್ತಾನನು ಕಲ್ಲಿಕೋಟೆಯ ದೊರೆ ಜಾಮೊರಿನ್‌ಗೆ ಎಲ್ಲ ನೆರವು ನೀಡುತ್ತಿದ್ದನು. ಅವರು ಪೋರ್ತುಗೀಸರನ್ನು ಅರೇಬಿಯಾ ಸಮುದ್ರದಿಂದ ಹೊರಗಿಡಲು ನೆರವಾಗುವ ದೊರೆಯೆಂದು ಜಾವೊರಿನ್‌ನನ್ನು ನಂಬಿದ್ದರು. ಆದ್ದರಿಂದ ಪೋರ್ತುಗೀಸರು ಮೊದಲಿನಿಂದಲೂ ಮುಸ್ಲಿಂ ವಿರೋಧಿಗಳಾಗಿದ್ದರು. ಅವರು ಮುಸ್ಲಿಮರ ಸಮುದ್ರದ ಮೇಲಿನ ಅಧಿಕಾರವನ್ನು ನಾಶಮಾಡಲು ನಿರ್ಧರಿಸಿದರು. ಆಗ ಇಜಿಪ್ಟ್‌ನ ಸುಲ್ತಾನನು ಕಲ್ಲಿಕೋಟೆಯ ದೊರೆ ಜಾಮೊರಿನ್‌ಗೆ ಕೋಟೆಕೊತ್ತಳ ನಿರ್ಮಿಸಲು ನೀಡುತ್ತಿದ್ದ ನೆರವು ನಿಲ್ಲುತ್ತದೆ. ಪೋರ್ತುಗೀಸ್ ಸೇನಾಪತಿ ಫ್ರಾನ್ಸಿಸ್ಕೊ–ಡಿ– ಅಲ್ಮೇಡಾ ಜಾಮೊರಿನ್ ಮತ್ತು ಇಜಿಪ್ಟ್ ಸುಲ್ತಾನನ ಸಂಯುಕ್ತ ಸೈನ್ಯವನ್ನು ಕ್ರಿ.ಶ. 1509 ಫೆಬ್ರುವರಿಯಲ್ಲಿ ಸೋಲಿಸಿ ಹಿಂದು ರಾಜ್ಯಗಳಾದ ಕೊಚ್ಚಿ ಮತ್ತು ಕಣ್ಣಾನೂರಿನ ಪ್ರದೇಶದಲ್ಲಿ ಕೋಟೆಕಟ್ಟಿ ಕಾರ್ಖಾನೆ ಸ್ಥಾಪಿಸಿದರು.[36]

ದಕ್ಷಿಣ ಭಾರತದಲ್ಲಿ ಪೋರ್ತುಗೀಸರ ವಾಣಿಜ್ಯ ವ್ಯವಹಾರಗಳು ವೃದ್ಧಿಯಾಗಲು ಕೆಲಕಾರಣಗಳಿವೆ. ಕೊಚ್ಚಿ ಮತ್ತು ಕಣ್ಣಾನೂರಿನ ಹಿಂದೂ ರಾಜರು ಕ್ಯಾಲಿಕಟ್‌ನ ಜಾಮೊರಿನ್‌ನ ದಬ್ಬಾಳಿಕೆಯಿಂದ ಪಾರಾಗಲು ಪೋರ್ತುಗೀಸರಿಗೆ ತಮ್ಮ ಪ್ರದೇಶಗಳಲ್ಲಿ ಅವರಿಗೆ ಬೇಕಾದ ಪರವಾನಿಗಿ ನೀಡಿದರು. ಬಹಮನಿ ಸುಲ್ತಾನರ ಶತ್ರುಗಳಾದ ವಿಜಯನಗರ ಅರಸರು ತಮ್ಮ ಅಶ್ವದಳವನ್ನು ಅಭಿವೃದ್ಧಿ ಪಡಿಸಲೇಬೇಕಾಗಿತ್ತು. ಈ ಮೊದಲು ಕುದುರೆಗಳಿಗಾಗಿ ಅರಬ ಮುಸ್ಲಿಂ ವ್ಯಾಪಾರದಾರರನ್ನು ಅವಲಂಬಿಸಬೇಕಾಗಿತ್ತು. ಸಾಳುವ ನರಸಿಂಹನು ಮುಸ್ಲಿಂ ವ್ಯಾಪಾರಸ್ಥರಿಗೆ ಉತ್ತಮ ತಳಿಯ ಕುದುರೆಗಳಿಗೆ ಹೆಚ್ಚಿನ ದರ ನೀಡಿ ಪ್ರೋತ್ಸಾಹ ನೀಡಿದನು. ಆದರೆ ಕುದುರೆ ವ್ಯಾಪಾರದ ಏಕಸ್ವಾಮ್ಯ ಹಿಡಿದಿದ್ದ. ಮುಸ್ಲಿಂರು ತಮ್ಮ ವ್ಯವಹಾರದಲ್ಲಿ ಮುಸ್ಲಿಂರಾದ ಸುಲ್ತಾನರಿಗೆ ಹೆಚ್ಚು ಪ್ರಾಶಸ್ತ್ಯ ನೀಡಿ ಪಕ್ಷಪಾತ ಮಾಡಿದರು.[37]

ಆರಂಭದಲ್ಲಿ ಪೋರ್ತುಗೀಸರಿಗೂ ವಿಜಯನಗರದ ಅರಸರಿಗೂ ನೇರ ವ್ಯಾಪಾರವಿರಲಿಲ್ಲ. ಅವರು ಮೊದಲು ಸಣ್ಣ ನಾಯಕರ ಸಂಪರ್ಕ ಮಾಡಿದರು. ತುಳುನಾಡಿನ ಬಂದರುಗಳಾದ ಬಂಕಾಪುರ ಹೊನ್ನಾವರ, ಭಟ್ಕಳ, ಗೆರುಸೊಪ್ಪಾ ಅವರಿಗೆ ಇಷ್ಟವಾದವು. ಈ ಬಂದರುಗಳು ಪುಡಿನಾಯಕರ ವಶದಲ್ಲಿ ಇದ್ದವು.[38]

ವಾಸ್ಕೋ–ಡ–ಗಾಮನು 24–11–1498 ರಿಂದ 12 ದಿವಸ ಉತ್ತರ ಕನ್ನಡ ಜಿಲ್ಲೆಯಲ್ಲಿ ತಿರುಗಾಡಿ ಅಲ್ಲಿಯ ವ್ಯಾಪಾರ ಪರಿಸ್ಥಿತಿಯನ್ನು ತಿಳಿದನು. ದಾಲಚಿನ್ನಿಯ ಬೇರೆಬೇರೆ ನಮೂನೆಗಳನ್ನು ಸಂಗ್ರಹಿಸಿದನು. ಆದರೆ ಆತನಿಗೆ ತಾನು ವಿಜಯನಗರ ಸಾಮ್ರಾಜ್ಯದಲ್ಲಿರುವುದು ತಿಳಿಯಲಿಲ್ಲ.

ಆತನು ಪೋರ್ತುಗಾಲಕ್ಕೆ ವಾಪಸಾದ ನಂತರ ಕ್ರಿ.ಶ. 1500ರಲ್ಲಿ ಪೆಡ್ರೊ ಅಲ್ವಾರಿಸ್ ಕೇಬ್ರಲ್‌ನು ಇಂಡಿಯಾಗೆ ಕಳಿಸಲ್ಪಟ್ಟನು. ಆತನು ಮಲಬಾರ್‌ನಲ್ಲಿ ತಿರುಗಾಡುವಾಗ ಮೊದಲ ಬಾರಿಗೆ ಅವರಿಗೆ ವಿಜಯನಗರ ಸಾಮ್ರಾಜ್ಯದ ಬಗ್ಗೆ ಅರಿವಾಯಿತು. ಅವರು ಆಗ ವಿಜಯನಗರ ಸಾಮ್ರಾಟನ ಬಗ್ಗೆ ಮತ್ತು ಜನರ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಅವರು ಪ್ರಥಮ ಬಾರಿಗೆ ವಿಜಯನಗರದ ಆಧೀನ ಅಧಿಕಾರಿಯಾದ ಭಟ್ಕಳದ ಪಾಲಕನನ್ನು ಭೇಟಿಯಾದರು. ಆಗ ಸ್ಥಳೀಯ ವ್ಯಾಪಾರಸ್ಥರೊಂದಿಗೆ ಸಂಬಂಧವೇರ್ಪಟ್ಟಿತು. ಅದು ಪೋರ್ತುಗೀಸರಿಗೆ ಲಾಭಕರವಾಯಿತು. ಪೋರ್ತುಗೀಸರ ವಸ್ತುಗಳು ಅಪಹರಣವಾದಾಗ ಅವರು ನೀಡಿದ ದೂರಿನ ಮೇಲೆ ಭಟ್ಕಳದ ಅಧಿಕಾರಿ ಕಳ್ಳರನ್ನು ಬಂಧಿಸಿದನು. ಇದರಿಂದ ಸಂತುಷ್ಟರಾದ ಪೋರ್ತುಗೀಸರು ಭಟ್ಕಳ ಪಾಲಕನಿಗೆ ಅಮೂಲ್ಯ ಕಾಣಿಕೆ ಕಳಿಸಿದರು. ಅದರಿಂದ ಸಂತಸಗೊಂಡ ಆತನು ಪೋರ್ತುಗೀಜರು ವ್ಯವಹಾರ ಮಾಡಲು ಬಂದರಿಗೆ ಬರಬಹುದೆಂದು ಆಹ್ವಾನವಿತ್ತನು.

ಕ್ರಿ.ಶ. 1502ರಲ್ಲಿ ವಾಸ್ಕೊ–ಡ–ಗಾಮಾ ಎರಡನೇ ಸಲ ಭಾರತಕ್ಕೆ ಬಂದನು. ಅವನು ಭಟ್ಕಳ ಮತ್ತು ಹೊನ್ನಾವರ ಬಂದರಿನಲ್ಲಿದ್ದ ವಿಜಯನಗರದ ಹಡಗುಗಳನ್ನು ಸುಟ್ಟನು. ಭಟ್ಕಳ ಮತ್ತು ಹೊನ್ನಾವರದ ಜನರು ಪೋರ್ತುಗೀಸರ ವಸ್ತುಗಳನ್ನು ಕದ್ದರು ಮತ್ತು ವಿರೋಧಿಸುತ್ತಾರೆ ಎಂದು ಆಪಾದಿಸಿ ಆ ರೀತಿ ಮಾಡಿದನು. ಅವನನ್ನು ವಿರೋಧಿಸಿದ ಸ್ಥಳೀಯ ಅಧಿಕಾರಿಗಳನ್ನು ಬಲಪ್ರಯೋಗ ಮಾಡಿ ಮಣಿಸಿದನು. ತನ್ನ ಷರತ್ತಿಗೆ ಅವರು ಅಂಗೀಕರಿಸಿದ ಮೇಲೆ ಶಾಂತಿ ಒಪ್ಪಂದ ಮಾಡಿಕೊಂಡನು. ಅವನ ಷರತ್ತೆಂದರೆ – ತುರುಕರಿಗೆ ಅಲ್ಲಿ ವ್ಯವಹಾರ ಮಾಡಲು ಅವಕಾಶ ನೀಡಬಾರದು. ಬಂದರಿನಲ್ಲಿ ಕಾಳುಮೆಣಸಿನ ವ್ಯಾಪಾರ ಮಾಡಲೇಬಾರದು. ಅಲ್ಲದೇ ಎಲ್ಲ ಸಮುದ್ರಗಳ ಒಡೆತನ ಪೋರ್ತುಗಾಲದ ರಾಜನಿಗೆ ಸೇರಿದ್ದು. ಎಲ್ಲೆಲ್ಲಿ ನೌಕಾ ಸಾರಿಗೆ ನಡೆಯುತ್ತದೋ ಆ ಎಲ್ಲ ಬಂದರುಗಳಲ್ಲಿ ಪೋರ್ತುಗಾಲದ ರಾಜನದೇ ಅಧಿಕಾರ. ಅವನ ಜಹಜುಗಳಲ್ಲಿ ತಿರುಗಾಡುವ ಆ ರಾಜನ ಅಧಿಕಾರಿಗಳಿಗೆ ಕಾಣಿಕೆ ಸಲ್ಲಿಸಬೇಕು. ಈ ರೀತಿ ಕಾಣಿಕೆ ಸಲ್ಲಿಸಿದರೆ ಮಾತ್ರ ಬಂದರುಗಳು ಮುಕ್ತವಾಗಿರುತ್ತವೆ. ಸುರಕ್ಷಿತವಾಗಿ ವ್ಯಾಪಾರ ಮಾಡುತ್ತಿರಬಹುದು ಎಂದು ಸಾರಿದನು.

ಅಲ್ಲಿಯ ಅಧಿಕಾರಿಯು ಈ ಷರತ್ತಿಗೆ ಒಪ್ಪಿದನು. ಆದರೆ ನನಗೇನು ? ಈ ರಾಜ್ಯವು ವಿಜಯನಗರಕ್ಕೆ ಸೇರಿದ್ದು, ನಾನು ಕೇವಲ ಆಧೀನ ಅಧಿಕಾರಿ ಎಂದುಕೊಂಡನು ಅವನು ವಾರ್ಷಿಕವಾಗಿ ಪೋರ್ತುಗೀಸ ಸೈನಿಕರಿಗೆ 1000 ಮೂಟೆ ಸಾದಾ ಅಕ್ಕಿಯನ್ನು ಅಧಿಕಾರಿಗಳಿಗೆ 500 ಮೂಟೆ ಉತ್ತಮ ಅಕ್ಕಿಯನ್ನು ನೀಡಲು ಮುಂದೆ ಬಂದನು. ವಾಸ್ಕೊ–ಡ–ಗಾಮಾ ಈ ಕೊಡುಗೆಯನ್ನು ಸಂತೋಷದಿಂದ ಸ್ವೀಕರಿಸಿ ಶಾಂತಿ–ಸುವ್ಯವಸ್ಥೆಗೆ ಒಪ್ಪಿದನು.39 ವಿಜಯನಗರ ಸಂಸ್ಥಾನಗಳಲ್ಲಿ ಪೋರ್ತುಗೀಸರ ದರ್ಪದ ನಡುವಳಿಕೆಗೆ ಇದೊಂದು ಉದಾಹರಣೆ. ಈ ಹೊತ್ತಿಗೆ ಅವರು ವಿಜಯನಗರದ ಸ್ಥಿತಿಗತಿ ಮತ್ತು ರಾಜಧಾನಿಯ ಅಸ್ಥಿರ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದರು. ಅಲ್ಲಿ ಸಾಮ್ರಾಟನೆ ಅಂತರ್ಯುದ್ಧದ ರಗಳೆಯಲ್ಲಿ ಸಿಲುಕಿರುವಾಗ ಸಂಸ್ಥಾನಿಕರ ನೆರವಿಗೆ ಆತನೀಗ



ಬರಲಾರೆನೆಂದು ಖಾತ್ರಿ ಮಾಡಿಕೊಂಡು ಬಂದರಿನಲ್ಲಿ ಬೆಂಕಿ ಹಚ್ಚುವ ಸಾಹಸ ಮಾಡಿದರು. ಸಾಳುವ ನರಸಿಂಹನ ಮರಣಾನಂತರ ಅವನ ಮಕ್ಕಳ ಪರವಾಗಿ ರಾಜರಕ್ಷಕನಾಗಿ ಪರಿಪಾಲಿಸುತ್ತಿದ್ದ ನರಸ ನಾಯಕನು ಒಳಗಿನ ಬಂಡಾಯ ಮತ್ತು ಹೊರಗಿನಿಂದ ಮುಸಲ್ಮಾನರ ದಾಳಿಯ ನಡುವೆ ಸಿಲುಕಿದ್ದನು. ಅದರಿಂದಾಗಿ ಭಟ್ಕಳ ಮತ್ತು ಹೊನ್ನಾವರದಲ್ಲಿ ಪೋರ್ತುಗೀಸರ ಉಪಟಳದ ಬಗ್ಗೆ ಗಮನಕೊಡಲು ಆತನಿಗೆ ಸಾಧ್ಯವಿರಲಿಲ್ಲ. ಕ್ರಿ.ಶ. 1491ರಿಂದ 1503ರ ಅವಧಿಯಲ್ಲಿ ರಾಜಧಾನಿಯಲ್ಲಿದ್ದ ಆತಂಕಕಾರಿ ಪರಿಸ್ಥಿತಿಯ ದುರ್ಲಾಭ ಪಡೆದು ಸ್ಥಳೀಯ ಅಧಿಪತಿಗಳಿಗೂ, ಸ್ಥಳೀಯ ವ್ಯಾಪಾರಿಗಳಿಗೂ ಹಾನಿಮಾಡಿ, ತಮ್ಮ ವ್ಯಾಪಾರವನ್ನು ಗಟ್ಟಿಯಾಗಿ ನೆಲೆಗೊಳಿಸಿದರು.

ಪೋರ್ತುಗೀಸರು **'ಅಂಜದೀವ್'** ದ್ವೀಪದ ಕಡೆಗೆ ಆಕರ್ಷಿತರಾದರು. ಅಲ್ಲಿ ಕೋಟೆ ಕಟ್ಟಿ ಗೋವಾ ತಟದ ಮೇಲೆ ಹತೋಟಿ ಸಾಧಿಸಲು ಹವಣಿಸಿದರು. ಆ ದ್ವೀಪವು ವಿಜಯನಗರದ ಅಧೀನ ಪಾಳೆಯಗಾರನಾದ ಗೆರೆಸೊಪ್ಪೆ ನಾಯಕರಿಗೆ ಸೇರಿತ್ತು. ಅವನು ದ್ವೀಪದ ಹವೆ ಸರಿ ಇಲ್ಲ, ಅಲ್ಲಿನ ಮಣ್ಣು ಸರಿ ಇಲ್ಲ ಎಂದನು. ಅದನ್ನು ಅಲಕ್ಷೆ ಮಾಡಿದ್ದನು.[40] ಪೋರ್ತುಗೀಸರು ಕ್ರಿ.ಶ. 1506ರಲ್ಲಿ ಅಂಜದೀವ್ ಕೋಟೆ ಕಟ್ಟಿದರು. ಈ ಬಗ್ಗೆ ಗೆರೆಸೊಪ್ಪೆ ಪಾಳೇಗಾರನಾಗಲೀ, ವಿಜಯನಗರ ಪ್ರಭುವಾಗಲೀ ಪ್ರತಿಕ್ರಯಿಸಲಿಲ್ಲ. ವಿಪರೀತವೆಂದರೆ ಗೆರಸೊಪ್ಪೆ ಪಾಳೇಗಾರನು ತನ್ನ ಪ್ರತಿನಿಧಿಯಾಗಿ ತಿಮ್ಮಪ್ಪನನ್ನು ಕ್ರಿ.ಶ. 1505ರ ಅಕ್ಟೋಬರ್‌ನಲ್ಲಿ ಕಳಿಸಿದನು.[41] ಆದರೆ ಈ ಸ್ನೇಹ ಬಹುಕಾಲ ಬಾಳಲಿಲ್ಲ. ಅಲ್ಮೇಡಾ 18–10–1505ರಂದು ಹೊನ್ನಾವರದ ಮೇಲೆ ದಾಳಿ ಮಾಡಿದನು. ಅಲ್ಲಿದ್ದ ಹದಿನಾಲ್ಕು ಹಡಗುಗಳನ್ನು, ನಗರದ ಕೆಲ ಭಾಗವನ್ನು ಸುಟ್ಟು ಹಾಕಿದನು. ಆದರೆ ಪೋರ್ತುಗೀಸ್ ಮೂಲಗಳು ತಿಳಿಸುವುದೇನೆಂದರೆ ಅಲ್ಮೇಡಾಗೆ ಹೊನ್ನವರವನ್ನು ಸುಡುವ ಉದ್ದೇಶ ಇರಲಿಲ್ಲ. ಏಕೆಂದರೆ ಅದು ವಿಜಯನಗರ ಸಾಮ್ರಾಟನ ಅಧೀನ ನಾಯಕತನವಾಗಿತ್ತು. ಪೋರ್ತುಗೀಶರು ವಿಜಯನಗರ ಪ್ರಭುಗಳ ಸ್ನೇಹಾಕಾಂಕ್ಷಿಗಳಾಗಿದ್ದರು.[42] ಮತ್ತೆ ತಿಮ್ಮಪ್ಪನು ಪೋರ್ತುಗೀಸರಿಗೂ ಗೆರಸೊಪ್ಪು ನಾಯಕನಿಗೂ ಸಂಧಿ ಏರ್ಪಡಿಸಲು ಪ್ರಯತ್ನಿಸಿದನು. ಗೆರಸೊಪ್ಪ ನಾಯಕನು ಪೋರ್ತುಗೀಸರ ಕುದುರೆಗಳಿಗಾದ ನಷ್ಟ ಪರಿಹಾರವೆಂದು 23000 ಅಷ್ರಫ್‌ಗಳನ್ನು ಸಲ್ಲಿಸಲು ಅಂಗೀಕರಿಸಿದನು. ಅಲ್ಲದೇ ಅವರಿಗೆ ವಾರ್ಷಿಕ ಕಾಣಿಕೆಯೆಂದು **ಮಿರ್ಜಾನ** ಬಂದರಿನಲ್ಲಿ ಸಂಗ್ರಹಿಸುವ ಸುಂಕವನ್ನು ನೀಡಿದನು.

ರಾಯರು ಮತ್ತು ಪೋರ್ತುಗೀಸರ ನೇರ ಮುಖಾಮುಖಿ ಕ್ರಿ.ಶ. 1505ರಲ್ಲಿ ಆಯಿತು. **ಕೇರಳ ಪಾಲಮದ** ಪ್ರಕಾರ ವೀರನರಸಿಂಹರಾಯನ ಪ್ರತಿನಿಧಿಯು **ಅಲ್ಮೇಡಾನನ್ನು** ಭೇಟಿಮಾಡಿದನು.[43] ಅಂಜದೀವಿನಲ್ಲಿದ್ದ ಅಲ್ಮೇಡಾಗೆ ರಾಯನ ಪ್ರತಿನಿಧಿಯು ಕಣ್ಣಾನೂರಿನಲ್ಲಿ ತನಗಾಗಿ ಕಾಯುತ್ತಿದ್ದಾನೆಂದು ತಿಳಿಯಿತು. ಅವನು ತಕ್ಷಣ ಹೊರಟು ಮರುದಿನವೇ ಕಣ್ಣಾನೂರು ತಲುಪಿದನು. ವೀರನರಸಿಂಹನ ಮಂತ್ರಿಯು ತಡಮಾಡದೇ ಅಲ್ಮೇಡಾನನ್ನು ಕಂಡು ಸ್ನೇಹದ ಪ್ರಸ್ತಾಪ ಮಡಿದನು. ಅಲ್ಲದೇ ಪೋರ್ತುಗೀಸ ಅರಸರೊಂದಿಗೆ ರಾಯನು ಸಂಬಂಧ ಬೆಳೆಸಲು ಉತ್ಸುಕನೆಂದು ತಿಳಿಸಿದನು. ಕೇರಳ ಪಾಲಮ ಪ್ರಕಾರ ಪೋರ್ತುಗೀಸರು

ಪರಮ ಸಂತಸಪಟ್ಟರೆಂದೂ, ರಾಯ ಸಾಮ್ರಾಜ್ಯದ ವೈಭವವನ್ನು ತಿಳಿದು ಹಿಗ್ಗಿದರೆಂದೂ ವರ್ಣಿಸಿದೆ. ವೀರನರಸಿಂಹನು ಪೋರ್ತುಗಾಲದ ಅರಸನಿಗೆ ಈ ಬಗ್ಗೆ ಪತ್ರ ಬರೆದು ಅಮೂಲ್ಯ ಕಾಣಿಕೆಗಳನ್ನು ರಾಜಕುಮಾರನಿಗೆ ಕಳಿಸಿದನಂತೆ.[44] **ಪೆರೋ ಫರ್ನಾಂಡೆಸ್‌ನು** 21–11–1505ರಲ್ಲಿ ಪೋರ್ತುಗಾಲದ ಅರಸನಿಗೆ ಬರೆದ ಪತ್ರದ ಪ್ರಕಾರ ಈ ಬಗ್ಗೆ ಅಲ್ಮೇಡಾ ಖಚಿತ ಉತ್ತರ ನೀಡಲಿಲ್ಲ. ಏಕೆಂದರೆ ಇಮ್ಮಡಿ ನರಸಿಂಹನ ಮರಣಾನಂತರ ವೀರನರಸಿಂಹನೇ ಅರಸನೆಂದು ಅವನಿಗೆ ಖಚಿತವಾಗಿ ಗೊತ್ತಿರಲಿಲ್ಲ.[45]

ಪ್ರಾಯಃ ಈ ಪ್ರಸಂಗವು ವೀರನರಸಿಂಹನು ಪಟ್ಟಾಭಿಷಿಕ್ತನಾದ ಸಮಯದಲ್ಲಿ ನಡೆದಿರಬೇಕು. ಆತ ಪಟ್ಟವೇರಿದ ಕಾಲದಲ್ಲಿ ಅನೇಕ ಸಾಮಂತರು ಬಂಡಾಯವೆದ್ದರು. ಈ ದೃಷ್ಟಿಯಿಂದ ವೀರನರಸಿಂಹನು ಪೋರ್ತುಗೀಸರ ಬಂಧುತ್ವವನ್ನು ಅಪೇಕ್ಷಿಸಿರಬಹುದು. ಅಲ್ಲದೇ ಮುಸಲ್ಮಾನರು ಕಂದನವೋಲು ಪ್ರಭುವಿನೊಂದಿಗೆ ಕೈಜೋಡಿಸಲು ಸನ್ನಾಹ ನಡೆಸಿದ್ದರು. ಈ ಕಾಲದಲ್ಲಿ ಕೆಲಕಾಲ ವಿಜಯನಗರದಲ್ಲಿದ್ದ ಫ್ರಾನ್ಸಿಸ್ಕನ್ ಫ್ರಯರ್ ಲುಯಿ–ದೆ–ಸಾಲ್ವಡೋರ್ ಕ್ರೈಸ್ತ ಧರ್ಮ ಪ್ರಸಾರ ಮಾಡುತ್ತಾ ವಾದವಿವಾದದಲ್ಲಿ ಬ್ರಾಹ್ಮಣರನ್ನು ಸೋಲಿಸಿದ್ದನು. ಇದರಿಂದ ರಾಯನು ಪ್ರಭಾವಿತನಾಗಿದ್ದನು. ಅವನೇ ರಾಯನಿಗೆ ಪೋರ್ತುಗೀಸರ ಸ್ನೇಹವನ್ನು ಯಾಚಿಸಲು ಪ್ರಭಾವ ಬೀರಿದ್ದನು. ಅಲ್ಲದೇ ರಾಯನ ರಾಯಭಾರಿಯೊಂದಿಗೆ ಆತನೂ ಕಣ್ಣಾನೂರು ಸೇರಿದ್ದನು.[46]

ಅಂದಿನ ಕಾಲದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಘಟನೆಯನ್ನು ಪರಿಶೀಲಿಸಿದರೆ ಅರಸೊತ್ತಿಗೆಯ ಕಠಿಣ ಸಂದರ್ಭವು ಅರ್ಥವಾಗುತ್ತದೆ. ಆಗ ಆಂತರಿಕ ಶತ್ರುಗಳಿಂದ ಸುತ್ತುವರೆದಿದ್ದ ವೀರನರಸಿಂಹರಾಯನು ಪೋರ್ತುಗೀಸರೊಂದಿಗೆ ಅತ್ಯುತ್ತಮ ಸಂಬಂಧವನ್ನು ಏರ್ಪಡಿಸಿಕೊಂಡು ಉತ್ತಮಾಶ್ವಗಳನ್ನು ಖರೀದಿಸಿ ಸೇನೆಯ ಪುನರ್ ವ್ಯವಸ್ಥೆಯ ಕಾರ್ಯಕ್ರಮವನ್ನು ಪೂರ್ತಿಮಾಡಿದರೆ ಕಠಿಣವಾದ ರಾಜಕೀಯ ಪರಿಸ್ಥಿತಿಯನ್ನು ನಿಭಾಯಿಸುವುದು ಸುಲಭ ಸಾಧ್ಯವಿತ್ತು. ಅತ್ತ ಕಡೆ ಪೋರ್ಚುಗೀಸರು ಮಲಬಾರ ಪ್ರದೇಶದಲ್ಲಿ ಕೋಟೆಗಳನ್ನು ನಿರ್ಮಿಸಿಕೊಂಡು ದಿನದಿಂದ ದಿನಕ್ಕೆ ಬಲಾಢ್ಯರಾಗುತ್ತಿದ್ದರು. ಯಥಾರ್ಥವಾಗಿ ಅವರು ರಾಯನೊಂದಿಗೆ ಅತ್ಯಂತ ಆತ್ಮೀಯ ಸಂಬಂಧಗಳನ್ನು ಏರ್ಪಡಿಸಿಕೊಳ್ಳಬೇಕಾಗಿತ್ತು. ಏಕೆಂದರೆ ರಾಯನು ಅವರ ಶತ್ರುವಿನ ಶತ್ರುವಾಗಿದ್ದನು. ಮಲಬಾರಿನಲ್ಲಿ ಅವರಿಗೆ ಮುಸಲ್ಮಾನರೇ ಶತ್ರುಗಳಾಗಿದ್ದರು. ಆದರೆ ಅವರೇಕೆ ರಾಯನೊಂದಿಗೆ ಗಾಢ ಸಂಬಂಧ ಬೆಳೆಸಲು ಹಿಂಜರಿಯುತ್ತಿದ್ದರು ? ಪರಿಸ್ಥಿತಿಯನ್ನು ವಿವರವಾಗಿ ಪರಿಶೀಲಿಸೋಣ.

ವಿಜಯನಗರದ ಕಡೆಯಿಂದ ತಮಗೆ ಅಪಾಯವಿಲ್ಲವೆಂದು ಅವರಿಗೆ ಮನವರಿಕೆ ಆಗಿತ್ತು. ಅವರು ವಿಜಯನಗರದ ಅಧೀನ ಆಡಳಿತಗಾರರನ್ನು ಸಣ್ಣ ಸಣ್ಣ ವಿಷಯಗಳಿಗಾಗಿ ಬೆದರಿಸುತ್ತಿದ್ದರು. ಅವರಿಂದ ಅವರಿಗೆ ಯಾವ ತೊಂದರೆಯೂ ಇರಲಿಲ್ಲ. ಅವರು ವಿಜಯನಗರ ಸಾಮ್ರಾಟರ ಸೂಚನೆಗಳನ್ನು ಸುಲಭವಾಗಿ ಅಂಗೀಕರಿಸಬಾರದೆಂದು ಭಾವಿಸಿದ್ದರು. ಅವರು ಹೊನ್ನಾವರ, ಭಟ್ಕಳದ ಅಧಿಪತಿಗಳೊಂದಿಗೆ ವರ್ತಿಸಿದಂತೆ ವರ್ತಿಸಬಾರದೆಂಬ ಅರಿವೂ ಇತ್ತು. ಅವರಿಗೆ ವಾಸ್ತವ ಪರಿಸ್ಥಿತಿಯ ಅರಿವಾಗಲು ಒಂದೆರಡು



ವರ್ಷ ಬೇಕಾಯಿತು. ಕ್ರಿ.ಶ. 1508ರಲ್ಲಿ ಅಲ್ಮೇಡಾ ವಿಜಯನಗರಕ್ಕೆ ರಾಯಭಾರವೊಂದನ್ನು ಕಳಿಸಿದನು. ಕ್ರಿ.ಶ. 1505ರಲ್ಲಿ ರಾಯನು ಸೂಚಿಸಿದಂತೆ ಸ್ನೇಹದ ಕರಾರನ್ನು ಸಹಿಮಾಡಲು ಅಂಗೀಕರಿಸುತ್ತಾ, ಭಟ್ಕಳದಲ್ಲಿ ಕೋಟೆಯನ್ನು ನಿರ್ಮಿಸಲು ಅನುಮತಿ ಕೊಡಬೇಕೆಂದು ವಿನಂತಿಸಿದನು. ಆ ಹೊತ್ತಿಗೆ ವೀರನರಸಿಂಹ ರಾಯನು ಆಂತರಿಕ ಬಂಡಾಯವನ್ನು ತಹಬಂದಿಗೆ ತಂದು ಬಲಶಾಲಿಯಾಗಿದ್ದ ಕಾರಣ ತಕ್ಷಣಕ್ಕೆ ಪೋರ್ತುಗೀಸರ ನೆರವು ಬೇಕಿರಲಿಲ್ಲ. ಅದರೊಂದಿಗೆ ಸೂಕ್ಷ್ಮ ಪರಿಸ್ಥಿತಿಯಲ್ಲಿ ತಾನು ಅವರಲ್ಲಿಗೆ ರಾಯಭಾರ ಕಳಿಸಿದಾಗ ಅವರು ವರ್ತಿಸಿದ ರೀತಿ ಮತ್ತು ತನ್ನ ಸುಭದ್ರ ಪರಿಸ್ಥಿತಿಯ ಅರಿವು ಆತನನ್ನು ನಡೆಸಿರಬೇಕು. ರಾಯನು ರಾಯಭಾರಿಯನ್ನು ಗೌರವದಿಂದ ಸ್ವಾಗತಿಸಿದನಾಗಲೀ ಯಾವುದೇ ಅಂಗೀಕಾರ ನೀಡಲಿಲ್ಲ.

ಈ ರೀತಿಯಲ್ಲಿ ವೀರನರಸಿಂಹರಾಯನು ಪೋರ್ತುಗೀಸರೊಂದಿಗೆ ವ್ಯವಹರಿಸುವಾಗ ಅವಸರ ತೋರಲಿಲ್ಲ. ಆತನ ಸಾಮಂತರ ವಿಚಾರದಲ್ಲಿ ಪೋರ್ತುಗೀಸರು ಆಕ್ರಮಿಕ ಮನೋಭಾವ ತೋರಿಸಿದಾಗಲೂ ಆತನು ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಿಲ್ಲ. ಕುದುರೆಗಳ ಸಲುವಾಗಿ ಮುಂದೆ ಅವರ ಸಂಬಂಧ ಅವಶ್ಯವೆನಿಸಬಹುದೆಂಬ ದೃಷ್ಟಿಯಿಂದ ಉಪೇಕ್ಷೆ ಮಾಡಿರಬಹುದು. ವಾಣಿಜ್ಯ ಮತ್ತು ಇತರ ವ್ಯವಹಾರಗಳ ಸಲುವಾಗಿ ಅವರಾಗಿಯೇ ಬಂದು ಬಿನ್ನವಿಸಿದಾಗಲೂ ಆತನು ಯಾವುದೇ ಆತುರ ತೋರಲಿಲ್ಲ. ಒಟ್ಟಾರೆ ವೀರನರಸಿಂಹನು ಸಮುಚಿತ ವರ್ತನೆಯಿಂದ ಪೋರ್ತುಗೀಸರು ಆತನ ಅಧಿಕಾರವ್ಯಾಪ್ತಿಯನ್ನು ಅರಿಯುವಂತೆ ಮಾಡಿದನು. ಅವರ ವ್ಯಾಪಾರದ ಅಭಿವೃದ್ಧಿಗೆ ವಿಜಯನಗರದ ಸಾಮ್ರಾಟರೊಂದಿಗೆ ಸೌಹಾರ್ದಯುತ ನಡವಳಿಕೆ ಅವಶ್ಯವೆಂಬುದನ್ನು ಅವರೇ ಅರಿಯುವಂತೆ ಮಾಡಿದನು. ಕ್ರಿ.ಶ. 1510ರಿಂದ ವಿಜಯನಗರ ಪೋರ್ತುಗೀಸರ ಸಂಬಂಧಗಳು ವೇಗವಾಗಿ ವರ್ಧಿಸಿದವು.

**ರಕ್ಷಣ ವ್ಯವಸ್ಥೆಯ ಸುಧಾರಣೆ :** ತನ್ನ ಅಲ್ಪಾವಧಿಯ ಆಡಳಿತ ಕಾಲದಲ್ಲಿ ವೀರ ನರಸಿಂಹನು ನಿರಂತರ ಯುದ್ಧ ನಿರತನಾಗಿದ್ದನು. ಆದರೂ ಸೇನೆಯ ಸುಧಾರಣೆಯ ಪ್ರಯತ್ನ ಮಾಡಿದನು. ಸೇನೆಗೆ ನೇಮಿಸುವಾಗ, ತರಬೇತು ನೀಡುವಲ್ಲಿ ಕೆಲ ವಿಧಾನಗಳನ್ನು ಜಾರಿಗೆ ತಂದನು. ಸೇನೆಯಲ್ಲಿ ಮುಸ್ಲಿಮರನ್ನು ಎದುರಿಸುವ ಶಕ್ತಿ ತುಂಬಲು ಪ್ರಮುಖವಾಗಿ ಅಶ್ವದಳವನ್ನು ಸುಧಾರಿಸಿ ಬಲಪಡಿಸಿದನು. ಪರದೇಶದಿಂದ ಬರುತ್ತಿದ್ದ ಕುದುರೆಗಳಿಗೆ ಅಧಿಕ ಬೆಲೆ ನೀಡಿದನು. ಕುದುರೆ ವ್ಯಾಪಾರಸ್ಥರು ಭಟ್ಕಳಕ್ಕೆ ಬರುವಂತೆ ಮಾಡಿದನು. ತುಳುನಾಡ ದಿಗ್ವಿಜಯದಲ್ಲಿ ತಾನು ಗೆದ್ದ ತುಳುನಾಡ ಬಂದರುಗಳಿಗೆ ಕುದುರೆ ವ್ಯಾಪಾರಸ್ಥರು ಬರುವಂತೆ ಮಾಡಿದನು.

ವೀರ ನರಸಿಂಹನು ಪರದೇಶದ ಉತ್ತಮಾಶ್ವಗಳನ್ನು ಖರೀದಿಸುವಲ್ಲಿ ತೋರಿದ ಆಸಕ್ತಿಯೊಂದಿಗೆ ಬಲಾಢ್ಯ ಯುವಕರನ್ನು ಸೈನ್ಯಕ್ಕೆ ಭರ್ತಿ ಮಾಡಲು ನಿಯಮಗಳನ್ನು ಮಾಡಿದನು. ಅವರ ಜಾತಿ ಮತವನ್ನು ಲೆಕ್ಕಿಸದೇ ಉತ್ತಮ ವೇತನ ನೀಡಿ ತರಬೇತುದಾರರನ್ನೂ ದಳಪತಿಗಳನ್ನೂ ಸೈನ್ಯಕ್ಕೆ ಸೇರಿಸಿದನು.[47] ಬೇರೆ ಬೇರೆ ತರಬೇತಿಗಳನ್ನು ಪ್ರಾರಂಭ ಮಾಡಿ

ಜನರಲ್ಲಿ ಯುದ್ಧಾಸಕ್ತಿಯನ್ನು ತುಂಬಿದನು. ರಾಯನ ಸಮಕ್ಷಮದಲ್ಲಿ ನಾನಾ ರೀತಿಯ ದ್ವಂದ್ವ ಯುದ್ಧಗಳ ಮೂಲಕ ಸಮಸ್ಯೆಗಳನ್ನು ತೀರ್ಮಾನ ಮಾಡಿಕೊಳ್ಳುವುದು ಶ್ರೇಷ್ಠ ಎಂದು ಜನರು ನಂಬತೊಡಗಿದರು. ಅಕ್ಕಸಾಲಿಗರು ಕೂಡಾ ತಮ್ಮಲ್ಲಿ ಸಮಸ್ಯೆಗಳೂ, ಭಿನ್ನಾಭಿಪ್ರಾಯಗಳೂ ಉಂಟಾದಾಗ ಅವುಗಳನ್ನು ರಾಯನ ಸಮಕ್ಷಮದಲ್ಲಿ ದ್ವಂದ್ವ ಸಮರದ ಮೂಲಕ ಬಗೆಹರಿಸಿಕೊಳ್ಳುವುದು ಗೌರವನೀಯ ಎಂದು ತಿಳಿದಿದ್ದರು. ರಾಯನ ಪ್ರಜೆಗಳು ಮರಣ ಭಯವನ್ನು ನಾಚಿಕೆಗೇಡು ಎಂದು ಭಾವಿಸುತ್ತಿದ್ದರು. ಕೇರಳ ಪಲಮದ ಪ್ರಕಾರ ಪ್ರತಿಯೊಬ್ಬರೂ ಸಮರ ಕೌಶಲದಲ್ಲಿ ಆಸಕ್ತರಾಗಿದ್ದರು. ರಾಯ ಸಾಮ್ರಾಜ್ಯದಲ್ಲಿ ನಾಲ್ಕು ಲಕ್ಷ ಜನರು ಮುಸಲ್ಮಾನರೊಂದಿಗೆ ಯುದ್ಧ ಮಾಡಲು ಸದಾ ತಯಾರಿರುತ್ತಿದ್ದರಂತೆ ಒಳ್ಳೆಯ ಯೋಧರನ್ನು ರಾಯನು ತುಂಬಾ ಗೌರವಿಸುತ್ತಿದ್ದನು. ಅನೇಕ ಸಲ ಅವರಿಗೆ ಅನರ್ಘ್ಯ ಕಾಣಿಕೆಗಳನ್ನು, ಸುಂದರಿಯರನ್ನು ನೀಡುತ್ತಿದ್ದನು. ಅರವೀಟಿ ತಿಮ್ಮನು ರಾಯನ ಶತ್ರುಗಳನ್ನು ದಮನ ಮಾಡಿದಾಗ ರಾಯನು ಬಂಗಾರದ ಗಂಡಪೆಂಡೇರವನ್ನೂ ಮತ್ತು ನಾಯಕತನವನ್ನು ನೀಡಿದನು.[48] ಈ ರೀತಿಯ ಗೌರವ ಪ್ರದಾನದಿಂದ ಜನರಲ್ಲಿ ಯೋಧ ಮನೋಭಾವ ಮತ್ತು ಯೋಧ ವೃತ್ತಿಗಳು ಬೆಳೆದು ಕ್ಷಿಪ್ರ ಸಮಯದಲ್ಲಿ ಬೇಕಾದಷ್ಟು ಸೈನ್ಯ ಜಮಾವಣೆ ಸಾಧ್ಯವಾಗುತ್ತಿತ್ತು.

**ವೀರನರಸಿಂಹರಾಯನ ಮರಣ :** ವೀರನರಸಿಂಹರಾಯನು ಕ್ರಿ.ಶ. 1509ರ ಜುಲೈ22 ಮತ್ತು 26ರ ನಡುವೆ ಒಂದು ದಿನ ದಿವಂಗತನಾದನು. ಕುಮಾರ ಧೂರ್ಜಟಿ ವಿರಚಿತ **'ಕೃಷ್ಣರಾಯ ವಿಜಯಂ'**ದಲ್ಲಿ "ವೀರನರಸಿಂಹರಾಯನು ತನಗೆ ವಯಸ್ಸಾಯಿತೆಂದು ತನ್ನ ಮಗ ಕೃಷ್ಣದೇವರಾಯನನ್ನು ಪಟ್ಟಕ್ಕೆ ಕೂಡಿಸಿ ತಾನು ನಿವೃತ್ತನಾದನು" ಎಂದಿದೆ.[49] ಈ ಕೃತಿಯಲ್ಲಿ ಕೃಷ್ಣದೇವರಾಯನನ್ನು ವೀರನರಸಿಂಹನ ಮಗನೆಂದು ಬರೆಯಲಾಗಿದೆ. ಇದರಿಂದ ಇಲ್ಲಿ ಉಲ್ಲೇಖವಾಗಿರುವುದು ವೀರನರಸಿಂಹನಲ್ಲ. ನರಸನಾಯಕ ಎಂಬ ವಾದಕ್ಕೆ ಇಂಬಾಯಿತು. ಆದರೆ ನರಸನಾಯಕನು ಸಾಮ್ರಾಟನಾಗಿ ಆಡಳಿತ ಮಾಡಲಿಲ್ಲ. ಈ ತಪ್ಪು ಕುಮಾರ ಧೂರ್ಜಟಿಯದೋ ಅಥವಾ ಅದರ ಪ್ರತಿ ಮಾಡಿದವರದೋ ತಿಳಿಯದು. ಕೃಷ್ಣದೇವರಾಯನಿಗಿಂತ ಮೊದಲು ಆಳಿದವನು ವೀರನರಸಿಂಹರಾಯನೇ, ಅವರು ತಂದೆ–ಮಗ ಎಂದು ತಪ್ಪಾಗಿ ಹೇಳಲಾಗಿದೆ, ಆದರೆ ಅವರು ಸೋದರರೆಂಬುದು ಜಗಜ್ಜಾಹೀರಾಗಿದೆ.

ಸ್ಥಾನಾಪತಿಯ **ರಾಯವಾಚಕ**ದ ಪ್ರಕಾರ ವೀರನರಸಿಂಹನೇ ರಾಜಮುದ್ರೆ ಉಂಗುರವನ್ನು ಕಳಿಸಿ ಕೃಷ್ಣದೇವರಾಯನೇ ರಾಜನಾಗಬೇಕೆಂದು ಸೂಚಿಸಿದನು.[50] ಈ ವಿಷಯದಲ್ಲಿ ನೂನಿಜ್ ಹೇಳುವ ಕತೆ[51] ಮೇಲಿನ ಸಂಗತಿಗೆ ತದ್ವಿರುದ್ಧವಾಗಿದೆ. "ಈ ರಾಯನು ಅನಾರೋಗ್ಯದಿಂದ ವಿಜಯನಗರದಲ್ಲಿ ಅಸುನೀಗಿದ್ದನು. ಆದರೆ ಸಾಯುವ ಮೊದಲು ಸಾಳುವ ತಿಮ್ಮರಸನನ್ನು ಕರೆಸಿ, ತನ್ನ 8 ವರ್ಷದ ಮಗನನ್ನೇ ಸಾಮ್ರಾಟನನ್ನಾಗಿ ಮಾಡಬೇಕು. ತನ್ನ ಮರಣ ನಂತರ ಈ ಬಾಲಕನಿಗೆ ಎಲ್ಲ ತರಬೇತಿ ನೀಡಬೇಕು. ತಮ್ಮನಾದ ಕೃಷ್ಣದೇವರಾಯನ ಕಣ್ಣು ಕಿತ್ತು ತನಗೆ ತಂದು ತೋರಿಸಬೇಕು. ಇದನ್ನು ಕೇಳಿದ ಕೃಷ್ಣದೇವರಾಯನು ತನಗೆ ರಾಜನಾಗಲು ಇಚ್ಛೆಯಿಲ್ಲ, ತಾನು ಸನ್ಯಾಸಿಯಾಗಲು



ಇಷ್ಟಪಡುತ್ತೇನೆ. ಆದ್ದರಿಂದ ನನ್ನ ಕಣ್ಣು ತೆಗೆಯುವ ಅವಶ್ಯಕತೆಯಿಲ್ಲ ಎಂದನು. ಇದನ್ನು ಕೇಳಿದ ಸಾಳುವ ತಿಮ್ಮನು ಯೋಚನೆಗೀಡಾದನು. ಕೃಷ್ಣರಾಯನಾಗಲೇ 20 ವರುಷದ ತರುಣನು. ವೀರನರಸಿಂಹನ ಎಂಟು ವರ್ಷದ ಬಾಲಕನಿಗಿಂತ ಈತನು ಸಾಮ್ರಾಟನಾಗಲು ಯೋಗ್ಯನು ಎಂದು ತೀರ್ಮಾನಿಸಿ ಎರಡು ಮೇಕೆಯ ಕಣ್ಣುಗಳನ್ನು ತೆಗೆದುಕೊಂಡು ರಾಜನಿಗೆ ತೋರಿಸಲು ಒಯ್ದನು. ಅದನ್ನು ಕಂಡ ವೀರನರಸಿಂಹನು ಜೀವ ತೊರೆದನು. ಅನಂತರ ಕೃಷ್ಣರಾಯನನ್ನು ಮುಂದಿನ ಸಾಮ್ರಾಟನನ್ನಾಗಿ ಮಾಡಲಾಯಿತು.

ನೂನಿಜ್ ವಿಜಯನಗರಕ್ಕೆ ಅನೇಕ ಸಲ ಬಂದವನು ಅವರಿವರು ಹೇಳಿದ ವದಂತಿಗಳನ್ನು, ತಾನು ಕಂಡ ವಿಷಯಗಳನ್ನು ಬರೆದಿಟ್ಟನು. ನೂನಿಜ್‌ನ ಮೇಲಿನ ಅಭಿಪ್ರಾಯವನ್ನು ಸುಲಭವಾಗಿ ತಳ್ಳಿ ಹಾಕಲಾಗುವುದಿಲ್ಲ. ಅವರ ವರದಿಯ ಸಮಕಾಲೀನ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯ ಬಗ್ಗೆ ವಿವರವಾಗಿ ತಿಳಿಸುತ್ತದೆ. ಆದರೆ ಘಟನೆಗಳನ್ನು ವಿವರಿಸುವಲ್ಲಿ ಆತನಲ್ಲಿ ತೀವ್ರ ಗೊಂದಲವನ್ನು ಕಾಣುತ್ತೇವೆ. ಇದಕ್ಕೆ ಕಾರಣವೆಂದರೇ ಯಾರ್ಯಾರೋ ಹೇಳಿದ ಅಂತೆ–ಕಂತೆಗಳನ್ನು ಕೇಳಿ ಅವನು ಬರೆಯುತ್ತಿದ್ದನು. ಆ ಹೊತ್ತಿಗಾಗಲೇ ಜನರಲ್ಲಿ ಸಾಳುವ ತಿಮ್ಮರಸ ಮತ್ತು ಕೃಷ್ಣದೇವರಾಯನ ಬಗ್ಗೆ ನಾನಾ ರೀತಿಯ ಕತೆಗಳು ಚಲಾವಣೆಯಲ್ಲಿದ್ದವು. ಆ ಪೈಕಿ ಈ ಕಥೆಯು ತುಂಬಾ ರೋಚಕವಾಗಿರುವುದರಿಂದ ನೂನಿಜ್‌ಗೆ ತಲುಪಿರಬೇಕು. ಇದು ಸತ್ಯ ಘಟನೆಯಾಗಿದ್ದರೆ ಸಮಕಾಲೀನ ಸಾಹಿತಿಗಳ ಗಮನಕ್ಕೆ ತಪ್ಪದೇ ಬರುತ್ತಿತ್ತು. ಇದನ್ನಾಧರಿಸಿ ಅವರು ಬಂದು ಕಾವ್ಯವನ್ನೇ ರಚಿಸುತ್ತಿದ್ದರು.

ವೀರನರಸಿಂಹನು ಶಾಸನಗಳಲ್ಲಿ ತನ್ನ ತಾಯಿ ಮತ್ತು ಕೃಷ್ಣದೇವರಾಯನ ತಾಯಿ ಕೌಸಲ್ಯ–ಸುಮಿತ್ರೆಯರಂತೆ ಇದ್ದರೆಂದೂ, ತಾನೂ ಮತ್ತು ಸೋದರ ಕೃಷ್ಣದೇವರಾಯ ರಾಮ–ಲಕ್ಷ್ಮಣರಂತೆ ಇದ್ದರೆಂದೂ ಬಣ್ಣಿಸಲಾಗಿದೆ. ಆದರೆ ಇನ್ನೊಬ್ಬ ಮಲತಾಯಿ ಓಬಾಂಬಿಕಾ ಮತ್ತು ಆಕೆಯ ಪುತ್ರರಾದ ರಂಗ ಮತ್ತು ಅಚ್ಯುತರ ಮಾತೇ ಇಲ್ಲ. ಇದರಿಂದ ವೀರನರಸಿಂಹರಾಯನಿಗೆ ಕೃಷ್ಣದೇವರಾಯನ ಬಗ್ಗೆ ವಿಶೇಷ ಪ್ರೀತಿ ಇತ್ತೆಂದು ತಿಳಿಯುತ್ತದೆ.

ಕೊಂಗುದೇಶ ರಾಜರ್ಕಳಿನ್ ಚರಿತಂ ಪ್ರಕಾರ ಕೃಷ್ಣದೇವರಾಯನು ವೀರನರಸಿಂಹನಿಗೆ ಸಾಮ್ರಾಜ್ಯದ ಆಡಳಿತದಲ್ಲಿ ನೆರವಾಗುತ್ತಿದ್ದನು. ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣದ ನಾಯಕರು ವಿಜಯನಗರದ ಪರಮಾಧಿಕಾರವನ್ನು ಧಿಕ್ಕರಿಸಿ ಸ್ವತಂತ್ರರಾದಾಗ ಅವರನ್ನು ನಿಗ್ರಹಿಸಲು ವೀರನರಸಿಂಹನು ಸೈನ್ಯದೊಂದಿಗೆ ಹೊರಟಾಗ, ವಿಜಯನಗರ ಪಟ್ಟಣದ ಆಡಳಿತ ಮತ್ತು ರಕ್ಷಣೆಯ ಕೃಷ್ಣರಾಯನದಾಗಿತ್ತು ಎಂದು ತಿಳಿಸುತ್ತದೆ. ವೀರನರಸಿಂಹನು ಆ ಪಾಳೇಗಾರರನ್ನು ಬಗ್ಗು ಬಡಿಯಲು ವಿಫಲನಾದಾಗ ಮುಂದಿನ ಕ್ರಮಗಳ ಬಗ್ಗೆ ತಮ್ಮ ಕೃಷ್ಣದೇವರಾಯನೊಂದಿಗೆ ಸಮಾಲೋಚನೆ ಮಾಡಿದನೆಂದು ಅದೇ ಕೃತಿಯು ತಿಳಿಸುತ್ತದೆ.

ರಾಯವಾಚಕಮು, ಕೃಷ್ಣರಾಯ ವಿಜಯಂ, ಕೊಂಗುದೇಶ ರಾಜರ್ಕಳಿನ್ ಚರಿತಂ ಮತ್ತು ಶಾಸನಗಳು ಏಕಗ್ರೀವವಾಗಿ ಈ ಸೋದರರ ನಡುವಿದ್ದ ಸೌಹಾರ್ದ ಸಂಬಂಧದ

ಬಗ್ಗೆ ತಿಳಿಸುತ್ತವೆ. ವೀರನರಸಿಂಹನ ಅವಸಾನ ಕಾಲದಲ್ಲಿ ಸಾಮ್ರಾಜ್ಯದಲ್ಲಿ ಪರಿಸ್ಥಿತಿ ಸರಿ ಇರಲಿಲ್ಲ. ಆಂತರಿಕ ತೊಂದರೆಗಳೂ, ಹೊರಗಿನ ಶತ್ರುಕಾಟವೂ ಸಾಕಷ್ಟಿತ್ತು. ಅಂತಹ ಪರಿಸ್ಥಿತಿಯಲ್ಲಿ ಯೋಗ್ಯನೊಬ್ಬನು ಸಾಮ್ರಾಟನಾಗಬೇಕಾಗಿತ್ತು. ವೀರನರಸಿಂಹರಾಯನೇ ಕೃಷ್ಣದೇವರಾಯನನ್ನು ತನ್ನ ವಾರಸುದಾರನೆಂದು ಆಯ್ಕೆ ಮಾಡಿರಬೇಕು. ಅವನಿಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ನೀಡಿರಬೇಕು.

ಸಮಕಾಲೀನ ಆಧಾರಗಳ ಪ್ರಕಾರ ವೀರನರಸಿಂಹರಾಯನೇ ಸ್ವತಃ ಮುದ್ರೆಯುಂಗುರವನ್ನು ಕೊಟ್ಟು ಕೃಷ್ಣದೇವರಾಯನನ್ನು ಮುಂದಿನ ಸಾಮ್ರಾಟನಾಗಲು ಆಹ್ವಾನಿಸಿದನು ನೂನಿಜ್ ಮಾತ್ರ ವೀರನರಸಿಂಹನು ತನ್ನ ಎಂಟು ವರುಷದ ಬಾಲಕನು ಸಾಮ್ರಾಟನಾಗಲೆಂದು ಕೃಷ್ಣದೇವರಾಯನು ಕಣ್ಣು ತೆಗೆಸಲು ಆಜ್ಞಾಪಿಸಿದನೆಂದು ಬರೆದಿದ್ದಾನೆ. ಇಲ್ಲಿ ನೂನಿಜ್‌ನ ಬರಹದಲ್ಲಿ ಒಂದು ಅಂಶವನ್ನು ಗಮನಿಸಬೇಕು. ಆತನ ಅಭಿಪ್ರಾಯದಲ್ಲಿ ಸಾಮ್ರಾಜ್ಯವು ತನ್ನ ತಮ್ಮನಾದ ಕೃಷ್ಣರಾಯನಿಗೇ ಸೇರಬೇಕಾದದ್ದು, ಅವನ (ನೂನಿಜ್) ಮಾತಿನಲ್ಲಿಯೇ ಸಾಳುವ ತಿಮ್ಮರಸನಿಂದ ವೀರನರಸಿಂಹನು ತನ್ನ ಕಣ್ಣು ತೆಗೆಸಲು ಆಜ್ಞೆಮಾಡಿದ ಬಗ್ಗೆ ತಿಳಿದ ಕೃಷ್ಣರಾಯನು ನಾನು ಸಾಮ್ರಾಟನಾಗಲು ಬಯಸುವುದಿಲ್ಲ. ತನಗೆ ಹಕ್ಕಿನಿಂದ ಬರಬಹುದಾದ ಬೇರಾವುದೇ ಅಧಿಕಾರದ ಆಸೆಯಿಲ್ಲ ಎಂದನಂತೆ. ಆತನಿಗೆ ಹಕ್ಕಿನಿಂದ ಸಾಮ್ರಾಟ ಪದವಿ ಅದು ಹೇಗೆ ಬರಬಹುದೋ ತಿಳಿಯದು, ಪ್ರಾಯಃ ಆವರೆಗೆ ವೀರನರಸಿಂಹನು ಆತನನ್ನು ನೋಡಿಕೊಂಡ ರೀತಿಯಿಂದ ಆ ಭಾವನೆ ಉಂಟಾಗಿರಬೇಕು. ಲಭ್ಯವಿರುವ ಎಲ್ಲ ಮೂಲಗಳಿಂದ ದೊರೆತ ಮಾಹಿತಿಯಿಂದ ಅಂದಿನ ಘಟನೆಗಳ ಬಗ್ಗೆ ಹೀಗೆ ತೀರ್ಮಾನಿಸಬಹುದು.

ಮೊದಲಿನಿಂದಲೂ ವೀರನರಸಿಂಹರಾಯನು ತನ್ನ ಇತರ ಸೋದರರಿಗಿಂತ ಕೃಷ್ಣದೇವರಾಯನನ್ನು ಹೆಚ್ಚು ಆತ್ಮೀಯತೆಯಿಂದ ಕಂಡನು. ಆತನ ಶಕ್ತಿ ಸಾಮರ್ಥ್ಯಗಳ ಬಗ್ಗೆ ಗೌರವವಿತ್ತು. ಆತನಿಗೆ ಆಡಳಿತದ ಪರಿಚಯ ಮಾಡಿಕೊಟ್ಟನು. ತಾನು ರಾಜಧಾನಿಯಲ್ಲಿ ಇಲ್ಲದ ಸಮಯದಲ್ಲಿ ರಾಜಧಾನಿಯ ರಕ್ಷಣೆಯನ್ನು ಆತನಿಗೇ ವಹಿಸಿದನು. ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣದ ನಾಯಕರನ್ನು ಶಿಕ್ಷಿಸಬಲ್ಲ ಯೋಗ್ಯತೆಯನ್ನು ಕೃಷ್ಣರಾಯನಲ್ಲಿ ಕಂಡನು. ವೀರನರಸಿಂಹನಿಗೆ ತನ್ನ ಅಂತ್ಯಕಾಲ ಸಮೀಪಿಸಿತೆಂದು ಅನಿಸಿದಾಗ ತನ್ನ ಸಚಿವರನ್ನು ಕರೆದು ಅವರ ಕೈಗೆ ಮುದ್ರೆಯುಂಗುರ ನೀಡಿ ಕೃಷ್ಣದೇವರಾಯನಿಗೆ ಯುವರಾಜ ಪಟ್ಟಾಭಿಷೇಕ ಮಾಡಲು ಆಜ್ಞಾಪಿಸಿದನು. ಅನಂತರ ಏನಾಯಿತೋ ? ಅದರಿಂದ ವೀರ ನರಸಿಂಹನು ಮನಸ್ಸು ಬದಲಾಯಿಸಿದನೋ ? ಅಥವಾ ಸಾಳುವ ತಿಮ್ಮರಸನು ಭಾವೀ ಸಾಮ್ರಾಟನಾದ ಕೃಷ್ಣರಾಯರ ವಿಶ್ವಾಸಪಾತ್ರನಾಗಲು ಕತೆ ಕಟ್ಟಿದನೋ ಅಥವಾ ನೂನಿಜ್ ಕೇಳಿದ್ದು ಕೇವಲ ಗಾಳಿಸುದ್ದಿಯೋ ? ತಿಳಿಯದು.

ವೀರನರಸಿಂಹರಾಯನ ಕೊನೆಯ ವರೆಗೆ ಅಣ್ಣ ತಮ್ಮಂದಿರಲ್ಲಿ ಸೌಹಾರ್ದಯುತ ಆತ್ಮೀಯ ಸಂಬಂಧವಿತ್ತೆನ್ನಲು ಸಾಕಷ್ಟು ಆಧಾರಗಳಿವೆ. ಸಾಮ್ರಾಜ್ಯವು ಅತ್ಯಂತ ಸೂಕ್ಷ್ಮ ಪರಿಸ್ಥಿತಿಯಲ್ಲಿದೆಯೆಂಬ ಬಗ್ಗೆ ವೀರನರಸಿಂಹನಿಗೆ ಅರಿವಿತ್ತು. ಆದ್ದರಿಂದ ತನ್ನ ಅಪ್ರಾಪ್ತ



ವಯಸ್ಸಿನ ಬಾಲಕನ ಸಲುವಾಗಿ ಕೃಷ್ಣರಾಯನ ಕಣ್ಣು ಕೀಳಿಸಲು ಸಾಳುವ ತಿಮ್ಮರಸನಿಗೆ ಆಜ್ಞೆ ಮಾಡುವುದು ಸಾಧ್ಯವಿಲ್ಲ. ನೂನಿಜ್ ಕತೆಯನ್ನು ಅಂಗೀಕರಿಸಬೇಕಾದರೆ ಈ ಬಗ್ಗೆ ಇನ್ನಷ್ಟು ಸಂಶೋಧನೆ ನಡೆಯಬೇಕು. ನೂನಿಜ್ ಕತೆಯನ್ನು ಸಮರ್ಥಿಸುವ ಸಾಕ್ಷ್ಯ ಸಿಗುವವರೆಗೆ ಅದನ್ನು ಅಂಗೀಕರಿಸುವುದು ಅಸಾಧ್ಯ. ಅದೊಂದು ಕಟ್ಟು ಕತೆ ಎಂದಾಗುತ್ತದೆ. ಅಲ್ಲಿಯವರೆಗೆ ವೀರ ನರಸಿಂಹನಿಗೆ ಇಮ್ಮಡಿ ನರಸಿಂಹನನ್ನು ಕೊಲ್ಲಿಸಿದ ಅಪವಾದದ ಜತೆಗೆ ಮತ್ತೊಂದು ಅಪರಾಧವನ್ನು ಹೊರಿಸಲಾಗದು.

---

**ಅಡಿ ಟಿಪ್ಪಣಿಗಳು**

1. ಎ.ಕ. X-1 GD. 77
2. ಫರ್ದರ್ ಸೋರ್ಸಸ್ II-16
3. ಫ. ಎಂಪೈರ್. ಪು. 296
4. ಅದೇ 296
5. ಕೊಂಡಮರಸಯ್ಯ
6. ಫ. ಎಂಪೈರ್ – ನೂನಿಜ್ ಪು. 300
7. ಅದೇ
8. ಫ. ಎಂಪೈರ್ ಪು. 122
9. ಎ.ಕ. III ಪು. 191–195
10. ARE 210/1909 – ಆ್ಯನುಯಲ್ ರಿಪೋರ್ಟ್ – 1910 ಭಾಗ II ಪ್ಯಾರಾ 55
11. ಫರ್ದರ್ ಸೋರ್ಸಸ್ II 97(a)
12. ಕಾಮೆಂಟರೀಸ್ ಆಫ್ ದಿ ಗ್ರೇಟ್ ಲಿ. ಅಲ್‌ಬುಕರ್ಕ III ಫರ್ದರ್ ಸೋರ್ಸಸ್ I ಪು. 183–3
13. ಸೋರ್ಸಸ್ ಪು. 139
14. ಎ. ಎಸ್. ಆರ್. 1909–9 ಪು. 175
15. ಎ.ಕ. III ML-95
16. ಫರ್ದರ್ ಸೋರ್ಸಸ್ I ಪು. 180
17. ಸೋರ್ಸಸ್ 61 ಪು. 204–205
18. ಎ.ಆರ್.ಇ. 409–1920
19. ಭಾರತೀ ಮೇ 1949 ಪು. 397
20. ಫರ್ದರ್ ಸೋರ್ಸಸ್ II ಪು 83–84
21. ಸೋರ್ಸಸ್ ಪು. 204–205
22. ಫರ್ದರ್ ಸೋರ್ಸಸ್ II 108
23. ಎ. ಇಂ. XVI ಪು. 248
24. ಎ.ಆರ್.ಇ. 719–1917
25. ಅದೇ 409/1920
26. ಅದೇ 409/1931–1921 ಭಾಗ II ಪ್ಯಾರಾ 12
27. ಫರ್ದರ್ ಸೋರ್ಸಸ್ I ಪು. 83–84
28. Mg. 41/1516 ಪ್ಯಾರಾ 67/MAR 1908
29. ಎ. ಇಂ. IX ಪು. 174
30. ಫರ್ದರ್ ಸೋರ್ಸಸ್ 104

31. ಅದೇ II ಪು. 184
32.
33. ಸರ್ಕಾರ್ ಚೈತನ್ಯ ಪು. 46
34. ಎ. ಇಂ. I ಪು. 370
35. ದಿ. ಬುಕ್ ಆಫ್ ಡಿ. ಬಾರ್ಬೋಸಾ, ಡೇಮ್ಸ್ ಸಂ. I ಪು. 184–197 ಸಂ. II 19-102
36. ಕೆ. ಎಂ. ಪಣಿಕ್ಕರ್ – ಮಲಬಾರ್ ಅಂಡ್ ಪೋರ್ತುಗೀಸ್ ಅಧ್ಯಾಯ 5 ಪು. 124–132
37. ನೇ. ವೆಂಕಟರಮಣಯ್ಯ – ಸ್ಟಡೀಸ್ ಇನ್ ದಿನ ಥರ್ಡ ಡೈನಾಸ್ಟಿ ಪು. 284
38. ಬಾರ್ಬೋಸಾ – op.cit ಸಂ. I ಪು. 183–197
39. ಶಾಸ್ತ್ರಿ ಬಿ. ಎಸ್. ಸ್ಟಡೀಸ್ ಇನ ಇಂಡೋ–ಪೋರ್ಚುಗೀಸ್ ಹಿಸ್ಟರಿ ಪು. 83
40. ವರ್ಥೀಮಾ ಇಟನರರೀಸ್ ಪು. 134
41. ತಿಮ್ಮಪ್ಪ ಗೆರೊಸೊಪ್ಪ ಅರಸರ ಅಳಿಯ, ಕರಾವಳಿಯಲ್ಲಿದ್ದ ವಿಜಯನಗರ ಹಡಗುಪಡೆಯ ದಂಡನಾಯಕ
42. ಶಾಸ್ತ್ರಿ ಬಿ. ಎಸ್. ಪೋರ್ವೋಕ್ತ ಪು. 84
43. ಫರ್ದರ್ ಸೋರ್ಸಸ್ II 103
44. ಶಾಸ್ತ್ರಿ ಬಿ. ಎಸ್. ಪೂರ್ವೋಕ್ತ ಪು. 86–87
45. ಅದೇ ಪು. 87
46. ಅದೇ
47. ಕೇರಳ ಪಲಮ ಫ. ಸೋರ್ಸಸ್ II ಪು 104
48. ಫ. ಸೋರ್ಸಸ್ II ಪು 108 ಪು. 94
49. ಅದೇ ಪು. 37–38
50. ಫ. ಸೋರ್ಸಸ್ I ಪು 187 ಅಡಿಟಿಪ್ಪಣಿ
51. ಫ. ಎಂಪೈರ್ ಪು. 300

## ಅಧ್ಯಾಯ – ೬

# ವೀರನರಸಿಂಹನ ಆಡಳಿತದ ಕೆಲ ಆಶಯಗಳು

ವಿಜಯನಗರ ಸಾಮ್ರಾಟರು ಪುರಾತನ ಆಡಳಿತ ವಿಧಾನಗಳನ್ನು ಪುನರುಜ್ಜೀವನಗೊಳಿಸಿದರು. ಧರ್ಮದ ಚೌಕಟ್ಟಿನಲ್ಲಿಯೇ ಆಡಳಿತ ನಡೆಸಿದರು. ಸೋಮನಾಥ ವಿರಚಿತ **ವ್ಯಾಸರಾಯ ಚರಿತಂ** ಹೇಳುವಂತ ನರಸನಾಯಕ, ವೀರನರಸಿಂಹ ಮತ್ತು ಕೃಷ್ಣದೇವರಾಯರು ಪ್ರತಿದಿನ ಪ್ರಸಿದ್ಧ ವೈಷ್ಣವಾಚಾರ್ಯರಾದ ವ್ಯಾಸರಾಯರಿಂದ ಆಡಳಿತದ ಬಗ್ಗೆ ಮಾರ್ಗದರ್ಶನ ಪಡೆಯುತ್ತಿದ್ದರು.[1]

**ಕೇಂದ್ರ ಸರಕಾರ :** ಕೇಂದ್ರ ಸರಕಾರದ ವ್ಯವಸ್ಥೆಯಲ್ಲಿ, ನಡವಳಿಕೆಯಲ್ಲಿ ಸಾಮ್ರಾಟನೇ ಕಿರೀಟಪ್ರಾಯ. ಆತನು ಎಷ್ಟೇ ಅಧಿಕಾರ ಸಂಪನ್ನನಾಗಿದ್ದರೂ ಧರ್ಮ ಮತ್ತು ಪೂರ್ವದ ಆಚಾರದ ವಿರುದ್ಧ ಹೋಗುವಂತಿರಲಿಲ್ಲ. ಈ ಕಟ್ಟಳೆಗಳು ಪರಮಾಧಿಕಾರ ಹೊಂದಿದ್ದ ಸಾಮ್ರಾಟನನ್ನು ಹತೋಟಿಯಲ್ಲಿ ಇಡುತ್ತಿದ್ದವು. ಆದರೆ ಸಾಮ್ರಾಟನು ಮನಸ್ಸು ಮಾಡಿದರೆ ಈ ಕಟ್ಟಳೆಗಳ ನಡುವೆಯೂ ದಬ್ಬಾಳಿಕೆಯಿಂದಲೂ, ಪ್ರಜಾಪೀಡಕನಾಗಿಯೂ ವರ್ತಿಸಲು ಸಾಧ್ಯವಿತ್ತು.[2] ಬಲಹೀನ ರಾಯರ ಆಡಳಿತಕಾಲದಲ್ಲಿ ನಡೆದ ಕೆಲಘಟನೆಗಳನ್ನು ಪರಿಶೀಲಿಸಿದರೆ ವಿಶದವಾಗುತ್ತದೆ.

ವೀರನರಸಿಂಹರಾಯನು ಸಾಮ್ರಾಜ್ಯದ ಉತ್ಕರ್ಷಕ್ಕಾಗಿ ಸಾಕಷ್ಟು ಶ್ರಮಿಸಿದನು. ಧರ್ಮಶಾಸ್ತ್ರಗಳು ತಿಳಿಸುವಂತೆ ಆದರ್ಶ ಪ್ರಭುವಾಗಿ ಆಡಳಿತ ನಡೆಸಿ ಸೇನಾಪತಿಗಳಿಗೂ, ಮಂತ್ರಿಗಳಿಗೂ, ಸಾಮಾನ್ಯರಿಗೂ ಆದರ್ಶ ಪುರುಷನಾಗಿ ಬದುಕಲು ಪ್ರಯತ್ನಿಸಿದನು.

ಧರ್ಮಶಾಸ್ತ್ರದ ಪ್ರಕಾರ ದಿನಚರ್ಯೆಯನ್ನು ಬ್ರಾಹ್ಮೀ ಮುಹೂರ್ತದಲ್ಲಿಯೇ ಎದ್ದು ಆರಂಭಿಸಬೇಕು. ಮುಂಜಾವಿನ 4–30 ಗಂಟೆಯಿಂದ ಸೂರ್ಯೋದಯದ ವರೆಗಿನ ಕಾಲವೇ ಬ್ರಾಹ್ಮೀ ಮುಹೂರ್ತ. ಎದ್ದ ನಂತರ ಪ್ರಾತರ್ವಿಧಿಗಳನ್ನು ಮುಗಿಸಿ ದೈವ, ಋಷಿಗಳ ಮತ್ತು ಗುರುವಿನ ಪ್ರಾರ್ಥನೆ ಮಾಡಿ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕಾಗಿ ಅರ್ಚಿಸಬೇಕು. **ರಾಯವಾಚಕದ** ಪ್ರಕಾರ ವೀರನರಸಿಂಹನ ದಿನಚರಿಯು ತುಂಬಾ ಶಿಸ್ತಿನದಾಗಿತ್ತು ಮತ್ತು ಧರ್ಮಶಾಸ್ತ್ರ ಹೇಳಿದಂತಿತ್ತು. ರಾಯವಾಚಕದ ಪ್ರಕಾರ ಆತನ ದಿನಚರಿ ಹೀಗಿತ್ತು.[3]

1. ಬ್ರಾಹ್ಮೀ ಮುಹೂರ್ತದಲ್ಲಿಯೇ ನಿದ್ದೆಯಿಂದೆದ್ದು ಧರ್ಮ ಗ್ರಂಥಗಳ ಪ್ರವಚನ ಕೇಳಬೇಕು.
2. ಪ್ರಾತರ್ವಿಧಿಗಳನ್ನು ಪೂರೈಸಬೇಕು.
3. ಸಭಾಭವನದಲ್ಲಿದ್ದು 108 ತಿರುಪತಿಗಳಿಂದಲೂ 72 ಶೈವ ದೇವಾಲಯಗಳಿಂದಲೂ ಬಂದ ತೀರ್ಥ ಪ್ರಸಾದ ಸ್ವೀಕರಿಸಿ, ಅಯ್ಯಂಗಾರ್ ಮತ್ತು ಆರಾಧ್ಯರಿಂದ ವೈಷ್ಣವ ಮತ್ತು ಶೈವ ದೇವಾಲಯಗಳ ವ್ಯವಸ್ಥೆಯ ಬಗ್ಗೆ ತಿಳಿದು, ಎಲ್ಲವೂ ಸರಿಯಿದೆ ಎಂದು ತಿಳಿದು ಸಂತುಷ್ಟನಾಗುತ್ತಿದ್ದನು.
4. ಅನಂತರ ಆಗಮಿಸಿದ ಧರ್ಮಾಸನಂ ಧರ್ಮಯ್ಯ ಅವರ ವರದಿ – ರಾಯರ ಆಜ್ಞೆಯಂತೆ ಆಂಧ್ರ, ಹೊಯ್ಸಳ ನಾಡು ಮೊರಸು ನಾಡು, ಮಲೆನಾಡು ಕರ್ನಾಟಕ, ಘಟ್ಟಸೀಮ, ಚೇರ, ಚೋಳ, ಪಾಂಡ್ಯ, ಮಗಧ ಮತ್ತು ಮಲಯಾಳಗಳ ಅಗ್ರಹಾರಗಳು ಸರಿಯಾಗಿ ನಡೆಯುತ್ತಿವೆ. ಅಲ್ಲಿನ ಬ್ರಾಹ್ಮಣರು ಸುಖ ಸಂತೋಷದಿಂದ ತಮ್ಮ ನಿತ್ಯ ಕರ್ಮಾನುಷ್ಠಾನದಲ್ಲಿ ನಿರತರಾಗಿದ್ದಾರೆ.
5. ಅನಂತರ ದಳನಾಯಕರು ಬಂದರು. ಅವರ ವರದಿ – ಅವನ ತಲಾರಿಗಳು ಬಂದು "ಸಾಮ್ರಾಜ್ಯಕ್ಕೆ ಸೇರಿದ ನಾಲ್ಕು ತರಹದ ದುರ್ಗಗಳು ಸುರಕ್ಷಿವಾಗಿವೆ. ಅಧೀನ ನಾಯಕರಿಂದ ಏನೂ ತೊಂದರೆ ಇಲ್ಲ. ನಗರ ಮತ್ತು ನಗರದ ಸುತ್ತಣ ಪ್ರದೇಶಗಳು ನಿರಂತರ ನಮ್ಮ ದೃಷ್ಟಿಯಲ್ಲಿವೆ."
6. ಈತ ದೂತರು ಬಂದು ಸಮಾಚಾರ ತಿಳಿಸಿದರು. ಅನಂತರ ಕರಣಿಕರು ಬಂದು ಪತ್ರವ್ಯವಹಾರದ ಕಡತಗಳನ್ನು ತೋರಿಸಿದರು.
7. ಈಗ ಸಚಿವರೂ, ದಂಡನಾಯಕರು ಬಂದು ವರದಿ ಒಪ್ಪಿಸಿದರು. ರಾಯನು ಅವರಿಂದ ಪ್ರತ್ಯೇಕವಾಗಿ ಕೆಲಕಾಲ ಚರ್ಚಿಸಿದನು.
8. ಈಗ ದರ್ಬಾರ್ ನಡೆಯುತ್ತದೆ. 72 ನಿಯೋಗ, ಮಕ್ಕಳು, ಅಳಿಯಂದಿರು, ಅಧಿಕಾರಿಗಳು, ಮುಖ್ಯಸ್ಥರು, ಧಣಿಗಳು ಪಾಳೆಗಾರರು, ಅಮರನಾಯಕರು, ಹಿತೈಷಿಗಳು, ಆಶ್ರಿತರು, ಪಂಡಿತರು, ಪುರೋಹಿತರು, ಆಚಾರ್ಯರು, ಜೀಯರರು, ಮುನಿಗಳು, ಜ್ಯೋತಿಷಿಗಳು, ವೈದ್ಯರು, ರಾವುತರು, ಮಾವುತರು, ರಕ್ಷಕ ಭಟರು, ಸಾಮಂತರು, ವೈತಾಳಿಕರು, ಗಾಯಕರು, ಪಟ್ಟಣಿಗರು, ವಿಜ್ಞಾನಿಗಳು, ನಾಟಕಕಾರರು, ಕಲಾವಿದರು, ವಕ್ತಾರರು,ವೈಣಿಕರು ಬಂದರು, ರಾಯನು ಕೆಲಕಾಲ ಜ್ಯೋತಿಷಿಗಳೊಂದಿಗೆ, ವ್ಯಾಕರಣ ಪಂಡಿತರೊಂದಿಗೆ ದಳವಾಯಿಗಳೊಂದಿಗೆ ಅಂದಿನ, ಇಂದಿನ, ಮುಂದಿನ ವಿಷಯಗಳ ಬಗ್ಗೆ ಮಾತಾಡುತ್ತಿದ್ದನು.

ಕೃಷ್ಣದೇವರಾಯ ವಿರಚಿತ ಪ್ರಬಂಧ ಕಾವ್ಯ **'ಆಮುಕ್ತ ಮಾಲ್ಯದಾ'ದಲ್ಲಿ** ರಾಜನ ದಿನಚರಿಯ ಬಗ್ಗೆ ಹೀಗೆ ಹೇಳಲಾಗಿದೆ. ರಾಜನು ಮುಂಜಾವದಲ್ಲಿ ಎದ್ದು ತನ್ನ ಕೆಲಸ



ಕಾರ್ಯ ಪ್ರಾರಂಭಿಸಬೇಕು. ಮೊದಲು ವೈದ್ಯನು ಬಂದು ಹಿಂದಿನ ರಾತ್ರಿ ರಾಯನಿಗೆ ನಿದ್ದೆಯಾಯಿತೇ ? ಎಂದು ವಿಚಾರಿಸುವರು. ಆರೋಗ್ಯದ ರಕ್ಷಣೆಗೆ ರಾಜನು ರಾಜವೈದ್ಯನ ಮಾತಿನಂತೆ ನಡೆಯಬೇಕು.[4]

ವೀರನರಸಿಂಹರಾಯನು ಧರ್ಮಶಾಸ್ತ್ರದಲ್ಲಿ ತಿಳಿಸಿದಂತೆ ನಡೆಯುತ್ತಿದ್ದನು ಮತ್ತು ಪ್ರಜೆಗಳಿಗೆ ಅದರಂತೆ ನಡೆಯಲು ಅನುರೋಧ ಮಾಡುತ್ತಿದ್ದನು. ಮೇಲಿನ ವಿವರಗಳಲ್ಲಿ **ಧರ್ಮಶಾಸನ ಧರ್ಮಯ್ಯನ** ವರದಿಯನ್ನು ಕೇಳಿ ಸಂತೋಷಿಸಿದ ರಾಯನು ಸಮಾಜದ ಬುದ್ಧಿವಂತರಾದ ಬ್ರಾಹ್ಮಣರು ತಮ್ಮ ಅನುದಿನದ ಆಚಾರಗಳನ್ನು ಪಾಲಿಸುತ್ತಿದ್ದಾರೆಂದು ತಿಳಿದು ಆನಂದಪಟ್ಟನು. ಅಂದರೆ ಸಮಾಜದಲ್ಲಿ ಧರ್ಮಪರಿಪಾಲನೆ – ಅನುಷ್ಠಾನ ಸಮರ್ಪಕವಾಗಿ ನಡೆಯುತ್ತಿದೆಯೆಂದು ಗಮನಿಸಲು ಒಬ್ಬ ಅಧಿಕಾರಿಯೇ ಇದ್ದನು. ರಾಜ್ಯಾಂಗವು ಸೂಕ್ತವಾಗಿ ನಡೆಯಲು ಸಮಾಜದಲ್ಲಿ ನೀತಿ–ನಿಯಮಗಳಿಗೆ ಗೌರವವಿದ್ದರೆ ಮಾತ್ರ ಸಾಧ್ಯ ಎಂದು ರಾಯನು ಅರಿತಿದ್ದನು.

ಮೇಲಿನ ವಿವರಗಳಿಂದ ತಿಳಿಯುವುದೇನೆಂದರೆ ವೀರನರಸಿಂಹನು ಪ್ರತಿದಿನ ಎರಡು ಸಲ ದರ್ಬಾರು ನಡೆಸುತ್ತಿದ್ದನು. ಮೊದಲನೇದಾಗಿ ಧಾರ್ಮಿಕ ಮತ್ತು ಸಾಮಾಜಿಕ ರಂಗದಲ್ಲಿ ಧರ್ಮ ಅನುಸರಣೆ ಆಗುತ್ತಿತ್ತೆಂದು ಅರಿಯಲೆಂದು, ಎರಡನೇದಾಗಿ ಜನರ ಕಷ್ಟ ಸುಖದ ಬಗ್ಗೆ ಅಹವಾಲುಗಳನ್ನು ಸ್ವೀಕರಿಸಲೆಂದು, ಎರಡನೇ ದರ್ಬಾರಿನಲ್ಲಿ ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆಯ ಪರಿಶೀಲನೆ ಮತ್ತು ರಕ್ಷಕ ಭಟರು ಮತ್ತು ಸೈನಿಕರು ಕಾರ್ಯ ತತ್ಪರರಾಗಿರುವರೇ? ಎಂದು ತಿಳಿಯಲು ಸಾಧ್ಯವಾಗುತ್ತಿತ್ತು. ಗುಪ್ತಚಾರರು ರಾಜ್ಯದ ಒಳಗಿನ ಮತ್ತು ಹೊರಗಿನ ಸಂಗತಿಗಳನ್ನು ಆಗಿಂದಾಗ ತಿಳಿಸುತ್ತಿದ್ದರು. ಈ ಮೊದಲು ರಾಯನು ಸಾಯಂಕಾಲ ಮಾತ್ರ ದರ್ಬಾರು ನಡೆಸುತ್ತಿದ್ದನು. ಆಗ ತನ್ನ ಮಂತ್ರಿಗಳೊಂದಿಗೆ ರಹಸ್ಯ ಸಮಾಲೋಚನೆ ಮಾಡುತ್ತಿದ್ದನು. ಇದರಲ್ಲಿ ಶಿರಃ ಪ್ರಧಾನಿ, ದಳವಾಯಿ ಮತ್ತು ಕೆಲ ಮಂತ್ರಿಗಳು ಹಾಜರಿರುತ್ತಿದ್ದರು. ಸಂಧ್ಯಾಕಾಲದಲ್ಲಿ ನಡೆಯುತ್ತಿದ್ದ ಒಡ್ಡೋಲಗವು ಸಾಕಷ್ಟು ವೈಭವಯುತವಾಗಿ ನಡೆಯುತ್ತಿತ್ತು.

ಸಚಿವ ಸಂಪುಟದಲ್ಲಿ ಎಷ್ಟು ಸಚಿವರಿರುತ್ತಿದ್ದರೋ ತಿಳಿದಿಲ್ಲ. ಹಿಂದೂ ರಾಜ್ಯ ಶಾಸ್ತ್ರದ ಪ್ರಕಾರ ರಾಜ್ಯದಲ್ಲಿ ಸಪ್ತಾಂಗಗಳಿರುತ್ತಿದ್ದವು. ಅದರಲ್ಲಿ ರಾಜನೇ ಅತಿಮುಖ್ಯ, ವಿಜಯನಗರದ ಅರಸರು ಈ ಸಿದ್ಧಾಂತವನ್ನು ಅನುಸರಿಸಿದರು ಅಮುಕ್ತಮಾಲ್ಯದಾ ಕೂಡಾ 'ನವರತ್ನ ಮುಲು' ಮತ್ತು 'ಸಪ್ತಾಂಗ ಪದ್ಧತಿ'ಯ ಬಗ್ಗೆ ವಿವರಿಸುತ್ತದೆ.

ರಾಯನ ನಂತರ ಪರಮೋಚ್ಚ ಅಧಿಕಾರ ಇದ್ದವರು ಪ್ರಧಾನಮಂತ್ರಿ. ಆತನು ರಾಯ ಕುಟುಂಬದ ರಕ್ಷಣೆ ಮತ್ತು ಪೋಷಣೆ ವಹಿಸಿಕೊಂಡಿದ್ದನು. ಸಕಲ ಸಾಮಂತರೂ ಅಮರನಾಯಕ, ನಾಯಕರೂ ಆತನಿಗೆ ರಾಯನಿಗೆ ಸಲ್ಲಿಸುವಷ್ಟೇ ಗೌರವ ಸಲ್ಲಿಸುತ್ತಿದ್ದರು.[5] ವೀರನರಸಿಂಹ ರಾಯನ ಕಾಲದಲ್ಲಿ **ಸಾಳುವ ತಿಮ್ಮರಸರೇ ಪ್ರಧಾನಿ** ಆಗಿದ್ದರು. ಭಂಡಗಾರಿಕಾ ಅಥವಾ ಕೋಶಾಧಿಕಾರಿಯೂ ಪ್ರಮುಖ ಮಂತ್ರಿ. ಆತನನ್ನು **ಬೊಕ್ಕಸಂ ಭಾಸ್ಕರಯ್ಯ** ಎಂದು ಕರೆಯುತ್ತಿದ್ದರು. ಆತನು ಈ ಕಾಲದಲ್ಲಿ ಬೊಕ್ಕಸದ ಮಂತ್ರಿಯಾಗಿದ್ದನು.[6]

ರಾಯವಾಚಕದ ಪ್ರಕಾರ ಆಗ ಕಾನೂನು ಮತ್ತು ಧಾರ್ಮಿಕ ಉಂಬಳಿಗಳ ಮಂತ್ರಿಯಾಗಿ ಧರ್ಮಾಸನಂ ಧರ್ಮರ್ಯ ಇದ್ದರು.[7]

ಶಾಸನಗಳಲ್ಲಿ ಕೆಲ ಅಧಿಕಾರಿಗಳ ಉಲ್ಲೇಖ ಬರುತ್ತದೆ **ರಾಯಸಂ**[8] ಕಂದಾಯ ಇಲಾಖೆಯ ಅಧಿಕಾರಿ. ಅವನೇ ಅರಮನೆಯ ದ್ವಾರಪಾಲಕರನ್ನು ನೇಮಿಸುತ್ತಿದ್ದನು. ಅರಮನೆ ಪ್ರವೇಶ ಬಯಸುವವರು ರಾಯಸದವರ ಅನುಮತಿ ಪಡೆಯಬೇಕಾಗಿತ್ತು. **ಮೂಗಪ್ಪ ಒಡೆಯನು** ಒಡ್ಡೋಲುಗದ ಅಧಿಕಾರಿ. ಅವನು ದರ್ಬಾರಿನ ನೆಲಹಾಸು, ಯವನಿಕೆಗಳು ಮುಂತಾದ ವಸ್ತುಗಳನ್ನು ಸಮಾರಂಭ–ಉತ್ಸವಗಳಿಗೆ ಸಂಬಂಧಿಸಿದಂತೆ ಹೊಂದಿಸಬೇಕಾಗಿತ್ತು. ವೀರನರಸಿಂಹನ ಕಾಲದಲ್ಲಿ ರಾಮಯ್ಯ ನಾಯಕನೇ[9] ಮೂಗಪ್ಪ ಒಡೆಯನಾಗಿದ್ದನು. ಶಾಸನಗಳೂ, ರಾಯವಾಚಕವೂ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯ ಬಗ್ಗೆ ತಿಳಿಸುತ್ತವೆ. ಕೆಲ ವಿಭಾಗಗಳ ವಿವರವಾಗಲೀ ಅವುಗಳ ಪರಸ್ಪರ ಸಂಬಂಧವಾಗಲೀ ಸರಿಯಾಗಿ ವಿವರಿಸಲ್ಪಟ್ಟಿಲ್ಲ. ಆದ್ದರಿಂದ ಮಾಹಿತಿಯ ಅಭಾವದಿಂದ ಆಡಳಿತದ ಒಟ್ಟಾರೆ ಸ್ವರೂಪವನ್ನು ವಿವರಿಸಲು ಆಗುವುದಿಲ್ಲ.

**ಗುಪ್ತಚಾರ ವ್ಯವಸ್ಥೆ :** ರಾಯವಾಚಕದಲ್ಲಿ ತಿಳಿಸಿದಂತೆ ಪ್ರತಿದಿನ ರಾಯನು ಗುಪ್ತಚಾರರನ್ನು ವಿಶೇಷ ಸಮಯದಲ್ಲಿ ಬರಮಾಡಿಕೊಂಡು ಮಾಹಿತಿ ಪಡೆಯುತ್ತಿದ್ದನು. ಆದರೆ ಗುಪ್ತಚರರ ಪ್ರತ್ಯೇಕ ವಿಭಾಗವಿತ್ತೇ ? ಎಂಬುದು ತಿಳಿಸಿಲ್ಲ. ಆದರೆ ಅಲ್ಲಲ್ಲಿ ಲಭಿಸುವ ಮಾಹಿತಿಯ ಪ್ರಕಾರ ಗುಪ್ತಚರರ ಪ್ರತ್ಯೇಕ ವಿಭಾಗವು ನೇರವಾಗಿ ಸಾಮ್ರಾಟನ ಹತೋಟಿಯಲ್ಲಿತ್ತೆಂದು ತಿಳಿಯುತ್ತದೆ.

**ಪ್ರಾಂತೀಯ ಸರಕಾರಗಳು :** ಸಾಮ್ರಾಜ್ಯವು ರಾಜ್ಯಗಳಾಗಿ ವಿಭಜಿಸಲ್ಪಟ್ಟು ಪ್ರತ್ಯೇಕ ರಾಜ್ಯಪಾಲರಿಂದ ಪರಿಪಾಲಿಸಲ್ಪಡುತ್ತಿತ್ತು. ಸರಕಾರಗಳಿಗೆ ಸಾಮ್ರಾಟನ ಅನುಮತಿ ಪಡೆದು ದೇವಾಲಯ, ಸಂಸ್ಥೆಗಳಿಗೂ, ಬ್ರಾಹ್ಮಣರಿಗೂ ತೆರಿಗೆ ಮುಕ್ತ ಗ್ರಾಮದಾನ ಮಾಡುವ ಅಧಿಕಾರವಿತ್ತು. ಅವರು ಹೊಸ ತೆರಿಗೆಗಳನ್ನು ವಿಧಿಸಬಹುದಿತ್ತು.[10] ರಾಜ್ಯಪಾಲರು ತೆರಿಗೆ ವಸೂಲಿಗಾಗಿ ಅಧಿಕಾರಿಗಳನ್ನು ನೇಮಿಸಬಹುದಿತ್ತು. ಶಾಸನಗಳ ಪ್ರಕಾರ ರಾಜ್ಯಪಾಲರಿಗೆ ಪ್ರತಿನಿಧಿಗಳು ಇರುತ್ತಿದ್ದರು.[11] ಈ ಪ್ರತಿನಿಧಿಗಳು ತೆರಿಗೆ ಸಂಗ್ರಹಿಸುತ್ತಿದ್ದರು. ಕೇಂದ್ರದಲ್ಲಿ ರಾಯನು ನಡೆಸಿದಂತೆ ರಾಜ್ಯಗಳಲ್ಲಿ ರಾಜ್ಯಪಾಲರು ದರ್ಬಾರ್ ನಡೆಸುತ್ತಿದ್ದರು.[12] ಅವರ ಪ್ರತಿನಿಧಿಗಳು ರಾಜಧಾನಿಯಲ್ಲಿದ್ದು ಪ್ರತಿದಿನ ದರ್ಬಾರಿಗೆ ಹೋಗುತ್ತಿದ್ದರು.[13]

ಈ ರೀತಿಯ ಊಳಿಗಮಾನ್ಯ ವ್ಯವಸ್ಥೆಯಲ್ಲದೇ ಅನೇಕ ಉಪಕೇಂದ್ರಗಳೂ ಇದ್ದವು. ಇವು ಕಾಲಕ್ರಮೇಣ ಸಾಮ್ರಾಟನ ಅಂಕಿತಕ್ಕೆ ಸೇರಿದವು. ಈ ಪುಡಿ ಪಾಲಕರು ರಾಯನಿಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ಪೊಗದಿಯನ್ನು ಸಲ್ಲಿಸುತ್ತಿದ್ದರೆ ಅವರಿಗೆ ಯಾವ ತೊಂದರೆಯೂ ಇರಲಿಲ್ಲ. ಈ ಚಿಲ್ಲರೆ ಪಾಲಕರು ಕೇಂದ್ರದಲ್ಲಿ ಗೊಂದಲವಾದರೆ, ಹೊರಗಿನವರು ಆಕ್ರಮಣ ಮಾಡಿದರೆ ಪೊಗದಿ ಸಲ್ಲಿಸುವುದು ನಿಲ್ಲಿಸಿ ತಾವು ಸ್ವತಂತ್ರರೆಂದು ಸಾರುತ್ತಿದ್ದರು. ಉಮ್ಮತ್ತೂರು ಪಾಳೇಗಾರರು ಪೊಗದಿ ಸಲ್ಲಿಸದೇ, ವೀರನರಸಿಂಹನ ಅಧಿಕಾರಕ್ಕೆ ಸವಾಲು ಹಾಕಿದರು. ಆಗ ಅವರನ್ನು ದಾರಿಗೆ ತರಲು ಸಾಮ್ರಾಟನೇ ಸೈನ್ಯದೊಂದಿಗೆ ಹೋಗಬೇಕಾಯಿತು.



**ವೀರನರಸಿಂಹನ ಮಂತ್ರಿಗಳೂ ಮತ್ತು ಸೇನಾಪತಿಗಳು :** ವೀರನರಸಿಂಹನಿಗೆ ದಕ್ಷ ಮತ್ತು ಬುದ್ಧಿವಂತ ಮಂತ್ರಿಗಳಿದ್ದರು. ಅವರ ನೆರವಿನಿಂದ ಸಾಮ್ರಾಜ್ಯದ ಆಡಳಿತವು ಸುಸೂತ್ರವಾಗಿ ನಡೆಯುತ್ತಿತ್ತು. ಅದರಂತೆ ಬಂಡಾಯವೆದ್ದ ಪಾಳೇಗಾರರನ್ನು ಶಿಕ್ಷಿಸಲು ಸಾಧ್ಯವಾಯಿತು. ಸಾಳುವ ತಿಮ್ಮ, ಕಾಮರಾಜು ತಿಮ್ಮ, ಸಾಳುವ ಗೋವಿಂದ ರಾಜ, ಅವಸರಂ ಕೊಂಡಾಯನ ಮುಂತಾದವರು ಮಹೋತ್ಸವದ ಸೇವೆ ಸಲ್ಲಿಸಿದರು.

**ಸಾಳುವ ತಿಮ್ಮರಸ :** ಸಾಳುವ ತಿಮ್ಮರಸನ ಜಾಣತನದ ಕೃತ್ಯಗಳಿಂದ ಮನಸೋತ ಕೃಷ್ಣದೇವರಾಯನು ಆತನನ್ನು **ಸರ್ವಶಿರಃ ಪ್ರಧಾನಿ** ಮಾಡಿದನು. ಆತನು ಕೃಷ್ಣದೇವರಾಯನ ಪರಿಪಾಲನೆಯಲ್ಲಿ ವಿಜಯನಗರ ಸಾಮ್ರಾಜ್ಯದ ಭವ್ಯ ಭವಿಷ್ಯವನ್ನು ರೂಪಿಸುವಲ್ಲಿ ಕೆಲಸ ಮಾಡುವ ಮೊದಲು ವೀರನರಸಿಂಹರಾಯನ ಪ್ರಧಾನ ಮಂತ್ರಿ ಆಗಿದ್ದನು. ಇದಕ್ಕೆ ಶಾಸನಾಧಾರಗಳಿವೆ. **ತಾಡಪತ್ರಿಯ** ಶಕ ಸಂವತ್ಸರ 1431 ರ ಶಾಸನವು ಅವನು ವೀರನರಸಿಂಹರಾಯನ ಮಹಾಪ್ರಧಾನಿ ಆಗಿದ್ದನೆಂದು ತಿಳಿಸುತ್ತದೆ.[14] ಅದೇ ಸ್ಥಳದ ಮತ್ತೊಂದು ಶಾಸನದಲ್ಲಿ ವೀರನರಸಿಂಹರಾಯನ ಮಹಾಪ್ರಧಾನಿಯಾಗಿ ವೀರನರಸಿಂಹ ರಾಯನಿಗೆ ಪುಣ್ಯವಾಗಲೆಂದು ಮದುವೆ ತೆರಿಗೆಯನ್ನು ರದ್ದು ಮಾಡುತ್ತಾನೆ.[15] ಈ ಕೆಲವು ಉದಾಹರಣೆಗಳ ಹೊರತು ತಿಮ್ಮರಸರ ಮೊದಲ ಜೀವನ ಕಾಲದ ಬಗ್ಗೆ ಮಾಹಿತಿ ದೊರಕಿಲ್ಲ. ವೀರನರಸಿಂಹರಾಯನ ಕಾಲದಲ್ಲಿ ಸಾಮ್ರಾಜ್ಯದ ಭವಿಷ್ಯವನ್ನು ರೂಪಿಸುವಲ್ಲಿ ಅವರೇನು ಮಾಡಿದರೆಂದೂ ತಿಳಿದಿಲ್ಲ. ಆದರೆ ನೂನಿಜ್ ಕಥನ–ವೀರನರಸಿಂಹನ ಮರಣಾನಂತರ ಸಾಮ್ರಾಜ್ಯವನ್ನು ತಿಮ್ಮರಸನ ರಕ್ಷಣೆಗೆ ಒಪ್ಪಿಸುವುದೂ, ಕೃಷ್ಣದೇವರಾಯನ ಕಣ್ಣು ಕೀಳಿಸುವ ಜವಾಬ್ದಾರಿಯನ್ನು ಆತನಿಗೆ ವಹಿಸುವುದೂ, ತನ್ನ ಅಲ್ಪವಯಿ ಮಗನನ್ನು ಸಾಮ್ರಾಟನನ್ನಾಗಿ ಮಾಡುವ ಹೊಣೆ ಹೊರಿಸುವುದೂ, ನೋಡಿದರೆ ತಿಮ್ಮರಸನು ರಾಯನ ಅತಿಮುಖ್ಯ ಮತ್ತು ನಂಬಿಗಸ್ಥ ಮಂತ್ರಿಯಾಗಿದ್ದನೆಂದು ಅರ್ಥವಾಗುತ್ತದೆ. ವೀರನರಸಿಂಹನ ಮರಣಾನಂತರ, ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿ ತಿಮ್ಮರಸರ ಪಾತ್ರವು ಬಹು ಮುಖ್ಯವಾಗಿದೆ. ಆತನ ಚಾಣಾಕ್ಷ ಮತಿಯು ಸಾಮ್ರಾಜ್ಯದ ಭವಿಷ್ಯವನ್ನು ರೂಪಿಸಿದ ಸಂಗತಿ ಪ್ರಸಿದ್ಧವಾಗಿದೆ.

**ರಾಮರಾಜು ತಿಮ್ಮ :** ಅರವೀಟಿ ರಾಮರಾಜು ಮತ್ತು ಅವನ ಮಗ ತಿಮ್ಮ ಸಾಮ್ರಾಜ್ಯವನ್ನು ಒಳಗಿನ ಮತ್ತು ಹೊರಗಿನ ಅಪಾಯಗಳಿಂದ ರಕ್ಷಿಸುವಲ್ಲಿ ಪ್ರಧಾನ ಪಾತ್ರವಹಿಸಿದರು. ದ್ವಿಪದ ಬಾಲಭಾಗವತಮು, ಪದ್ಯ ಬಾಲಭಾಗವತಮು, ರಾಮರಾಜೀಯಮು ಮತ್ತು ಅರವೀಡು ಅರಸರ ಶಿಲಾಶಾಸನಗಳು ರಾಮರಾಜ ಮತ್ತು ತಿಮ್ಮನ ಸಮರ ಸಾಧನೆಗಳ ಬಗ್ಗೆ ತಿಳಿಸುತ್ತವೆ. ರಾಮರಾಜು ತಿಮ್ಮಯ್ಯನಂತೆ ತಿಮ್ಮನೂ ಇತಿಹಾಸ ಪ್ರಸಿದ್ಧನಾಗಿದ್ದಾನೆ. ಕಂದನವೋಲು ಕೈಫಿಯತ್‌ನಲ್ಲಿ – ತಿಮ್ಮನು ಸ್ವಯಂ ಸಾಹಸಗಳಿಂದ ವಿಜಯನಗರ ಸೇನೆಯ ಸೇನಾಪತಿ ಆದನಂತೆ. ವಿಜಯನಗರ ಸಾಮ್ರಾಜ್ಯ ಪ್ರದೇಶಗಳನ್ನು ಆಕ್ರಮಿಸತೊಡಗಿದ್ದ ಮುಸ್ಲಿಂ ಸೇನೆಗಳನ್ನು ಅವನು ಸೋಲಿಸಿ ಓಡಿಸಿದ್ದನು. ಆದವಾನಿಯ ಬಂಡೆದ್ದ ಪಾಳೇಗಾರನನ್ನು ಸೋಲಿಸಿ ಆದವಾನಿಯನ್ನು ವಶಪಡಿಸಿಕೊಂಡು ಅವನನ್ನು ಸೆರೆಹಿಡಿದು ರಾಜಧಾನಿಗೆ ತಂದಿದ್ದನು. ಅವನ ಶೌರ್ಯವನ್ನು ಮೆಚ್ಚಿದ ವೀರ ನರಸಿಂಹರಾಯನು

ಬಂಗಾರದ ಗಂಡ ಪೆಂಡೇರವನ್ನು ನೀಡಿದನು. ಅಲ್ಲದೇ 'ಸ್ವಾಮಿದ್ರೋಹರ ಗಂಡ' ಎಂಬ ಬಿರುದನ್ನು ನೀಡಿದನು. ತಿಮ್ಮನಿಗೆ ಕಂದನವೋಲು ಮತ್ತಿತರ ಗ್ರಾಮಗಳು ಉಂಬಳಿಯಾಗಿ ಲಭಿಸಿದವು. ಕಂದನವೋಲಿನಲ್ಲಿ ಸ್ಥಿರಗೊಂಡು ಅವನು ತುಂಗಭದ್ರಾ ತೀರದಲ್ಲಿ ಭದ್ರ ಕೋಟೆಯನ್ನು ನಿರ್ಮಿಸಿದನು.[16]

ಎರಮಂಚಿ ತಿಮ್ಮಪ್ಪನಾಯಕ ಮತ್ತು ಅವನ ಮಗ ತುಲುಕ್ಕನ ನಾಯಕರಿಗೆ **'ನಾಯಂಕಾರ ಆಚಾರ್ಯ'** ಮತ್ತು **'ನವಲೋಕ ಗಂಡ ಮತ್ತು ವೆಂಗಿನಾರಾಯಣ'** ಎಂಬ ಬಿರುದುಗಳನ್ನು ನೀಡಿದರು. ಅರಗಲೂರಿನ ಶಕಸಂವತ್ಸರ 1430ರ ಶಾಸನದಲ್ಲಿ[17] ಎರಮಂಚಿ ತುಲುಕ್ಕನನಾಯಕನನ್ನು **"ಚೇರ ಚೋಳ, ಪಾಂಡ್ಯ ಮತ್ತು ವಲ್ಲಾಳ ಅರಸರಿಗೆ ಭಯಕಾರಕನೂ, ಯಾದವರಾಯ ಸ್ಥಾಪಕನೂ, ಸಂಭವರಾಯನ ಶತ್ರುವೂ"** ಎಂದು ಹೊಗಳಲಾಗಿದೆ. ಕ್ರಿ.ಶ. 1497–98ರಲ್ಲಿ ನರಸನಾಯಕನು ದಕ್ಷಿಣ ದಿಗ್ವಿಜಯ ನಡೆಸಿದಾಗ ತುಲುಕ್ಕ ನಾಯಕನು ತನ್ನ ತಂದೆಯೊಂದಿಗೆ ಭಾಗವಹಿಸಿದಂತೆ ತೋರುತ್ತದೆ. ಮೇಲಿನ ಬಿರುದುಗಳು ಆಗ ಅವನ ಸಾಧನೆಗಳ ಗುರುತಾಗಿವೆ. ಅವನು ಕ್ರಿ.ಶ. 1505ರಲ್ಲಿ ಅಸ್ವಸ್ಥನಾದನು.[18] ಆದರೆ ಅನಂತರ ಚೇತರಿಸಿಕೊಂಡು, ವೀರನರಸಿಂಹರಾಯನ ಕಾಲದಲ್ಲಿ 'ನಾಯಂಕಾರ ಆಚಾರ್ಯ'ನೆಂದು ಖ್ಯಾತನಾದನು. ಕ್ರಿ.ಶ. 1508ರ ನಂತರ ಅವನ ಯಾವ ಶಾಸನಗಳೂ ಲಭಿಸಿಲ್ಲ.

ಸಾಳುವ ತಿಮ್ಮರಸನ ಸೋದರನೂ, ರಾಚಿರಾಜನ ಮಗನೂ ಆದ ಸಾಳುವ ಗೋವಿಂದರಾಜನು ವೀರ ನರಸಿಂಹನ ಕಾಲದಲ್ಲಿ ರಾಜಕೀಯಕ್ಕೆ ಬಂದನು.[19] ಇಮ್ಮಡಿ ವೀರ ನರಸಿಂಹ, ವೀರನರಸಿಂಹ ಮತ್ತು ಕೃಷ್ಣದೇವರಾಯರ ಕಾಲದಲ್ಲಿ **'ಪೆರಿಯ ಓಬಳನಾಯಕ್ಕರ್ ರಾಮನಾಯಕ್ಕರ್'** ಹೆಸರಾದ ಸೇನಾಪತಿ ಆಗಿದ್ದನು.[20]

**ಕಂದಾಯ ಇಲಾಖೆ :** ಸಾಮ್ರಾಜ್ಯದ ಸಮಸ್ತ ಭೂಮಿಯು ಸಾಮ್ರಾಟನಿಗೆ ಸೇರಿತ್ತು. ಅಥವಾ ಅವನ ಅನುಮತಿಯಂತೆ ರಾಜ್ಯಪಾಲರಾಗಿದ್ದವರಿಗೆ ಸೇರಿತ್ತು. ಜನರು ಸಾಮ್ರಾಟನಿಗೆ ಅಥವಾ ರಾಜ್ಯಪಾಲರಿಗೆ ನಿಗದಿತ ಭೂಕಂದಾಯವನ್ನು ಕೊಡಲೇಬೇಕಾಗಿತ್ತು. **ವಿದ್ಯಾರಣ್ಯರ 'ಪರಾಶರದ ಮಾಧವೀಯಂ'** ಪ್ರಕಾರ ಹುಟ್ಟುವಳಿಯ 6ನೇ ಒಂದು ಭಾಗವನ್ನು (1/6) ಅರಸನ ಪಾಲೆಂದು ಸಲ್ಲಿಸಬೇಕಾಗಿತ್ತು.[21]

ಈ ರೀತಿಯ ಪರಂಪರಾಗತವಾದ ಭೂಕಂದಾಯ (ಶಿಸ್ತು) ವೀರನರಸಿಂಹನ ಕಾಲದಲ್ಲು ಜಾರಿಯಲ್ಲಿತ್ತು. ಕಂದಾಯವನ್ನು ನಗದಾಗಿಯೂ, ವಸ್ತುರೂಪದಲ್ಲಿಯೂ ಸಲ್ಲಿಸಬಹುದಿತ್ತು.[22] ಇದಲ್ಲದೇ ಅನೇಕ ತೆರಿಗೆಗಳು ಜಾರಿಯಲ್ಲಿದ್ದವು. ಅವುಗಳನ್ನು ಆಸ್ತಿ ತೆರಿಗೆ, ವೃತ್ತಿ ತೆರಿಗೆ, ವಹಿವಾಟು ತೆರಿಗೆ, ವಾಣಿಜ್ಯ ಮತ್ತು ಉದ್ಯಮ ತೆರಿಗೆ ಸೈನ್ಯ ನಿರ್ವಹಣ ತೆರಿಗೆ, ಸಮಾರಂಭ ಮತ್ತಿತರ ತೆರಿಗೆಗಳೆಂದು ಹೇಳಬಹುದು.

**ಆಸ್ತಿ ತೆರಿಗೆ :** ಸ್ಥಿರ ಮತ್ತು ಚರಾಸ್ತಿಗಳ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು. ಆಸ್ತಿ ತೆರಿಗೆಯ ದರಗಳನ್ನು ಶಾಸನಗಳಲ್ಲಿ ನಮೂದಿಸಿಲ್ಲ, ಆದರೆ ಆಸ್ತಿ ತೆರಿಗೆ ಬಗ್ಗೆ ತಿಳಿಸುವ



ಶಾಸನಗಳಿವೆ. ಆ ಪೈಕಿ ಮನೆ ತೆರಿಗೆ (ವಾಸಲ್‌ಪಣಂ) ಸ್ಥಳ ಬಂಡಿ[23] ಕುದುರೆ ಮತ್ತು ದನಗಳು[24] ಸೇವಕರು[25] ಗುಲಾಮರು[26] (ಆದಿಮೈಕಾಸು)ಮುಂತಾದ ತೆರಿಗೆಗಳು ಇದ್ದವು.

ವೀರನರಸಿಂಹರಾಯನ ಕಾಲದಲ್ಲಿ ಗೌರಪ್ಪ ನಾಯುಡು ಅಲಂಕೊಂಡೈನ್ ರಕ್ಷಾಕ್ಷಿಯಲ್ಲಿ ಪುಟಾಸ್ತಿ ತೆರಿಗೆ ವಿವರ ಈ ರೀತಿಯಲ್ಲಿದೆ[27] ಮನೆತೆರಿಗೆ

| ಕ್ರ.ಸಂ. | ಜಾತಿ/ಪಂಗಡದ ಹೆಸರು | ಮನೆ ಸಂಖ್ಯೆ | ಮನೆತೆರಿಗೆ | ಒಟ್ಟು ತೆರಿಗೆ |
|---|---|---|---|---|
| 1. | ಚಿಲ್ಲರ ರಾಜಯ್ಯ ಲಿಂಗಯ್ಯ ಸಮುದಾಯ | 10 | 1 ಗದ್ಯಾಣ | 10 ಗದ್ಯಾಣ |
| 2. | ಪಗದಾಲ ತಿಮ್ಮಯ್ಯ ಅಪ್ಪಯ್ಯ ಸಮುದಾಯ | 30 | 1 ಗದ್ಯಾಣ | 15 ಗದ್ಯಾಣ |
| 3. | ಎರಡೂ ಸಮುದಾಯದಿಂದ ಕಾಣಿಕೆ | – | – | 5 ಗದ್ಯಾಣ |
| | ಒಟ್ಟು ಕಂದಾಯ | | | 30 ಗದ್ಯಾಣ |
| | ಒಂದು ಗದ್ಯಾಣ = 12 ರೊಕ್ಕ | | | |

ಮನೆತೆರಿಗೆಯು ಊರಿಂದ ಊರಿಗೆ, ಸಮುದಾಯದಿಂದ ಸಮುದಾಯಕ್ಕೆ ಆಯಾಸ್ಥಳದ ಮೇಲೆ ಆಧರಿಸಿ ವಿಧಿಸಲ್ಪಡುತ್ತಿತ್ತು. ಇದಕ್ಕೆ ಆಧಾರಗಳು ಅಠವಣ ತಂತ್ರ[28]ದಲ್ಲಿ ಸಿಗುತ್ತವೆ.

ಅಲಂಕೊಂಡದ ಪುಟ್ಟಾಸ್ತಿ ವಿವರದಲ್ಲಿ **ಕಾಣಿಕೆ ಅಥವಾ ಅಡಿಕೋಲು** ಪ್ರತಿಯೊಂದು ತೆರಿಗೆಯ ಮೇಲೂ ಹಾಕಲ್ಪಟ್ಟದ್ದು ಕಾಣುತ್ತದೆ. ಕಡ್ಡಾಯವಾಗಿ ಸಲ್ಲಿಸಬೇಕಾದ ಕಂದಾಯವಲ್ಲದೇ ಸ್ವಯಂ ಪ್ರೇರಣೆಯಿಂದ ಈ ಹೆಚ್ಚುವರಿ ತೆರಿಗೆ ಕೊಡಬೇಕಾಗಿತ್ತು.

**ವೃತ್ತಿ ತೆರಿಗೆ :** ಆಗ ವೃತ್ತಿತೆರಿಗೆಯು ಅತ್ಯಂತ ವ್ಯಾಪಕವಾಗಿ ಸಮಸ್ತ ವೃತ್ತಿಗಳ ಮೇಲೆ ಎಲ್ಲಾ ಸ್ತರದ ಮೇಲೆ ವಿಧಿಸಲ್ಪಡುತ್ತಿದ್ದ ತೆರಿಗೆ ಆಗಿತ್ತು. ವೃತ್ತಿ, ಕುಲಕಸುಬು, ವ್ಯಾಪಾರ, ಸಾರ್ವಜನಿಕ ಮತ್ತು ಸರಕಾರಿ ನೌಕರದಾರರೂ ತೆರಿಗೆ ಕಟ್ಟಲೇಬೇಕಾಗಿತ್ತು.[29] ಶಾಸನಗಳಲ್ಲಿ ಕಾಣುವ ವೃತ್ತಿತೆರಿಗೆ ಮತ್ತು ಅಲಂಕೊಂಡದ ಪುಟ್ಟಾಸ್ತಿಯಲ್ಲಿ ಕಾಣುವ ಕೆಲ ವೃತ್ತಿ ತೆರಿಗೆಗಳೆಂದರೆ – ಡೊಂಬರಿಪನ್ನು[30] ಅದಿಮೈಕಾಸು[31] (ನೇಕಾರರಿಂದ), ಹಣಕಾಸು ವ್ಯವಹಾರ, ಮಡಿವಾಳರೂ, ಗೊಲ್ಲರು, ಕುರುಬರು, ಈಡಿಗರೂ, ಚಮ್ಮಾರರೂ, ಪಿಂಜಾರರೂ, ಬಿಟ್ಟಿ ಚಾಕರಿಯವರೂ[32] ತೆರಿಗೆ ನೀಡಬೇಕಾಗಿತ್ತು. ವೃತ್ತಿ ತೆರಿಗೆಯು ಆದಾಯದ ಮೇಲೆ ವಿಧಿಸಲ್ಪಡುತ್ತಿರಲಿಲ್ಲ. ಅದು ವೃತ್ತಿಯ ಮೇಲಿನ ತೆರಿಗೆಯಾಗಿತ್ತು. ಬೇರೆ ಬೇರೆ ವೃತ್ತಿಗಳಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ವೃತ್ತಿ ತೆರಿಗೆಯ ಮೊತ್ತ ಬೇರೆ ಬೇರೆ ಆಗಿತ್ತು. ಆದರೆ ವಿವರಗಳು ಲಭಿಸಿಲ್ಲ. ವೃತ್ತಿ ತೆರಿಗೆಯನ್ನು ಪ್ರತಿವರ್ಷ ನಗದಾಗಿ ಸಲ್ಲಿಸಬೇಕಾಗಿತ್ತು. ಈ ವಿಷಯಕ್ಕೆ ಅಲಂಕೊಂಡದ ಪುಟ್ಟಾಸ್ತಿ ಪಟ್ಟಿಯೇ ಸಾಕ್ಷಿ.

**ಉದ್ಯಮಗಳ ಮೇಲೆ ತೆರಿಗೆ :** ವಿಜಯನಗರ ಸಾಮ್ರಾಜ್ಯದಲ್ಲಿ ಎಲ್ಲಾ ಉದ್ಯಮಗಳ ಮೇಲೆ ತೆರಿಗೆ ಇತ್ತು. ಈ ತೆರಿಗೆಗೆ ಉದ್ಯಮಿಗೆ ಬರಬಹುದಾದ ಲಾಭವೇ ಆಧಾರ. ಈ ತತ್ವದ ಮೇಲೆ ಕೆಲ ಉದ್ಯಮಿಗಳ ಮೇಲೆ ತೆರಿಗೆ ವಿಧಿಸಲಾಗಿತ್ತು. ಈ ತೆರಿಗೆಯನ್ನು ನಗದಾಗಿ ಸಲ್ಲಿಸಬೇಕಾಗಿತ್ತು. ಅಲಂಕೊಂಡದ ಪುಟ್ಟಾಸ್ತಿಯ ಪ್ರಕಾರ ಮಗ್ಗಗಳ ಆದಾಯವನ್ನು ಈ ರೀತಿ ಅಂದಾಜು ಮಾಡಿದ್ದರು.

**ಬಣ್ಣದ ಬಟ್ಟೆ ನೇಯುವ ಮಗ್ಗಳು**

| ಕ್ರ.ಸಂ. | ಮಗ್ಗದ ಮಾಲಕ | ಮಗ್ಗಗಳ ಸಂಖ್ಯೆ | ಪ್ರತಿ ಮಗ್ಗದ ಮೇಲೆ ಮಾಸಿಕ ಸುಂಕ | ಒಟ್ಟು (ರೊಕ್ಕ) |
|---|---|---|---|---|
| 1. | ಗುತ್ತಿ ಸೆಟ್ಟಿ | 65 | 1/2 ರೊಕ್ಕ | 32 1/2 |
| 2. | ಕುಣಿಗಿರಿ ಸೆಟ್ಟಿ | 100 | 1/2 ರೊಕ್ಕ | 50 |
| 3. | ಗೋರಪ್ಪನಾಯಿಂ ಪೇಟ ಮಗಗ್ಗಳು | 230 | 1/2 ರೊಕ್ಕ | 115 |
| 4. | ವೀರಯ್ಯ | 16 | 1/2 ರೊಕ್ಕ | 008 |
| | ಒಟ್ಟು | 411 | 1/2 | 205 1/2 |
| | ಮಾನ್ಯ ಮಗ್ಗ (ತೆರಿಗೆ ರಹಿತ) | 41 | ಇಲ್ಲ | –20 1/2 |
| | ಶೇಷ | 370 | 1/2 | 185 ರೊಕ್ಕ |

**ಬಳಿಬಟ್ಟೆ ನೇಯುವ ಮಗ್ಗಗಳು**

| ಕ್ರ.ಸಂ. | ಮಗ್ಗದ ಮಾಲಕ | ಮಗ್ಗಗಳ ಸಂಖ್ಯೆ | ಪ್ರತಿ ಮಗ್ಗದ ಮೇಲೆ ಮಾಸಿಕ ಸುಂಕ | ಒಟ್ಟು (ರೊಕ್ಕ) |
|---|---|---|---|---|
| 1. | | 30 | 1/4 ರೊಕ್ಕ | 7 1/2 |
| 2. | ಗೌರಪ್ಪನಾಯನ ಪೇಟಿಯ ಕೊಪ್ಪವರಂ ನೇಕಾರರು | 100 | 1/4 ರೊಕ್ಕ | 3 |
| | ಒಟ್ಟು | 42 | 1/4 ರೊಕ್ಕ | 10 1/2 |
| | ತೆರಿಗೆ ರಹಿತ – ಮಾನ್ಯ | 10 | ಇಲ್ಲ | 2 1/2 |
| | ಉಳಿದದ್ದು | 32 | 1/4 ರೊಕ್ಕ | 8 |

ಈ ಮೇಲೆ ಕಾಣಿಸಿದ ಮಗ್ಗ ಸುಂಕದ ಮೇಲೆ ಕೋಟೆ ತೆರಿಗೆ, ಕಾಣಿಕೆ ಇತ್ಯಾದಿ ಹಾಕಲಾಗುತ್ತಿತ್ತು. ಅಲಂಕೊಂಡದ ಪುಟ್ಟಾಸ್ತಿ ಪಟ್ಟಿಯಂತೆ ಅಂತಿಮವಾಗಿ ಮಗ್ಗಗಳಿಂದ ಕೆಳಗಿನಂತೆ ಆದಾಯ ಬರುತ್ತಿತ್ತು.



| ಕ್ರ. ಸಂ. | ಎಂತಹ ಮಗ್ಗ | ಸುಂಕ | ಕಾಣಿಕೆ ಇತ್ಯಾದಿ | ಕೋಟೆ ತೆರಿಗೆ | ಒಟ್ಟು ಆದಾಯ | |
|---|---|---|---|---|---|---|
| | | | | | ತಲಾ | ಒಟ್ಟು |
| 1. | ಬಣ್ಣದ ಬಟ್ಟೆ ಮಗ್ಗ | 185 ಗ | 28 ಗ | 10 ಗ | 223 ಗ | |
| 2. | ಬಿಳಿ ಬಟ್ಟೆ ಮಗ್ಗ | 8 ಗ | 31.2 ಗ | – | 11 1/2 ಗ | 234 1/2ಗ |

ಗದ್ಯಾಣ = 12 ರೊಕ್ಕ

ಮೇಲಿನ ತಃಖ್ತೆಯಿಂದ ನಮಗೆ ತಿಳಿಯುವುದೇನೆಂದರೆ ಮಗ್ಗಗಳ ಮೇಲೆ ಸುಂಕವು ಆದಾಯದ ಮೇಲೆ ನಿರ್ಧಾರವಾಗುತ್ತಿತ್ತು. ಬಿಳಿಬಟ್ಟೆ ನೇಯುವ ಮಗ್ಗಗಳಿಗೆ ಸುಂಕವೂ ಕಡಿಮೆ ಮತ್ತು ಕೋಟೆ ತೆರಿಗೆ ಇಲ್ಲ.

ಅಲಂಕೊಂಡದ ಪುಟ್ಟಾಸ್ತಿಯು ಬೇರೆ ಬೇರೆ ಜನರ ಮಾಲಿಕತ್ವದ ಅಂಗಡಿಯ ಮೇಲಿನ **ಸಿದ್ಧಾಯ** ವಿವರವನ್ನು ನೀಡುತ್ತದೆ.

1. ಗೌರಪ್ಪ ನಾಯುಡು – 9 ಅಂಗಡಿ
2. ಬಲಿಜ ಸೆಟ್ಟರು – 12 ಅಂಗಡಿ
3. ನಲ್ಲ ತಿಮ್ಮ – 6 ಅಂಗಡಿ
4. ವೀರಿ ಸೆಟ್ಟಿ – 6 ಅಂಗಡಿ

ಪ್ರತಿ ಅಂಗಡಿಗೆ 1 ರೊಕ್ಕದಂತೆ **ಸಿದ್ಧಾಯ** ವಿಧಿಸಲಾಗುತ್ತಿತ್ತೆಂದು ತಿಳಿಸುತ್ತದೆ. ಅನಂತರ ಗಾಣಗಳು (ನೆಕ್ಕಾಯಂ)**[33]** ನೂಲು ಉತ್ಪಾದನೆ (ನೂಲಾಯಂ)**[34]** ರೇಷ್ಮೆ (ಪಟ್ಟಡೈ)**[35]** ನೂಲಾಯಂ ಆದರೆ ಬೇರೆ ಬೇರೆ ಉದ್ಯಮಗಳ ಮೇಲೆ ಆಕರಿಸಲ್ಪಡುತ್ತಿದ್ದ ತೆರಿಗೆಗಳ ಖಚಿತ ಮಾಹಿತಿ ಲಭಿಸಿಲ್ಲ.

**ಸೇನೆಗೆ ದೇಣಿಗೆ :** ಸಾಮ್ರಾಜ್ಯದ ಕೋಟೆ ಕೊತ್ತಳಗಳನ್ನು ಸೇನೆಯನ್ನು ನಿರ್ವಹಿಸಲು ಜನರು ಕೆಲ ತೆರಿಗೆ ಕೊಡಬೇಕಾಗಿತ್ತು. ಕೋಟೆಗಳ ಹತ್ತಿರ ವಾಸಿಸುತ್ತಿದ್ದ ಜನರು ಕೋಟೆ ಟ್ಯಾಕ್ಸ್ ಕೊಡಬೇಕಾಗಿತ್ತು. ಮತ್ತು ಅಲ್ಲಿ ಕಾರ್ಯಮಾಡುತ್ತಿದ್ದ ಕಾರ್ಖಾನೆಗಳೂ ಕೋಟೆ ತೆರಿಗೆ ಕಟ್ಟಬೇಕಿತ್ತು.**[36]**

**ಸಮಾರಂಭಗಳ ತೆರಿಗೆ :** ಮದುವೆ**[37]**, ತಲೆಮುಂಡನ**[38]** (ತಲ್ಯೆ ಮಾಣಿಕಂ) ಮುಂತಾದ ಸಮಾರಂಭದ ಮೇಲೆ ತೆರಿಗೆ ಹಾಕಲಾಗುತ್ತಿತ್ತು.

ಸಾಮಾಜಿಕ ಕಾನೂನುಗಳಲ್ಲಿ ಆಗ ಮದುವೆ ತೆರಿಗೆಯನ್ನು ಎಲ್ಲ ವರ್ಗದ ಜನರು ಕೊಡಬೇಕಿತ್ತು. ಕನ್ಯೆಯೊಬ್ಬಳ ಮದುವೆ ಸಂದರ್ಭದಲ್ಲಿ ವರನ ಮತ್ತು ಕನ್ಯೆಯ ಕಡೆಯವರಿಬ್ಬರೂ ತೆರಿಗೆ ಕಟ್ಟಬೇಕಾಗಿತ್ತು. ಈ ಕಾಲದ ಶಾಸನಗಳಲ್ಲಿ ತೆರಿಗೆ ಎಷ್ಟು ಕಟ್ಟಬೇಕಾಗಿತ್ತು ಎಂದು ತಿಳಿಸಿಲ್ಲ. ಮದುವೆ ತೆರಿಗೆ ಅಲ್ಲದೇ, ಇನ್ನೂ ಕೆಲ ತೆರಿಗೆಗಳನ್ನು ಕಟ್ಟಬೇಕಾಗಿತ್ತು ಅದರಲ್ಲಿ

**ಮದುವೆ ಚಪ್ಪರದ ತೆರಿಗೆ, ವಧೂವರರ ಮೆರವಣಿಗೆ ತೆರಿಗೆ** ಪ್ರಮುಖವಾದವು. ಈ ತೆರಿಗೆಗಳನ್ನು ಕಟ್ಟಲಾರದೇ ಅನೇಕರು ಮುದುಕರಾಗುವವರೆಗೇ ಅವಿವಾಹಿತರಾಗಿಯೇ ಉಳಿಯುತ್ತಿದ್ದರು. ವೀರನರಸಿಂಹನ ಕಾಲದಲ್ಲಿ ಈ ತೆರಿಗೆಯನ್ನು ರದ್ದು ಮಾಡುವ ಪ್ರಥಮ ಪ್ರಯತ್ನ ನಡೆಯಿತು. ಶ. ಸಂ. 1429ರ ಶಾಸನದಲ್ಲಿ ಈ ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ವೀರ ನರಸಿಂಹನ ಪ್ರಧಾನಿ ಸಾಳುವ ತಿಮ್ಮರಸನು ಗುತ್ತಿ ಸೀಮೆಯ ನಾಯಂಕಾರನೂ ಆಗಿದ್ದರು. ಆತನು ಗುತ್ತಿಸೀಮೆ ಮತ್ತು ಪೆನ್ನಬಾದಿ ಸೀಮೆಗಳಲ್ಲಿ ಮದುವೆ ತೆರಿಗೆಯನ್ನು ರದ್ದು ಮಾಡಿದನು.[39]

ಅನಂತರ ಕ್ರಿ.ಶ. 1510ರಲ್ಲಿ ಕೃಷ್ಣದೇವರಾಯನ ಆಳ್ವಿಕೆಯ ಮೊದಲ ದಿನಗಳಲ್ಲಿ ತಿಮ್ಮಾಪುರ ಗಂಗನಾಯಕ ಮತ್ತಿತರರ ಪ್ರಾರ್ಥನೆಯ ಮೇರೆಗೆ ಮದುವೆಗೆ ಸಂಬಂಧಿಸಿದ ಎಲ್ಲಾ ತೆರಿಗೆಗಳನ್ನು ರದ್ದು ಮಾಡಲಾಯಿತು40.

**ಸಮುದಾಯ ಮತ್ತಿತರ ತೆರಿಗೆಗಳು :** ಕೆಲವು ಸಮುದಾಯ ಮತ್ತು ಸಂಸ್ಥೆಗಳ ಮೇಲೆ ಸಮಷ್ಟಿ ರೂಪದಲ್ಲಿ ತೆರಿಗೆ ಹಾಕಲಾಗುತ್ತಿತ್ತು. ಅಂತಹ ತೆರಿಗೆಯನ್ನು ಕೈಕೋಳರು (ನೇಕಾರರು) ಗೋಪಾಲರು[41]. ಅಗಸರೂ, ರಂಗದಾಸರಿಗಳೂ, ಚಮ್ಮಾರರು[42] ಮತ್ತಿತರು ತೆರುತ್ತಿದ್ದರು. ಆಲಂಕೊಂಡ ಮಟ್ಟಾಸಿಯು ಈ ಜಾತಿ–ಸಿದ್ಧಾಯದ ವಿವರಗಳನ್ನು ನೀಡುತ್ತದೆ.[43] ಕುಲ ಹದಿನೆಂಟು ಜಾತಿಗಳವರು ನೀಡಬೇಕಾಗಿದ್ದ ತೆರಿಗೆ **ಸಮ್ಮಾದಮ್** ಎನಿಸಿತ್ತು.[44] ಇಂತಹ ತೆರಿಗೆಯನ್ನು ಆಯಾ ಸಮುದಾಯದವರ ದೇವಾಲಯದ ಆರಾಧನೆ, ಅಮೃತಪಡಿಗಾಗಿಯೇ, ಜೀರ್ಣೋದ್ಧಾರಕ್ಕಾಗಿಯೇ ಅವಶ್ಯವಿದ್ದಲ್ಲಿ ನೀಡಲಾಗುತ್ತಿತ್ತು. ಕೆಲ ಸಮಯ ಆಯಾ ಜಾತಿಯವರ ಅನುಕೂಲಕ್ಕಾಗಿ ವಸೂಲು ಮಾಡಲಾಗುತ್ತಿತ್ತು.

ಜೋಡಿ, ಕಾಣಿಕೆ, ಮಗಮ್ಮೆ ಮುಂತಾದ ದೇಣಿಗೆಗಳು ರಥೋತ್ಸವಾದಿಗಳಿಗೋ, ಕೆರೆ ರಿಪೇರಿಗೋ, ದೇವಾಲಯ ಜೀರ್ಣೋದ್ಧಾರ, ಮಂಟಪ, ಗೋಪುರ ಪ್ರಾಕಾರ ನಿರ್ಮಾಣಕ್ಕೋ ನಿಗದಿಯಾಗುತ್ತಿತ್ತು. ರಾಯನ ಹೆಸರಿನಲ್ಲಿ ದೇವಾಲಯದಲ್ಲಿ ಉತ್ಸವಾದಿ ಸಲ್ಲುತ್ತಿತ್ತು. ಈ ಜಾತಿ–ಸಿದ್ಧಾಯದ ಧನವು ಸಾಮಾಜಿಕ–ಸೇವೆಗಳಿಗೆ ಉಪಯೋಗವಾಗುತ್ತಿತ್ತು.

ಉತ್ತರ ಆರ್ಕಾಟ್ ಜಿಲ್ಲೆಯ ದೇವಿಕಾಪುರಂನ ನಾಲ್ಕು ಶಾಸನಗಳು 33 ರೀತಿಯ ತೆರಿಗೆಗಳ ವಿವರ ನೀಡುತ್ತದೆ. ಇದರಲ್ಲಿ 32 ತೆರಿಗೆಗಳನ್ನು ದೇವಾಲಯದವರು ವಸೂಲು ಮಾಡಿದರೆ, ಒಂದು ತೆರಿಗೆ ಮಾತ್ರ ರಾಯಭಂಡಾರಕ್ಕೆ ಸೇರುತ್ತಿತ್ತು[45] ಅದೆಂದರೆ ರಾಯನ ಅಧಿಕಾರಿಗಳು ಸಂಗ್ರಹಿಸುತ್ತಿದ್ದ ಭೂಕಂದಾಯ ಅಂದರೆ ಕೃಷಿ ಉತ್ಪನ್ನದ 1/6ನೇ ಭಾಗ ಮಾತ್ರ, ಇತರ 32 ತೆರಿಗೆಗಳನ್ನು ದೇವಾಲಯದ ನಿರ್ವಹಣೆಗೆ ಮತ್ತು ಸೇವೆಗೆ ಸಲ್ಲುತ್ತಿದ್ದವು.

ಈ ತೆರಿಗೆಗಳನ್ನು ಸ್ಥಳೀಯ ಅಧಿಕಾರಿಗಳು ಸಂಗ್ರಹಿಸಿ ದೇವಾಲಯಗಳಿಗೆ ನೀಡುತ್ತಿದ್ದರು. ಈ ಗ್ರಾಮಗಳನ್ನು ದೇವಾಲಯ ಗ್ರಾಮಗಳೆಂದು ಕರೆಯುತ್ತಿದ್ದರು.

ಕರ ನಿರ್ಧಾರಣೆ ಮತ್ತು ವಸೂಲು ಮಾಡುವ ವಿಧಾನದಲ್ಲಿ ಏಕರೂಪದ ಪದ್ಧತಿ ಇರಲಿಲ್ಲ. ಭೂಕಂದಾಯವಲ್ಲದೆ ಅನ್ಯಾನ್ಯ ಚಿಲ್ಲರೆ ಸುಂಕ ಮತ್ತು **ಮಾಗಣೈ**ಗಳನ್ನು ದೇವಾಲಯ



ದವರೂ, ಅಧಿಕಾರಿಗಳೂ ವಸೂಲು ಮಾಡುತ್ತಿದ್ದರು. ತೆರಿಗೆಯ ಭಾರ ಹೆಚ್ಚಾಯಿತೆಂದು ಕಂಡು ಬಂದಲ್ಲಿ ಸಾಮ್ರಾಟರು ತೆರಿಗೆ ಮನ್ನಾ ಮಾಡುತ್ತಿದ್ದರು.

ಶಕ ಸಂ. 1427ರ ಶಾಸನದ ಪ್ರಕಾರ (5–02–1506) ತಿರುಕ್ಕೊಯಿಲೂರಿನ ಕೆಲ ಭೂಮಿಗಳನ್ನು ತಿರುವಿಡೈಕಾಳಿ ದೇವಾಲಯಕ್ಕೆ ನಷ್ಟವಾಗುವಂತೆ ವ್ಯವಸಾಯದಾರರು ತೆರಿಗೆ ಭರಿಸಲಾರದೆ ಮಾರಿದರು. ಇಮ್ಮಡಿ ನರಸನಾಯಕನು ಅಲ್ಲಿಗೆ ಬಂದಾಗ ವಿಷಯವನ್ನು ಪರಿಶೀಲಿಸಿ ಭೂಮಿಗಳ ತೆರಿಗೆ ಮನ್ನಾ ಮಾಡಿದನು. ಅದರಿಂದ ಬಂದ ಲಾಭವನ್ನು, ದೇವಾಲಯದಲ್ಲಿ ಪ್ರತಿ ತಿಂಗಳು ಕೆಲ ದಿನಗಳಲ್ಲಿ ಅಮೃತಪಡಿಗಾಗಿ ನೀಡಿದನು.[46] ವೀರನರಸಿಂಹರಾಯನ ಕಾಲದಲ್ಲಿ ಮದುವೆ ತೆರಿಗೆಯು ಮೊದಲ ಬಾರಿಗೆ ರದ್ದು ಮಾಡಲ್ಪಟ್ಟರು.[47]

**ಅಡಿ ಟಿಪ್ಪಣಿಗಳು**

1. ಸಾಲೆತೂರು, ಬಿ. ಎ. ಸೋಶಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಪು. 226, 227
2. ಮಹಾಲಿಂಗಂ ಟಿ. ವಿ. ಅಡ್ಮಿನಿಸ್ಟ್ರೇಶನ್ ಅಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ ಪು. 238
3. ಫರ್ದರ್ ಸೋರ್ಸಸ್ II 96
4. ಆಮುಕ್ತಮಾಲ್ಯದಾ - IV - 271
5. ನೇಲಟೂರು ವೆಂಕಟರಮಣಯ್ಯ ಸ್ಟಡೀಸ್ ಇನ–ದಿ–ಥರ್ಡ್ ಡೈನಾಸ್ಟಿ ಪು.103
6. ತಿ.ತಿ.ದೇ.ಇ. II - 133
7. ಫರ್ದರ್ ಸೋರ್ಸಸ್ II 96-4
8. ARE 253-1952-53
9. ಅದೇ 54–1934 ಪ್ಯಾರಾ 32
10. ಅದೇ 166–1940–41, 412 ಮತ್ತು 445–1913
11. ಅದೇ 371–1921
12. ವರಾಹಪುರಾಣಮು I-11
13. ಫರ್ದರ್ ಸೋರ್ಸಸ್ II-96
14. S11 ಸಂ. VI ಸಂ. 802
15. ಅದೇ ಸಂ. IV - ಸಂ.803
16. ಫರ್ದರ್ ಸೋರ್ಸಸ್ II 100 ಪು. 84
17. ARE 408-1913
18. ಅದೇ 420–1913
19. ಅದೇ 214–1938
20. T.T.D.I. III 1
21. ಮಹಾಲಿಂಗಂ ಟಿ. ವಿ. ಪೂರ್ವೋಕ್ತ, ಭಾಗ I ಪು. 48
22. ಫರ್ದರ್ ಸೋರ್ಸಸ್ II 106 ಪು. 80 14 of 1922

23. ಮದ್ರಾಸ್ ಎಪಿಗ್ರಾಫಿಕಲ್ ಕಲೆಕ್ಷನ್ 1906-516 of 1906
24. ARE 214-1938
25. ಮದ್ರಾಸ್ ಎಪಿಗ್ರಾಫಿಕಲ್ ಕಲೆಕ್ಷನ್ 1906–516
26. ARE 445/1913
27. ಫರ್ದರ್ ಸೋರ್ಸಸ್ II 106
28. ನೇಲಟೂರು ವೆಂಕಟರಮಣಯ್ಯ–ಪೂರ್ವೋಕ್ತ ಪು. 225
29. ARE 61-1940-41
30. ಅದೇ 282/1937–38
31. ಅದೇ 445/1913
32. ಫರ್ದರ್ ಸೋರ್ಸಸ್ II 106
33. ARE 244/1912 ಫರ್ದರ್ ಸೋರ್ಸಸ್ II - 106
34. ಅದೇ 107/1939–40
35. ಅದೇ
36. ಫರ್ದರ್ ಸೋರ್ಸಸ್ II 106
37. ARE 214/1938, 516/1906
38. ಅದೇ ಪ್ಯಾರಾ 65/1935–36
39. SII ಸಂ. 4 803
40. ಎ.ಕ. XII MI 64
41. ಫರ್ದರ್ ಸೋರ್ಸಸ್ II 106
42. ಅದೇ 106
43. ಅದೇ
44. ARE 61/1940-41
45. ಅದೇ 353, 355, 96/1912
46. ARE 33/1921
47. S.I.I. IV 803

## ಅಧ್ಯಾಯ – ೭

# ಸಮಾಜ ಮತ್ತು ಸಂಸ್ಕೃತಿ

**ಸಮಾಜ :** ವಿದೇಶೀ ಪ್ರವಾಸಿಗರಾದ ಬಾರ್ಬೋಸಾ (1500–1516) ಮತ್ತು ವಾರ್ಥೇಮಾ (1502–1508 ಕ್ರಿ.ಶ.) ಮತ್ತು ಸಮಕಾಲೀನ ಸಾಹಿತ್ಯ ಕೃತಿಗಳಾದ ಮಾದಯ್ಯ ಕವಿಯ **'ಮೈರಾವಣ ಚರಿತ್ರೆ',** ಕೊರವಿ ಗೋಪರಾಜನ **'ಸಿಂಹಾಸನಾದ್ವಿತ್ರಿಂಶಿಕಾ** ಮುಂತಾದವುಗಳ ಮೂಲಕ ಅಂದಿನ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ತಿಳಿಯಲು ಸಾಧ್ಯ.

ಹಿಂದೂಧರ್ಮ ರಕ್ಷಕರೆನಿಸಿದ ರಾಯರು ವರ್ಣಾಶ್ರಮ ಧರ್ಮ ರಕ್ಷಣೆಯನ್ನು ಹೆಮ್ಮೆಯಿಂದ ಮಾಡಿದರು. ವರ್ಣಾಶ್ರಮ ಧರ್ಮದಿಂದ ಅಸಂಖ್ಯಾತ ಉಪಜಾತಿಗಳು ಉಂಟಾದವು. ಈ ಉಪಜಾತಿಗಳಲ್ಲಿ ಎಡಗೈಯವರೆಂದೂ, ಬಲಗೈಯವರೆಂದೂ ಗುಂಪುಗಳಾದವು. ಅವರವರ ನಡವಳಿಕೆಗಳ ಆಧಾರದ ಮೇಲೆ ಮೇಲು–ಕೀಳು ಜಾತಿಗಳು ಉಂಟಾದವು. ಸಮಾಜದಲ್ಲಿ ಬ್ರಾಹ್ಮಣರು ಅತ್ಯಂತ ಹೆಚ್ಚಿನ ಗೌರವ ಭಾಜನರಾದರು. ಅವರೇ ಪಂಡಿತರು–ಬ್ರಾಹ್ಮಣರಿಗೆ ಮರಣ ದಂಡನೆ ವಿಧಿಸುವಂತಿರಲಿಲ್ಲ. ಅವರಿಗೆ ರಾಜಕೀಯದಲ್ಲಿ ಅನೇಕ ಅನುಕೂಲಗಳಿದ್ದವು ಎಂದು ಬಾರ್ಬೋಸಾ[1] ಬರೆದಿರುವನು. ಜನರ ಕಸಬು ಮತ್ತು ವ್ಯವಹಾರದ ಮೇಲೆ ಜಾತಿಗಳಾದವು. ಆದ್ದರಿಂದ ಪ್ರತಿಯೊಂದು ಹಳ್ಳಿ, ಪಟ್ಟಣ, ನಗರದಲ್ಲಿ ಅನೇಕ ಸಮುದಾಯಗಳಾದವು[2] ಜಾತಿಯ ಆಧಾರದ ವಠಾರಗಳು, ಕೇರಿಗಳೂ ಆದವು. ಪ್ರಜೆಗಳು ತೆರಿಗೆ ವಿಚಾರದಲ್ಲಿ ಮತ್ತಿತರ ವಿವಾದಗಳಲ್ಲಿ ಸಾಮ್ರಾಟರಿಗೆ ತಮ್ಮ ತಮ್ಮ ಸಮುದಾಯದ ಪರವಾಗಿ ಬಿನ್ನಹ ಮಾಡುತ್ತಿದ್ದರು.[3]

**ಸ್ತ್ರೀಯರ ಸ್ಥಾನ–ಮಾನ :** ಕೆಲ ಪಂಡಿತರು ಆ ಕಾಲದಲ್ಲಿ ಸ್ತ್ರೀಯರನ್ನು ಕೇವಲ ಭೋಗವಸ್ತುವೆಂದು ತಿಳಿಯುತ್ತಿದ್ದರೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ನಾವು ಸಾಮಾಜಿಕ ವ್ಯವಸ್ಥೆ ಮತ್ತು ಪ್ರಬಂಧ ಕಾವ್ಯಗಳ ಮುಖಾಂತರ ನೋಡಿದರೆ, ವಿದೇಶೀಯರ ವರದಿಗಳನ್ನು ಪರಿಶೀಲಿಸಿದರೆ ನಮಗೆ ಮತ್ತೊಂದು ಚಿತ್ರ ಕಾಣುತ್ತದೆ. ಈ ಪ್ರಬಂಧ ಕಾವ್ಯಗಳಲ್ಲಿ ಸಮಾಜದ ಮೇಲ್‌ಸ್ತರದವರ ಅಥವಾ ರಾಜಕುಟುಂಬದವರ ವೈಭವದ ಜೀವನ ಮತ್ತು ಶ್ರೀಮಂತರ ಭೋಗ ಜೀವನದ ಚಿತ್ರಣಗಳು ಸಿಗುತ್ತವೆ. ಆವರೆಗೆ ಇರದಿದ್ದ **ಅಮ್ಮನ ಗುಡಿಯು** ವಿಜಯನಗರದ ಕಾಲದಲ್ಲಿ ಆವಿರ್ಭವಿಸಿದ್ದನ್ನು ನೋಡಿದರೆ ಸ್ತ್ರೀಯರಿಗೆ

ಸಮಾನ ಗೌರವವಿತ್ತೆಂದು ಅನಿಸುತ್ತದೆ. ಸ್ತ್ರೀಯರು ಗಂಡಂದಿರೊಂದಿಗೆ ಎಲ್ಲೆಡೆ ಹೋಗುತ್ತಿದ್ದರು. ಯುದ್ಧಭೂಮಿಗೂ ಅವರು ತೆರಳುತ್ತಿದ್ದರು.[4] ಸ್ತ್ರೀಯರು ಮಣಿಗಳನ್ನು ಪೋಣಿಸುವ ದಾರದಂತಿರುವ ಪತಿಯನ್ನು ಅಪೇಕ್ಷಿಸುತ್ತಿದ್ದರು.[5] ಅದರಂತೆ ಗಂಡಸರು ಮೃದು ಸ್ವಭಾವದ ಸನ್ನಡತೆಯ ಹೆಂಡತಿಯನ್ನು ಬಯಸುತ್ತಿದ್ದರು.[6] ಸ್ತ್ರೀಯರಿಗೆ ಸಣ್ಣ ವಯಸ್ಸಿನಿಂದಲೂ ಹಿಂದೂ ಸಂಪ್ರದಾಯದಂತೆ, ಪತಿಗೆ ಅತ್ಯಂತಿಕ ಗೌರವ ತೋರುವುದನ್ನು, ಸೇವಿಸುವುದನ್ನು, ಪತಿಯೇ ಪರದೈವವೆಂದು ತಿಳಿಯಲು ಉಪದೇಶಿಸುತ್ತಿದ್ದರು. ಅದರಿಂದ ಕೌಟುಂಬಿಕ ಭದ್ರತೆ, ಶಾಂತಿ ಮತ್ತು ಸಂತೋಷ ತುಂಬಿದ ಜೀವನ ಸಾಧ್ಯವಾಗುತ್ತಿತ್ತು. ಈ ಕಾಲದ **ತಸ್ಕರ ಕವಿರಾಜು** ಎಂಬ ಕವಿಯು ತನ್ನ ಪ್ರಭುವು ಕೋಟಾ ಸಿಂಗರಾಜನು ಆತನ ಉದಾತ್ತ ಪತ್ನಿ ಗಂಗಮಾಂಬಳಿಂದ ಲೋಕ ಪ್ರಸಿದ್ಧನಾದನೆಂದು ಬರೆದಿರುವನು.[7]

ಸತಿ ಸಹಗಮನ ಪದ್ಧತಿಯು ಆಚರಣೆಯಲ್ಲಿತ್ತೆಂದು ಬಾರ್ಬೊಸಾ ಬರೆದಿರುವನು. ಹೆಂಗಸರು ತಮ್ಮ ಮದುವೆಯಾದ ನಂತರ ತಮ್ಮ ಪತಿಯ ಜೀವನ ಭಾಗಸ್ವಾಮಿನಿಯಾಗುತ್ತೇವೆ. ಅವರು ತಮ್ಮ ಅಸ್ತಿತ್ವವನ್ನು ಪತಿಯ ಜೀವನದಲ್ಲಿ ಕಂಡರು. ಅಂತಹ ಪತಿಯೇ ಇಲ್ಲದ ಮೇಲೆ ಬದುಕು ನಿರರ್ಥಕ ; ಜೀವಿಸುವುದು ಅನವಶ್ಯಕವೆಂದು ತಿಳಿಯುತ್ತಿದ್ದರು. ಬಾರ್ಬೊಸಾ ಪ್ರಕಾರ ಉತ್ತಮ ಕಾಲದ ಸ್ತ್ರೀಯರು **ಪತಿಯ ಶವದೊಂದಿಗೇ ಸಹಗಮನ ಮಾಡುತ್ತಿರಲಿಲ್ಲ**. ಆದರೆ **ಪತಿಯ ಉತ್ತರ ಕರ್ಮಗಳೆಲ್ಲಾ ಪೂರ್ತಿಯಾದ ನಂತರ ಅವರು ಪ್ರತ್ಯೇಕವಾಗಿ ಚಿತೆಯೇರುತ್ತಿದ್ದರಂತೆ**. ಅಂಥವರು ಚಿತೆಯೇರುವ ಮುನ್ನ ನೆರೆದವರಿಗೆ ಈ ರೀತಿ ತಿಳಿಸುತ್ತಿದ್ದರಂತೆ "ಶಾಸ್ತ್ರಗಳ ಪ್ರಕಾರ ನಾನು ಸಹಗಮನ ಮಾಡಬೇಕಾಗಿಲ್ಲ. ಆದರೆ ನನಗೆ ನನ್ನ ಪತಿಯ ಮೇಲಿದ್ದ ಪ್ರೀತಿಯಸಲುವಾಗಿ ಸಹಗಮನ ಮಾಡುತ್ತಿದ್ದೇನೆ." ಆದ್ದರಿಂದ ಆಗ ಸಹಗಮನವು ಕಡ್ಡಾಯವಾಗಿರಲಿಲ್ಲ ಎಂದು ತಿಳಿಯುತ್ತದೆ. ಕೆಲ ಸಂದರ್ಭಗಳಲ್ಲಿ ದಿವಂಗತನಾದ ಮನುಷ್ಯನ ಕೀರ್ತಿ ಪ್ರತಿಷ್ಠೆಗಾಗಿ ಒತ್ತಾಯದಿಂದ ಸಹಗಮನ ನಡೆಯುತ್ತಿತ್ತು. ಕೆಲಸಂದರ್ಭಗಳಲ್ಲಿ ಪತಿಯ ಮರಣಾನಂತರ ದೀನ ಅವಸ್ಥೆಯಲ್ಲಿ ಬದುಕಿ ವ್ಯರ್ಥ ಬದುಕುವುದಕ್ಕಿಂತ ಪತಿಯೊಂದಿಗೆ ಸುಟ್ಟು ಭಸ್ಮವಾಗುವುದೇ ಮೇಲೆಂದು ಭಾವಿಸುತ್ತಿದ್ದರು. ಬ್ರಾಹ್ಮಣರಲ್ಲಿ ವಿಧವೆಯರಿಗೆ ಸತಿ ಹೋಗದಿದ್ದರೆ, ಮುಂಡನ ಮಾಡಿಸುತ್ತಿದ್ದರು. ಅವಳ ದರ್ಶನವೇ ಅಪಶಕುನವೆಂದು ಭಾವಿಸುತ್ತಿದ್ದರು.[8]

**ಲಿಂಗಾಯತ ಮತ್ತು ಗೌಡ** ಸಮುದಾಯಗಳಲ್ಲಿ ಸತಿ ಹೋಗುವ ಪದ್ಧತಿ ಬೇರೆ ರೀತಿಯಲ್ಲಿತ್ತು. ಅವರನ್ನು **ಗಂಡನ ಶವದೊಂದಿಗೆ ಭೂಸಮಾಧಿ ಮಾಡಲಾಗುತ್ತಿತ್ತು**. ಕ್ರಿ.ಶ. 1509ರ ಶಾಸನ[9]ದಲ್ಲಿ ಹರಾರು ಚಾವುಂಡಗೌಡನ ಮಗ ಬೊಮ್ಮೆಗೌಡನು ಸ್ವರ್ಗಸ್ಥನಾದಾಗ, ಆತನ ಪತ್ನಿ ಬೊಮ್ಮಿಗೌಡಿ, ಸಮಾಧಿಯಲ್ಲಿ ಕುಳಿತು ಸ್ವರ್ಗಕ್ಕೆ ಹೋದಳು. ಬಾರ್ಬೊಸಾ ಲಿಂಗಾಯತರಲ್ಲಿ ಪತಿಯೊಂದಿಗೆ ಸತಿಯನ್ನು ಜೀವಂತ ಸಮಾಧಿ ಮಾಡಿದ ಪ್ರಸಂಗವನ್ನು ಬರೆದಿದ್ದಾನೆ.[10]

ಹುಡುಗಿಯರು ಬಾಲ್ಯದಲ್ಲಿಯೇ ಹಾಡಲೂ, ನರ್ತಿಸಲೂ, ನಟಿಸಲೂ ಕಲಿಯುತ್ತಿದ್ದರೆಂದು ಬಾರ್ಬೊಸಾ ತಿಳಿಸುತ್ತಾನೆ.[11] ಹಿರಿಯ ಹೆಂಗಸರು ಪ್ರತಿದಿನ



ಮನೆಯಲ್ಲಿ ರಾಮಾಯಣ, ಮಹಾಭಾರತ ಮತ್ತು ಪುರಾಣಗಳ ಶ್ರವಣ, ಪಠಣ ಮಾಡುತ್ತಿದ್ದರು.[12]

**ಮದುವೆ ಅಥವಾ ಕಲ್ಯಾಣ ಸಂಸ್ಕೃತಿ :** ಹಿಂದೂ ಧರ್ಮಶಾಸ್ತ್ರಗಳಲ್ಲಿ ಎಂಟು ವಿಧದ ಮದುವೆಗಳನ್ನು ಹೇಳಲಾಗಿದೆ. ಅವೆಂದರೆ ಬ್ರಹ್ಮ, ದೈವ, ಪ್ರಜಾಪತಿ, ಆರ್ಷ, ಗಾಂಧಾರ, ಅಸುರ, ಪೈಶಾಚ ಮತ್ತು ರಾಕ್ಷಸ ರೀತಿಯ ಎಂಟು ವಿಧಗಳು, ಕಾಲಾನುಕ್ರಮೇಣ ಈ ಪದ್ಧತಿಗಳನ್ನು ಜನರು ತಿರಸ್ಕರಿಸಿದರು. ವಿಜಯನಗರದ ಇತಿಹಾಸದ ಆಕರಗಳಲ್ಲಿ ಅತ್ಯಂತ ಜನಪ್ರಿಯ ಮತ್ತು ಶ್ರೇಷ್ಠ ಪದ್ಧತಿಯೆಂದು **ಕನ್ಯಾದಾನ ವಿವಾಹ**ವನ್ನು ಸ್ವೀಕರಿಸಿದ್ದರು.

ಕನ್ಯಾದಾನ ಪದ್ಧತಿಯ ಪ್ರಕಾರ ಕನ್ಯಾಪಿತೃವು ಉತ್ತಮನಾದ ವರನಿಗೆ ಕನ್ಯೆಯನ್ನು ದಾನವಾಗಿ ನೀಡಬೇಕು. ಪ್ರತಿಯಾಗಿ ಏನನ್ನೂ ಅಪೇಕ್ಷಿಸಬಾರದು. ಆದರೆ ಅದು ಎಂತೋ ಏನೋ **ವರದಕ್ಷಿಣೆ** ಯ ಪದ್ಧತಿಯು ವಿಜಯನಗರ ಕಾಲದಲ್ಲಿ ಮದುವೆಯ ಪ್ರಮುಖ ಭಾಗವಾಗಿ ಸೇರಿಕೊಂಡಿತು. ಆಗ ಕನ್ಯಾಪಿತೃವು ಮದುವೆ ಮಾಡಿಕೊಡುತ್ತಾ, ವರದಕ್ಷಿಣೆ ಕೊಡುತ್ತಾ, ಸರಕಾರಕ್ಕೆ ಮದುವೆ ತೆರಿಗೆಯನ್ನೂ ನೀಡಬೇಕಾಗಿತ್ತು.

ಅಂದಿನ ಸಾಮಾಜಿಕ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಕೆಲ ಮಾಹಿತಿಗಳು ಲಭಿಸಿವೆ. ಪೋರ್ತುಗೀಸ್ ವ್ಯಾಪಾರಿಗಳಾದ **ಡಾಮಿಂಗೊ ಪೇಸ್, ಫರ್ನಾವೋ ನೂನಿಜ್, ಫಾದರ್ ಲುಯಿಜ್ ಮತ್ತು ಪರ್ಶಿಯದ ಫರಿಷ್ತಾನ** ವರದಿಗಳು, ಸಮಕಾಲೀನ ಸಾಹಿತ್ಯಕೃತಿಗಳಾದ **ಕ್ರೀಡಾಭಿರಾಮಮು, ಆಮುಕ್ತಮಾಲ್ಯದಾ, ವಿಷ್ಣು ಪುರಾಣಮು, ಉದ್ಭಟಾರಾಧ್ಯ ಚರಿತ್ರಮು, ಮೊಲ್ಲರಾಮಾಯಣಮು** ಮುಂತಾದ ಕಾವ್ಯಗಳಿಂದ ಸಾಮಾಜಿಕ ಪದ್ಧತಿಗಳು ಮತ್ತು ನಡವಳಿಕೆಗಳ ಬಗ್ಗೆ ಮಾಹಿತಿ ಸಿಗುತ್ತದೆ. ಈ ವಿಷಯದಲ್ಲಿ ಮಾಹಿತಿ ನೀಡುವ ಕೆಲವೇ ಶಾಸನಗಳಿವೆ.

ಆಗಲೂ ಕನ್ಯೆಯ ಮಾತಾಪಿತರು ಸೂಕ್ತ ವರನನ್ನು ಹುಡುಕಿ ತಮ್ಮ ಮನೆಯಲ್ಲಿಯೇ ಕನ್ಯಾದಾನವನ್ನು ನೆರವೇರಿಸಬೇಕಾಗಿತ್ತು. ಬ್ರಾಹ್ಮಣರಲ್ಲಿ ಬಾಲ್ಯವಿವಾಹ ಸಾಮಾನ್ಯವಾಗಿತ್ತು. ಬ್ರಾಹ್ಮಣರು ಪುರಾತನ ಶಾಸ್ತ್ರಗಳ ಪ್ರಕಾರ ತಮ್ಮ ಮಕ್ಕಳಿಗೆ ಎಳೆಯ ವಯಸ್ಸಿನಲ್ಲೇ ಮದುವೆ ಮಾಡುತ್ತಿದ್ದರು. **"ವಿಷ್ಣು ಪುರಾಣ"ವನ್ನು ರಚಿಸಿದ ವೆನ್ನೆಲಕಂಟಿ ಸೂರನ** ಪ್ರಕಾರ ವರನ ಪ್ರಾಯದ 1/3 ಭಾಗದ ವಯಸ್ಸಿನ ಕನ್ಯೆಯನ್ನು ವಿವಾಹಕ್ಕೆ ಆಯಬೇಕು. ಅಂದರೆ ವರನಿಗೆ 24 ವರ್ಷವಾದರೆ ಕನ್ಯೆಗೆ 8 ವರ್ಷ ಇರಬೇಕು. ಗೋವೆಗೆ ಬಂದಿದ್ದ **ಲಿಂಗೋಟೆನ್** (Linghoten) ಎಂಬ ವಿದೇಶಿ ಪ್ರವಾಸಿಯು ಗೋವಾ ಬ್ರಾಹ್ಮಣರ ಬಗ್ಗೆ ಹೀಗೆ ತಿಳಿಸುತ್ತಾನೆ. "ಕನ್ಯೆಯು ಏಳುವರ್ಷದವಳಿರುವಾಗ, ವರನು 9 ವರ್ಷದವನಿರುವಾಗ, ಮದುವೆಯಾದರೂ ಕನ್ಯೆಯು ಮಕ್ಕಳನ್ನು ಹೆರುವಷ್ಟು ಯೋಗ್ಯ ವಯಸ್ಕಳಾಗುವವರೆಗೆ ಅವರು ಒಂದಾಗಿ ಬಾಳುವುದಿಲ್ಲ." ಮಹಮ್ಮದೀಯ ಇತಿಹಾಸಕಾರನಾದ ಫರಿಷ್ತಾ ಒಂದು ಸಂಗತಿಯನ್ನು ತಿಳಿಸುತ್ತಾನೆ. "ಮುದ್ಗಲ್ಲಿನ ಅಕ್ಕಸಾಲಿಗನೊಬ್ಬನ ಮಗಳು ಲಾವಣ್ಯವತಿ ನೇಹಾಲ್ ಅವಳನ್ನು ಅವಳ ಕುಲದ ಹುಡುಗನಿಗೆ ಬಾಲ್ಯದಲ್ಲಿಯೇ ಮದುವೆ ಮಾಡಿಕೊಡಲಾಗಿತ್ತು. ಅಂದಿನ ಹಿಂದೂ ಸಂಪ್ರದಾಯದಂತೆ ಇದರಂತೆ ಬ್ರಾಹ್ಮಣರನ್ನು ಅನುಸರಿಸಿ ಇನ್ನು ಕೆಲ ಜಾತಿಯವರು

ಸಾಮಾನ್ಯವಾಗಿ ಹುಡುಗಿ ಪುಷ್ಪವತಿಯಾದ ನಂತರ ಮದುವೆ ಮಾಡುತ್ತಿದ್ದರು.

ವಿಜಯನಗರ ಕಾಲದಲ್ಲಿ ಮದುವೆ ವ್ಯವಸ್ಥೆಯಲ್ಲಿ ದೊಡ್ಡ ಸಮಸ್ಯೆಯಾಗಿದ್ದು **ಕನ್ಯಾಶುಲ್ಕ** ಕನ್ಯಾಪಿತನಿಗೆ ವರನ ಕುಟುಂಬದವರು ಕನ್ಯಾದಾನ ಮಾಡಲು ಹಣ ಅಥವಾ ವಸ್ತುರೂಪದಲ್ಲಿ ಕನ್ಯಾಶುಲ್ಕ ತೆರಬೇಕಾಗಿತ್ತು. ಈ ಪದ್ಧತಿಯು ಪುರಾತನ ಕಾಲದಲ್ಲಿ **'ಅಸುರಾ'** ಪದ್ಧತಿಯ ವಿವಾಹದಲ್ಲಿ ಪ್ರಚಲಿತವಿತ್ತು. ಮನುಧರ್ಮಶಾಸ್ತ್ರದಲ್ಲಿ ಕನ್ಯಾಶುಲ್ಕವನ್ನು ಟೀಕಿಸಲಾಗಿದೆ. "ಶಾಸ್ತ್ರಗಳನ್ನು ಬಲ್ಲಯಾವುದೇ ತಂದೆಯು ಮಗಳನ್ನು ಮದುವೆ ಮಾಡಿಕೊಡಲು ಯಾವುದೇ ಉಪಕಾರ ಸ್ವೀಕರಿಸುವುದಿಲ್ಲ–ದುರಾಸೆಯಿಂದ ಯಾವುದೇ ಕನ್ಯಾಪಿತೃವು ಕನ್ಯಾಶುಲ್ಕ ಪಡೆದರೆ ಮಗಳನ್ನು ಮಾರಿದಂತೆ ಆಗುತ್ತದೆ. 'ಆರ್ಷ' ಪದ್ಧತಿಯಲ್ಲಿ ಕನ್ಯಾಪಿತನಿಗೆ ಗೋವನ್ನಾಗಲೀ, ಎತ್ತುಗಳನ್ನಾಗಲೀ ನೀಡುತ್ತಿದ್ದರು. ಅದೂ ಸರಿಯಲ್ಲ. ಅದು ಸಂಭಾವನೆಯಲ್ಲ. ಆದರೆ ಹಣದ ರೂಪದಲ್ಲಿ ಎಷ್ಟೇ ಸ್ವೀಕರಿಸಿದರೂ ಅದೂ ಮಗಳ ಮಾರಾಟ ಎನಿಸುತ್ತದೆ. ಈ ರೀತಿಯಲ್ಲಿ ಶಾಸ್ತ್ರ ವಿರೋಧವಾದರೂ ವಿಜಯನಗರ ಕಾಲದಲ್ಲಿ **ಕನ್ಯಾಶುಲ್ಕ** ಪದ್ಧತಿಯು ಎಲ್ಲಾ ಕಡೆ ವಾಡಿಕೆಯಲ್ಲಿತ್ತು. ಕನ್ಯಾಶುಲ್ಕ ಪದ್ಧತಿಯ ವಿಪರೀತಕ್ಕೆ ತಲುಪಿದಾಗ ಈ ದುಷ್ಟ ಪದ್ಧತಿಯ ರದ್ದತಿಗಾಗಿ ಸಾಮ್ರಾಟನಿಗೆ ದೂರು ನೀಡಲಾಯಿತು. ಆ ಕಾಲದಲ್ಲಿ ಈ ರೀತಿಯ ಸಂಪ್ರದಾಯಗಳು ಹೊರೆಯಾದಾಗ, ಅದರಿಂದ ತೊಂದರೆಯಾದಾಗ, ಗ್ರಾಮ ಅಥವಾ ನಾಡಿನ ಮಟ್ಟದಲ್ಲಿ ಜನರು ಸಭೆ ಸೇರಿ, ವ್ಯವಸ್ಥೆಯನ್ನು ನಿಯಂತ್ರಿಸಲು, ರದ್ದು ಮಾಡಲು ತಕ್ಕ ನಿಯಮಗಳನ್ನು ರೂಪಿಸುತ್ತಿದ್ದರು. ಅದನ್ನು ಮೀರುವವರು ಜಾತಿಯಿಂದ ಬಹಿಷ್ಕರಿಸ ಲ್ಪಡುತ್ತಿದ್ದರು. ಸಾಮ್ರಾಟರಿಂದ ಶಿಕ್ಷೆಗೆ ಗುರಿಯಾಗುತ್ತಿದ್ದರು. ಸರಕಾರವು ಜನರು ಮಾಡಿದ ತೀರ್ಮಾನಗಳನ್ನು ಜಾರಿಗೆ ತರಲು ಬದ್ಧವಾಗಿತ್ತು.

ವಿಜಯನಗರದ **ಪಡೈವೀಡುರಾಜ್ಯ** ದ ಕ್ರಿ.ಶ. 1424ರ ಶಾಸನವೊಂದು ಹೀಗೆ ತಿಳಿಸುತ್ತದೆ. ಸಕಲಶಾಸ್ತ್ರ ವಿಶಾರದರೆಲ್ಲಾ ಸೇರಿ ಅರ್ಕಪುಷ್ಕರಿಣಿಯ ಗೋಪಿನಾಥ ದೇವರ ಸಮಕ್ಷಮದಲ್ಲಿ ಈ ರೀತಿ ತೀರ್ಮಾನ ಮಾಡಿದರು.

"ಪಡೈವೀಡು ರಾಜ್ಯದ ಕನ್ನಡ, ತಮಿಳು, ತೆಲುಗು, ಇಲಲ ಮುಂತಾದ ಎಲ್ಲ ಗೋತ್ರದ, ಸೂತ್ರದ, ಶಾಖೆಗಳ ಬ್ರಾಹ್ಮಣರು ಇನ್ನು ಮೇಲೆ ವಿವಾಹಗಳನ್ನು **ಕನ್ಯಾದಾನ** ಪದ್ಧತಿಯಲ್ಲಿಯೇ ಜರುಗಿಸಬೇಕೆಂದು ತೀರ್ಮಾನಿಸಿದರು. ಕನ್ಯಾದಾನ ಪದ್ಧತಿಯನ್ನು ತಿರಸ್ಕರಿಸಿ ಕನ್ಯೆಯನ್ನು ಕೊಡುವ ಮೊದಲೇ ಸುವರ್ಣಾದಿಗಳನ್ನು ನೀಡಿದ ಬ್ರಾಹ್ಮಣರು ಜಾತಿಯಿಂದ ಬಹಿಷ್ಕೃತರಾಗುತ್ತಾರೆ ಅಲ್ಲದೇ ಸಾಮ್ರಾಟನ ಶಿಕ್ಷೆಗೆ ಗುರಿಯಾಗುತ್ತಾರೆ.

ಈ ಪತ್ರಕ್ಕೆ ಎಲ್ಲ ಶಾಖೆಯ ಬ್ರಾಹ್ಮಣರು ಹಸ್ತಾಕ್ಷರ ಹಾಕಿದರು. ಸದಾಶಿವದೇವರಾಯನ ಕಾಲದ ಇನ್ನೆರಡು ಶಾಸನಗಳು ಇಂತಹ ಜಾತಿ ಸಮುದಾಯಗಳು ತೀರ್ಮಾನಿಸಿದ ವಿಷಯಗಳನ್ನು ತಿಳಿಸುತ್ತವೆ.

ಕನ್ಯಾಶುಲ್ಕವಲ್ಲದೇ **ವರಕಟ್ನಂ** ಪದ್ಧತಿಯೂ ಇತ್ತು. ಇದನ್ನು ಸ್ತ್ರೀಧನ ಎಂದು



ಕರೆಯಲಾಗುತ್ತಿತ್ತು. ಉತ್ತಮ ಪರಿಸ್ಥಿತಿಯಲ್ಲಿರುವ ಅರಸುಮನೆತನದ, ನಾಯಂಕಾರರೂ, ಶ್ರೀಮಂತರೂ ವರಕಟ್ನವೆಂದು ಪ್ರಾಂತಗಳನ್ನು, ಗ್ರಾಮಗಳನ್ನು, ಭೂಮಿಗಳನ್ನು, ಗಜತುರಗಗಳನ್ನು, ಸುಂದರಿಯರನ್ನು ಮತ್ತಿತರ ವೈಭೋಗದ ವಸ್ತುಗಳನ್ನು ವರಕಟ್ನವೆಂದು ನೀಡುತ್ತಿದ್ದರು. ಪಾರಿಜಾತಾಪಹರಣಮು ಕವಿ ಮುಕ್ಕುತಿಮ್ಮನನು – ಕೃಷ್ಣದೇವರಾಯನು ತಿರುಮಲದೇವಿಯನ್ನು ವರಿಸಿದಾಗ ಅವರ ಮಾವನು **ಆರಣ ಅಥವಾ ವರಕಟ್ನ**ದ ಭಾಗವಾಗಿ ನೀಡಿದ್ದನಂತೆ.

ಕ್ರಿ.ಶ. 1379ರ ಶಾಸನದಲ್ಲಿ ನಂಬಿ ಇರವಿ ಸೆಟ್ಟಿಯರ್ ಎಂಬಾತನು ತನ್ನ ಮಗಳ ಮಕ್ಕಳಾದ ಇರವಿಯಣ್ಣನ್, ಕೇಶವ ಸೆಟ್ಟಿಯಾರ್ ಮತ್ತಿತರರಿಗೆ ವರಕಟ್ನವೆಂದು ಪುಳ್ಳಿಯೂರು ನಾಡಿನ 1/3 ಭಾಗವಾದ **ಪಂಗಪಲ್ಲಿ**ಯನ್ನು ನೀಡಿದ ವಿವರವಿದೆ. ಈ ವರಕಟ್ನ ಅಥವಾ ಸ್ತ್ರೀಧನ ಪದ್ಧತಿಯು ಮಧ್ಯಮ ವರ್ಗದ ಜನರಿಗೆ ಅದೂ ಬ್ರಾಹ್ಮಣೇತರರಿಗೆ ತುಂಬಾ ಕಷ್ಟಕರವಾಯಿತು. ಅವರೆಲ್ಲಾ ಸೇರಿ ಹೊರಗಿನವರಿಗೆ ಭೂಮಿನೀಡಬಾರದೆಂದು ತೀರ್ಮಾನ ಮಾಡಿದರು. ಇದರಿಂದ ವರಕಟ್ನ ಅಥವಾ ಸ್ತ್ರೀಧನ ನೀಡುವುದನ್ನು ನಿಯಂತ್ರಿಸಬಹುದೆಂದು ಭಾವಿಸಿದರು. ಆದರೆ ಇದರಿಂದ ವರಕಟ್ನದ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ಶಾಸನಗಳು ತಿಳಿಸುತ್ತವೆ. ಕ್ರಿ.ಶ. 1404ರ ಶಾಸನದ ಮಾಹಿತಿ ಹೀಗಿದೆ. ವಿಠ್ಠಪ್ಪ ಎಂಬುವವರು ಕಂದವಳ್ಳಿ ಗ್ರಾಮವಾನ್ನು ಮತ್ತಿತರ ಭೂಮಿಗಳೊಂದಿಗೆ **ಮದುವೆಯ ಸಲುವಾಗಿ** ಮಾರಾಟ ಮಾಡಿದನು. ಕ್ರಿ.ಶ. 1424ರ ಮತ್ತೊಂದು ಶಾಸನದ ಮಾಹಿತಿ ಹೀಗಿದೆ. ಆಳ್ವ ಪ್ರಭು ಬೊಮ್ಮಯಕ್ಕ ಹೆಗ್ಗಡಿತಿಯು ಕೆಲಭೂಮಿಗಳನ್ನು ದೇವಪ್ಪಣ್ಣ ಅಯ್ಯನ ಮಗ ಬೋವಣ್ಣ ಅಯ್ಯನಿಗೆ ಮದುವೆಯ ಸಲುವಾಗಿ ಮಾರಿದನು. ಅವರು ಭೂಮಿಗಳನ್ನು ಸ್ತ್ರೀಧನವೆಂದು ಕೊಡಲು ನಿಷೇಧವಿದ್ದುದರಿಂದ ಮಾರಿದರೋ, ಅಥವಾ ಕನ್ಯಾಶುಲ್ಕ ಅಥವಾ ವರಕಟ್ನದ ಸಲುವಾಗಿಯೋ ಅಥವಾ ಮದುವೆ ತೆರಿಗೆ ಕಟ್ಟಲು ಮಾರಿದರೋ ತಿಳಿಯದು.

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಲ್ಲಿ **'ಒಳಿ'** ಎಂಬ ಪದ್ಧತಿ ಇತ್ತು. ಅದು ಕನ್ಯಾಶುಲ್ಕದ ಮತ್ತೊಂದು ಮಾದರಿ. ವರನ ತಂದೆ–ತಾಯಿಯು ಮದುವೆಯಲ್ಲಿ ವಧುವಿನ ತಂದೆಗೆ ನಗದಾಗಿಯೋ, ವಸ್ತುರೂಪದಲ್ಲಿಯೇ ಏನಾದರೂ ಕೊಡಲೇ ಬೇಕಾಗಿತ್ತು. ಈ ಪದ್ಧತಿಯನ್ನು ರದ್ದುಪಡಿಸಲು ಈ ಜನಾಂಗಗಳವರೂ ಸಾಕಷ್ಟು ಹೋರಾಡಿದ ಸಾಕ್ಷಿ ಇದೆ. ಕ್ರಿ. ಶ. 1553ರ ಶಾಸನದ ಮಾಹಿತಿಯೆಂದರೆ ಕೊಂಡಪಲ್ಲಿ ಮತ್ತು ರಾಜಮಹೇಂದ್ರಪುರದ ಪ್ರಜೆಗಳು ತಮ್ಮತಮ್ಮಲ್ಲಿಯೇ ಒಂದು ಒಪ್ಪಂದ ಮಾಡಿಕೊಂಡರು. ಮೊದಲ ಮದುವೆಯ ಸಂದರ್ಭದಲ್ಲಿ 21 ಚಿನ್ನ ? ಬಂಗಾರವನ್ನು **'ಒಳಿ'** ಮರ್ಯಾದೆಯಾಗಿ ಕೊಡಬೇಕು. ವರನ ಕಡೆಯವರು 12 $^1/_2$ ಬೆಳ್ಳಿಯನ್ನು ಕೊಡಬೇಕು ಕನ್ಯಾದಾತರು 20 $^1/_2$ (?) ಬಂಗಾರ ಕೊಡಬೇಕು. ಕನ್ಯಾಪಿತೃವಿಗೆ 'ಆರಣ' ಕೊಡುವುದನ್ನು ತಪ್ಪಿಸಲು ಈ ವ್ಯವಸ್ಥೆ ಮಾಡಿರಬಹುದು.

ಮದುವೆಯ ಸಂದರ್ಭದಲ್ಲಿ ಯಾರಾದರೂ ಒಬ್ಬರು ಕನ್ಯಾಶುಲ್ಕ ಅಥವಾ ವರಕಟ್ನಂ

ಪದ್ಧತಿಯಿಂದ ಕಷ್ಟಕ್ಕೆ ಗುರಿಯಾಗುತ್ತಿದ್ದರು[13] ಇದಲ್ಲದೇ ಸರಕಾರಕ್ಕೆ ಕೊಡಬೇಕಾದ ಮದುವೆ ತೆರಿಗೆಯು ದೊಡ್ಡ ಹೊರೆಯಾಗಿತ್ತು. ಮದುವೆ ತೆರಿಗೆಯನ್ನು ಎಲ್ಲಾ ವರ್ಗದ ಜನರು ಮದುವೆಯ ಕಾಲಕ್ಕೆ ಸಲ್ಲಿಸಲೇಬೇಕಾಗಿತ್ತು. ಈ ತೆರಿಗೆಯನ್ನು ಎರಡೂ ಕಡೆಯವರು ಕಟ್ಟಬೇಕಾಗಿತ್ತು. ಮದುವೆಯ ತೆರಿಗೆ ಉಲ್ಲೇಖವಿರುವ ಅನೇಕ ಶಾಸನಗಳಿವೆ. ಆದರೆ ಯಾವ ಶಾಸನದಲ್ಲೂ ತೆರಿಗೆಯ ಪ್ರಮಾಣ ನಮೂದಾಗಿಲ್ಲ. ಮದುವೆಯ ಸಮಯದಲ್ಲಿ ರಾಜ್ಯಕ್ಕೆ ಸಲ್ಲಬೇಕಾದ ಉಳಿದ ತೆರಿಗೆಗಳನ್ನು ವಸೂಲು ಮಾಡುತ್ತಿದ್ದರು. ಮದುವೆ ಮಾಡುವವರು ಮದುವೆ ಪೆಂಡಾಲಿಗೆ, ಮೆರವಣಿಗೆಗೆ, ತೆರಿಗೆ ಕಟ್ಟಬೇಕಾಗಿತ್ತು. ಈ ತೆರಿಗೆಗಳನ್ನು ಕಟ್ಟಲಾರದ ಅನೇಕರು ಮುದುಕರಾಗುವವರೆಗೆ ಮದುವೆಯಾಗದೇ ಉಳಿಯುತ್ತಿದ್ದರು.

ಈ ತರಹದ ತೊಂದರೆಗಳಿಂದ ಮದುವೆಯಾಗುವುದು ಕಷ್ಟವಾಗಿ, ಬಾಲವಿವಾಹಗಳೂ, ಸೂಳೆಗಾರಿಕೆಯೂ ಹೆಚ್ಚಾದವು. ಕನ್ಯಾಶುಲ್ಕ ಅಥವಾ ಒಳಿ ಸಂಪ್ರದಾಯವಿದ್ದ ಜನ ಸಮುದಾಯಗಳು ತಮ್ಮ ಪುತ್ರಿಯರನ್ನು ಹೆಚ್ಚು ಕನ್ಯಾಶುಲ್ಕದ ಆಸೆಯಿಂದ ವೃದ್ಧರಿಗೂ, ವಿವಾಹಯೋಗ್ಯರಲ್ಲದವರಿಗೂ ಮದುವೆ ಮಾಡಿಕೊಡುತ್ತಿದ್ದರು. ಅವರೂ ತಮ್ಮ ಪುತ್ರರ ಮದುವೆಯ ಹೊರೆ ಹೊರಬೇಕಾಗಿತ್ತು.

ಈ ಮದುವೆಯ ಸಮಸ್ಯೆಗಳ ಪರಿಣಾಮವಾಗಿ ವೇಶ್ಯಾವೃತ್ತಿಗೆ ಅನುಕೂಲ ವಾತಾವರಣ ಸೃಷ್ಟಿಯಾಯಿತೇನೊ ? ಪುರಾತನ ಕಾಲದಲ್ಲೂ ಗಣಿಕಾವೃತ್ತಿ ಎಲ್ಲಕಡೆ ಇತ್ತು. ಆದರೆ ಈ ಕಾಲದಲ್ಲಿ ಸಮಾಜದಲ್ಲಿ ವೇಶ್ಯಾವೃತ್ತಿಗೆ ಹೆಚ್ಚು ಬೆಂಬಲ ದೊರೆಯಿತು. ಸಮಕಾಲೀನ ಸಾಹಿತ್ಯದ ಎಲ್ಲ ಕೃತಿಗಳಲ್ಲಿ ನಾವು **ವೇಶ್ಯಾವಾಟಿಕಾಗಳ** ವರ್ಣನೆಯನ್ನು ಕಾಣುತ್ತೇವೆ. ವಿದೇಶ ಪ್ರವಾಸಿ ಬಾರ್ಬೋಸಾ ವೇಶ್ಯೆಯರ ಶ್ರೀಮಂತಿಕೆಯ ಬಗ್ಗೆ ವರ್ಣಿಸಿದ್ದಾನೆ. "ಅವರಲ್ಲಿ ಕೆಲವರು ತುಂಬಾ ಶ್ರೀಮಂತರಿದ್ದಾರೆ. ಇತ್ತೀಚೆಗೆ ಮಡಿದ ಒಬ್ಬ ಶ್ರೀಮಂತ ವೇಶ್ಯೆಗೆ ಮಕ್ಕಳಿರಲಿಲ್ಲ. ಅವಳು ತನ್ನ ಸಮಸ್ತ ಆಸ್ತಿಯು ವಿಜಯನಗರ ಪ್ರಭುವಿಗೆ ಸೇರಬೇಕೆಂದು ಬರೆದಿದ್ದಳು. ಅವಳ ಆಸ್ತಿಯನ್ನು ಸ್ವಾಧೀನ ಪಡಿಸಿಕೊಂಡದ್ದು. 1 ಎಪ್ಪತ್ತು ಸಾವಿರ ವರಹ ನಗದು 2. ತನ್ನ ಪರಿಚಾರಿಕೆಯ ಹತ್ತಿರ ಭದ್ರಪಡಿಸಿದ್ದ ಮತ್ತೊಂದು ಹನ್ನೆರಡು ಸಾವಿರ ವರಹಗಳು. ಈ ರೀತಿಯ ಐಶ್ವರ್ಯ ಹೊಂದಿರುವ ಗಣಿಕೆಯರು ಪ್ರಪಂಚದಲ್ಲಿಯೇ ಅಪರೂಪ."

ಭಾರತದ ಮತ್ತು ಪರದೇಶದ ಲೇಖಕರ ಗಮನ ಸೆಳೆದ ವೇಶ್ಯಾವಾಟಿಕೆಯು ರಾಜ್ಯದೆಲ್ಲಾ ಕಡೆ ಅಸ್ತಿತ್ವದಲ್ಲಿತ್ತು. ಅಂದಿನ ಮದುವೆ ವ್ಯವಸ್ಥೆಯಲ್ಲಿದ್ದ ದೋಷಗಳೂ, ಅನಿವಾರ್ಯ ಒತ್ತಡಗಳೂ, ಆರ್ಥಿಕ ಹೊರೆಗಳೂ ವೇಶ್ಯಾವಾಟಿಕೆಗಳಿಗೆ ಉತ್ತೇಜನ ನೀಡಿರಬಹುದು. ಈ ವಿಷಯದಲ್ಲಿ ಸಾಮಾಜಿಕ ಪರಿಸ್ಥಿತಿಯನ್ನು ಈ ರೀತಿ ಸಂಕ್ಷೇಪಿಸಬಹುದು.

1. ಅನೇಕ ಗಂಡಸರು ಕನ್ಯಾಶುಲ್ಕ ಮತ್ತು ಮದುವೆ ತೆರಿಗೆಗಳ ಕಾರಣ ಅವಿವಾಹಿತರಾಗಿ ಉಳಿದರು.



2. ಕನ್ಯಾಶುಲ್ಕ ಅಥವಾ ಒಳಿ ಕನ್ಯೆಯರ ಬಾಲ್ಯವಿವಾಹಕ್ಕೆ ಬ್ರಾಹ್ಮಣರಲ್ಲಿ ತಡ ಮದುವೆಗೆ, ಇತರ ವರ್ಗದವರಿಗೂ, ವೃದ್ಧಾಪ್ಯ ಮದುವೆಗೂ ಕಾರಣವಾಯಿತು.
3. ಮಧ್ಯಮ ವರ್ಗದವರು **ವರಕಟ್ನ**ದ ಕಾರಣ ಹೆಣ್ಣು ಮಕ್ಕಳ ಮದುವೆ ದೊಡ್ಡ ಸಮಸ್ಯೆಯಾಯಿತು.
4. ಬಡವರುತಮ್ಮ ಕುಮಾರಿಯರನ್ನು ವೇಶ್ಯಾವಾಟಿಕೆಗಳಿಗೆ ಮಾರಿದರು ಅಥವಾ ಕೊಟ್ಟರು. ಅವರು ಲಲಿತ ಕಲೆಗಳಲ್ಲಿ ಪಳಗಿ ಪ್ರಸಿದ್ಧ ವೇಶ್ಯೆಯರಾದರು.
5. ವೇಶ್ಯೆಯರು ಸೇನಾಪತಿಗಳ ಪ್ರೀತಿಗೆ ಪಾತ್ರರಾಗಿ, ಗೌರವ ಪಡೆದು ಮರ್ಯಾದಸ್ಥ ವರ್ಗದಲ್ಲಿ ಎಣಿಸಲ್ಪಡುತ್ತಿದ್ದರು.
6. ಸದ್ಗೃಹಸ್ಥರು ಸೂಳೆಯರ ಮನೆಗೆ ಯಾವ ಹಿಂಜರಿಕೆಯಿಲ್ಲದೇ ಹೋಗುತ್ತಿದ್ದರು.

ಇದರಿಂದ ಸಮಾಜದಲ್ಲಿ ಸ್ತ್ರೀ ಪುರುಷರ ಜೀವನದಲ್ಲಿ ನೀತಿಯುತ ಜೀವನ ಮರೆಯಾಯಿತು. ನೇಲಟೂರು ವೆಂಕಟರಮಣಯ್ಯ ಹೇಳುತ್ತಾರೆ. "ಆ ಕಾಲದಲ್ಲಿ ಯಾರೇ ಆಗಲಿ ವೇಶ್ಯಾವೃತ್ತಿಗೆ ಸೇರಬಹುದಿತ್ತು. ಅದರಿಂದ ಅವರ ಗೌರವಕ್ಕೆ ಯಾವ ಧಕ್ಕೆ ಇರಲಿಲ್ಲ." ಸರಕಾರವು ವೇಶ್ಯಾವೃತ್ತಿಯನ್ನು ಗುರುತಿಸಿತ್ತು ಮತ್ತು ಅದನ್ನೊಂದು ವೃತ್ತಿಯೆಂದು ಪರಿಗಣಿಸಿ ಅವರಿಂದ ತೆರಿಗೆ ವಸೂಲು ಮಾಡುತ್ತಿತ್ತು.[14]

ಮದುವೆಯ ಸಂಸ್ಕೃತಿಯಲ್ಲಿದ್ದ ಕೆಟ್ಟ ಪದ್ಧತಿಗಳನ್ನು ಅಡಗಿಸಲು ಸರಕಾರದ ಪ್ರಯತ್ನಗಳು ತೀರಾ ಕಡಿಮೆ. ಸರಕಾರವು ಸಮಾಜದ ನಡತೆ ಮತ್ತು ಆಚರಣೆಗಳಲ್ಲಿ ಪ್ರವೇಶಿಸಲು ಇಚ್ಛಿಸಲಿಲ್ಲ. ಯಾವುದಾದರೂ ಪದ್ಧತಿಯಿಂದ ಸಮಾಜಕ್ಕೆ ತೀವ್ರ ಸಂಕಷ್ಟ ಉಂಟಾದರೆ, ಅಲ್ಲಲ್ಲಿಯ ಮಹಾಜನರು ಸಮಾವೇಶವಾಗಿ ತಮಗೆ ಅನುಕೂಲಕರ ನಿರ್ಣಯ ಸ್ವೀಕರಿಸುತ್ತಿದ್ದರು ಅಥವಾ ಅಂಥ ಪದ್ಧತಿಯನ್ನು ರದ್ದು ಮಾಡುತ್ತಿದ್ದರು. ಅಥವಾ ಅದನ್ನು ಸರಿ ನಿಯಮಕ್ಕೆ ಒಳಪಡಿಸುತ್ತಿದ್ದರು. ವರಕಟ್ನದ ವಿಚಾರವಾಗಿ ಅಲ್ಲಲ್ಲಿ ಜನರು ಈ ರೀತಿಯ ನಿರ್ಣಯಗಳನ್ನು ಮಾಡಿದರು ಮತ್ತು ಮೀರಿದವರನ್ನು ಬಹಿಷ್ಕಾರ ಹಾಕಿ ಶಿಕ್ಷಿಸದರು. ಈ ನಿರ್ಣಯಗಳನ್ನು ಸರಕಾರವೇ ಜಾರಿಗೆ ತರುತ್ತಿತ್ತು.

ಕಾಲಾನಂತರ ಸಾರ್ವತ್ರಿಕವಾಗಿ ಜನರಿಗೆ ಮದುವೆ ಮತ್ತು ಮದುವೆಗೆ ಸಂಬಂಧಪಟ್ಟ ತೆರಿಗೆಗಳು ದುರ್ಭರವೆನಿಸತೊಡಗಿದಾಗ ಅವರು ಆ ಕರಗಳ ರದ್ದತಿಗಾಗಿ ರಾಜಪ್ರಭುತ್ವಕ್ಕೆ ಮೊರೆ ಇಟ್ಟರು. ತುಳುವ ವೀರನರಸಿಂಹನ ಕಾಲದಲ್ಲಿ ಸಾಳುವ ತಿಮ್ಮರಸರ ನಿರಂತರ ಪ್ರಯತ್ನದಿಂದಾಗಿ ಕೆಲ ಪ್ರದೇಶಗಳಲ್ಲಿ ಮದುವೆ ತೆರಿಗೆಗಳು ರದ್ದಾದವು. ಆದರೆ **ಕೃಷ್ಣದೇವರಾಯನ ಆಡಳಿತದ ಆರಂಭದಲ್ಲಿಯೇ ಮದುವೆ ಮತ್ತು ತತ್ಸಂಬಂಧವಾದ ಎಲ್ಲಾ ತೆರಿಗೆಗಳು ಇಡೀ ಸಾಮ್ರಾಜ್ಯದಲ್ಲಿ ರದ್ದಾದವು**. ಇದರಿಂದ ಸ್ಪಷ್ಟವಾಗುವುದೇನೆಂದರೆ ಸಾಮಾಜಿಕ ಕಂಟಕಗಳನ್ನು ನಿವಾರಿಸಲು ರಾಜಸತ್ತೆಯು ಮುಂದೆ ಬರಲಿಲ್ಲ. ಆದರೆ ಪ್ರಜೆಗಳು ತಮ್ಮ ತೊಂದರೆಗಳನ್ನು ಪರಿಹರಿಸಿಕೊಳ್ಳಲು ಮುಂದೆ ಬಂದಾಗ ರಾಜಸತ್ತೆಯು ಪ್ರಜೆಗಳಿಗೆ ಸಂಪೂರ್ಣ ಸಹಕಾರ ನೀಡುತ್ತಿತ್ತು.

**ಆಹಾರ ಮತ್ತು ಉಡುಗೆ ತೊಡುಗೆ :** ವಿಜಯನಗರದಲ್ಲಿ ಜನರು ಎಲ್ಲ ರೀತಿಯ ಮೀನು-ಮಾಂಸ ತಿನ್ನುತ್ತಿದ್ದರು. ಗೋಮಾಂಸ ಭಕ್ಷಣೆ ನಿಷೇಧವಾಗಿತ್ತು. ಏಕೆಂದರೆ ಅವರಿಗೆ ಗೋವು ಪೂಜನೀಯವಾಗಿತ್ತು ಎಂದು ಬಾರ್ಬೊಸಾ ಹೇಳಿದ್ದಾನೆ. ಅವನ ಪ್ರಕಾರ ಜಂಗಮರು ಮತ್ತು ಬ್ರಾಹ್ಮಣರು ಮಾಂಸಾಹಾರ ಮಾಡುತ್ತಿರಲಿಲ್ಲ. ಅವರು ಅಕ್ಕಿ, ಸಕ್ಕರೆ, ಹಾಲು, ಬೆಣ್ಣೆ, ಜೇನು ತಿನ್ನುತ್ತಿದ್ದರು ಎಂಬುದಾಗಿದೆ.[15] ಉಡುಗೆ ತೊಡುಗೆಯ ಬಗ್ಗೆ **ವಾರ್ಥೆಮಾ** ಹೇಳಿದ್ದು – ಸಾಮಾನ್ಯ ಜನರು ಸೊಂಟಕ್ಕೆ ಒಂದು ಬಟ್ಟೆಯ ವಿನಃ ಉಳಿದಂತೆ ಬೆತ್ತಲೆ ಇರುವರು. **ಅರಸನು ತಲೆಯ ಮೇಲೆ ಎರಡು ಗೇಣಿನ ಒಂದು ಬಂಗಾರದ ಚಿತ್ತಾರ ಮಾಡಿದ ಟೋಪಿ ಧರಿಸುತ್ತಾನೆ.**[16] ಶ್ರೀಮಂತರು ಬಟ್ಟೆ ಧರಿಸುತ್ತಿದ್ದರು. ನಡುವಿಗೆ ಸೊಂಟಪಟ್ಟಿ ಅನೇಕ ನಿರಿಗೆಗಳ ಗಟ್ಟಿಯಾಗಿ ಸುತ್ತಿದ್ದ ಪಂಚೆ ಉಡುತ್ತಿದ್ದರು. ಮೇಲೊಂದು ಬಿಳಿಯ ನೂಲಿನ ರೇಷ್ಮೆಯ ಅಥವಾ ಬ್ರೊಕೇಡಿನ ಅಂಗಿ ಧರಿಸುತ್ತಿದ್ದರು. ಕೆಲವರು ರುಮಾಲು ಸುತ್ತಿದರೆ, ಕೆಲವರು ರೇಷ್ಮೆಯ ಅಥವಾ ಬ್ರೊಕೇಡಿನ ಟೊಪ್ಪಿ ಧರಿಸುತ್ತಿದ್ದರು.[17] ಅವರು ಒರಟು ಚಪ್ಪಲಿಗಳನ್ನು ಧರಿಸುತ್ತಿದ್ದರೆಂದು ಬಾರ್ಬೊಸಾ ಬರೆದಿರುವನು.[18] ಅವನು ಹೆಂಗಸರ ವೇಷಭೂಷಣವನ್ನು ವರ್ಣಿಸಿದ್ದಾನೆ. ಅವನ ಪ್ರಕಾರ ಶ್ರೀಮಂತ ಮಹಿಳೆಯರೂ, ಗಣಿಕೆಯರೂ, ತೆಳುವಾದ ಹತ್ತಿ, ರೇಷ್ಮೆಯ ಐದುಗಜದ ಸೀರೆಗಳನ್ನು ಉಡುವರು[19] ವೃದ್ಧೆಯರು ದೊರಗು ಬಟ್ಟೆ ಉಡುತ್ತಿದ್ದರು.[20] ಅವರು ಧರಿಸುತ್ತಿದ್ದ ನವರತ್ನ ಖಚಿತ ಉಂಗುರಗಳನ್ನು, ಮುತ್ತಿನ ಓಲೆಗಳನ್ನು, ಬಾರ್ಬೊಸಾ ವರ್ಣಿಸಿದ್ದಾನೆ.[21] ಜನರು ಸ್ನಾನಾಂತರ ತೇದ ಗಂಧವನ್ನು, ಕರ್ಪೂರ ಮತ್ತು ಕಸ್ತೂರಿಯನ್ನು ಲೇಪಿಸಿಕೊಳ್ಳುತ್ತಿದ್ದರು.[22]

**ಆರ್ಥಿಕ ಪರಿಸ್ಥಿತಿ :** ಬಾರ್ಬೊಸಾ ಪ್ರಕಾರ – ವಿಜಯನಗರ ಸಾಮ್ರಾಜ್ಯ ಅತ್ಯಂತ ಶ್ರೀಮಂತವಾಗಿತ್ತು. ಭೂಮಿ ಫಲವತ್ತಾಗಿತ್ತು. ಎಲ್ಲ ಭೂಮಿಯೂ ಸಾಗುವಳಿಯಾಗುತ್ತಿತ್ತು. ಭಾರತದ ಅತ್ಯುತ್ತಮ ಭಾಗ ಇದಾಗಿತ್ತು.[23] ಇಲ್ಲಿ ಬಿಳಿಯ ಅಕ್ಕಿ ಮತ್ತು ಕಪ್ಪು ಅಕ್ಕಿ ಬೆಳೆಯುತ್ತಿದ್ದರಂತೆ. ಶ್ರೀಮಂತರು ಬಿಳಿ ಅಕ್ಕಿಯನ್ನು, ಇತರರು ಕಪ್ಪು ಅಕ್ಕಿಯನ್ನು ಬಳಸುತ್ತಿದ್ದರು. ಅವನು ಬೇರೆ ಬೇರೆ ತರಹದ ಅಕ್ಕಿಯನ್ನು ಪಟ್ಟಿಮಾಡಿದ್ದಾನೆ. ಗಿರಸಾಲ, ಅಸಲ, ಅದ್ವಾಜೆಸ್ ಮತ್ತು ಪಕ್ಕರ್[24] ಕರಾವಳಿ ಮತ್ತು ಕನ್ನಡ ಜಿಲ್ಲೆಗಳ ಬೆಳೆದ ಅಕ್ಕಿ ಮಲಬಾರಿಗೂ ಓರ್ಮುಜ್‌ಗೂ ರಫ್ತು ಆಗುತ್ತಿತ್ತು.[25] ಕಡಲೆ, ಹುರುಳಿ, ಹೆಸರು, ಅಲಸಂದಿ, ಅವರೆ, ತೊಗರಿ ಮುಂತಾದ ಬೇಳೆಗಳು ಉತ್ಪಾದಿಸಲ್ಪಡುತ್ತಿದ್ದವು.[26] ಏಲಕ್ಕಿ, ಜಾಕಾಯಿ, ಸಾಸಿವೆ, ಲವಂಗ ಪುಷ್ಕಳವಾಗಿ ಪಶ್ಚಿಮ ತೀರದಲ್ಲಿ ಬೆಳೆಯುತ್ತಿದ್ದು, ಹೆಚ್ಚು ಬೇಡಿಕೆಯಿದ್ದ ವಿದೇಶಗಳಿಗೆ ರವಾನೆಯಾಗುತ್ತಿದ್ದವು.[27] ರಾಜ್ಯದೆಲ್ಲಾ ಕಡೆ ಹೂತೋಟಗಳಿದ್ದವು. ದೇವರ ಪೂಜೆಗೆ ಸಾಕಷ್ಟು ಹೂವು ದಾನವಾಗಿ ದೊರೆಯುತ್ತಿದ್ದವು.[28]

ಬಾರ್ಬೊಸಾ ವ್ಯವಸಾಯ ಪದ್ಧತಿಯನ್ನು ಹೀಗೆ ವರ್ಣಿಸಿದ್ದಾನೆ. ಸಮತಲ ಭೂಮಿಯಲ್ಲು, ಕಣಿವೆಯಲ್ಲು ಬಿತ್ತಿಗೆ ಮಾಡುತ್ತಾರೆ. ಭತ್ತವನ್ನು ನೀರ ಮಡಿಗಳಲ್ಲಿ ನಾಟಿ ಮಾಡುತ್ತಾರೆ, ಕೊಯ್ಲು ಮಾಡುತ್ತಾರೆ, ಜೋಡೆತ್ತಿನ ಅಥವಾ ಕೋಣದ ನೇಗಿಲಿನಿಂದ ಹೊಲವನ್ನು ಉಳುತ್ತಾರೆ. ಬಿತ್ತುವಾಗ ಭತ್ತವನ್ನು ನೇಗಿಲಿಗಿರುವ ಕೊಳವೆಯಿಂದ ಬಿಡುತ್ತಾರೆ. ಭತ್ತವು ನೀರಿನಲ್ಲಿ ಮಣ್ಣ ಪದರಿನಲ್ಲಿ ಸೇರುತ್ತದೆ. ಒಣ ಭೂಮಿಯಲ್ಲಿ ಕೈಯಿಂದ ಬಿತ್ತುತ್ತಾರೆ.[29]



ವಾರ್ಥೆಮಾ ಮತ್ತಷ್ಟು ವಿವರ ನೀಡುತ್ತಾನೆ. ಕಲ್ಲಿ ಕೋಟೆಯ ರೈತರು ಬಿತ್ತಿಗೆ ಮಾಡಬೇಕೆಂದಾಗ ಮೊದಲು ಎತ್ತು ಕಟ್ಟಿದ ನೇಗಿಲಿನಿಂದ ಉಳುಮೆ ಮಾಡುತ್ತಾರೆ. ಬಿತ್ತುವ ಕಾಲದಲ್ಲಿ ನಗರದಿಂದ **ಮೇಳ** ತರಿಸುತ್ತಾರೆ. ಬಿತ್ತುವುದು ಮುಗಿವ ವರೆಗೆ ವಾದ್ಯಮೇಳ ನಡೆಯುತ್ತಲೇ ಇರುತ್ತದೆ. ಕೆಲಜನ ಭೂತಗಳಂತೆ ಅಲಂಕರಿಸಿಕೊಂಡು ಕುಣಿಯುತ್ತಾರೆ. ಇದರಿಂದ ಭತ್ತದ ಬೆಳೆ ಚನ್ನಾಗಿ ಬರುತ್ತದೆಂದು ಅವರ ನಂಬಿಕೆ.[30] ಬಾರ್ಬೊಸಾ ತಾಳೆಮರದ ನಾನಾ ಉಪಯೋಗಗಳ ಬಗ್ಗೆ ಬರೆದಿದ್ದಾನೆ. ಗರಿಗಳಿಂದ ಚಾಪೆ ಮಾಡಿ ಗುಡಿಸಲಿಗೆ ಮೇಲು ಮುಚ್ಚು ಹಾಕುವರು. ಅರಮನೆ ಮತ್ತು ದೇವಾಲಯಗಳನ್ನು ಬಿಟ್ಟರೆ ಬೇರೆ ಮನೆಗಳಿಗೆ ಹೆಂಚು ಹೊದಿಸುವುದಿಲ್ಲ. ಆ ಗಿಡದಿಂದಲೇ ಮನೆಗೆ ಬೇಕಾದ ಮುಟ್ಟು ಮತ್ತು ಅಡಿಗೆಗೆ ಉರುವಲು ಸಿಗುತ್ತದೆ. ಇದೆಲ್ಲಾ ಪುಷ್ಕಳವಾಗಿ ದೊರೆಯುವುದರಿಂದ ಹಡಗಿನ ಮೂಲಕ ರವಾನೆ ಆಗುತ್ತವೆ.[31] ತಾಳೆಗರಿಯ ಮೇಲೆ ಬರೆಯುತ್ತಿದ್ದರು.[32] ಸಕ್ಕರೆಯನ್ನು ಪುಡಿಯ ರೂಪದಲ್ಲಿ ಉತ್ಪಾದಿಸುತ್ತಿದ್ದರು.[33] ಬಾರ್ಬೊಸಾ ಬಣ್ಣ ಹಾಕುವ ಉದ್ಯಮದ ಬಗ್ಗೆ ಬರೆದಿದ್ದಾನೆ. ಇದರಲ್ಲಿ ಪ್ರಮುಖವಾಗಿ ಇಂಡಿಗೊ (ನೀಲಿ) ಉಪಯೋಗಿಸುತ್ತಿದ್ದರು. ನೀಲಿಯನ್ನು ಪಶ್ಚಿಮ ಕರಾವಳಿಯ **ಭಾಲ್** ಸುತ್ತ ವಿಶೇಷವಾಗಿ ಬೆಳೆಯುತ್ತಿದ್ದರು.[34] ರತ್ನಗಳ ಮತ್ತು ವಜ್ರಗಳ ವ್ಯಾಪಾರ ಜೋರಾಗಿತ್ತು. ಇಲ್ಲಿಯ ಪೇಟೆಗೆ ಪೇಗು ಮತ್ತು ಸಿಂಹಳದಿಂದ ನವರತ್ನಗಳು ಬರುತ್ತವೆ. ರಾಜ್ಯದಲ್ಲಿ ಅನೇಕ ವಜ್ರದ ಗನಿಗಳಿವೆ. ಅಲ್ಲಿಂದ ರಾಜಧಾನಿಗೆ ವಜ್ರಗಳು ಬರುತ್ತವೆ. ಸಾಕಷ್ಟು ಮುತ್ತು ಮತ್ತು ಜಾತಿ ಮುತ್ತುಗಳು ಪೇಟೆಗೆ ಬರುತ್ತವೆ. ಆರ್ಮುಜ್ ಮತ್ತಿತರ ಪ್ರದೇಶಗಳಿಂದ ರೇಷ್ಮೆ ಬ್ರೋಕೇಡ್, ಹವಳದ ವಸ್ತುಗಳೂ ಬರುತ್ತವೆ.[35] ವಾರ್ಥೆಮಾ–ವಿಜಯನಗರವು ಮಹಾನಗರ, ತುಂಬಾ ವಿಸ್ತಾರವಾದುದು ಮತ್ತು ಭದ್ರವಾದ ಕೋಟೆಯಿಂದ ರಕ್ಷಿಸಲ್ಪಟ್ಟಿದೆ. ಈ ನಗರವು ಏಳು ಮೈಲು ಉದ್ದಕ್ಕೆ ವಿಸ್ತರಿಸಿದೆ. ಒಂದು ಬೆಟ್ಟದ ತಪ್ಪಲಿನಲ್ಲಿ ಕಟ್ಟಲ್ಪಟ್ಟಿದೆ. ಮೂರು ಸುತ್ತಿನ ಕೋಟೆಯ, ಆಹ್ಲಾದಕರ ವಾತಾವರಣದ, ಸುಂದರವಾದ ಶ್ರೀಮಂತ ನಗರವಾಗಿದೆ.[36]

**ಧರ್ಮ :** ವಿಜಯಾನಗರಾಧೀಶರು ಸರ್ವಧರ್ಮಗಳನ್ನು ಸಮಾನವಾಗಿ ಆದರಿಸಿದರು. ಬಾರ್ಬೊಸಾ ಈ ಬಗ್ಗೆ–ಪ್ರತಿಯೊಬ್ಬರು ಅವರವರ ಧರ್ಮದಂತೆ ಜೀವಿಸಲು ಸ್ವಾತಂತ್ರ್ಯವಿದೆ. ಈ ಬಗ್ಗೆ ಯಾರೂ ವಿಚಾರಿಸುವುದಿಲ್ಲ. ಅಸಹನೆ ತೋರುವುದಿಲ್ಲ. ಹಿಂದೂ, ಕ್ರಿಶ್ಚಿಯನ್, ಜ್ಯೂ ಅಥವಾ ಮುಸ್ಲಿಂ ಯಾರೇ ಆಗಲಿ ಸಮಾನತೆ, ಸಮಾನ ನ್ಯಾಯ ಇಲ್ಲಿ ದೊರೆಯುತ್ತದೆ – ಎಂದು ಬರೆದಿದ್ದಾನೆ.

ರಾಯನು ಎಲ್ಲ ಧರ್ಮಗಳನ್ನು ಗೌರವದಿಂದ ಕಂಡರೂ, ತನ್ನ ಧರ್ಮಕ್ಕೆ ಇತರರಿಗಿಂತ ತುಸು ಹೆಚ್ಚು ನೆರವು ನೀಡಿ ಸಂತೋಷ ಪಡುತ್ತಾನೆ. ಸಂಗಮ ವಂಶದ ಅರಸರು ಶೈವರಿಗೆ ವಿಶೇಷ ಸವಲತ್ತು ನೀಡಿದರು. ಆಡಳಿತದ ವಂಶದ ಬದಲಾವಣೆಯೊಂದಿಗೆ ಸಾಮ್ರಾಟನಾದ ಸಾಳುವ ನರಸಿಂಹನು ವೈಷ್ಣವ ಧರ್ಮಕ್ಕೆ ಹೆಚ್ಚು ನೆರವು ನೀಡಿದನು. ವೈಷ್ಣವ ಸಂಸ್ಥೆಗಳಿಗೆ ಧಾರಾಳವಾಗಿ ದಾನ ನೀಡಿದನು. ಆತನ ದಾರಿಯಲ್ಲಿ ಆತನ ಸೇನಾಪತಿ ನರಸನಾಯಕನು ವೈಷ್ಣವ ಧರ್ಮವನ್ನು ಬೆಂಬಲಿಸಿ ವೈಷ್ಣವ ದೇವಾಲಯಗಳಿಗೆ ನಾನಾ ದಾನದತ್ತಿ ನೀಡಿದನು.

ಇಮ್ಮಡಿ ನರಸಿಂಹನ ಕಾಲದಲ್ಲಿ ಕ್ರಿ.ಶ. 1494ರಲ್ಲಿ ಚಿತ್ತೂರು ಜಿಲ್ಲೆಯ ಮದನಪಲ್ಲೆಯ **ಹತ್ತಿರ ಕೊತ್ತಕೋಟೆಯಲ್ಲಿ ಮಸೀದೆಯೊಂದು ನಿರ್ಮಿಸಲ್ಪಟ್ಟಿತು.**[37] ಅಂದರೆ ಅಲ್ಲಿ ಸಾಕಷ್ಟು ಮುಸಲ್ಮಾನರು ವಾಸವಾಗಿರಲೇಬೇಕು. ನರಸನಾಯಕ ಮತ್ತು ವೀರನರಸಿಂಹರು ವೈಷ್ಣವ ಮತ್ತು ಶೈವಧರ್ಮಗಳಿಗೆ ಸಮಾನ ಪ್ರೋತ್ಸಾಹ ನೀಡಿದರು.

ವ್ಯಾಸರಾಯ ಚರಿತ್ರೆಯ ಪ್ರಕಾರ ವ್ಯಾಸತೀರ್ಥರೇ ವೀರ ನರಸಿಂಹರಾಯನ ಗುರುಗಳು[38] ದ್ವೈತ ಸಿದ್ಧಾಂತ ಪ್ರತಿಪಾದಿಸುವ ಮಧ್ವಸಿದ್ಧಾಂತದ ಪ್ರಮುಖ ಪ್ರತಿಪಾದಕರೇ ವ್ಯಾಸರಾಯರು. ಅವರು ತಾತ್ಪರ್ಯ ಚಂದ್ರಿಕಾ, ತಾರತಾಂಡವ, ನ್ಯಾಯಾಮೃತ ಎಂದು ಪ್ರಸಿದ್ಧವಾದ **ವ್ಯಾಸತ್ರಯ** ಗ್ರಂಥಗಳನ್ನು ರಚಿಸಿದರು. ಅವರು ಶಾಸ್ತ್ರಗಳ ವ್ಯಾಖ್ಯಾನಕಾರರಾಗಿದ್ದರು. ಆದ್ದರಿಂದ ಅವರನ್ನು **ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ** ಎಂದು ಕರೆಯುತ್ತಿದ್ದರು.[39] ವ್ಯಾಸರಾಯರ ಕಾಲದ ಬಗ್ಗೆ ಇನ್ನೂ ವಾದಗಳಿವೆ. **ವ್ಯಾಸರಾಯ ಚರಿತ್ರಮು** ಹೊರತಾಗಿ ವ್ಯಾಸರಾಯರು ವೀರನರಸಿಂಹನ ಗುರುಗಳಾಗಿದ್ದರೆಂದು ಹೇಳಲು ಬೇರೆ ಆಧಾರಗಳಿಲ್ಲ. ಆದರೆ ಆತನು ವೈಷ್ಣವ, ಶೈವ ಎಂದು ಪರಿಗಣಿಸಿದೆ ನಾನಾ ದೇವಾಲಯಗಳಿಗೆ ನೀಡಿದ ದಾನದತ್ತಿಗಳ ಅನೇಕ ಶಾಸನಗಳಿವೆ.

ವೀರನರಸಿಂಹರಾಯನು ಅಯ್ಯಂಗಾರರಿಗೂ, ಆರಾಧ್ಯರಿಗೂ ಬೆಳಗಿನಲ್ಲಿ ಅವಕಾಶ ನೀಡುತ್ತಿದ್ದನು. ಅಯ್ಯಂಗಾರರು 'ಮಹಾರಾಯರೇ, ತಮ್ಮ ಅಧಿಕಾರದಿಂದ 108 ವೈಷ್ಣವ ದೇವಾಲಯಗಳಲ್ಲಿ ತಮ್ಮ ಅಧಿಕಾರಿಗಳು ದಿನನಿತ್ಯ ಕೈಂಕರ್ಯಗಳನ್ನು, ನಿತ್ಯೋತ್ಸವಗಳನ್ನು ಅಚ್ಚುಕಟ್ಟಾಗಿ ನಡೆಸುತ್ತಿದ್ದಾರೆ ಎಂದಾಗ ಮತ್ತು ಆರಾಧ್ಯರು ತಮ್ಮ ಕೃಪೆಯಿಂದ 72 ಶೈವ ಕ್ಷೇತ್ರಗಳಲ್ಲಿ ಧನಸಹಾಯ ಲಭಿಸಿ ನಿತ್ಯ ಉತ್ಸವಗಳು ಚನ್ನಾಗಿ ನಡೆಯುತ್ತಿವೆ ಎಂದಾಗ ಆತನಿಗೆ ಸಂತೋಷವಾಗುತ್ತಿತ್ತು[40] ಆರಾಧ್ಯರಿಗೂ, ಅಯ್ಯಂಗಾರರಿಗೆ ರಾಯನು ಸಮಾನ ಗೌರವ ನೀಡುತ್ತಿದ್ದನು.

ಜಾತಿ ಮತಗಳನ್ನು ಲೆಕ್ಕಿಸದೆ ಯೋಗ್ಯತೆಯ ಆಧಾರದಲ್ಲಿ ಸೈನಿಕರನ್ನು ವೀರನರಸಿಂಹನು ಸೇನೆಗೆ ಸೇರ್ಪಡೆ ಮಾಡಿದನು.[41] ಅದರಂತೆ ಮುಸ್ಲಿಮರನ್ನು ದಳಪತಿಗಳಾಗಿ ನೇಮಿಸಿದನು.[42] ಇದು ಆತನ ಮತಸಹಿಷ್ಣುತೆಯ ಸಂಕೇತವಾಗಿದೆ. ಆದರೆ ಶಾಸನಗಳ ಪ್ರಕಾರ ಆತನು ಹಿಂದೂಗಳಿಗೆ ತೋರಿಸಿದಷ್ಟು ಪ್ರಾಧಾನ್ಯವನ್ನು ಅನ್ಯಮತಸ್ಥರಿಗೆ ತೋರಿಸಿದಂತೆ ತಿಳಿಯುವುದಿಲ್ಲ. ಶಕ ಸಂವತ್ಸರ 1431ರ ಕರಂದೈ ಶಾಸನ[43]ದ ಪ್ರಕಾರ ರಾಮಪ್ಪ ನಾಯಕನ ಆಡಳಿತ ಕಾಲದಲ್ಲಿ **ಮುಗಪ್ಪವಾಡೈ** ಎಂಬ ವೀರನರಸಿಂಹನ ಅಧಿಕಾರಿಯು, ಅನ್ಯಾಯದ **ಜೋಡಿ** ತೆರಿಗೆಯನ್ನು ವಿಧಿಸಿದ ಕಾರಣ ಅನೇಕ ಜೈನ ದೇವಾಲಯಗಳ ಭೂಮಿಗಳು ಬೀಳಾದವು. ಅದರಲ್ಲಿ **ವೀರ ರಾಜೇಂದ್ರ ಸೋಲಪ್ಪೆರುಂಪಲ್ಲಿಯ ದೇವಾಲಯವೂ** ಕಷ್ಟಕ್ಕೀಡಾಯಿತು. ಕೃಷ್ಣದೇವರಾಯರು ಪಟ್ಟವೇರಿದ ತಕ್ಷಣ ಎಲ್ಲ ಜೈನ, ಬೌದ್ಧ ದೇವಾಲಯ ಸಹಿತ, ಪಡೈವೀಡು ಮತ್ತು ಚಂದ್ರಗಿರಿ ಪ್ರಾಂತದ ಎಲ್ಲ ದೇವಸ್ಥಾನಗಳ ಜೋಡಿಯನ್ನು ರದ್ದುಮಾಡಿದರು. ಆಗ ಅವು ಪುನರ್ಜೀವ ಪಡೆದರು. ಆಗ **ಬೌದ್ಧ ಧರ್ಮವೂ ರಾಜ್ಯದಲ್ಲಿ ಆಚರಿಸಲ್ಪಡುತ್ತಿತ್ತು.** ಚೈತನ್ಯರು ದಕ್ಷಿಣ ಭಾರತ ಪ್ರವಾಸದಲ್ಲಿದ್ದಾಗ ಸು.1510ರಲ್ಲಿ ಆರ್ಕಾಟ್ ಜಿಲ್ಲೆಯಲ್ಲೆಲ್ಲೋ ಬೌದ್ಧರೊಂದಿಗೆ ಚರ್ಚೆ ಮಾಡಿದರಂತೆ.[44]



ಕಾಲಕಾಲಕ್ಕೆ ಶ್ರೀಶಂಕರರ ಅದ್ವೈತ ಸಿದ್ಧಾಂತ ಪ್ರತಿಪಾದನೆಗೆ ಪ್ರಕಾಂಡ ಪಂಡಿತರು ಬಂದರು ಮತ್ತು ಅದ್ವೈತ ಸಿದ್ಧಾಂತವನ್ನು ಸಮರ್ಥವಾಗಿ ಪ್ರತಿಪಾದಿಸಿದರು. ಆ ಕಾಲದಲ್ಲಿ ಅದ್ವೈತ ಸಿದ್ಧಾಂತದ ಪ್ರಸಿದ್ಧ ಪ್ರತಿಪಾದಕರೆಂದರೆ ಸದಾಶಿವಾಚಾರ್ಯ ಮತ್ತು ಮಹಾದೇವಾಚಾರ್ಯರು **ಸದಾಶಿವಾಚಾರ್ಯರು ತಮ್ಮ ಶಿಷ್ಯ ಚಂದ್ರಚೂಡ ಉರುಫ್ ಸೋಮಶೇರರನ್ನು ಕ್ರಿ.ಶ. 1503ರಲ್ಲಿ ನೇಪಾಳದ ಅರಸನ ವಿನಂತಿಯ ಮೇರೆಗೆ ನೇಪಾಳಕ್ಕೆ ಕಳುಹಿಸಿದರು.**[45]

**ದೇವಸ್ಥಾನಗಳು ಮತ್ತು ಮಠಗಳು :** ವೀರ ನರಸಿಂಹನ ಮತ್ತು ಅವನ ಅಧಿಕಾರಿಗಳ ಒಟ್ಟು ಶಾಸನಗಳಲ್ಲಿ ಸುಮಾರು ಅರ್ಧ ಶಾಸನಗಳು ದೇವಾಲಯ ಮಠ ಮತ್ತು ಧರ್ಮಸಂಸ್ಥೆಗಳಿಗೆ ನೀಡಿದ ದಾನ ದತ್ತಿಗಳಾಗಿವೆ. ಈ ಶಾಸನಗಳ ಪರಿಶೀಲನೆಯಿಂದ ರಾಯನ ಪ್ರತಿನಿಧಿಗಳು ನಿಂತುಹೋದ ದೇವಾದಾಯಗಳನ್ನು ಪುನರುಜ್ಜೀವನ ಮಾಡುವಲ್ಲಿಯೂ, ಧರ್ಮಕಾರ್ಯ ನಿರ್ವಹಣೆಗೆ ಹೊಸ ದಾನ ದತ್ತಿ ನೀಡುವಲ್ಲಿಯೂ, ಆಸಕ್ತರಾಗಿದ್ದರು. ರಾಯವಾಚಕದಲ್ಲಿ ನೀಡಿರುವ ವೀರನರಸಿಂಹನ ದಿನಚರಿ[46]ಯನ್ನು ಪರಿಶೀಲಿಸಿದರೆ ವೈಷ್ಣವ ಮತ್ತು ಶೈವ ದೇವಾಲಯಗಳ ನಿರ್ವಹಣೆಯಲ್ಲಿ ರಾಯನಿಗಿದ್ದ ಆಸಕ್ತಿ ಕಾಣುತ್ತದೆ.

ವೀರನರಸಿಂಹನ ಮತ್ತು ಆತನ ನಂತರ ಕೃಷ್ಣ ದೇವರಾಯನ ಬಹುತೇಕ ಶಾಸನಗಳು ಅವರು ಮತ್ತು ಅವರ ತಂದೆ ನರಸನಾಯಕನು ಪವಿತ್ರ ಕ್ಷೇತ್ರಗಳಾದ ಚಿದಂಬರಂ, ಕಾಳಹಸ್ತಿ, ತಿರುಪತಿ, ಶ್ರೀರಂಗಂ, ಕುಂಭಕೋಣಂ, ಕಾಂಚೀಪುರಂ ಅಹೋಬಲ, ಗೋಕರ್ಣ, ರಾಮಸೇತು[47] ಮುಂತಾದ ಕ್ಷೇತ್ರಗಳಲ್ಲಿ ಮಾಡಿದ ದಾನಧರ್ಮದ ವಿವರಗಳಿಂದ ತುಂಬಿವೆ. ತಿರುಪತಿಯ ಶ್ರೀನಿವಾಸ ದೇವಸ್ಥಾನದ ಒಂದು ಶಾಸನವು ರಾಯನು ತುಲಾಪುರುಷ ದಾನ ಮಾಡಿದ್ದನ್ನು ತಿಳಿಸುತ್ತದೆ. ವೀರನರಸಿಂಹನು ತನ್ನ ತೂಕದ ಚಿನ್ನವನ್ನು ತುಲಾಭಾರ ದಾನ ಮಾಡಿ ವೆಂಕಟಗಿರಿಯನ್ನು ಮೇರು ಪರ್ವತದಷ್ಟು ಶ್ರೇಷ್ಠ ಮಾಡಿದನಂತೆ.[48]

ಕೃಷ್ಣದೇವರಾಯನ ಶಾಸನ[49] ಒಂದರಲ್ಲಿ ವೀರನರಸಿಂಹರಾಯನು ಅನೇಕ ಅಮೂಲ್ಯ ಕಾಣಿಕೆಗಳನ್ನು ಕನಕಸಭಾ, ಶ್ರೀ ವಿರುಪಾಕ್ಷಂ, ಕಾಳಹಸ್ತಿ, ವೆಂಕಟಗಿರಿ, ಕಾಂಚೀಪುರ, ಶ್ರೀಶೈಲ, ಕುಂಭಕೋಣ, ಮಹಾನಂದಿ, ನಿವೃತ್ತಿ, ಗೋಕರ್ಣ ಮತ್ತು ರಾಮೇಶ್ವರ ದೇವಾಲಯಗಳಿಗೆ ನೀಡಿದ ಉಲ್ಲೇಖವಿದೆ. ಆತನು ಷೋಡಶ ದಾನಗಳನ್ನು ನೀಡಿದನು. ಅವೆಂದರೆ ವಿಶ್ವಚಕ್ರ, ಘಟ, ಮಹಾಭೂತ, ರತ್ನಧೇನು, ಸಪ್ತಸಮುದ್ರ, ಕಲ್ಪವೃಕ್ಷ, ಕಾಂಚಾಣ, ಕಾಮಧೇನು, ಸ್ವರ್ಣಧೇನು, ಹಿರಣ್ಯಾಶ್ವ, ತುಲಾಪುರುಷ, ಗೋಸಹಸ್ರ, ಹೇಮಾಶ್ವ, ಹೇಮಗರ್ಭ, ಕನಕೈರಾವತ ಮತ್ತು ಪಾನಕ ತಂಗಾಳಿ.

ರಾಯನೊಂದಿಗೆ, ಅವನ ಸಚಿವರೂ, ಸೇನಾಪತಿಗಳೂ, ಕೂಡಾ ದೇವಾಲಯಗಳಿಗೆ ನಾನಾ ರೀತಿಯ ದಾನದತ್ತಿ ನೀಡಿದರು.

ದಕ್ಷಿಣ ಭಾರತದಲ್ಲಿ ಮಧ್ಯಕಾಲೀನ ದೇವಾಲಯದ ಬಗ್ಗೆ ಒಂದು ಮಾತು ಹೇಳಬಹುದು. ದೇವಾಲಯವು ಪ್ರಮುಖವಾಗಿ ಒಂದು ಧರ್ಮಸಂಸ್ಥೆ. ಆದರೆ ಆ ಕಾಲದಲ್ಲಿ ದೇವಾಲಯ ನಿರ್ವಹಣೆಯು ಸರಕಾರದ ಪ್ರಮುಖ ಭಾಗವಾಗಿತ್ತು. ಅಂದಿನ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ರಂಗದಲ್ಲಿ ದೇವಾಲಯಗಳ ಪಾತ್ರ ಬಹುಮುಖ್ಯವಾಗಿತ್ತು. ದೇವಸ್ಥಾನದಲ್ಲಿ ನೂರಾರು ಜನ ಕೆಲಸ ಮಾಡುತ್ತಿದ್ದರು. ಪುರೋಹಿತರು, ಶಿಕ್ಷಕ/ಆಚಾರ್ಯರು ಸಂಗೀತಗಾರರು, ನರ್ತಕ-ನರ್ತಕಿಯರು, ಕಸಗುಡಿಸುವವರು, ದೀಪ ಮುಡಿಸುವವರು, ದೇವಸ್ಥಾನವನ್ನು ನಿರ್ಮಲವಾಗಿರಿಸುವವರು. ನದಿಗಳಿಂದ ಪವಿತ್ರ ಜಲ ತರುವವರು, ಅನೇಕರಿದ್ದರು. ದೇವಾಲಯದವರು ಸಂಗೀತ, ನರ್ತನ, ನಾಟಕಾದಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಶಕ ಸಂವತ್ಸರ 1428 ಅಂದರೆ ಕ್ರಿ.ಶ. 31–10–1506ರ ಶಾಸನದಲ್ಲಿ ವಿಷಯವೊಂದು ಪ್ರಸ್ತಾಪಿಸಲ್ಪಟ್ಟಿದೆ. ದೇವಾಲಯದ ಅಧಿಕಾರಿ ಬಸವರಸವೊಡೆಯರು ಗ್ರಾಮಸ್ಥರಿಂದ ಚಂದಾ ಎತ್ತಿ (ಕುಂದಾಪುರ ತಾಲೂಕಿನ ಬಲಕೆರೆ) ಹಣವನ್ನು ತಿರುಮಲ ದೇವರ ದೇವಸ್ಥಾನದಲ್ಲಿ ನಂದಾದೀಪ ಉರಿಸಲು ಮೂಲಧನ (ಅಂದರೆ ಬಡ್ಡಿಯಿಂದ ದೀಪ ಉರಿಸಲೆಂದು) ನೀಡಿದನು.[50]

ಈ ಶಾಸನದಲ್ಲಿಯ ಮಾಹಿತಿಯಿಂದ ದೇವಾಲಯಗಳು ತಮ್ಮ ಸೇವೆಗಳು ಹೇಗೆ ನಿಭಾಯಿಸುತ್ತಿದ್ದರೆಂದು ತಿಳಿಯುತ್ತದೆ. ಇದೇ ದೇವಾಲಯಕ್ಕೆ ಕೆಲ ವ್ಯಕ್ತಿಗಳು ಸೇರಿ 25 ಗದ್ಯಾಣಗಳನ್ನು ದಾನವಾಗಿ ನೀಡಿದರು. ಅದು ಒಂದು ತೋಟದ ವರಮಾನವಾಗಿತ್ತು. ಮತ್ತೊಂದು ವಿಷಯವೆಂದರೆ ಬಡಕೆರೆಯ ಹೊಲರು ಅದೇ ದೇವಾಲಯಕ್ಕೆ 7 ಗದ್ಯಾಣ ನೀಡಿದರು. ಇದು ಅಲ್ಲಿನ ಬ್ರಾಹ್ಮಣರು ಸಾಲವಾಗಿ ತೆಗೆದುಕೊಂಡ ಪೈಕಿ ಬಾಕಿ ಉಳಿದಿದ್ದ ಹಣವಾಗಿತ್ತು.[51] ಈ ಕಾಲದಲ್ಲಿ ಸಾರ್ವಜನಿಕರು ದೇವಾಲಯಗಳಿಗೆ ನೀಡಿದ ಆಸರೆಯನ್ನು ನಾನಾ ಶಾಸನಗಳಲ್ಲಿ ಕಾಣಬಹುದು. ಕೆಲಬಾರಿ ದೇವಸ್ಥಾನಕ್ಕೆ ನೆರವಾಗಲು ಆಡಳಿತವು ನಾಗಕರಿಗೆ ವಿಶೇಷ ತೆರಿಗೆ ವಿಧಿಸುತ್ತಿದ್ದರು.[52] ಈ ತೆರಿಗೆಯನ್ನು ಜನರು ದೇವಾಲಯಕ್ಕೇ ಕಟ್ಟುತ್ತಿದ್ದರು. ಅನೇಕರು ಸ್ವಯಂಪ್ರೇರಣೆಯಿಂದ ದೇವಾಲಯಗಳಿಗೆ ನೆರವಾಗುತ್ತಿದ್ದರು.[53] ಶಕಸಂವತ್ಸರ 1427ರ ಸಾಳುವ ರಾಚಿರಾಜನ ಮಗ ಗೋವಿಂದರಾಜನ ಶಾಸನದಲ್ಲಿ ಕಡುಪರೇಲದ ಅಗಸ್ತೇಶ್ವರನ ಕೈಂಕರ್ಯಗಳಿಗೆ ಉತ್ಸವಾದಿಗಳಿಂದ ಹಣ ಸಂಗ್ರಹಿಸಿದ ವಿಚಾರವಿದೆ.[54]

ಶಕ ಸಂವತ್ಸರ 1428[55] ಅಂದರೆ ಕ್ರಿ.ಶ. 1506–1507ರ ಶಾಸನವು ರತ್ನಗಿರಿಯ ರತ್ನಾಚಲೇಶ್ವರ ಸ್ವಾಮಿಯ ಅಭಿಷೇಕಕ್ಕಾಗಿ ಕಾವೇರಿಯಿಂದ ನೀರು ತರಲು, ಬೆಳಗಿನ ಅಮೃತಪಡಿಗೂ, ದೀಪಕ್ಕೂ ದಾನ ನೀಡಿದ ವಿವರಗಳಿವೆ. **ಗಂಗಾನದಿಯಿಂದ ಪವಿತ್ರ ಜಲವನ್ನು ತರಿಸಲು ಕೃಷ್ಣದೇವರಾಯನ ಕಾಲದಲ್ಲಿ ಪ್ರತ್ಯೇಕ ಅಧಿಕಾರಿಯೇ ಇದ್ದನಂತೆ**[56] ಕ್ರಿ.ಶ. 1500ರ ಒಂದು ಶಾಸನದ ಪ್ರಕಾರ ಮಂತ್ರಿ ಮಲ್ಲರಸಯ್ಯ ನಾರಾಯಣ ದೇವಾಲಯಕ್ಕೆ ಆಗಮಿಸಿ ಸಂಪ್ರೋಕ್ಷಣಾದಿಗಳ ನಂತರ ಉತ್ಸವ, ಪೂಜಾದಿಗಳಿಗಾಗಿ ದಾನ ಶಾಸನ ಮಾಡಿದನು.[57] ಆದರೆ ಇಲ್ಲಿ ಸಂಪ್ರೋಕ್ಷಣೆಯ ಅವಕಾಶ ಏಕಾಯಿತು ? ಮತ್ತು ಪೂಜಾದಿಗಳಿಗೆ



ಶಾಸನ ಮಾಡುವ ಅವಶ್ಯಕತೆ ಏನಿತ್ತು ? ಎಂದು ತಿಳಿದುಬಂದಿಲ್ಲ. ದೇವಾಲಯಗಳ ಪಾವಿತ್ರ್ಯತೆಯನ್ನು ಕಾಪಾಡುವಲ್ಲಿ ಜನರೂ ರಾಜಸತ್ತೆಯೂ ತೋರುತ್ತಿದ್ದ ಆಸಕ್ತಿ ಮುಖ್ಯವಾಗಿದೆ.

ದೇವಸ್ಥಾನಗಳು ವಿದ್ಯಾಕೇಂದ್ರಗಳಾಗಿದ್ದವು. ಕ್ರಿ.ಶ. 1505ರ ಶಾಸನದಲ್ಲಿ ಭುಜಬಲ ಪ್ರತಾಪ ನರಸಿಂಹ ಮಹಾರಾಯರು ಶ್ರೀರಂಗನಾಥ ಸ್ವಾಮಿಯ ಸನ್ನಿಧಿಯಲ್ಲಿ ಅಮೂಲ್ಯ ದಾನದತ್ತಿಗಳನ್ನು ನೀಡಿದರು. ಷಡ್‌ದರ್ಶನ ವಿಶಾರದ ರಾಮನಾಥ ಭಟ್ಟರಿಗೆ **'ಆಚಾರ್ಯ'** ಪದವಿನೀಡಿ, **ಹೊನ್ನಕಹಳ್ಳಿ** ಗ್ರಾಮದಾನ ಮಾಡಿದರು.[58] ದೇವಾಲಯಗಳಲ್ಲಿ **'ಅಧ್ಯಯನೋತ್ಸವ'** ಏರ್ಪಡಿಸಲು ದಾನದತ್ತಿ ನೀಡಿದ ಅನೇಕ ಶಾಸನಗಳಿವೆ. ಅರಗಲೂರಿನ ಶಾಸನವು ಅಲ್ಲಾಳನಾಥ ಇಳಿಯ ನಾಯಕನೊಂದಿಗೆ ಅರ್ರುರುನಾಡು-ಮಲ್ಲೈಪ್ಪರು ನಾಡಿನ ಪ್ರಜೆಗಳು ಸಭೆ ಸೇರಿ ದೇವಸ್ಥಾನಗಳಲ್ಲಿ ನಂದಾದೀಪ ಮತ್ತು ಇತರ ದೀಪಗಳಿಗಾಗಿ ಬೇಕಾಗುವ ಎಣ್ಣೆಪಸಿಯನ್ನು ನೀಡಲು ನಿರ್ಧರಿಸಿದರು.[59]

ಪ್ರಮುಖವಾಗಿ **ಕೋಮಟಿಗರು** ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಹೇರಳ ಧನವನ್ನು ಅಥವಾ ಭೂಮಿಯನ್ನು ದೇವಾಲಯಗಳಿಗೆ ನೀಡಿದ್ದಾರೆ.[60] ಶಕ ಸಂವತ್ಸರ 1430 ಅನಲು ಕ್ರಿ.ಶ. 1508ರ ತಿರುಪತಿ ದೇವಸ್ಥಾನದ ಒಂದು ಶಾಸನವು ಪಂಜೈಲಿಂಗ ಸೆಟ್ಟಿಯ ನೇತೃತ್ವದಲ್ಲಿ ಕೋಮಟಿಗರು ತಿರುಪತಿ ದೇವಸ್ಥಾನಕ್ಕೆ 5030 ಪಣಗಳನ್ನು ಶ್ರೀ ವೆಂಕಟೇಶ ಮತ್ತು ಶ್ರೀರಾಮ ದೇವರಿಗೆ ವಿಶೇಷ ದಿನಗಳ ಅಮೃತಪಡಿಗಾಗಿ ಸಲ್ಲಿಸಿದರು.[61] ದೇವಾಲಯಗಳ ಹೂದೋಟ, ತೆಂಗಿನ ತೋಟ, ತರಕಾರಿ ತೋಟಗಳಿಗಾಗಿ ದಾನ ನೀಡಿದ ಶಾಸನಗಳಿವೆ.[62] ಯಾತ್ರಿಕರಿಗಾಗಿ ಧರ್ಮಛತ್ರಗಳ ವ್ಯವಸ್ಥೆಗಾಗಿ[63] ಮತ್ತು ದೇವಾಲಯಗಳಲ್ಲಿ ಕೆಲ ಉತ್ಸವಗಳನ್ನು ನಡೆಸಲೂ ದಾನ ನೀಡಿದ್ದಾರೆ. ತಿರುಮಲ ತಿರುಪತಿ ದೇವಾಲಯಗಳಿಗೆ ರಾಮಾನುಜಯ್ಯಗಾರು[64] ಉದ್ದಂಡರಾಯರ್ ಉಲಗಪ್ಪನ್[65] ಮತ್ತು ಅಪ್ಪಾಪಿಳ್ಳೆ[66] ಅವರು ನೀಡಿದ ದಾನಗಳಿಂದ ನಿತ್ಯೋತ್ಸವ, ವಿಶೇಷೋತ್ಸವ ತಿರುನಾಳ್ ನಡೆಸಲು ಅನುಕೂಲವಾಯಿತು.

ಅರಗಲೂರು ದೇವಾಲಯಕ್ಕೆ[67] ಎಲಮಂಚ ತುಳುಕ್ಕ ನಾಯಕರು ತೇರನ್ನೇ ಮಾಡಿಸಿದರು. ಹೊಂಬಾಳೆಯ ರಾಮೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, ಪುನಃ ಪ್ರತಿಷ್ಠಾಪನಾ ಕುಂಭಾಭಿಷೇಕ ಮಾಡಿಸಿದ ಸಹವಾಸ ಹೊನ್ನರಸರ ಸೇವೆ, ಅಚ್ಚಪ್ಪ ನಾಯಕರ ತಂದೆ ದೇವಾಲಯಕ್ಕೆ ನೀಡಿದ ಅಪಾರ ಧನ ಮತ್ತು ಅಚ್ಚಪ್ಪ ನಾಯಕರ ಭೂದಾನಗಳು ವೀರನರಸಿಂಹನ ಸಾಮಂತಾದಿಗಳಿಗೆ ದೇವಾಲಯಗಳ ಬಗ್ಗೆ ಇದ್ದ ಕಳಕಳಿಗೆ ಸಾಕ್ಷಿ.[68] ಅನಿಮಲೆಯ ಶಕ ಸಂವತ್ಸರ 1430ರ ಶಾಸನವು ದನಗಳ, ಕುದುರೆಗಳ ಮೇಲಿನ ಜಕಾತಿಯನ್ನು, ಮದುವೆ ತೆರಿಗೆಯನ್ನು ದೇವಾಲಯಕ್ಕೆ ನೀಡಿದ ವಿಷಯವನ್ನು ತಿಳಿಸುತ್ತದೆ.

ಶಕ ಸಂವತ್ಸರ 1428 ಅನಲು ಕ್ರಿ.ಶ. 1506ರ ಶಾಸನದಲ್ಲಿ ದೇವಾಲಯ ಗ್ರಾಮವೊಂದರಲ್ಲಿ ನೀರಾವರಿಗಾಗಿ ಕಾಲುವೆ ಅಗೆಸಿದ ವಿಷಯವಿದೆ[69] ಕೆಲಕಡೆ ಉತ್ಸವ

ಕಾಲದಲ್ಲಿ ಛತ್ರ ಮತ್ತು ಅನ್ನದಾನದ ವ್ಯವಸ್ಥೆಮಾಡಿದ ಶಾಸನಗಳಿವೆ.[70] ದೇವಾಲಯಗಳು ಸಾಮಾಜಿಕ ಅಭಿವೃದ್ಧಿಗೆ ನೆರವಾದವು.

ಸಾಹಿತ್ಯ ಮತ್ತು ಶಾಸನದ ಆಧಾರಗಳನ್ನು ಪರಿಶೀಲಿಸಿದರೆ, ರಾಜಪೋಷಣೆಯೊಂದಿಗೆ ಸಾರ್ವಜನಿಕರ ಪ್ರಯತ್ನಗಳು ಅನೇಕ ವಿಧವಾಗಿ ಧರ್ಮ ಕಾರ್ಯಕ್ಕೆ ನೆರವಾದವು. ಪ್ರಮುಖವಾಗಿ ಗ್ರಾಮದಾನ ಮತ್ತು ಭೂಮಿದಾನಗಳಿಂದ ದೇವಾಲಯಗಳು ಅಭಿವೃದ್ಧಿಯಾದವು. ಅವು ಅನೇಕರಿಗೆ ಉದ್ಯೋಗ ನೀಡಿದವು. ಧಾರ್ಮಿಕ ಸ್ಫೂರ್ತಿ ನೀಡಿದವು. ಶಿಕ್ಷಣ, ಕಲೆ ಮತ್ತು ವಾಸ್ತು ಕಲೆಯ ಕೇಂದ್ರಗಳೂ ಎನಿಸಿದವು.

ವೀರನರಸಿಂಹರಾಯನು ಕ್ರಿ.ಶ. 1509ರಲ್ಲಿ ಬೆಳಗುಪ್ಪ ಗ್ರಾಮಕ್ಕೆ ವೀರನರಸಿಂಹ ಪುರವೆಂದು ಪ್ರತಿನಾಮ ನೀಡಿ ಮಲ್ಲಿಕಾರ್ಜುನ ದೇವರಿಗೆ ಮಠಪುರವೆಂದು ನೀಡಿದನು. ಈ ಗ್ರಾಮವು ಬೂದುಗುಪ್ಪೆ ವಿಭಾಗದಲ್ಲಿ ದುಂದುರ್ಪೆ ಸೀಮೆಯಲ್ಲಿದೆ.[71] ಚೌಳಿಕೆರೆ ಗ್ರಾಮದಲ್ಲಿ ಅನುಪಮನಾಥ ಒಡೆಯ ಮತ್ತು ಅವರ ಶಿಷ್ಯ ಸುಬುದ್ಧಿನಾಥ ಒಡೆಯರಿಗೆ ಮಠಕ್ಕೆಂದು ಭೂಮಿ ನೀಡಲಾಗಿದೆ.[72]

**ದೇವಾಲಯ ನಿರ್ಮಾಣ, ವಿಸ್ತರಣ ಮತ್ತು ಜೀರ್ಣೋದ್ಧಾರ :** ವೀರ ನರಸಿಂಹರಾಯನ ಕಾಲದಲ್ಲಿ ಯಾವುದೇ ಹೊಸ ದೇವಸ್ಥಾನ ಕಟ್ಟಿಸಲಿಲ್ಲ. ಆದರೆ ಅನೇಕ ದೇವಾಲಯಗಳನ್ನು ಮಂಟಪ, ಪ್ರಾಕಾರಾದಿ ನಿರ್ಮಿಸಿ ವಿಸ್ತರಿಸಲಾಯಿತು. ಕ್ರಿ.ಶ. 1508ರ ಶಾಸನದ ಪ್ರಕಾರ ಸಾಳುವ ಗೋವಿಂದರಾಜರು ರಾಮೇಶ್ವರಂ ದೇವಸ್ಥಾನಕ್ಕೆ ಪ್ರಾಕಾರ ಮತ್ತು ಮಂಟಪ ನಿರ್ಮಿಸಿದರು. ಪ್ರೊದ್ದುಟೂರು ಅಥವಾ ಛಲದಂಕ ದೇವರಾಯನಪುರ, ಚಂದ್ರಗಿರಿ ರಾಜ್ಯದ ಅಗ್ರಹಾರದಲ್ಲಿ ಅಗಸ್ತೇಶ್ವರ ಒಡೆಯರ್ ಗುಡಿಯನ್ನು ಜೀರ್ಣೋದ್ಧಾರ ಮಾಡಿ, ಸಭಾಮಂಟಪ ಮತ್ತು ಲಕ್ಷ್ಮೀಮಂಟಪಗಳನ್ನು ಕಟ್ಟಿ, ಪ್ರಾಕಾರವನ್ನು ನಿರ್ಮಿಸಿದವರು ರಾಯಸಂ ಕೊಂಡಯ್ಯಾನ್.[73]

ಕ್ರಿ.ಶ. 1491ರ ತಾಡಪತ್ರಿ ಶಾಸನದ ಪ್ರಕಾರ ಗುತ್ತಿರಾಜ್ಯದ ನೆಲದಲಪಾಡು ಗ್ರಾಮವನ್ನು ವೀರನರಸಿಂಹಪುರವೆಂದು ಕರೆದು ನಾಯಂಕಾರರಾದ ಮಹಾ ಪ್ರಧಾನಿ ಸಾಳುವ ತಿಮ್ಮರಸರು ರಾಯನಿಗೆ ಒಳಿತಾಗಲೆಂದು ರಾಮಯ್ಯದೇವ ನಿತ್ಯಪೂಜೆಗಾಗಿ ನೀಡಿದರು. ಅಲ್ಲದೇ ಗುಡಿಯಲ್ಲಿ ಭೋಗಮಂಟಪ, ಗೋಪುರ ಮತ್ತು ಪ್ರಾಕಾರಗಳನ್ನು ಕಟ್ಟಿದರು.[74] ತಿ.ತಿ.ದೇ. ಶಾಸನದಲ್ಲಿ ಗೋವಿಂದರಾಜ ದೇವಸ್ಥಾನದಲ್ಲಿ **ನೆರಳಿ ಮಂಟಪ** ನಿರ್ಮಿಸಿದ ವಿಷಯವಿದೆ.[75] ಈ ಕೈಂಕರ್ಯವು ಅನಾಮಿಕ ದಾನಿಯೊಬ್ಬರು ಮಾಡಿದ ಸೇವೆ. ಅದರಂತೆ ಮೂಲ ಶೇಖರಾಳ್ವಾರ್ ಗುಡಿಯಲ್ಲಿ ಕುಮಾರ ರಾಮಾನುಜಯ್ಯನ್[76] ಇದೇ ಕಾಲದಲ್ಲಿ ಮಾಡಿದರು.[77] ಸೋಮೇಶ್ವರ ದೇವಾಲಯಕ್ಕೆ ಹೊಸ ಗೋಪುರವೂ, ಪ್ರಾಕಾರವೂ ಕಟ್ಟಲ್ಪಟ್ಟವು. ಈ ಕಾಲದಲ್ಲಿ ದೇವಾಲಯಕ್ಕೆ ಹೊಸ ತೇರಾಯಿತು. ಇತರ ಅಲಂಕರಣಗಳೂ ಆದವು. ಜನರು ಪುರಾತನ ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಪುನಃ ಪ್ರತಿಷ್ಠಾಪನಾ ಕಾರ್ಯಗಳಲ್ಲಿ ಆಸಕ್ತಿ ತೋರಿದರು.

**ಸಾಹಿತ್ಯದ ಅಭಿವೃದ್ಧಿ :** ತೆಲುಗು ಸಾಹಿತ್ಯದಲ್ಲಿ ಹೊಸ ಯುಗವನ್ನು ಸಾಳುವ ನರಸಿಂಹನೂ, ಆತನ ಸೇನಾಪತಿ ನರಸನಾಯಕರೂ ಆರಂಭಿಸಿದರು. ಅವರ ಪ್ರೋತ್ಸಾಹದಿಂದ



ತೆಲುಗು ಸಾಹಿತ್ಯವು ಅಭಿವೃದ್ಧಿಯ ದಾರಿ ಹಿಡಿಯಿತು ತದನಂತರ ವಿಜಯ ನಗರವು ತೆಲುಗು ಸಾಹಿತಿಗಳಿಗೆ ಇಂದ್ರನ ಅಮರಾವತಿ ಎನಿಸಿತು.[79] ನರಸನಾಯಕನ ಆಸ್ಥಾನದಲ್ಲಿ ಎಂಟು ಭಾಷೆಗಳಲ್ಲಿ ಪರಿಣತರಾದ ಅಷ್ಟಕವಿಗಳು ಇದ್ದರೆಂದು **ವರಾಹ ಪುರಾಣ** ತಿಳಿಸುತ್ತದೆ. ಪ್ರಾಯಃ ಕೃಷ್ಣದೇವರಾಯನು ತನ್ನ ತಂದೆ ನರಸನಾಯಕನನ್ನು ಅನುಸರಿಸಿ ತನ್ನ ಆಸ್ಥಾನದಲ್ಲಿ **ಅಷ್ಟದಿಗ್ಗಜರಿಗೆ** ಆಶ್ರಯ ನೀಡಿರಬೇಕು.

ಸಾಳುವ ನರಸಿಂಹರಾಯನ ಕಾಲದಲ್ಲಿ ಇಬ್ಬರು ತೆಲುಗು ಕವಿಗಳು ಪ್ರಸಿದ್ಧರಾದರು. ಅವರು ಇಬ್ಬರು ಸೇರಿ ಜಂಟಿಯಲ್ಲಿ ಕಾವ್ಯರಚನೆ ಮಾಡುತ್ತಿದ್ದರು. ಅವರು ತುಳುವ ನರಸನಾಯಕನ ಪ್ರೋತ್ಸಾಹವನ್ನೂ ಪಡೆದರು. ಅವರೇ ಗುಂಟೂರು ಜಿಲ್ಲೆಯ ನಂದಿ ಮಲ್ಲಯ್ಯ ಮತ್ತು ಘಂಟಸಿಂಗನ್ನ. ಅವರು ಕೃಷ್ಣ ಮಿಶ್ರನ ಪ್ರಬೋಧ ಚಂದ್ರೋದಯವನ್ನು ತೆಲುಗಿಗೆ ಅನುವಾದ ಮಾಡಿದರು. ಅವರು ಅನೇಕ ಬದಲಾವಣೆ ಮಾಡಿ ತಮ್ಮ ರೀತಿಯಲ್ಲಿ ಪುನಃ ಸೃಜಿಸಿದ ಕಾವ್ಯವದು. ಅದು ಮೂಲದಲ್ಲಿ ನಾಟಕ. ತೆಲುಗಿನಲ್ಲಿ ಅದೊಂದು ಪ್ರಬಂಧವು ವಿಜಯನಗರ ಕಾಲದಲ್ಲಿ ಆವಿಷ್ಕಾರಗೊಂಡ ಹೊಸರೀತಿಯ ಕಾವ್ಯ. ಈ ಕಾವ್ಯವು ಉದಯಗಿರಿ ರಾಜ್ಯದ ಪ್ರಭುವಾದ ಬಸವರಾಜನ ಮುಖ್ಯಮಂತ್ರಿ ಚಂದಲೂರಿ ಗಂಗಣ್ಣ ಮಂತ್ರಿಗೆ ಅಂಕಿತವಾಗಿದೆ. ಈ ಕಾವ್ಯವು ಸಹಜವಾದ ಕಾವ್ಯಭಾವ, ಲಯ ಮತ್ತು ನಾದಮಯತೆಯಿಂದ ಕೂಡಿದೆ, ನೇರವಾದ, ಸಹಜವಾದ ಮತ್ತು ಸುಲಭಗ್ರಾಹ್ಯವಾದ ಶೈಲಿಯನ್ನು ಕವಿಗಳು ಬಳಸಿದ್ದಾರೆ.

ಈ ಉಭಯ ಕವಿಗಳು ನರಸನಾಯಕನ ಆಶ್ರಯದಲ್ಲಿ ತಮ್ಮ ಎರಡನೇ ಕೃತಿ **'ವರಾಹಪುರಾಣ'** ರಚಿಸಿದರು. ಅದು ಅವರ ಪೋಷಕನಾದ ನರಸನಾಯಕನಿಗೆ ಅಂಕಿತವಾಗಿದೆ. ಶ್ರೀಮಹಾವಿಷ್ಣುವಿನ ಅವತಾರವಾದ **ವರಾಹದ** ವಸ್ತುವೇ ವರಾಹ ಪುರಾಣದ ಕಥೆ, ಸಂಸ್ಕೃತದ ವರಾಹಪುರಾಣವನ್ನು ಅನುಸರಿಸಿ ಬರೆಯುತ್ತ ಅನೇಕ ಸುಂದರ ಕಥಾನಕಗಳನ್ನು ಸೇರಿಸಿ ಆಕರ್ಷಕ ಕಾವ್ಯವನ್ನಾಗಿ ಮಾಡಿದರು. ಇನ್ನೆರಡು ಕಾವ್ಯಗಳಾದ **ವರಲಕ್ಷ್ಮಿ ಪುರಾಣ** ಮತ್ತು **ನರಸಿಂಹ ಪುರಾಣ** ಗಳು ಕೂಡಾ ಜೋಡಿ ಕವಿಗಳಿಂದ ರಚಿಸಲ್ಪಟ್ಟವು. ಈ ಕಾವ್ಯಗಳು ನರಸನಾಯಕನಿಗೆ ಅಂಕಿತವಾಗಿದೆ. ರಾಯವಾಚಕವು ವೀರ ನರಸಿಂಹನ ಆಸ್ಥಾನದಲ್ಲಿ ಅನೇಕ ಪಂಡಿತರೂ, ಕವಿಗಳೂ ಇದ್ದರೆಂದು ತಿಳಿಸುತ್ತದೆ. ಆದರೆ ಆತನಿಗೆ ಯಾವೊಂದು ಕಾವ್ಯವೂ ಅಂಕಿತವಾಗಿಲ್ಲ. ಯಾವ ಕವಿಯೂ ತಾನು ವೀರ ನರಸಿಂಹನ ಆಸ್ಥಾನ ಕವಿಯಾಗಿದ್ದೆನೆಂದು ಹೇಳಿಕೊಂಡಿಲ್ಲ. ವೀರನರಸಿಂಹನು ಯಾವುದೇ ಕಾವ್ಯ, ನಾಟಕ ಬರೆಯಲು ಯಾರನ್ನೂ ನಿಯೋಜಿಸಲಿಲ್ಲ. ವೀರನರಸಿಂಹನು ತನ್ನ ಸಾಮ್ರಾಜ್ಯವನ್ನು ಸಂಘಟಿಸುವಲ್ಲಿ ನಿರತನಾಗಿದ್ದನು ಆತನಿಗೆ ಕಲೆ, ಸಾಹಿತ್ಯದ ಕಡೆಗೆ ವಿಶೇಷ ಗಮನಕೊಡಲು ಪುರಸೊತ್ತಿರಲಿಲ್ಲ. ಯಾವುದಾದರೂ ಕೃತಿ ರಚನೆಯಾಗಿದ್ದರೂ ಅದು ಈವರೆಗೆ ದೊರೆತಿಲ್ಲ. ಪ್ರಾಯಃ ನಾಶವಾಗಿದೆ. ಮಾಚುಪಲ್ಲೆ ಕೈಫಿಯತ್ತಿನಿಂದ ನಮಗೆ ತಿಳಿಯುವುದೇನೆಂದರೆ[80] ಯಕ್ಷಗಾನ ನಾಟಕವನ್ನು ನೋಡಿದ ವೀರನರಸಿಂಹನು ಪ್ರಜಾಪೀಡಕ ಗುರುವರಾಜನನ್ನು ಶಿಕ್ಷಿಸಲು ಸೈನ್ಯದ ತುಕಡಿಯನ್ನೇ ಕಳಿಸಿದನು. ಇದರಿಂದ ಕಲಾ ಮತ್ತು ಸಾಹಿತ್ಯದಲ್ಲಿ ಆತನ ಆಸ್ಥೆ ತಿಳಿಯುತ್ತದೆ. ಆತನ ಆಡಳಿತದ ಅಲ್ಪಕಾಲದಲ್ಲಿ ಭುಗಿಲೆದ್ದ

ಆಂತರಿಕ ಮತ್ತು ಹೊರಗಿನ ತೊಂದರೆಗಳಿಂದಾಗಿ ಕಲಾವಿದರಿಗೆ ಮತ್ತು ಕವಿಗಳಿಗೆ ಪ್ರೋತ್ಸಾಹ ನೀಡಲು ಆಗಲಿಲ್ಲ. ಆದರೆ ಆ ಕಾಲದಲ್ಲಿ ಸ್ವತಂತ್ರವಾಗಿ ಕಾವ್ಯ ನಿರ್ಮಿತಿಯಲ್ಲಿ ತೊಡಗಿದವರೂ, ಕೆಲ ನಾಯಕರ ಆಸ್ಥಾನದಲ್ಲಿ ಅಥವಾ ಮಂತ್ರಿವರ್ಯರ ಪೋಷಣೆಯಲ್ಲಿ ಕವಿಗಳು ಇದ್ದರು. ಅವರಲ್ಲಿ ಕೊರವಿ ಗೋಪರಾಜು (ಕ್ರಿ.ಶ. 1500–1530) ಮಾದಯ್ಯ ಕವಿ, ಮನುಮಂಚಿ ಭಟ್ಟ ಮತ್ತು ಮಾದಯ್ಯಗಾರಿ ಮಲ್ಲನ್ನ ಪ್ರಸಿದ್ಧರು.

ಕೊರವಿ ಗೋಪರಾಜ 'ಸಿಂಹಾಸನ ದ್ವೈತ್ರಿಂಶಿಕಾ' ರಚಿಸಿದರು. ಇದರಲ್ಲಿ 12 ಅಧ್ಯಾಯಗಳಲ್ಲಿ 32 ಗೊಂಬೆಗಳು 32 ಕಥೆ ಹೇಳುತ್ತವೆ. ಈ ಕಥೆಗಳಲ್ಲಿ ಮನುಷ್ಯ ಜೀವನದ ಎಲ್ಲಾ ವಿಷಯಗಳ ವಿವೇಚನ ಆಗಿದೆ. ಮದುವೆ, ಕಾಮ, ಮಗನ ಜನನ, ರಾಜಕೀಯ, ಋತುವರ್ಣನೆ, ಸೂರ್ಯೋದಯ ಸೂರ್ಯಾಸ್ತಮಯ ಬಣ್ಣನೆ; ಬೆಳದಿಂಗಳ ಬೆಳಕು, ವಿರಹ, ಆಧ್ಯಾತ್ಮ, ಬೇಟೆ, ಸಿಳ್ಳು ಹಾಕುವುದು, ಸ್ವಪ್ನಗಳು ಮತ್ತು ಅವುಗಳ ಅರ್ಥ ಅಥವಾ ಫಲಿತಾಂಶ, ಜೋತಿಷ್ಯ, ದಾಳ, ಹಾಸ್ಯ, ತಸ್ಕರರಿಗೆ ಶಿಕ್ಷೆ, ಅನರ್ಘ್ಯ ರತ್ನಗಳು, ದಾಖಲೆಗಳ ರಕ್ಷಣೆ, ಸಪ್ತಸಂತಾನ, ಹಗ್ಗದ ಯಕ್ಷಿಣಿ, ವಿಧವೆಯರ ಕರ್ತವ್ಯ, ಅರವತ್ನಾಲ್ಕು ವಿದ್ಯೆಗಳು ಇತ್ಯಾದಿ. ಈ ವಿದ್ಯೆಗಳ ಪಟ್ಟಿಮಾಡಿಲ್ಲ. ಆದರೆ ಅವುಗಳನ್ನು ಕಥಾ ರೂಪದಲ್ಲಿ ಅತ್ಯಂತ ಸುಂದರವಾದ ಶಿಲ್ಪದಲ್ಲಿ ಸೃಷ್ಟಿಮಾಡಿದ್ದಾರೆ. ಗೋಪರಾಜು ತನ್ನ ಕೃತಿಯನ್ನು ಯಾರಿಗೂ ಅರ್ಪಿಸಲಿಲ್ಲ. ಪೋತನರಂತೆ ತನ್ನ ಕೃತಿಯನ್ನು ಹರಿಹರನಾಥನಿಗೆ ಅರ್ಪಿಸಿದ್ದಾನೆ.

ಆ ಕಾಲದ ಮತ್ತೊಬ್ಬ ಪ್ರಸಿದ್ಧ ಕವಿಯೆಂದರೆ ಮಾದಯ್ಯ ಕವಿ (ಕ್ರಿ.ಶ. 1485–1508) ಮಾದಯ್ಯ ಕವಿಯು ಸಾಮ್ರಾಜ್ಯದ ಅನೇಕ ಆಸ್ಥಾನಗಳಿಗೆ ಸಂದರ್ಶನವಿತ್ತನು. ವೀರನರಸಿಂಹರಾಯ ಈ ಕವಿಯನ್ನು ತುಂಬಾ ಪ್ರಶಂಸೆ ಮಾಡಿದನು.[81] ಆತನು ತನ್ನ ದ್ವಿಪದ ಕಾವ್ಯ **ದೇವೇಂದ್ರ ವಿಜಯಮು**ವನ್ನು ಎರ್ರಮಂತ್ರಿಗೆ ಅರ್ಪಿಸಿದ್ದಾನೆ. ಆತನ ಮತ್ತೊಂದು ಕಾವ್ಯ **'ಮೈರಾವಣ ಚರಿತ್ರೆ'** ಯನ್ನು ಗೋಪಮಂತ್ರಿಗೆ ಅರ್ಪಿಸಿದ್ದಾನೆ. ಈ ಕೃತಿಯ ಮೂಲಕ ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ಗುರುತಿಸಬಹುದು. ಕೋಟ ಸಿಂಘನನ ಆಸ್ಥಾನ ಕವಿಯಾದ ತಸ್ಕರ ಕವಿರಾಜನನ್ನು ಮಾದಯ್ಯ ಕವಿಯು ತರ್ಕದಲ್ಲಿ ಸೋಲಿಸಿದನಂತೆ. ಕೋಟ ಸಿಂಘನ ಮಂತ್ರಿಯಾಗಿದ್ದನು. ರಾಜಮಹೇಂದ್ರವರದ ಪತ್ತೀಶ ವೀರಭದ್ರೇಶನ ಭಕ್ತನು.[82]

ಮನುಮಂಚಿ ಭಟ್ಟನು 'ಹಯಲಕ್ಷಣ ವಿಲಾಸಮು' ಎಂಬ ಗ್ರಂಥವನ್ನು ರಚಿಸಿ ಕಂಪಭೂಪಾಲನಿಗೆ ಅರ್ಪಿಸಿದನು. ಇದೊಂದು ಅಶ್ವಲಕ್ಷಣ ಶಾಸ್ತ್ರ ಮತ್ತು ತರಬೇತಿಯ ಪುಸ್ತಕ. ಸದ್ಯ ಈ ಗ್ರಂಥದ ಕೆಲಭಾಗಗಳು ಮಾತ್ರ ಲಭ್ಯ. ಲಭ್ಯವಿರುವ **ಹಯಲಕ್ಷಣ ವಿಲಾಸಮು** ಗ್ರಂಥದಲ್ಲಿ 377 ಪದ್ಯಗಳಿವೆ. ಇದರಲ್ಲಿ ಅನ್ಯರು ರಚಿಸಿದ ಕೆಲ ಪದ್ಯಗಳೂ ಸೇರಿವೆ. ಕೃತಿಯಲ್ಲಿ ಐದು ಅಧ್ಯಾಯಗಳಿವೆ. ಒಂದನೇ ಅಧ್ಯಾಯದಲ್ಲಿ ಅಶ್ವದಳದ ವಿವರವಿದೆ. ಎರಡನೇ ಅಧ್ಯಾಯದಲ್ಲಿ ಕುದುರೆಯ ಕೂದಲ ಸುಳಿಗಳ ವಿವರವಿದೆ. ಈ ಸುಳಿಗಳಿಂದ ಕುದುರೆಯ ಗುಣ, ಸ್ವಭಾವ, ಬರಬಹುದಾದ ರೋಗಗಳು, ಆಯುಃ ಪ್ರಮಾಣ ಇತ್ಯಾದಿ ತಿಳಿಯಬಹುದಾಗಿದೆ. ಮುಂದಿನ ಅಧ್ಯಾಯದಲ್ಲಿ ಕುದುರೆಯ ದೇಹಶಾಸ್ತ್ರ (ಅನಾಟಮಿ) ವಿವರಿಸಲ್ಪಟ್ಟಿದೆ. ಕುದುರೆಯ ದೇಹದ ಸುಮಾರು 80 ಭಾಗಗಳು–



ಅವುಗಳ ಅಳತೆಗಳು ವಿವರಿಸಲ್ಪಟ್ಟಿವೆ. ಹಾಲು ಹಲ್ಲಿನ ಸಂಖ್ಯೆಯ ಆಧಾರದ ಮೇಲೆ, ಗಟ್ಟಿ ಹಲ್ಲಿನ ಆಧಾರದ ಮೇಲೆ ಕುದುರೆಯ ಆಯುಷ್ಯವನ್ನು ವೈಜ್ಞಾನಿಕವಾಗಿ ನಿರ್ಧರಿಸುವ ಮಾರ್ಗಗಳಿವೆ. ನಾಲ್ಕನೇ ಅಧ್ಯಾಯದಲ್ಲಿ ಕುದುರೆಯ ದೇಹದ ಅಂಗಾಂಗಗಳ ಲೋಪದೋಷಗಳು ಮತ್ತು ಅವುಗಳ ಪರಿಣಾಮಗಳನ್ನು ವಿವರಿಸಲಾಗಿದೆ. ಐದನೇ ಅಧ್ಯಾಯದಲ್ಲಿ ಮನುಮಂಚಿ ಭಟ್ಟ ತಿಳಿಸಿದಂತೆ ಕುದುರೆಯ ರೋಗ ನಿಧಾನ, ಚಿಕಿತ್ಸಾ ವಿಧಾನ ಮತ್ತು ಗುಣವಾಗಬಹುದಾದ ರೋಗಗಳ ಪಟ್ಟಿಯನ್ನು, ಶುಶ್ರೂಷಾ ವಿಧಿಯನ್ನು ವಿವರಿಸಲಾಗಿದೆ. ಆ ಕಾಲದಲ್ಲಿ ಸಾಮಾನ್ಯವಾಗಿ ಕುದುರೆಗಳಿಗೆ ಬರುತ್ತಿದ್ದ ರೋಗಗಳು ಇವು ಆಗಿರಬಹುದು. ವಾತ, ಪಿತ್ತ, ಕಫಗಳ ಏರುಪೇರಿನಿಂದಲೇ ಕುದುರೆಗಳು ವ್ಯಾಧಿಗ್ರಸ್ತವಾಗುತ್ತಿದ್ದುವೆಂದು ಹೇಳಲಾಗಿದೆ. ಔಷಧೋಪಚಾರಗಳು ಕೂಡಾ ಆಯಾ ದೋಷ ಪರಿಹಾರದ ಗುರಿಯಿಂದಲೇ ಹೇಳಲ್ಪಟ್ಟಿವೆ. ಆದ್ದರಿಂದ ತ್ರಿದೋಷಗಳ ಸಮತೋಲನವನ್ನು ಕಾಯುವುದೇ ರೋಗನಿಧಾನದ ತತ್ವ, ಅನಂತರ ಋತುಚರ್ಯ, ಸಾಮಾನ್ಯವಾಗಿ ಬರಬಹುದಾದ ರೋಗಗಳ ವಿವರ ಮತ್ತು ಇತರ ವಿವರಗಳಿವೆ.

'ಹಯಲಕ್ಷಣವಿಲಾಸಮು' ಗ್ರಂಥದಲ್ಲಿ ಕುದುರೆಗಳಿಗೆ ಬರಬಹುದಾದ ರೋಗಗಳ ಬಗ್ಗೆ ಶ್ರೇಷ್ಠವಾದ ವೈಜ್ಞಾನಿಕ ಔಷಧೋಪಚಾರಗಳನ್ನು ನೀಡಲಾಗಿದೆ. ಇದರಿಂದ ಆ ಕಾಲದಲ್ಲಿ ಅಶ್ವವೈದ್ಯರಿಗೂ, ರಾಜ್ಯಪಾಲರಿಗೂ, ಬಲವಾದ ಅಶ್ವದಳದ ಅವಶ್ಯಕತೆಯನ್ನು ತಿಳಿದ ರಾಜರಿಗೂ ಉಪಯುಕ್ತ ಗ್ರಂಥವಾಗಿರಬೇಕು. ಕಾಲಾನಂತರದಲ್ಲಿ ವಿಜಯನಗರ ಅಶ್ವದಳವನ್ನು ಸಮರ್ಥಗೊಳಿಸುವಲ್ಲಿ ಈ ಗ್ರಂಥದಿಂದ ಉಪಕಾರವಾಗಿರಬೇಕು.

ಯಕ್ಷಗಾನ ಸಾಹಿತ್ಯವೂ ಆಗ ಮಹತ್ವ ಪಡೆಯಿತು. ಜನ ಸಾಮಾನ್ಯರ ಕಲ್ಪನೆಗೆ ಈ ಬಯಲಾಟದಿಂದ ತೃಪ್ತಿ ದೊರಕಿತು. ಪ್ರಸಿದ್ಧ ಯಕ್ಷಗಾನ ಕೃತಿಕಾರ ಪ್ರೋಲುಗಂಟಿ ಚೆನ್ನಯ ಮಂತ್ರಿಯನ್ನು ವೀರನರಸಿಂಹರಾಯನು ಸನ್ಮಾನಿಸಿದರು.[83] ಆತನು **ನರಸಿಂಹ ಪುರಾಣಮು, ಬಾಲಭಾಗವತಮು** ಮತ್ತು **ಸೌಭರಿ ಚರಿತ್ರಮು** ರಚಿಸಿದ್ದಾನೆ. ಇದರಲ್ಲಿ ಕೊನೆಯದು ಯಕ್ಷಗಾನ ರೀತಿಯ ಕೃತಿ, ಮಹಾವಿಷ್ಣುವು ಶಬರಿಕನ್ಯೆಯಾದ ಚೆಂಚು ಲಕ್ಷ್ಮಿಯನ್ನು ಮದುವೆಯಾದುದೇ ಕಥಾವಸ್ತು. ಮಚ್ಚುಪಲ್ಲೆ ಕೈಫಿಯತ್‌ನಲ್ಲಿ ದುಷ್ಟ ರಾಜನ ಕತೆಯನ್ನು ಹೇಳಲಾಗಿದೆ. ವೀರನರಸಿಂಹನ ಅಡಿಯಲ್ಲಿ ಪಾಳೇಗಾರನಾದ ಸಂಬೆಟ ಗುರುವರಾಯನು ಮಚ್ಚುಪಲ್ಲೆಯನ್ನು ಆಳುವಾಗ ಬಡರೈತರಿಗೆ ನಾನಾ ಹಿಂಸೆ ಕೊಡುತ್ತಿದ್ದನು. ರೈತರು ಈ ವಿಷಯವನ್ನು ಸಾಮ್ರಾಟನಿಗೆ ನಿವೇಸಿಲು ಯಕ್ಷಗಾನ ಮಂಡಲಿಯನ್ನು ವೀರನರಸಿಂಹನ ಆಸ್ಥಾನಕ್ಕೆ ಕಳಿಸಿದರು. ನಾಟಕದಿಂದ ಪ್ರಭಾವಿತನಾದ ವೀರನರಸಿಂಹನು ದುಷ್ಟ ಆಡಳಿತಗಾರನಿಗೆ ಬುದ್ಧಿ ಕಲಿಸಲು ತಕ್ಷಣ ಒಂದು ದಳವನ್ನು ಮಚ್ಚುಪಲ್ಲೆಗೆ ಕಳಿಸಿದನು. ಯಕ್ಷಗಾನ ಕಲಾವಿದರು ಜನ ಸಾಮಾನ್ಯರಿಗೆ ಮನರಂಜನೆ ನೀಡಿದರಲ್ಲದೇ ಅವರಿಗೆ ಉಂಟಾದ ಕಷ್ಟ ನಿವಾರಣೆಯಲ್ಲಿ ತಮ್ಮ ಕಲಾಮಾಧ್ಯಮದ ಮುಖಾಂತರ ಪ್ರಯತ್ನಿಸಿದರು.

**ರಂಗಭೂಮಿ :** ಕ್ರಿ.ಶ. 1460ರ ತಿರುಮಲೆಯ ಶಾಸನದಲ್ಲಿ **ನಾಟಕಶಾಲೆಯ** ಉಲ್ಲೇಖವಿದೆ. ತಿಮ್ಮನಾಯಕನ ಮಗ ತಿಪ್ಪನಾಯಕನು ನಟನಾಗಿದ್ದನು[85] ರಾಯವಾಚಕದಲ್ಲಿ

ವೀರನರಸಿಂಹನ ಆಸ್ಥಾನದಲ್ಲಿ ನಾಟಕಕಾರರಿದ್ದರೆಂದು ಹೇಳಲಾಗಿದೆ.[86] ಅಂದರೆ ರಾಯನು ನಾಟಕಕಾರರಿಗೆ ಉತ್ತೇಜನ ನೀಡುತ್ತಿದ್ದನು ಎಂದರ್ಥ.

**ಶಿಕ್ಷಣ :** ಮಧ್ಯಕಾಲೀನ ಭಾರತದಲ್ಲಿ ಮಠಗಳು, ದೇವಾಲಯಗಳು ಮತ್ತು ಅಗ್ರಹಾರಗಳೇ ಶಿಕ್ಷಣ ಕೇಂದ್ರವಾಗಿದ್ದವು. ಅರಮನೆಗಳಲ್ಲಿ, ಶ್ರೀಮಂತರ ಮತ್ತು ಅರಸುಮನೆತನದವರ ಮನೆಗಳಲ್ಲಿ ಅವರ ಮಕ್ಕಳಿಗೆ ಪಾಠ ಹೇಳಲು ಪಂಡಿತರು ಬರುತ್ತಿದ್ದರು. ಸಾಮಾನ್ಯರ ಮಕ್ಕಳು ಗುರು ಮನೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಶೈವ, ವೈಷ್ಣವ ಮತ್ತು ಜೈನ ಗುರುಗಳು ವಿದ್ಯಾರ್ಥಿಗಳಿಗೆ ಪಾಠ ಹೇಳುವುದು ತಮ್ಮ ಕರ್ತವ್ಯವೆಂದು ಭಾವಿಸಿದ್ದರು.

ಕ್ರಿ.ಶ. 1478ರ ಶಾಸನದಲ್ಲಿ ಅಘೋರ ಶಿವಾಚಾರ್ಯನೆಂಬುವರು ಕಂಚಿಯ ಏಕಾಮ್ರನಾಥ ದೇವಸ್ಥಾನದಲ್ಲಿ ಆಚಾರ್ಯರಾಗಿದ್ದರೆಂದರು ಹೇಳಲಾಗಿದೆ[87] ಕ್ರಿ.ಶ. 1501[88] ಮತ್ತು 1541[89]ರ ಶಾಸನದಲ್ಲಿ **ಶಿವಾಚಾರ್ಯ** ಎಂಬುವರ ಹೆಸರಿದೆ. ಈತನು ಕಾಂಚೀಪುರದಲ್ಲಿ ನಿಡುಗಾಲ ವಾಸವಾಗಿದ್ದು ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿರಬಹುದು. ಈತನು ಹಿರಿಯ ಗುರುವಾಗಿದ್ದುದಲ್ಲದೇ ಸಾಮಾನ್ಯ ಶಿಕ್ಷಣದ ಶಿಕ್ಷಕನೂ ಆಗಿರಬಹುದು. ಅಂದಿನ ಪ್ರಸಿದ್ಧ ಕವಿಗಳಾದ ನಂದಿ ಮಲ್ಲಯ್ಯ, ಘಂಟಸಿಂಗನ ಮಾದಯ್ಯಗಾರಿ ಮಲ್ಲನ, ಮುಕ್ಕುತಿಮ್ಮನರೆಲ್ಲಾ ಕಂಚಿಯ ಶಿವಾಚಾರ್ಯನ ಶಿಷ್ಯರಂತೆ.[90] ಮಾದಯ್ಯಗಾರಿ ಮಲ್ಲನನು ತನ್ನ **ರಾಜಶೇಖರ ಚರಿತ್ರ**ದಲ್ಲಿ ಒಬ್ಬ ಗುರುವಿನ ಚಿತ್ರವನ್ನು ನೀಡಿದ್ದಾನೆ. ಆತನ ಕಣ್ಮುಂದೆ ಪ್ರಾಯಃ ಅಘೋರ ಶಿವಾಚಾರ್ಯನೇ ಇರಬೇಕು. ಶಿವಾಚಾರ್ಯರು ದೂರದೂರದಿಂದ ಬಂದ ಶಿಷ್ಯರಿಗೆ ಆಶ್ರಯ ನೀಡಿ, ಅನ್ನಬಟ್ಟೆಗಳನ್ನು ನೀಡಿ, ಅನೇಕ ಶಾಸ್ತ್ರಗಳನ್ನು ಸೂತ್ರಗಳನ್ನು ಕಲಿಸಿಕೊಡುತ್ತಿದ್ದರು.[91] ವಿದ್ವಾಂಸರಾದ ಬ್ರಾಹ್ಮಣರು ರಾಯರಿಂದ ಪಡೆದ ಅಗ್ರಹಾರಗಳಲ್ಲಿ ಮುಕ್ತವಾಗಿ ವಿದ್ಯಾರ್ಥಿಗಳಿಗೆ ತಮ್ಮ ಮನೆಗಳಲ್ಲಿಯೇ ಅಶನ, ವಸನ ನೀಡುತ್ತಿದ್ದರು.

ದೇವಾಲಯಗಳಲ್ಲಿ ಧಾರ್ಮಿಕ ಸಾಹಿತ್ಯದ ಪಠನ ಮಾಡಲು ಪ್ರೋತ್ಸಾಹವಿತ್ತು. ರಾಯರು ಪಂಡಿತರನ್ನು ಆಹ್ವಾನಿಸಿ ಸನ್ಮಾನಿಸಿ ಆಚಾರ್ಯರೆಂದು ಪದವಿ ನೀಡುತ್ತಿದ್ದರು. ಕ್ರಿ.ಶ. 1506ರ ಶಾಸನ[92] ಪ್ರಕಾರ ಭುಜಬಲ ಪ್ರತಾಪ ನರಸಿಂಹ ಮಹಾರಾಜರು ಚಂದ್ರಪುಷ್ಕರಿಣಿ ತಟದಲ್ಲಿ ಶ್ರೀರಂಗನಾಥನಿಗೆ **ಮಹಾಭೂತ ಘಟ**ವನ್ನು ಸಮರ್ಪಿಸುವ ಸಂದರ್ಭದಲ್ಲಿ, ಷಡ್ದರ್ಶನ ವಿಶಾರದರಾದ ರಂಗನಾಥ ಭಟ್ಟರನ್ನು **ಆಚಾರ್ಯ** ಪದವಿ ನೀಡಿ ಸನ್ಮಾನಿಸಿ ಉಮ್ಮತ್ತೂರು ಚಿಕ್ಕರಾಯ ಒಡೆಯರ ರಾಜ್ಯದ **ಹೊನ್ನಕಹಳ್ಳಿ**ಯನ್ನು ದಾನವಾಗಿ ನೀಡಿದರು.

ಅನೇಕ ಶಾಸನಗಳು ದೇವಸ್ಥಾನಗಳಲ್ಲಿ ನಡೆಯುತ್ತಿದ್ದ **ಅಧ್ಯಯನ** ಮುಂತಾದ ಸೇವೆಗಳ ಬಗ್ಗೆ ವಿವರಿಸುತ್ತವೆ.

**ಅಡಿ ಟಿಪ್ಪಣಿಗಳು**

1. ಬಾರ್ಬೋಸಾ I ಪು. 216
2. ಫರ್ದರ್ ಸೋರ್ಸಸ್ II-106
3. ಎ.ಕ. XII Mi 64
4. ಬಾರ್ಬೋಸಾ I ಪು. 225



5. ಪಾರಿಜಾತಾಪಹರಣಮು I-93
6. ನೇಲಟೂರು ವೆಂಕಟರಮಣಯ್ಯ – ಸ್ಟಡೀಸ್ ಇನ್. ದಿ. ಥರ್ಡ ಡೈನಾಸ್ಟಿ 399 ಅಡಿಟಿಪ್ಪಣಿ
7. ವಿ. ಪ್ರಭಾಕರಶಾಸ್ತ್ರಿ ಸಂ : ಚಾಟುಪದ್ಯಮಂಜರಿ ಪು. 94–95
8. ಬಾರ್ಬೋಸಾ I ಪು. 216
9. ಎ.ಕ. VIII Sb 165
10. ಬಾರ್ಬೋಸಾ I ಪು. 218–219
11. ಅದೇ
12. ಸಮಗ್ರಾಂಧ್ರ ಸಾಹಿತ್ಯಮು – ಮಲಿರಾಯಲಯುಗಮು ಪು. 36
13. ಪಿ. ಹೈಮವತಿ 'ಇನ್ಸ್ಟಿಟ್ಯೂಷನ್ ಆಫ್ ಮ್ಯಾರಿಯೇಜ್ ಅಂಡರ್ ವಿಜಯನಗರ / ಪ್ರೋಸೀಡಿಂಗ್ಸ್ ಆಫ್ ಹಿಸ್ಟರಿ ಕಾಂಗ್ರೆಸ್–1983 ಪು. 58–60
14. ಅದೇ ಪು. 58–60
15. ಬಾರ್ಬೋಸಾ I ಪು. 217–218
16. ಫ. ಎಂಪೈರ್ ಪು. 115
17. ಬಾರ್ಬೋಸಾ I ಪು. 217–218
18. ಅದೇ
19. ಅದೇ ಪು. 207
20. ಸಮಗ್ರಾಂಧ್ರ ಸಾಹಿತ್ಯಮು ಮಲಿರಾಯಲ ಯುಗಮು ಪು 36
21. ಬಾರ್ಬೋಸಾ I ಪು. 207
22. ಅದೇ I ಪು. 205
23. ಅದೇ I ಪು. 125
24. ಅದೇ I ಪು. 192
25. ಅದೇ I ಪು. 194–185 ಮತ್ತು 188
26. ಅದೇ I ಪು. 200
27. ಅದೇ I ಪು. 203
28. ARE 155-1939
29. ಬಾರ್ಬೋಸಾ I ಪು. 192
30. ಮಹಾಲಿಂಗಂ ಟಿ. ವಿ. ಅಡ್ಮಿನಿಸ್ಟ್ರೇಶನ್ ಅಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ ಭಾಗ II ಪು. 92–95
31. ಬಾರ್ಬೋಸಾ II ಪು. 91
32. ಅದೇ
33. ಅದೇ I ಪು. 185
34. ಅದೇ I ಪು. 161
35. ಅದೇ
36. ಫ. ಎಂಪೈರ್ ಪು. 115
37. ARE 438-1916 H.I.S.I ಪು. 232
38. ಬಿ. ಎ. ಸಾಲೆತೊರೆ, ಸೋಶಿಯಲ್ & ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪೈರ್ ಪು. 226–227
39. MAR ಪು. 33–1905
40. ಫರ್ದರ್ ಸೋರ್ಸಸ್ II ಪು. 96

41. ಅದೇ 104 (ಕೇರಳ ಪಲಮ)
42. ಅದೇ 102 ಪು. 85
43. ARE 144/1939-1940
44. ಟಿ. ವಿ. ಮಹಾಲಿಂಗಂ ಪೂರ್ವೋಕ್ತ ಪು. 208
45. ವೀರನರಸಿಂಹನ ಕುಡಿಯಂತಾಡಲ್ ದತ್ತಿ ಶಾಸನ
46. ಫರ್ದರ್ ಸೋರ್ಸಸ್ II 56
47. ಎಕ XVI.Mi BIC, EC IV GU 67 ARE 171/1413 54/1915 TTD 1 III 65
48. MAR - 1930 ಪ್ಯಾರಾ 86
49. T.T.D.I. III 63
50. ARE 423/1928
51. ಅದೇ
52. ಅದೇ 410/1928, 214/1938
53. ಅದೇ 219/1946–47, 203/1950–51, 408/1913 TTDI–III-15
54. ಅದೇ 214/1938
55. ಅದೇ 147/1914
56. ಎ.ಕ. IX Ma 82 ಪು. 61
57. ಅದೇ VII SB. 323. ಪು. 53
58. ಎ.ಕ. IV ಗು. 67 ಪು. 47
59. ARE 420/1913
60. ARE 271/1932 TTDI-III-4
61. TTDI - III - 16
62. ARE 155/1939
63. ಅದೇ 201/1950-51
64. TTDI III-7-11-133
65. ಅದೇ III 5, 8, 10
66. ಅದೇ III 136
67. ARE 408/1913
68. ಅದೇ 219/1946–47
69. TTDI III
70. ARE 201/1950-51
71. ಅದೇ 27/1928
72. ಅದೇ 269/1952
73. ARE 148/1943-44
74. S.I.I. IV 802
75. TTDI III-9
76. ಅದೇ III-9
77. ಎ.ಕ. X GD 38
78. ARE 219/1946-47, 148/1943-44
79. ಪಿ. ಶ್ರೀರಾಮಶರ್ಮ ಪೂರ್ವೋಕ್ತ ಪು. 265
80. ಫರ್ದರ್ ಸೋರ್ಸಸ್ II ಪು. 117–119
81. ಆರುದ್ರ ಸ. ಆಂ. ಸಾ. ಸಂ. 7 ಪು. 31
82. ಚಾಟುಪದ್ಯಮಂಜರಿ ಭಾಗ II ಪು. 72
83. ಭಾರತಿ ಮಾರ್ಚ 1949 ಪು. 162
84. ಫರ್ದರ್ ಸೋರ್ಸಸ್ II ಪು. 117–119
85. TTDI II-10
86. ಫರ್ದರ್ ಸೋರ್ಸಸ್ II ಪು. 96
87. ARE 408/1921
88. ಅದೇ 307/1905
89. ಅದೇ 303/1905
90. ಸಮಗ್ರಾಂಧ್ರ ಸಾಹಿತ್ಯ / ಆರುದ್ರ ಸಂ. VII ಪು. 60
91. ಅದೇ ಪು. 61
92. ಎ.ಕ. IV ಗು 67 ಪು. 47

## ಅಧ್ಯಾಯ – ೮

# ಸಮಾರೋಪ

ವಿಜಯನಗರವನ್ನು ಪರಿಪಾಲಿಸಿದ ನಾಲ್ಕು ವಂಶದ ಅರಸರಲ್ಲಿ ತುಳುವರೇ ಅತ್ಯಂತ ಪ್ರಖ್ಯಾತರು, ವೀರನರಸಿಂಹರಾಯನೇ ಈ ವಂಶದ ಸ್ಥಾಪಕನು, ತುರ್ವಸುಕುಲದ ತಿಮ್ಮನ ವಂಶದವರೇ ತುಳುವರೆಂದು ಕರೆಯಲ್ಪಟ್ಟರು. ಈ ವಂಶದವರು ಸೈನಿಕ ಉದ್ಯೋಗವನ್ನು ಅನುಸರಿಸಿದರು. ತಿಮ್ಮ ಭೂಪತಿಯು ಪ್ರಥಮವಾಗಿ ಈ ವಂಶದಲ್ಲಿ ಹೆಸರಾದನು. 'ವರಾಹಪುರಾಣ' ಕರ್ತೃಗಳು ತಿಳಿಸಿದಂತೆ ಅವರು ತಿಮ್ಮ ಭೂಪತಿಯ ಕಾಲದಲ್ಲಿ ತುಳುನಾಡಿನಿಂದ ಚಂದ್ರಗಿರಿಕಡೆಗೆ ವಲಸೆ ಬಂದಿರಬಹುದು. ತಿಮ್ಮನ ಮಗ ಈಶ್ವರ ಮತ್ತು ಆತನ ಮಗ ನರಸ ಅವರು ಸಾಳುವ ನರಸಿಂಹನ ಸೇನೆಯಲ್ಲಿ ಸೇನಾಪತಿಗಳಾದರು. ಅವರು ಕ್ಷತ್ರಿಯ ಧರ್ಮವನ್ನು ಅನುಸರಿಸಿದರು. ಅವರು ಯಾವ ಮೂಲದಿಂದಲೇ ಬಂದಿರಲಿ ಅವರನ್ನು ಕ್ಷತ್ರಿಯರೆಂದು ಅಂಗೀಕರಿಸಲಾಯಿತು. ವೀರನರಸಿಂಹ ರಾಯನು ವಿಜಯನಗರದ ವಜ್ರಸಿಂಹಾಸನವನ್ನು ಅಲಂಕರಿಸಿದಾಗಲೇ ತಾವು ಕ್ಷತ್ರಿಯರೆಂದು ಸಾರಿದನು.

ತುಳುವರು ತೆಲುಗು ಭಾಷೆಯನ್ನು ಕಲಿತರು, ತೆಲುಗು ಭಾಷೆಯನ್ನು ಮಾತೃ ಭಾಷೆಯೆಂದು ಅಂಗೀಕರಿಸಿದರು. ಅದರ ಅಭಿವೃದ್ಧಿಗೆ ನೆರವಾದರು. ಅವರು ತೆಲುಗು ನಾಡಿನ ಕನ್ಯೆಯರನ್ನು ವರಿಸಿ ತೆಲುಗುನಾಡಿನಲ್ಲಿ ಬದುಕಿದರು. ಅವರಿಗೂ ಸಾಳುವರಿಗೂ ರಕ್ತ ಸಂಬಂಧವಿರಲಿಲ್ಲ. ಸಾಳುವರು ಧನಿಗಳು, ತುಳುವರು ಅವರ ಸೇವಕರು.

ತುಳುವರ ಪುರಾತನರ ಬಗ್ಗೆ ಇದ್ದ ಅನುಮಾನಗಳೆಲ್ಲಾ ಶಾಸನಗಳ ಆಧಾರದಿಂದ ಮತ್ತು ಸಾಹಿತ್ಯ ಕೃತಿಗಳ ವಿವರಗಳಿಂದ ದೂರವಾಗಿವೆ. ತಿಮ್ಮ ಭೂಪತಿಯ ಮಗನಾದ ಈಶ್ವರ ನಾಯಕನು ಕ್ರಿ.ಶ. 1456 ರಿಂದ 1482ವರೆಗೆ ಸಾಳುವೆ ನರಸಿಂಹನ ಸೇನಾಪತಿಯಾಗಿದ್ದನು. ಅನಂತರ ಆತನ ಮಗ ನರಸನಾಯಕನು ಕ್ರಿ.ಶ. 1482ರಲ್ಲಿ ತಂದೆಯ ಸ್ಥಾನದಲ್ಲಿ ಸಾಳುವನ ಮಹಾಸೇನಾಪತಿಯಾದನು. ಆತನು ಮೊದಲನೇ ಶಾಸನವು ದಕ್ಷಿಣ ಅರ್ಕಾಟ್ ಜಿಲ್ಲೆಯ **ತಿರುವಕ್ಕರೈ** ನಲ್ಲಿ ಲಭಿಸಿದೆ ಕ್ರಿ.ಶ. 16–11–1483ರ ಈ ಶಾಸನದಲ್ಲಿ ನರಸನಾಯಕನನ್ನು **ರಾಜಪ್ರತಿನಿಧಿ** ಎಂದು ಕರೆಯಲಾಗಿದೆ. ಶಾಸನಗಳು ಮತ್ತು ವರಾಹಪುರಾಣದ ರಚನಾ ಕಾಲದ ಆಧಾರದಿಂದ ವೀರನರಸಿಂಹ ರಾಯನ ವಯಸ್ಸನ್ನು ನಿರ್ಧರಿಸಲಾಗಿದೆ. ಕ್ರಿ.ಶ. 1503ರಲ್ಲಿ ರಾಯನಿಗೆ ರಕ್ಷಕನಾಗಿ ಆತನು

ನಿಯುಕ್ತನಾದಾಗ ಆತನ ವಯಸ್ಸು ಅಂದಾಜು ನಲವತ್ತು ವರುಷ ಇರಬಹುದು. ಕ್ರಿ.ಶ. 1509ರಲ್ಲಿ ಆತನು ವಿಧಿವಶನಾದಾಗ ಆತನ ವಯಸ್ಸು ಕೇವಲ 46 ಅಥವಾ 47 ಇರಬಹುದು. ವೀರನರಸಿಂಹ ರಾಯನು ಇಮ್ಮಡಿ ನರಸಿಂಹರಾಯನ ರಕ್ಷಕ ಮತ್ತು ಪ್ರಧಾನ ಮಂತ್ರಿಯಾಗಿ, ನರಸನಾಯಕನ ಮರಣಾನಂತರ ನಿಯುಕ್ತನಾದನು. ಇಮ್ಮಡಿ ನರಸಿಂಹರಾಯನ ಹತ್ಯೆಯ ನಂತರ ನರಸನಾಯಕನು ಸಿಂಹಾಸನಗ್ರಹಣ ಮಾಡಿದನೆಂದು ನ್ಯೂನಿಜ್ ಹೇಳುವುದಕ್ಕೆ ಆಧಾರವಿಲ್ಲ. ಈ ವರೆಗೆ ಇಮ್ಮಡಿ ನರಸಿಂಹರಾಯನ ಕೊಲೆಯ ದಿನಾಂಕ ನಿಶ್ಚಿತವಾಗಿರಲಿಲ್ಲ. ಈಗಲೂ ಖಚಿತವಾಗಿ ಇಂಥದೇ ದಿನದಂದು ರಾಯನ ಕೊಲೆಯಾಯಿತೆಂದು ಹೇಳಲು ಆಧಾರಗಳಿಲ್ಲ. ಆದರೆ ಕ್ರಿ.ಶ. 1505ರ ಫೆಬ್ರುವರಿ 28 ರಿಂದ ಆಗಸ್ಟ್ 14ರ ನಡುವೆ ಎಂದೋ ಒಂದು ದಿನ ಕೊಲೆಯಾಗಿರಬೇಕು. **ವೀರಪ್ಪಯ್ಯ ಕಾಲಜ್ಞಾನ** ಮತ್ತು ವೀರನರಸಿಂಹನ ನಗರಗೆರೆ ಶಾಸನದ ಆಧಾರದ ಮೇಲೆ ನಿರ್ಧಾರಕ್ಕೆ ಬರಬಹುದು. ವೀರನರಸಿಂಹರಾಯನು ಕ್ರಿ.ಶ. 1509ರ 22–7–1509 ಮತ್ತು 26–07–1509ರ ಅವಧಿಯಲ್ಲಿ ಮರಣಿಸಿದನು.

ತುಳುವರು ವಿಜಯನಗರ ಸಾಮ್ರಾಜ್ಯದ ರಾಜಕೀಯದಲ್ಲಿ ಇದ್ದಕ್ಕಿದ್ದಂತೆ ಅವತರಿಸಲಿಲ್ಲ ವೀರನರಸಿಂಹರಾಯನ ಹಿರಿಯರು ಅವನು ಪ್ರಮುಖ ಪದವಿಗೇರಲು ಹಿನ್ನೆಲೆಯನ್ನು ರೂಪಿಸಿದರು. ತಿಮ್ಮ ಭೂಪತಿಯ ಮಗನಾದ ಈಶ್ವರನಾಯಕನು ಸಾಳುವ ನರಸಿಂಹನ ದಂಡನಾಯಕನಾಗಿ ಪ್ರಸಿದ್ಧನಾದನು. ನರಸನಾಯಕನು ತನ್ನ ಪ್ರಭು ಸಾಳುವ ನರಸಿಂಹನಿಗಾಗಿ ವಿದ್ಯಾನಗರವನ್ನು ವಶಪಡಿಸಿಕೊಂಡು ಸಮಸ್ತ ದಂಡನಾಯಕರ ಪರವಾಗಿ ವಿಜಯನಗರದ ವಜ್ರಸಿಂಹಾಸವನ್ನು ಅಲಂಕರಿಸಲು ಆಹ್ವಾನಿಸಿದನು. ಸಾಳುವ ನರಸಿಂಹನ ಪ್ರಧಾನಿಯಾಗಿ ಮತ್ತು ಸೇನಾಪತಿಯಾಗಿ ನರಸನಾಯಕನು ಸೇವೆ ಮಾಡಿದನು. ಅವನು ತನ್ನ ಯಜಮಾನನ ವಿಶ್ವಾಸವನ್ನು ಅದೆಷ್ಟು ಗಳಿಸಿದನೆಂದರೆ ಸಾಳುವನು ತನ್ನ ನಂತರ ತನ್ನ ಸುತರಲ್ಲಿ ಯೋಗ್ಯನಾದವನನ್ನು ಆರಿಸಿ ಪಟ್ಟಕ್ಕೇರಿಸುವ ಪರಮಾಧಿಕಾರವನ್ನು ನರಸನಾಯಕನಿಗೇ ವಹಿಸಿದನು. ಅವನು ಗತಿಸಿದ ತನ್ನ ಯಜಮಾನನ ಮಕ್ಕಳ ರಕ್ಷಕನಾಗಿ ತನ್ನ ಕೊನೆಗಾಲದ ವರೆಗೆ ಪ್ರಾಮಾಣಿಕನಾಗಿ ದುಡಿದನು.

ಯುವಕನಾದ ಅರಸನ ಮರಣಾನಂತರ ತಿಮ್ಮರಸನು ಸಿಂಹಾಸನವನ್ನು ಆಕ್ರಮಿಸಿದನೆಂದು ತಿಳಿಸುವ ಫರಿಷ್ತಾನ ಮಾತು ತಪ್ಪೆಂದು ಸಿದ್ಧವಾಗಿದೆ. ಯುವಕನಾದ ರಾಯನ ಕೊಲೆಗಾರ **ನಾದಿಂಡ್ಲ ತಿಮ್ಮರಸಯ್ಯ** ಎಂದು ಸಾಬೀತಾಗಿದೆ. ನರಸನಾಯಕನು ಗತಿಸಿದ ಎರಡು ವರ್ಷದ ನಂತರ ಇಮ್ಮಡಿ ನರಸಿಂಹನು ತೀರಿಕೊಂಡನು. ಕ್ರಿ.ಶ. 1505ರಲ್ಲಿ ನರಸನಾಯಕನು ಗತಿಸುವವರೆಗೆ ಇಮ್ಮಡಿ ನರಸಿಂಹನೇ ಸಾಮ್ರಾಟನಾಗಿದ್ದನು. ನರಸನಾಯಕನು ಇಮ್ಮಡಿ ನರಸಿಂಹನನ್ನು ಪೆನುಗೊಂಡೆಯ ಕೋಟೆಯಲ್ಲಿ ಬಂಧನದಲ್ಲಿಟ್ಟನೆಂಬ ಬಗ್ಗೆ ನೂನಿಜ್ ಹೇಳಿಕೆಯ ಹೊರತು ಬೇರೆ ಸಾಕ್ಷಿ ಇಲ್ಲ.

ತನ್ನ ಅರಸನ ಆಜ್ಞೆಯಂತೆ ನರಸನಾಯಕನು ಸಾಮ್ರಾಟನ ವಿರುದ್ಧ ಬಂಡೆದ್ದ ಪಾಳೇಗಾರರನ್ನು ಜಯಿಸಿ ವಿಧೇಯರನ್ನಾಗಿ ಮಾಡಿದನು. ಸಾಳುವ ನರಸಿಂಹನ



ಅವಧಿಯಲ್ಲಿಯೇ ಉಮ್ಮತ್ತೂರು ಅರಸರು ರಾಯನ ವಿರುದ್ಧ ಬಂಡೆದ್ದರು. ರಾಯನ ವಿರುದ್ಧ ತಿರುಗಿದವನು ಪಾಳೇಗಾರ ನಂಜರಾಜ. ಇಮ್ಮಡಿ ನರಸಿಂಹನ ಕಾಲದಲ್ಲಿ ರಾಯನ ವಿರುದ್ಧ ತಲೆಎತ್ತಿದ ಮತ್ತೊಬ್ಬ ಪಾಳೇಗಾರ ಜೀವಗ್ರಾಹನನ್ನು ನರಸನಾಯಕನ ಸೇನಾಪತಿ ಉದ್ದಂಡನು ಸೆರೆಹಿಡಿದು ತಂದನು. ತಿರುಮಲ ತಿರುಪತಿ ದೇವಸ್ಥಾನದ ಶಾಸನಗಳಲ್ಲಿ ಉಲ್ಲೆಖಿತನಾಗಿರುವ ಉದ್ದಂಡರಾಯರ್ ಉಳಗಪ್ಪನೇ ಈ ಉದ್ದಂಡ. ಶ್ರೀರಂಗಪಟ್ಟಣದ ಅಧಿಪತಿಯೇ ಈ ಜೀವಗ್ರಾಹ. ನರಸನಾಯಕನು ಮುಸ್ಲಿಂ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಿದನು. ವಿಜಯನಗರ ಪ್ರದೇಶವನ್ನು ಆಕ್ರಮಿಸಲು ಹೊಂಚು ಹಾಕುತ್ತಿದ್ದ ಗಜಪತಿಯ ಯೋಜನೆಗಳನ್ನು ನಿಷ್ಫಲ ಮಾಡಿದನು.

ಇಮ್ಮಡಿ ನರಸಿಂಹರಾಯನ ಹೊಸ ಪ್ರಧಾನಮಂತ್ರಿ **ವೀರನರಸಯ್ಯನು** ಕೆಲಕಾಲ ಪ್ರಾಮಾಣಿಕವಾಗಿ ರಾಜನಿಗೂ ಸಾಮ್ರಾಜಕ್ಕೂ ಸೇವೆ ಸಲ್ಲಿಸಿದನು. ಅನಂತರ ಅನೇಕ ದಂಡನಾಯಕರ ಮಾತುಕೇಳಿ ಇಮ್ಮಡಿ ನರಸಿಂಹನ ಕೊಲೆಯ ಯೋಜನೆ ಮಾಡಿದನು. ನಿಜವಾದ ಅಧಿಕಾರ ಅವನಲ್ಲಿತ್ತು. ಆದರೆ ವೈಭವ ಮತ್ತು ಸಂಭ್ರಮಗಳೆಲ್ಲಾ ಅರಸನ ವಶವಾಗಿತ್ತು. ಈ ಪರಿಸ್ಥಿತಿಗೆ ಹೊಂದಿಕೊಳ್ಳಲು ಆತನಿಗೆ ಆಗಲಿಲ್ಲ. ಈ ವ್ಯವಸ್ಥೆಯನ್ನು ಕೊನೆಗಾಣಿಸುವ ಯೋಚನೆ ಮಾಡಿದನು. ರಾಯನು ಯೋಗ್ಯನಲ್ಲ ಅವನನ್ನು ಮುಗಿಸುವುದೇ ಸರಿಯೆಂದು ಅನೇಕ ನಾಯಕರು ಅಭಿಪ್ರಾಯಪಟ್ಟರು. ಈ ಕೆಲಸವನ್ನು ದಳವಾಯಿ ಕೊಂಡಮರಸಯ್ಯ ನೆರವೇರಿಸಿದನು. ವೀರ ನರಸಿಂಹರಾಯನು ವಿಜಯನಗರದ ವಜ್ರ ಸಿಂಹಾಸನಾಧಿಪತಿಯಾದನು.

ನೂನಿಜ್ ಪ್ರಕಾರ ಹೊಸ ರಾಜನು ತನ್ನ ಆಡಳಿತಕ್ಕೆ ಎದ್ದ ವಿರೋಧವನ್ನು ಅಡಗಿಸಲು ಆರುವರ್ಷ ತೆಗೆದುಕೊಂಡನಂತೆ. ಆದರೆ ಅವನು ಆಡಳಿತ ನಡೆಸಿದ್ದು ಕೇವಲ ನಾಲ್ಕು ವರ್ಷ ಮಾತ್ರ. ವೀರನರಸಿಂಹರಾಯನು ತನ್ನ ಸೈನಿಕ ಶಕ್ತಿಯನ್ನು ತೋರಿಸಿದ ನಂತರವೇ ಆಡಳಿತ ಮಾಡಲು ಸಾಧ್ಯವಾಯಿತೆಂಬುದು ನಿಜ. ಆಳುವ ರಾಜನ ಹತ್ಯೆಯಲ್ಲಿ ತನ್ನ ಪಾಲು ಏನೂ ಇರಲಿಲ್ಲ ಎಂದು ತೋರಿಸಲು ಸಾಧ್ಯವಾದರೂ, ಯಾವುದೋ ರೀತಿಯಿಂದ ಸತ್ಯ ಸಂಗತಿಯು ಜನರಿಗೆ ಅರಿವಾಗಿ, ಅವರು ತಮ್ಮ ಸೇನಾಪತಿಗಳ ಮುಂದಾಳ್ತನದಲ್ಲಿ ಬಂಡಾಯವೆದ್ದಿರಬೇಕು. ಏನೇ ಆಗಲಿ ಆಕ್ರಮಣಕಾರನ ಇಷ್ಟವು ನೆರವೇರಿತು. ಕೆಲ ಸೇನಾಪತಿಗಳು ರಾಯನನ್ನು ಬೆಂಬಲಿಸಿದರು ಮತ್ತು ಅವನೊಂದಿಗೆ ಇದ್ದರು. ರಾಯನು ಪ್ರಜೆಗಳ ಬೆಂಬಲವನ್ನುಗಳಿಸಲು ಪ್ರಯತ್ನಿಸಿದನು. ಪರಮಾತ್ಮನಿಂದ ತಾನು ಮಾಡಿದ ಪಾಪಕೃತ್ಯದ ವಿಷಯದಲ್ಲಿ ಕ್ಷಮೆಗಳಿಸಲು ಆತನು ಅನೇಕ ದೇವಾಲಯ, ಮಠ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಧಾರಾಳವಾಗಿ ದಾನದತ್ತಿಗಳನ್ನು ನೀಡಿದನು.

ವೀರನರಸಿಂಹನು ಸಾಹಿತ್ಯ ಪೋಷಕನೂ ಆಗಿದ್ದನು. ರಾಯವಾಚಕದ ಪ್ರಕಾರ ಆತನು ಅನೇಕ ಕವಿಗಳಿಗೆ ವಿಜ್ಞಾನಿಗಳಿಗೆ, ಸಂಗೀತಗಾರ ಮುಂತಾದವರಿಗೆ ತನ್ನ ಆಸ್ಥಾನದಲ್ಲಿ ಸನ್ಮಾನಿಸಿದನು. ಮಾದಯ್ಯ ಕವಿ – (ದೇವೇಂದ್ರ ವಿಜಯ, ಮೈರಾವಣ ಚರಿತ್ರೆಯ ಕವಿ) ಕೊರವಿ ಗೋಪರಾಜ ಮತ್ತು ಮನುಮಂಚಿ ಭಟ್ಟರೂ ಈ ಕಾಲದವರೇ, ವೈರಿ ಮರ್ದನದಲ್ಲಿ

ನಿರತನಾಗಿದ್ದರೂ ಆತನು ಅರಮನೆಯಲ್ಲಿ ಮತ್ತು ನಾಡಿನಲ್ಲಿ ಧರ್ಮಕ್ಕೆ ಚ್ಯುತಿ ಬರದಂತೆ ನೋಡಿಕೊಂಡನು.

ವೀರನರಸಿಂಹರಾಯನು ರಾಜ್ಯದಲ್ಲಿ ಶಾಂತಿ ಸ್ಥಾಪನೆಗಾಗಿ 80 ಲಕ್ಷ ಬಂಗಾರದ ವರಹಗಳನ್ನು ವ್ಯಯಿಸಿದನೆಂದು ನೂನಿಜ್ ತಿಳಿಸಿದ್ದಾನೆ. ಆಕರಗಳ ಪ್ರಕಾರ ಆಗ ರಾಜ್ಯದ ಆರ್ಥಿಕ ಪರಿಸ್ಥಿತಿಯು ತುಂಬಾ ಚನ್ನಾಗಿತ್ತು. ಕೆಲಭಾಗಗಳಲ್ಲಿ ಮದುವೆ ತೆರಿಗೆಯನ್ನು ರದ್ದು ಮಾಡಲಾಯಿತು. ದುರಾಡಳಿತ ನಡೆಸುತ್ತಾ ಪ್ರಜಾ ಪೀಡಕರಾಗಿದ್ದ ಕೆಲ ಪಾಳೇಗಾರರನ್ನು ದಂಡಿಸಲಾಯಿತು.

ವೀರನರಸಿಂಹರಾಯನು ಸಾಮ್ರಾಟನಾದಾಗ ಸಾಮ್ರಾಜ್ಯದ ಪರಿಸ್ಥಿತಿ ಅಶಾಂತವಾಗಿತ್ತು. ದೂರ ಪ್ರದೇಶಗಳನ್ನು ಬಿಟ್ಟರೆ ಸಾಮ್ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸಿತ್ತು. ಆತನು ಸಮಾಜದ ಎಲ್ಲ ವರ್ಗದ ಜನರಿಗೆ ತೃಪ್ತಿಪಡಿಸಲು ಪ್ರಯತ್ನಿಸಿದನು. ರೈತರ ಕಲಾಕಾರರ ಮತ್ತಿತರ ಜನರ ಕಷ್ಟಸುಖವನ್ನು ಕೇಳಲು ಆತನು ಸದಾ ತಯಾರಿದ್ದನು. ಜನರ ಸಂಕಷ್ಟನಿವಾರಿಸಲು ಪ್ರಯತ್ನಿಸುತ್ತಿದ್ದನು. ಜನರಲ್ಲಿ ಶೌರ್ಯ ಮನೋಭಾವವನ್ನು ತುಂಬಿದನು. ಪೋರ್ತುಗೀಸರಿಂದ ಕುದುರೆಗಳನ್ನು ಖರೀದಿಸಲು ಒಪ್ಪಂದ ಮಾಡಿಕೊಂಡು ಬಲವಾದ ಅಶ್ವದಳವನ್ನು ಕಟ್ಟಿದನು. ವೀರನರಸಿಂಹರಾಯರು ಹಾಕಿದ ಭದ್ರ ಬುನಾದಿಯ ಮೇಲೆ ಆತನ ಸೋದರ ಕೃಷ್ಣದೇವರಾಯನು ಸುಂದರವಾದ, ಭವ್ಯವಾದ ಭವನವನ್ನು ಕಟ್ಟಿದನು.

## ಸಂಕ್ಷೇಪಗಳು

1. ಎ. ಲಿಟಲ್ ನೋನ್ ಛಾಪ್ಟರ್ – ಎ. ಲಿಟಲ್ ನೋನ್ ಛಾಪ್ಟರ್ ಆಫ್ ವಿಜಯನಗರ ಹಿಸ್ಟರಿ – ಎಸ್. ಕೆ. ಅಯ್ಯಂಗಾರ್
2. ARE – ಆ್ಯನುಯಲ್ ರಿಫೋರ್ಟ್ ಆಫ್ ಎಪಿಗ್ರಫಿ, ಮದ್ರಾಸ್
3. ASR – ರಿಪೋರ್ಟ ಆಫ್ ದಿ ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯ
4. ಬ್ರಿಗ್ಸ್ – ಫರಿಷ್ತಾ–ಹಿಸ್ಟರಿ ಆಫ್ ದಿ ರೈಜ್ ಆಫ್ ಮಹಮ್ಮಡನ್ ಪವರ್ ಇನ್ ಇಂಡಿಯಾ–ಅನುವಾದ
5. C.P. – ಕಾಪರ್ ಪ್ಲೇಟ್ ಗ್ರಾಂಟ್ಸ್
6. E.A. – ಎಪಿಗ್ರಾಫಿಕಾ ಆಂಧ್ರಿಕಾ
7. E.C. – ಎಪಿಗ್ರಾಫಿಕಾ ಕರ್ನಾಟಿಕಾ
8. E.I. – ಎಪಿಗ್ರಾಫಿಕಾ ಇಂಡಿಕಾ
9. F.E. – ಎ. ಫರ್ಗಾಟನ್ ಎಂಪೈರ್ – ರಾಬರ್ಟ ಸಿವೆಲ್
10. F.S. – ಫರ್ದರ್ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ – ಕೆ. ಎ. ನೀಲಕಂಠಶಾಸ್ತ್ರಿ, ಎನ್. ವೆಂಕಟರಮಣಯ್ಯ
11. I.A. – ಇಂಡಿಯನ್ ಆ್ಯಂಟಿಕ್ವರಿ
12. J.A.H.R.S.– ಜರ್ನಲ್ ಆಫ್‌ದಿ ಆಂಧ್ರ ಹಿಸ್ಟಾರಿಕಲ್ ರಿಸರ್ಚ್ ಸೊಸೈಟಿ
13. H.J.S.I.– ಹಿಸ್ಟಾರಿಕಲ್ ಇನ್ಸ್ಕ್ರಿಪ್ಷನ್ಸ್ ಆಫ್ ಸದರ್ನ ಇಂಡಿಯಾ – ರಾಬರ್ಟ್ ಸಿವೆಲ್ (ಸಂ.) – ಎಸ್. ಕೆ. ಅಯ್ಯಂಗಾರ್
14. J.B.– ಜೈಮಿನಿ ಭಾರತಂ
15. JRAS – ಜರ್ನಲ್ ಆಫ್ ದಿ ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್
16. J.I.H.– ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ
17. L. R. ಲೋಕಲ್ ರೆಕಾರ್ಡ್ಸ್
18. Mac Mass– ಮೆಕೆಂಜಿ ಮನುಸ್ಕ್ರಿಪ್ಟ್ಸ್
19. MAR – ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ
20. NDI – ನೆಲ್ಲೂರು ಜಿಲ್ಲಾ ಶಾಸನಗಳು
21. PIHS– ಪ್ರೊಸೀಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟಾರಿಕಲ್ ಕಾಂಗ್ರೆಸ್
22. PSI – ಪುದುಕೊಟ್ಟೆ ಸ್ಟೇಟ್ ಇನ್ಸ್ಕ್ರಿಪ್ಷನ್ಸ್
23. QJM – ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ
24. SII– ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್
25. – ಸೋರ್ಸಸ್ – ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ
26. SAS– ಸಮಗ್ರಾಂಧ್ರ ಸಾಹಿತ್ಯ ಸಂಪುಟಗಳು – ಆರುದ್ರ
27. TTDE– ತಿರುಮಲ ತಿರುಪತಿ ದೇವಸ್ಥಾನಂ ಎಪಿಗ್ರಾಫಿಕಲ್ ಸೀರೀಸ್
28. T.D.E.R.– ತಿರುಪತಿ ದೇವಸ್ಥಾನಂ ಎಪಿಗ್ರಾಫಿಕಲ್ ರಿಪೋರ್ಟ್ – ಸಾಧು ಸುಬ್ರಹ್ಮಣ್ಯ ಶಾಸ್ತ್ರಿ
29. T.T.I. – ತಿರುಮಲೈ ತಿರುಪತಿ ಇನ್ಸ್ಕ್ರಿಪ್ಷನ್ಸ್
30. V.P. – ವರಾಹಪುರಾಣಮು
31. V.R. – ಟೋಪೋಗ್ರಾಫಿಕಲ್ ಇನ್ಸ್ಕ್ರಿಪ್ಷನ್ಸ್ ಆಫ್ ದಿ ಮದ್ರಾಸ್ ಪ್ರೆಸಿಡೆನ್ಸಿ – ವಿ. ರಂಗಾಚಾರ್ಯ